ಭಾನುವಾರ, ಏಪ್ರಿಲ್ 9, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 98 | ಪುಟ 20

www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬೆಂಗಳೂರಿನಲ್ಲಿ ಕಂಡ, ಕಾಡಿದ ದೃಶ್ಯಗಳು ನ್ಯೂಯಾರ್ಕ್ ಸನ್ನಿವೇಶಗಳೊಂದಿಗೆ ಬೆಸೆದ ಬಗೆ



ಹುಲಿ ಯೋಜನೆಗೆ ಐವತ್ತು ವರ್ಷಗಳ ಸಂಭ್ರಮ

ಸಂರಕ್ಷಣೆಯ ಸಾಧನೆ, ಸವಾಲು

• ಜಯಸಿಂಹ ಆರ್.

ಹುಲಿ ಸಂರಕ್ಷಣೆ ಉದ್ದೇಶದಿಂದ ಆರಂಭಿಸಲಾಗಿದ್ದ ‘ಹುಲಿ ಯೋಜನೆ’ಗೆ ಇಂದಿಗೆ (ಏಪ್ರಿಲ್ 9) 50 ವರ್ಷ ತುಂಬಿದೆ. ಹುಲಿ ಕಾರ್ಯ ಪಡೆಯು 1972ರ ತನ್ನ ವರದಿಯಲ್ಲಿ ದೇಶದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಹುಲಿಗಳ ಸಂರಕ್ಷಣೆಗೆ ತಕ್ಷಣವೇ ಅಗತ್ಯ ಕ್ರಮ ತೆಗೆದುಕೊಳ್ಳದೇ ಇದ್ದರೆ, ಅವು ನಾಮಾವಶೇಷವಾಗುತ್ತವೆ ಎಂದು ಹೇಳಿತ್ತು. ಕಾರ್ಯಪಡೆಯ ಶಿಫಾರಸುಗಳನ್ನು ಗಂಭೀರವಾಗಿ ಪರಿಗಣಿಸಿದ ಇಂದಿರಾ ಗಾಂಧಿ ಸರ್ಕಾರವು 1973ರ ಏಪ್ರಿಲ್ 9ರಂದು ಸ್ವತಂತ್ರ ಭಾರತದ ಮೊದಲ ಹುಲಿ ಯೋಜನೆ ಆರಂಭಿಸಿತು.

ಹುಲಿ ಯೋಜನೆ ಆರಂಭವಾದಾಗ ದೇಶದಲ್ಲಿದ್ದ ಹುಲಿಗಳ ಸಂಖ್ಯೆ 1,827 ಮಾತ್ರ. ಆಗ ದೇಶದ ಪ್ರಮುಖ ಹುಲಿ ಆವಾಸಸ್ಥಾನಗಳನ್ನು ಗುರುತಿಸಿ, ಅವನ್ನು ಸಂರಕ್ಷಿತ ಪ್ರದೇಶಗಳಾಗಿ ಘೋಷಿಸಲಾಗಿತ್ತು. ಕರ್ನಾಟಕದ ಬಂಡೀಪುರವೂ ಸೇರಿ ದೇಶದ ಒಟ್ಟು 9 ಪ್ರದೇಶಗಳಲ್ಲಿ ಹುಲಿ ಸಂರಕ್ಷಣಾ ಯೋಜನೆಗಳನ್ನು ಮೊದಲ ಬಾರಿಗೆ ಜಾರಿ ಮಾಡಲಾಗಿತ್ತು. ಈ ಐವತ್ತು ವರ್ಷಗಳಲ್ಲಿ ದೇಶದಲ್ಲಿನ ಹುಲಿ ಸಂರಕ್ಷಣೆಗಾಗಿ ಮೀಸಲಿರಿಸಿದ ಕಾಡುಗಳ ಸಂಖ್ಯೆ 50ಕ್ಕೆ ಏರಿಕೆಯಾಗಿದೆ. ಇವುಗಳಲ್ಲಿ 35 ಹುಲಿ ಸಂರಕ್ಷಿತ ಪ್ರದೇಶಗಳಿಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಮಾನ್ಯತೆ ನೀಡಿದೆ.


ಹುಲಿಯೋಜನೆಗೆ ಕೇಂದ್ರ ಸರ್ಕಾರವು ವಿಶೇಷ ಅನುದಾನವನ್ನು ತೆಗೆದಿರಿಸುತ್ತಾ ಬಂದಿದೆ. ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದ ಕಾರಣ, ಹುಲಿಗಳ ಸಂಖ್ಯೆ 2018ರ ವೇಳೆಗೆ 2,967ಕ್ಕೆ ಏರಿಕೆಯಾಗಿತ್ತು. ಹುಲಿಗಣತಿಯ ಮತ್ತೊಂದು ವರದಿ ಇನ್ನಷ್ಟೇ ಬಿಡುಗಡೆಯಾಗಬೇಕಿದ್ದು, ಹುಲಿಗಳ ಸಂಖ್ಯೆ ಇನ್ನಷ್ಟು ಏರಿಕೆಯಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ದೇಶದ ಹುಲಿ ಸಂರಕ್ಷಣೆ ಕಾರ್ಯಕ್ರಮದಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನಕ್ಕೆ ಮಹತ್ವದ ಸ್ಥಾನವಿದೆ. 1973ರಲ್ಲಿ ಆರಂಭಿಸಲಾದ ಹುಲಿ ಸಂರಕ್ಷಣೆ ಪ್ರದೇಶಗಳಲ್ಲಿ ಬಂಡೀಪುರವೂ ಒಂದು.

ಒಳನೋಟ
ಏರಿಕೆಯತ್ತ ವ್ಯಾಘ್ರ ಸಂತತಿ
ಪ್ರತಿಕ್ರಿಯಿಸಿ: 9606038256
feedback@prajavani.co.in

6ನೇ ಪುಟ ನೋಡಿ

ಹುಲಿ ಸಂಖ್ಯೆಯಲ್ಲಿ ಏರಿಕೆ



ಹುಲಿಗಳ ಸಂರಕ್ಷಣೆಗೆ ತಂತ್ರಜ್ಞಾನದ ನೆರವು



ದೇಶದಲ್ಲಿ ಅತ್ಯುತ್ತಮ ಹತ್ತು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಐದು ಪ್ರದೇಶಗಳು ನಮ್ಮ ರಾಜ್ಯದಲ್ಲಿಯೇ ಇವೆ. ಅಂದರೆ, ನಮ್ಮಲ್ಲಿರುವ ಐದು ಹುಲಿ ಸಂರಕ್ಷಿತ ಪ್ರದೇಶಗಳೂ ಅತ್ಯುತ್ತಮ ಎನಿಸಿವೆ. ನಮ್ಮ ರಾಜ್ಯದ ಒಟ್ಟು ಅರಣ್ಯ ಪ್ರದೇಶದಲ್ಲಿ ಶೇ 25ರಷ್ಟನ್ನು ವನ್ಯಜೀವಿ ಸಂರಕ್ಷಣೆಗೆ ನಾವು ಬಳಸುತ್ತಿದ್ದೇವೆ. ಅರಣ್ಯದಲ್ಲಿ ಬೆಂಕಿ ಹೊತ್ತಿಕೊಳ್ಳುತ್ತಿದ್ದರೆ ತಕ್ಷಣ ಮಾಹಿತಿ ರವಾನಿಸುವ ಮತ್ತು ಕಾರ್ಯಾಚರಣೆ ನಡೆಸುವುದಕ್ಕೆ ತಂತ್ರಜ್ಞಾನದ ನೆರವು ಪಡೆಯುತ್ತಿದ್ದೇವೆ. ಅರಣ್ಯ ರಕ್ಷಕರಿಗೆ ಉತ್ತಮ ಗುಣಮಟ್ಟದ ಶಸ್ತ್ರಾಸ್ತ್ರಗಳನ್ನು ಪೂರೈಸಲಾಗಿದೆ. ಕಳ್ಳಬೇಟೆ ತಡೆಗೆ ಶಿಬಿರಗಳನ್ನು ಹೆಚ್ಚಿಸಲಾಗಿದೆ. ಡ್ರೋನ್ ಕ್ಯಾಮೆರಾಗಳನ್ನು ಬಳಸಿ ಹುಲಿಗಳ ಸ್ಥಿತಿಗತಿಯನ್ನು ಪರಿಶೀಲಿಸಲಾಗುತ್ತಿದೆ.

ರಾಜೀವ್ ರಂಜನ್, ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)

‘ಅತಂತ್ರದ ಮಾತೇ ಇಲ್ಲ; ಸ್ಪಷ್ಟ ಬಹುಮತ’

ಸಿ.ಎಂ ಯಾರು?: ಶಾಸಕರ ಅಭಿಪ್ರಾಯದಂತೆ ಹೈಕಮಾಂಡ್ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈ ಬಾರಿ ಅತಂತ್ರ ಸ್ಥಿತಿಯ ಮಾತೇ ಇಲ್ಲ. ಈ ಅನುಮಾನ ಯಾರಿಗೂ ಬೇಡ. ನಾವು ಸ್ಪಷ್ಟ ಬಹುಮತ ಪಡೆದು, ಸ್ವಂತ ಬಲದಿಂದ ಸರ್ಕಾರ ರಚಿಸುತ್ತೇವೆ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅತೀವ ವಿಶ್ವಾಸ ವ್ಯಕ್ತಪಡಿಸಿದರು.


‘ಪ್ರಜಾವಾಣಿ’ ಕಚೇರಿಯಲ್ಲಿ ಶನಿವಾರ ಸಂವಾದದಲ್ಲಿ ಮಾತನಾಡಿದ ಅವರು, ‘ನಾನೇ ಆಗಲಿ, ಡಿ.ಕೆ. ಶಿವಕುಮಾರ್, ಪರಮೇಶ್ವರ ಹೀಗೆ ಯಾರೇ ಆಗಲಿ ಮುಖ್ಯಮಂತ್ರಿ ಆಗಬೇಕೆಂದು ಬಯಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಶಾಸಕರು ಅವರ ನಾಯಕನನ್ನು ಆಯ್ಕೆ ಮಾಡುತ್ತಾರೆ. ಶಾಸಕರ ಅಭಿಪ್ರಾಯ ಆಧರಿಸಿ ಮುಖ್ಯಮಂತ್ರಿ ಯಾರಾಗಬೇಕೆಂದು ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ’ ಎಂದು ಸ್ಪಷ್ಟಪಡಿಸಿದರು.

‘ರಾಜ್ಯ ಬಿಜೆಪಿ ಸರ್ಕಾರದಿಂದ ಜನ ಬೇಸತ್ತಿದ್ದಾರೆ. ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ ಜನರನ್ನು ಕಾಡುತ್ತಿದೆ. ರೈತರ ಸಮಸ್ಯೆ ಬಗೆಹರಿದಿಲ್ಲ. ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲ. ಸೇಡಿನ ರಾಜಕೀಯದಿಂದ ಸಾಮರಸ್ಯ ಹಾಳಾಗಿದೆ. ಅವರು (ಬಿಜೆಪಿ) ಹಿಂದುತ್ವದ ಮೂಲಕ ಮತ ಕ್ರೋಡೀಕರಣ, ಧ್ರುವೀಕರಣಕ್ಕೆ ಹೊರಟಿದ್ದಾರೆ. ಲಂಚದ ಕಷ್ಟಕ್ಕೆ ಒಳಗಾಗಿ ಜನ ನರಳುತ್ತಿದ್ದಾರೆ. ಕಷ್ಟ, ಸುಖಗಳಿಗೆ ಸ್ಪಂದಿಸುತ್ತಿಲ್ಲ. ಹೀಗಾಗಿ, ನಮ್ಮ ಕೈಗೆ ಅಧಿಕಾರ ನೀಡಬೇಕೆಂದು ರಾಜ್ಯದ ಜನರೇ ಇಚ್ಛೆ ವ್ಯಕ್ತಪಡಿಸಿದ್ದಾರೆ’ ಎಂದು ತಮ್ಮ ವಿಶ್ವಾಸಕ್ಕೆ ಸಿದ್ದರಾಮಯ್ಯ ಬಲ ತುಂಬಿದರು.

‘ನಾನು ರಾಜ್ಯದಾದ್ಯಂತ ಪ್ರವಾಸ ಮಾಡಿದ್ದೇನೆ. ಜನರ ನಾಡಿಮಿಡಿತ ಗಮನಿಸಿದ್ದೇನೆ. ಕಾಂಗ್ರೆಸ್ ಪರ ಅಲೆಯಿದೆ. ಜನ ಬದಲಾವಣೆ ಬಯಸಿದ್ದಾರೆ. ನಮಗೆ ಸ್ಪಷ್ಟ ಬಹುಮತ ಬರುತ್ತದೆ’ ಎಂದೂ ಪುನರುಚ್ಚರಿಸಿದರು.

‘ಜನ ಅಭಿವೃದ್ಧಿ ಬಯಸಿದ್ದಾರೆ. ಆದರೆ, ಈಗಿರುವುದು ಶೇ 40 ಕಮಿಷನ್ ಸರ್ಕಾರ ಎನ್ನುವುದು ಎಲ್ಲರಿಗೂ ಗೊತ್ತಿದೆ. ಭ್ರಷ್ಟಾಚಾರ ಎಲ್ಲ ಸರ್ಕಾರಿ ಕಚೇರಿಗಳನ್ನೂ ವ್ಯಾಪಿಸಿದೆ. ಅದು ಜನರಿಗೆ ನೇರವಾಗಿ ಅನುಭವಕ್ಕೆ ಬಂದಿದೆ. ಶಾಸಕ ವಿರೂಪಾಕ್ಷಪ್ಪ ಮಾಡಾಳ್ ಅವರ ಪುತ್ರ ಭ್ರಷ್ಟಾಚಾರದಲ್ಲಿ ಭಾಗಿಯಾಗಿ ಸಿಕ್ಕಿಬಿದ್ದಿಲ್ಲವೇ? ಇದು ಭ್ರಷ್ಟಾಚಾರಕ್ಕೆ ಸಾಕ್ಷ್ಯ ಅಲ್ಲವೇ? ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಂತೋಷ್ ಮರಣಪತ್ರದಲ್ಲಿ ತನ್ನ ಸಾವಿಗೆ ಈಶ್ವರಪ್ಪನೇ ಕಾರಣ ಎಂದು ಬರೆದಿರಲಿಲ್ಲವೇ? ಶೇ 40 ಕಮಿಷನ್ ಕಾರಣಕ್ಕೆ ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಂತೋಷ್ ಪತ್ನಿ ಕೂಡಾ ಅದೇ ಹೇಳಿಕೆ ನೀಡಿದ್ದರು. ಭ್ರಷ್ಟ ಸರ್ಕಾರದ ವಿರುದ್ಧ ಬಲವಾದ ಆಡಳಿತ ವಿರೋಧಿ ಗಾಳಿ ಬೀಸುತ್ತಿದೆ’ ಎಂದರು.

‘ಮೀಸಲಾತಿ ಪ್ರಮಾಣ ಹೆಚ್ಚಿಸಿ ಹಂಚಿಕೆ ಮಾಡಬೇಕಾಗಿತ್ತು’



‘ನಮ್ಮ ಪಕ್ಷ ಮೀಸಲಾತಿ ಪರವಾಗಿದೆ. ಆದರೆ, ಮುಸ್ಲಿಮರಿಂದ ಮೀಸಲಾತಿ ಕಿತ್ತು ಬೇರೆಯವರಿಗೆ ಕೊಡುವ ಬದಲು ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸಿ ನೀಡಬೇಕಿತ್ತು. ಕಾನೂನು ತಿದ್ದುಪಡಿಗೆ ಕೇಂದ್ರದ ಮೇಲೆ ಒತ್ತಡ ಹೇರಬೇಕಿತ್ತು’ ಎಂದು ಸಿದ್ದರಾಮಯ್ಯ ಹೇಳಿದರು.

‘ಒಕ್ಕಲಿಗರು ಕೇಳಿದ್ದು ಶೇ 12ರಷ್ಟು, ಪಂಚಮಸಾಲಿ ಸಮುದಾಯದವರು ಕೇಳಿದ್ದು 2 ಎಗೆ ಸೇರ್ಪಡೆ ಮಾಡಬೇಕು ಎಂದು. ಅದನ್ನು ಬಿಟ್ಟು, ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಯನ್ನು ಕಿತ್ತುಕೊಟ್ಟಿದ್ದೇಕೆ. ಇದು ದ್ವೇಷದ ರಾಜಕಾರಣವಲ್ಲವೇ’ ಎಂದು ಪ್ರಶ್ನಿಸಿದರು.

‘ಚಿನ್ನಪ್ಪರೆಡ್ಡಿ ಆಯೋಗದ ವರದಿ ಆಧಾರದಲ್ಲಿ 1995ರಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಲಾಗಿತ್ತು. 28 ವರ್ಷಗಳಿಂದ ಯಾವುದಾದರೂ ನ್ಯಾಯಾಲಯ ಮೀಸಲಾತಿಯನ್ನು ತೆಗೆಯಲು ಸೂಚಿಸಿತ್ತೇ? ನಮ್ಮ ಸರ್ಕಾರ ಬಂದರೆ ಮೀಸಲಾತಿ ಪ್ರಮಾಣ ಹೆಚ್ಚಿಸಿ, ಮುಸಲ್ಮಾನರಿಗೆ ಮೀಸಲಾತಿ ಕೊಡುತ್ತೇವೆ’ ಎಂದು ಮಾತು ಕೊಟ್ಟರು.

ಸಂದರ್ಶನದ ಆಯ್ದ ಭಾಗ 4

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕೇಂದ್ರ ಸಂಸದೀಯ ಮಂಡಳಿ ಸಭೆ ಇಂದು: ಮೋದಿ, ಅಮಿತ್ ಶಾ, ನಡ್ಡಾ ಭಾಗಿ

ಬಿಜೆಪಿ ಅಭ್ಯರ್ಥಿ ಪಟ್ಟಿ: ಮುಗಿಯದ ಗೊಂದಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸುವ ಭಾಗವಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ರಾಜ್ಯ ನಾಯಕರೊಂದಿಗೆ ಶನಿವಾರ ಇಡೀ ದಿನ ಸಮಾಲೋಚನೆ ನಡೆಸಿದರು. ಆದರೂ, ಪಕ್ಷದ ಟಿಕೆಟ್ ಹಂಚಿಕೆಯ ಕಗ್ಗಂಟು ಬಗೆಹರಿದಿಲ್ಲ.

ಪ್ರತಿ ಕ್ಷೇತ್ರಕ್ಕೆ ರಾಜ್ಯ ಪ್ರಮುಖರ ಸಮಿತಿಯು 2–3 ಹೆಸರುಗಳನ್ನು ಶಿಫಾರಸು ಮಾಡಿದೆ. ಪ್ರತಿ ಕ್ಷೇತ್ರಕ್ಕೆ ಒಬ್ಬ ಆಕಾಂಕ್ಷಿಯ ಹೆಸರು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ಶನಿವಾರ ನಡೆಸಲಾಯಿತು. ಭಾನುವಾರ ಸಹ ಈ ಸಭೆ ಮುಂದುವರಿಯಲಿದೆ.

ಕೇಂದ್ರ ಸಂಸದೀಯ ಮಂಡಳಿಯ ಸಭೆ ಭಾನುವಾರ ಸಂಜೆ 5 ಗಂಟೆಗೆ ನಡೆಯಲಿದ್ದು, ಅಲ್ಲಿ ಅಭ್ಯರ್ಥಿಗಳ ಪಟ್ಟಿಗೆ ಅಂತಿಮ ರೂಪ ನೀಡಲಾಗುತ್ತದೆ. ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಜೆ.ಪಿ.ನಡ್ಡಾ ಹಾಗೂ ಸಂಸದೀಯ ಮಂಡಳಿಯ ಸದಸ್ಯರು ಭಾಗವಹಿಸಲಿದ್ದಾರೆ. ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿ ಭಾನುವಾರ ತಡ ರಾತ್ರಿ ಅಥವಾ ಸೋಮವಾರ ಬಿಡುಗಡೆಯಾಗುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

ರಾಹುಲ್ ರ‍್ಯಾಲಿ ಮೂರನೇ ಬಾರಿ ಮುಂದೂಡಿಕೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಬಹು ನಿರೀಕ್ಷಿತ ಕೋಲಾರ ರ‍್ಯಾಲಿ ಮೂರನೇ ಬಾರಿ ಮುಂದೂಡಿಕೆಯಾಗಿದೆ. ಈ ರ‍್ಯಾಲಿ ಏಪ್ರಿಲ್ 16ಕ್ಕೆ ನಿಗದಿಯಾಗಿದೆ. ಕೆಲವು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ರಾಜ್ಯ ನಾಯಕರು ಒಮ್ಮತಕ್ಕೆ ಬಾರದಿರುವುದು ಹಾಗೂ ಅನೇಕ ಕಡೆಗಳಲ್ಲಿ ಟಿಕೆಟ್ ವಂಚಿತರು ಬಂಡಾಯ ಎದ್ದಿರುವುದು ರ‍್ಯಾಲಿ ಮುಂದೂಡಿಕೆಗೆ ಕಾರಣ ಎಂಬ ಚರ್ಚೆ ಪಕ್ಷದೊಳಗೆ ಆರಂಭವಾಗಿದೆ.

ವರುಣ ಕ್ಷೇತ್ರದಲ್ಲಿ ಸ್ಪರ್ಧಿಸಲು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಪಕ್ಷ ಟಿಕೆಟ್ ನೀಡಿದೆ. ಹೈಕಮಾಂಡ್ ಒಪ್ಪಿದರೆ ಕೋಲಾರದಲ್ಲಿ ಸ್ಪರ್ಧಿಸಲು ಸಿದ್ಧ ಎಂದು ಸಿದ್ದರಾಮಯ್ಯ ಅಭಿಲಾಷೆ ವ್ಯಕ್ತಪಡಿಸಿದ್ದಾರೆ. ಪಕ್ಷದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಕೋಲಾರ ಕ್ಷೇತ್ರದ ಕುರಿತು ಚರ್ಚೆ ನಡೆದಿಲ್ಲ.

7ನೇ ಪುಟ ನೋಡಿ

‘ಖರ್ಗೆ ಸಿ.ಎಂ ಆದರೆ ಜತೆಗಿರಲು ಸಿದ್ಧ’

ಬೆಂಗಳೂರು: ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿಯಾದರೆ ಅವರ ಜತೆ ಸಂತೋಷದಿಂದ ಕೆಲಸ ಮಾಡಲು ಸಿದ್ಧ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಖರ್ಗೆ ಅವರು ಅತ್ಯಂತ ಹಿರಿಯ ನಾಯಕರು. ಪಕ್ಷಕ್ಕಾಗಿ ಅವರು ಮಾಡಿರುವ ತ್ಯಾಗವನ್ನು ಗೌರವಿಸಬೇಕಿದೆ. ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಮಧ್ಯರಾತ್ರಿ ರಾಜೀನಾಮೆ ನೀಡಿ ಅಧಿಕಾರ ತ್ಯಾಗ ಮಾಡಿದವರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಎಐಸಿಸಿ ಅಧ್ಯಕ್ಷ ಸ್ಥಾನದವರೆಗೆ ಏರಿರುವ ಅವರು ಪಕ್ಷದ ಆಸ್ತಿ. ಪಕ್ಷ ಕೈಗೊಳ್ಳುವ ಯಾವುದೇ ತೀರ್ಮಾನಕ್ಕೆ ನಾನು ಬದ್ಧ’ ಎಂದರು.

ನಂದಿನಿ ಹಾಲಿನ ಕೊರತೆ: 76 ಲಕ್ಷ ಕೆ.ಜಿಗೆ ಇಳಿದ ಸಂಗ್ರಹಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ದೇಶಗಳಲ್ಲಿ ನಂದಿನಿ ಹಾಲು ಲಭ್ಯವಿದೆ, ಬೆಂಗಳೂರಿನ ನಂದಿನಿ ಮಿಲ್ಕ್ ಪಾರ್ಲರ್‌ಗಳಲ್ಲಿ ಲಭ್ಯವಿಲ್ಲ!

ಹೌದು, ದೇಶ- ವಿದೇಶಗಳಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಲಭ್ಯವಾಗುತ್ತಿದ್ದರೆ, ಸ್ಥಳೀಯವಾಗಿ ಹಾಲಿನ ಕೊರತೆಯನ್ನು ಗ್ರಾಹಕರು ಎದುರಿಸುವಂತಾಗಿದೆ.

ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು ಸೇರಿ ವಿವಿಧ ದೇಶಗಳಲ್ಲಿ ಸಿಗುತ್ತವೆ. ಪ್ರಮುಖವಾಗಿ ಸಿಂಗಪುರ ಮತ್ತು ಮಧ್ಯಪ್ರಾಚ್ಯ ದೇಶಗಳಿಗೆ ನಂದಿನಿ ಹಾಲಿನ ಉತ್ಪನ್ನಗಳು ಪೂರೈಕೆಯಾಗುತ್ತಿವೆ.

ಕೋವಿಡ್ ನಂತರ ಹೈನುಗಾರಿಕೆ ಹೆಚ್ಚಾಗಿ ಹಾಲು ಶೇಖರಣೆ ಪ್ರಮಾಣವೂ ಏರಿಕೆಯಾಗಿತ್ತು. ದಿನಕ್ಕೆ 96 ಲಕ್ಷ ಕೆ.ಜಿ ತನಕವೂ ಹಾಲು ಸಂಗ್ರಹವಾದ ದಾಖಲೆಯನ್ನು ಕೆಎಂಎಫ್ ಬರೆದಿತ್ತು. ಲಭ್ಯವಿದ್ದ ಹಾಲಿನ ಪ್ರಮಾಣಕ್ಕೆ ತಕ್ಕಂತೆ ಮಾರುಕಟ್ಟೆಯನ್ನು ಕೆಎಂಎಫ್ ವಿಸ್ತರಣೆ ಮಾಡಿಕೊಂಡಿದೆ. ಹಾಲಿನ ಪುಡಿ, ಐಸ್‌ಕ್ರೀಮ್, ಚೀಸ್, ಬೆಣ್ಣೆ, ತುಪ್ಪ, ಸಿಹಿ ತಿನಿಸು ತಯಾರಿಕೆಯನ್ನೂ ಹೆಚ್ಚಳ ಮಾಡಿಕೊಂಡಿದೆ. ಶಾಲಾ ಮಕ್ಕಳಿಗೆ, ಮಿಲಿಟರಿ ಕ್ಯಾಂಪ್‌ಗಳಿಗೆ ಗುಡ್‌ಲೈಫ್ ಹಾಲು ಪೂರೈಕೆಯಾಗುತ್ತಿದೆ.

ಈಗ ಹಾಲು ಸಂಗ್ರಹ ಪ್ರಮಾಣ ಸರಾಸರಿ 76 ಲಕ್ಷ ಕೆ.ಜಿಗೆ ಇಳಿಕೆಯಾಗಿದೆ. 20 ಲಕ್ಷ ಕೆ.ಜಿ ಹಾಲು ಕಡಿಮೆಯಾಗಿದ್ದು, ವ್ಯತ್ಯಯಕ್ಕೆ ಕಾರಣವಾಗಿದೆ.

‘ನಂದಿನಿ ಪಾರ್ಲರ್‌ಗಳಲ್ಲಿ ತಡವಾಗಿ ಬಂದ ಗ್ರಾಹಕರನ್ನು ವಾಪಸ್ ಕಳುಹಿಸಬೇಕಾದ ಅನಿವಾರ್ಯ ಇದೆ’ ಎಂದು ನಂದಿನಿ ಹಾಲು ವಿತರಕರ ಸಂಘದ ಅಧ್ಯಕ್ಷ ಮಂಜುನಾಥ್ ಹೇಳಿದರು.

> **ಇಟಲಿಯನ್ನರಿಂದ ಆಳಿಸಿಕೊಳ್ಳಲು ಗುಲಾಮರಿಗೆ ಯಾವ ತೊಂದರೆಯೂ ಇಲ್ಲ. ಆದರೆ, ಅಮುಲ್ ತನ್ನ ಉತ್ಪನ್ನಗಳನ್ನು ರಾಜ್ಯದಲ್ಲಿ ಮಾರಾಟ ಮಾಡಿದರೆ ತೊಂದರೆಯಾಗುತ್ತದೆ**
> **ಸಿ.ಟಿ. ರವಿ**
> ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

8ನೇ ಪುಟ ನೋಡಿ

‘ಕೆಟ್ಟದಾಗಿ ಬಟ್ಟೆ ಧರಿಸುವ ಹುಡುಗಿಯರು ಶೂರ್ಪನಖಿಯರು’

ಇಂದೋರ್ (ಮಧ್ಯಪ್ರದೇಶ) (ಪಿಟಿಐ): ‘ಕೆಟ್ಟದಾಗಿ ಬಟ್ಟೆ ಧರಿಸುವ ಹುಡುಗಿಯರು ರಾಮಾಯಣದಲ್ಲಿ ಬರುವ ಶೂರ್ಪನಖಿ ರಾಕ್ಷಸಿಯ ಹಾಗೆ ಕಾಣುತ್ತಾರೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯ ವರ್ಗೀಯ ಹೇಳಿದ್ದಾರೆ.


ಕೈಲಾಶ್

ಹನುಮಾನ್ ಹಾಗೂ ಮಹಾವೀರ ಜಯಂತಿ ಅಂಗವಾಗಿ ಗುರುವಾರ ಇಲ್ಲಿ ಆಯೋಜಿಸಲಾಗಿದ್ದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಅವರು ಈ ಹೇಳಿಕೆ ನೀಡಿದ್ದು, ಈ ಕುರಿತಾದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಕೈಲಾಶ್ ಹೇಳಿಕೆ ಖಂಡಿಸಿರುವ ಪ್ರತಿಪಕ್ಷಗಳು, ಬಿಜೆಪಿ ವಿರುದ್ಧ ಹರಿಹಾಯ್ದಿವೆ.

‘ರಾತ್ರಿ ಮನೆಗೆ ಹೋಗುವಾಗಲೆಲ್ಲಾ ಸುಶಿಕ್ಷಿತ ಯುವಕರು ಹಾಗೂ ಮಕ್ಕಳು ಮಾದಕ ವಸ್ತುವಿನ ಅಮಲಿನಲ್ಲಿರುವುದನ್ನು ಕಂಡಿದ್ದೇನೆ. ಐದರಿಂದ ಏಳು ಬಾರಿ ಕಾರಿನಿಂದ ಕೆಳಗಿಳಿದು ಅವರಿಗೆ ಥಳಿಸಿದ್ದೂ ಇದೆ’ ಎಂದು ಅವರು ತಿಳಿಸಿದ್ದಾರೆ.

‘ಮಹಿಳೆಯರಲ್ಲಿ ನಾವು ದೇವರನ್ನು ಕಾಣುತ್ತೇವೆ. ಆದರೆ ಕೆಟ್ಟ ಧಿರಿಸು ತೊಟ್ಟು ಓಡಾಡುವ ಹುಡುಗಿಯರು ದೇವತೆಯ ಪ್ರತಿರೂಪದಂತೆ ತೋರುವುದಿಲ್ಲ. ಅವರು ರಾಮಾಯಣದಲ್ಲಿ ಬರುವ ಶೂರ್ಪನಖಿಯಂತೆ ಕಾಣುತ್ತಾರೆ. ದೇವರು ನಿಮಗೆ ಒಳ್ಳೆಯ ರೂಪ ಹಾಗೂ ಸುಂದರವಾದ ದೇಹ ನೀಡಿದ್ದಾನೆ. ಒಳ್ಳೊಳ್ಳೆ ಬಟ್ಟೆ ಹಾಕಿಕೊಳ್ಳಿ ಗೆಳೆಯರೇ’ ಎಂದಿದ್ದಾರೆ.

ಕಾಂಗ್ರೆಸ್ ಕಿಡಿ: ‘ವಿಜಯ ವರ್ಗೀಯ ಅವರು ದೇಶದ ಮಹಿಳೆಯರನ್ನು ಅವಮಾನಿಸಿದ್ದಾರೆ. ಇದು ಬಿಜೆಪಿಯ ಮನಃಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ’ ಎಂದು ಕಾಂಗ್ರೆಸ್ ಕಿಡಿಕಾರಿದೆ.

> **ಮಹಿಳೆಯರು ಯಾವ ಬಗೆಯ ಉಡುಪು ಧರಿಸಬೇಕು ಎಂಬುದನ್ನು ನಿರ್ಧರಿಸುವುದು ಬಿಜೆಪಿಯೇ? ಮಹಿಳೆಯರನ್ನು ನಿಂದಿಸುವ ಹಕ್ಕನ್ನು ನಿಮಗೆ ನೀಡಿದ್ದು ಯಾರು?**
> **ನೆಟ್ಟಾ ಡಿಸೋಜ**
> ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪ್ರಜಾ ಮತ ಜನತಂತ್ರದ ಹಬ್ಬ




ಸಮಾಜ ಸೇವೆ ವೇಳೆ ಖ್ಯಾತಿಗೆ ಹಂಬಲಿಸದಿರಿ: ಭಾಗವತ್

'ರಾಷ್ಟ್ರೀಯ ಸೇವಾ ಸಂಗಂ' ಸಮಾವೇಶದಲ್ಲಿ ಕಿವಿಮಾತು

ಜೈಪುರ (ಪಿಟಿಐ): 'ಜನಪ್ರಿಯತೆಯ ಹಂಬಲವನ್ನು ಬದಿಗೊತ್ತಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಿ. ಸದಾ ವಿನಮ್ರರಾಗಿರಿ. ಸಂಘಟಿತರಾಗುವತ್ತ ಚಿತ್ತ ಹರಿಸಿ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಸ್ವಯಂ ಸೇವಕರಿಗೆ ಸಲಹೆ ನೀಡಿದರು.

ಆರ್‌ಎಸ್‌ಎಸ್ ಅಂಗಸಂಸ್ಥೆ ಕೇಶವ ವಿದ್ಯಾಪೀಠವು ಇಲ್ಲಿನ ಜಾಮಡೋಲಿಯಲ್ಲಿ ಹಮ್ಮಿಕೊಂಡಿರುವ 'ರಾಷ್ಟ್ರೀಯ ಸೇವಾ ಸಂಗಂ' ಸಮಾವೇಶದ ಎರಡನೇ ದಿನವಾದ ಶನಿವಾರ ಮಾತನಾಡಿದ ಅವರು, 'ಸಂಘಟಿತ ಪಡೆಯು ಸದಾಕಾಲ ಗೆಲುವಿನ ಸಿಹಿ ಸವಿಯುತ್ತದೆ. ನಾವು ಈ ಜಗತ್ತಿನ ಒಳಿತಿಗಾಗಿ ಸದ್ದಿಲ್ಲದೇ ಕೆಲಸ ಮಾಡುವವರು. ಹೀಗಾಗಿ 'ಸಂಘ ಶಕ್ತಿ' ಬಲಪಡಿಸುವತ್ತ ಗಮನ ಹರಿಸಬೇಕು' ಎಂದರು.



'ನಾವೇನು ಮಹತ್ವದ ಕಾರ್ಯ ಮಾಡುತ್ತಿಲ್ಲ. ನಮ್ಮ ಜವಾಬ್ದಾರಿಗಳನ್ನಷ್ಟೇ ನಿಭಾಯಿಸುತ್ತಿದ್ದೇವೆ ಎಂಬ ಭಾವನೆಯು ನಮ್ಮಲ್ಲಿರಬೇಕು' ಎಂದು ಕಿವಿಮಾತು ಹೇಳಿದರು.

'ನಾವು ಉತ್ತಮ ಜಗತ್ತಿನ ನಿರ್ಮಾಣಕ್ಕಾಗಿ ಕೆಲಸ ಮಾಡಬೇಕು. ಈ ಕಾರ್ಯಕ್ಕಾಗಿ ನಮಗೆ ಕಾರ್ಯಕರ್ತರ ದೊಡ್ಡ ಪಡೆಯ ಅಗತ್ಯವಿದೆ. ಸಂಘದ ಕಾರ್ಯಕರ್ತರು ನಿಸ್ವಾರ್ಥ ಸೇವೆ ಮಾಡುವುದನ್ನು ರೂಢಿಸಿಕೊಳ್ಳಬೇಕು' ಎಂದು ಹೇಳಿದರು.

ಹಿಂದೂ ಸಂತರ ಸೇವೆ ದೊಡ್ಡದು: ದಕ್ಷಿಣದ ರಾಜ್ಯಗಳಲ್ಲಿ ಮಿಷನರಿಗಳಿಗಿಂತ ಹಿಂದೂ ಆಧ್ಯಾತ್ಮಿಕ ಗುರುಗಳು ಹೆಚ್ಚು ಸಮಾಜ ಸೇವೆ ಮಾಡಿದ್ದಾರೆ ಎಂದು ಭಾಗವತ್ ಶುಕ್ರವಾರ ಹೇಳಿದ್ದರು.

'ಸಮಾಜ ಸೇವೆಯ ವಿಷಯ ಬಂದಾಗ ದೇಶದ ವಿಚಾರವಂತರು ಕ್ರೈಸ್ತ ಮಿಷನರಿಗಳ ಹೆಸರು ಉಲ್ಲೇಖಿಸುತ್ತಾರೆ. ಮಿಷನರಿಗಳು ಜಗತ್ತಿನಾದ್ಯಂತ ಹಲವಾರು ಶಾಲೆಗಳು, ಆಸ್ಪತ್ರೆಗಳು, ಸಂಘ–ಸಂಸ್ಥೆಗಳನ್ನು ನಡೆಸುತ್ತಿವೆ. ಇದು ಎಲ್ಲರಿಗೂ ಗೊತ್ತಿದೆ. ಆದರೆ ಹಿಂದೂ ಸಂತರು ಏನು ಮಾಡುತ್ತಾರೆ? ಇದನ್ನು ಅರಿಯಲು ಚೆನ್ನೈನಲ್ಲಿ ಹಿಂದೂ ಸೇವಾ ಜಾತ್ರೆ ಆಯೋಜಿಸಲಾಗಿತ್ತು. ಕನ್ನಡ, ತೆಲುಗು, ಮಲಯಾಳ, ತಮಿಳು ಭಾಷಾ ಪ್ರಾಂತ್ಯಗಳಲ್ಲಿ ಆಚಾರ್ಯರು, ಮುನಿಗಳು, ಸನ್ಯಾಸಿಗಳು ಮಾಡಿದ ಸಮಾಜ ಸೇವೆಯು ಮಿಷನರಿಗಳ ಸಮಾಜ ಸೇವೆಗಿಂತ ಬಹುದೊಡ್ಡದು ಎಂಬುದು ಅದರಿಂದ ತಿಳಿಯಿತು' ಎಂದಿದ್ದರು.

ಕಸಾಪ: ಕನ್ನಡ ಸೇವೆಗೆ ಅವಕಾಶ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಲೆಕ್ಕಪತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಅವಕಾಶವಿದ್ದು, ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸುವ ಈ ಕೆಲಸಕ್ಕೆ ಸೂಕ್ತ ಗೌರವ ಸಂಭಾವನೆ ನೀಡಲಾಗುವುದು ಎಂದು ಕಸಾಪ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ತಿಳಿಸಿದ್ದಾರೆ.

ಸರ್ಕಾರದ ವಿವಿಧ ಇಲಾಖೆ, ಬ್ಯಾಂಕಿಂಗ್ ಹಾಗೂ ಸಾರ್ವಜನಿಕ ಉದ್ಯಮ, ಕನ್ನಡಪರ ಸಂಘ-ಸಂಸ್ಥೆ ಸೇರಿ ಇನ್ನಿತರೆ ಕ್ಷೇತ್ರಗಳಲ್ಲಿ ಲೆಕ್ಕಪತ್ರ ನಿರ್ವಹಣೆ ಮಾಡಿ ನಿವೃತ್ತರಾದವರು, ಕನ್ನಡ ಸೇವಾಸಕ್ತ ಯುವಕ-ಯುವತಿಯರಿಗೆ ಪರಿಷತ್ತಿನಲ್ಲಿ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಲಾಗುವುದು. ಪರಿಷತ್ತಿನ ಕಚೇರಿಯ ಸಮೀಪ ವಾಸವಿರುವವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಹೇಳಿದ್ದಾರೆ.

ಅಭ್ಯರ್ಥಿಗಳು ತಮ್ಮ ಸ್ವ ವಿವರವನ್ನು ಇದೇ 22ರೊಳಗೆ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು ಈ ವಿಳಾಸಕ್ಕೆ ಕಳುಹಿಸಬೇಕು. ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಮದ್ದೂರಮ್ಮ ದೇವಿ ಜಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆಣ್ಣೂರು ಬಾಗಲೂರು ಮುಖ್ಯ ರಸ್ತೆಯ ದೊಡ್ಡಗುಬ್ಬಿ ಗ್ರಾಮದಲ್ಲಿ ಇದೇ ಏಪ್ರಿಲ್ 10 ರಿಂದ 6 ದಿನಗಳ ಕಾಲ ದೊಡ್ಡಗುಬ್ಬಿ ಜಾತ್ರಾ ಮಹೋತ್ಸವ ನಡೆಯಲಿದೆ. ಈ ಜಾತ್ರಾ ಮಹೋತ್ಸವದಲ್ಲಿ ಸಿಡಿ ಪರಿಷೆ, ಎಲ್ಲ ಗ್ರಾಮ ದೇವರುಗಳಿಗೆ ದೀಪೋತ್ಸವ, ಕರಗ, ಕೆಂಡ ಹಾಯುವುದು, ಬಾಯಿ ಬೀಗ ಹರಕೆ, ಗ್ರಾಮ ದೇವರುಗಳಿಗೆ ಮುತ್ತಿನ ಪಲ್ಲಕ್ಕಿ ಹಾಗೂ ಮೆರವಣಿಗೆ ನಡೆಯಲಿದೆ ಎಂದು ಜಾತ್ರೆಯ ಸಂಚಾಲಕರಾದ ಕೇಬಲ್ ನಾಗೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸಿಯುಇಟಿ–ಯುಜಿ: ಅರ್ಜಿ ಸಲ್ಲಿಕೆಗೆ ಮತ್ತೆ 3 ದಿನ ಅವಕಾಶ

ನವದೆಹಲಿ (ಪಿಟಿಐ): 'ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ–ಯುಜಿ) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮತ್ತೆ ಮೂರು ದಿನಗಳ ಅವಕಾಶ ಕಲ್ಪಿಸಲಾಗಿದೆ. ಎನ್‌ಸಿಇಆರ್‌ಟಿಯು ಪಠ್ಯಪುಸ್ತಕಗಳನ್ನು ಪರಿಷ್ಕರಿಸಿದ್ದರೂ ಕೂಡ ಪಠ್ಯಕ್ರಮದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ' ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ.



'ಹಲವು ವಿದ್ಯಾರ್ಥಿಗಳ ಮನವಿ ಮೇರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮತ್ತೆ ಮೂರು ದಿನಗಳ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಭಾನುವಾರ, ಸೋಮವಾರ ಹಾಗೂ ಮಂಗಳವಾರ ಅರ್ಜಿ ಸಲ್ಲಿಸಬಹುದು. ಮಂಗಳವಾರ ರಾತ್ರಿ 11.59ಕ್ಕೆ (ಇದೇ 11ರಂದು) ಅವಧಿ ಕೊನೆಗೊಳ್ಳಲಿದೆ. ಹೆಚ್ಚಿನ ಮಾಹಿತಿಗೆ ವಿದ್ಯಾರ್ಥಿಗಳು cuet.samarth.ac.in ಗೆ ಭೇಟಿ ನೀಡಬಹುದು' ಎಂದು ಯುಜಿಸಿ ಮುಖ್ಯಸ್ಥ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ಎನ್‌ಪಿಎಸ್: ಸಮಿತಿ ರಚನೆ

ನವದೆಹಲಿ: ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಅಡಿಯಲ್ಲಿ ಸರ್ಕಾರಿ ನೌಕರರ ಪಿಂಚಣಿ ಕುರಿತ ಸಮಸ್ಯೆಗಳನ್ನು ಪರಿಶೀಲಿಸಿ, ಪರಿಹಾರ ಕ್ರಮಗಳನ್ನು ರೂಪಿಸಲು ಕೇಂದ್ರ ಹಣಕಾಸು ಸಚಿವಾಲಯವು ಸಮಿತಿಯೊಂದನ್ನು ರಚಿಸಿದೆ. ಈ ಸಂಬಂಧ ಗುರುವಾರ ಆದೇಶ ಹೊರಡಿಸಲಾಗಿದ್ದು, ವರದಿ ನೀಡಲು ಸಮಿತಿಗೆ ಕಾಲಾವಕಾಶ ನಿಗದಿ ಮಾಡಿರುವ ಬಗ್ಗೆ ಆದೇಶದಲ್ಲಿ ಉಲ್ಲೇಖವಿಲ್ಲ.

ಈಗಿನ ವ್ಯವಸ್ಥೆಯಲ್ಲಿ ಯಾವುದಾದರೂ ಬದಲಾವಣೆಯ ಅವಶ್ಯಕತೆ ಇದೆಯೇ ಎಂಬುದನ್ನು ಸಮಿತಿ ಪರಿಶೀಲಿಸಲಿದೆ. ಬಜೆಟ್‌ನಲ್ಲಿನ ಅನುದಾನ ಲಭ್ಯತೆ ಮತ್ತು ಬಜೆಟ್ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಧಕ್ಕೆಯಾಗದಂತೆ ಬದಲಾವಣೆಗಳನ್ನು ಹೇಗೆ ತರಬಹುದು ಎಂಬುದನ್ನು ಸಮಿತಿಯು ಶಿಫಾರಸು ಮಾಡಲಿದೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪ್ರತಿಪಕ್ಷಗಳ ಆಡಳಿತ ಇರುವ ಕೆಲವು ಸರ್ಕಾರಗಳು ರಾಷ್ಟ್ರೀಯ ಪಿಂಚಣಿ ಯೋಜನೆಯ ಬದಲಾಗಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿವೆ. ಉದ್ಯೋಗಿಯು ನಿವೃತ್ತಿಯ ಕೊನೆಯಲ್ಲಿ ಪಡೆಯುತ್ತಿದ್ದ ವೇತನದ ಶೇ 50ರಷ್ಟು ಪಿಂಚಣಿಯನ್ನು ಹಳೆ ಪಿಂಚಣಿ ಯೋಜನೆ ಖಚಿತಪಡಿಸುತ್ತದೆ. ಆದರೆ ಹೊಸ ಪಿಂಚಣಿ ಯೋಜನೆಯಲ್ಲಿ ಖಚಿತ ಪಿಂಚಣಿ ಇಲ್ಲ ಎನ್ನಲಾಗಿದೆ.

ಸಮಿತಿ ರಚನೆ ಮಾಡುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಾರ್ಚ್ 24ರಂದು ಲೋಕಸಭೆಗೆ ತಿಳಿಸಿದ್ದರು. ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥ್ ಅವರು ನಾಲ್ವರು ಸದಸ್ಯರ ಸಮಿತಿಯ ನೇತೃತ್ವ ವಹಿಸಲಿದ್ದಾರೆ. ಪಿಎಫ್‌ಆರ್‌ಡಿಎ ಮುಖ್ಯಸ್ಥರು, ಸಿಬ್ಬಂದಿ ತರಬೇತಿ ಇಲಾಖೆಯ ಕಾರ್ಯದರ್ಶಿ ಹಾಗೂ ಹಣಕಾಸು ಸಚಿವಾಲಯದ ವೆಚ್ಚ ವಿಭಾಗದ ವಿಶೇಷ ಕಾರ್ಯದರ್ಶಿಯು ಸಮಿತಿಯ ಇತರ ಸದಸ್ಯರಾಗಿದ್ದಾರೆ. ವಿವಿಧ ರಾಜ್ಯ ಸರ್ಕಾರಗಳು ಹಾಗೂ ಸಂಬಂಧಿತರ ಜೊತೆ ಸಮಿತಿ ಸಮಾಲೋಚನೆ ನಡೆಸಲಿದೆ.



ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿಗೆ 'ನ್ಯಾಕ್‌ಎ+ ಗ್ರೇಡ್' ಮಾನ್ಯತೆ ದೊರೆತಿದ್ದು ಪ್ರಾಂಶುಪಾಲ ಡಾ.ಎಸ್.ಎನ್.ವೆಂಕಟೇಶ್ ಅವರನ್ನು ಶಂಕರ್ ಬಿದರಿ ಸನ್ಮಾನಿಸಿದರು.

'ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠ ವೃತ್ತಿ'

ಪ್ರಜಾವಾಣಿ ವಾರ್ತೆ

ಯಲಹಂಕ: ಶಿಕ್ಷಕ ವೃತ್ತಿಯು ಎಲ್ಲ ಕ್ಷೇತ್ರಗಳ ಸೇವಾ ವೃತ್ತಿಗಳಿಗಿಂತಲೂ ಅತ್ಯಂತ ಶ್ರೇಷ್ಠ ಹಾಗೂ ನೋಬೆಲ್ ವೃತ್ತಿಯಾಗಿದೆ. ಶಿಕ್ಷಕರು ನಿರಂತರ ಕಲಿಕೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡಾಗ ಮಾತ್ರ ಪಾಠ– ಪ್ರವಚನ, ಬೋಧನಾ ಶೈಲಿ ಗುಣಮಟ್ಟದಿಂದ ಕೂಡಿರಲು ಸಾಧ್ಯವಾಗುತ್ತದೆ ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿಗೆ 'ನ್ಯಾಕ್ ಎ+ ಗ್ರೇಡ್' ಮಾನ್ಯತೆ ದೊರೆತಿದ್ದು ಪ್ರಾಂಶುಪಾಲರು, ಶಿಕ್ಷಕರಿಗಾಗಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, 'ಆಡಳಿತ ಮಂಡಳಿ, ಶಿಕ್ಷಕರು ಹಾಗೂ ಸಿಬ್ಬಂದಿಯ ಪರಿಶ್ರಮದಿಂದ ಈ ಸಾಧನೆ ಮಾಡಿರುವುದು ಶ್ಲಾಘನೀಯ ಕಾರ್ಯ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೆ ಪಿ. ಕೃಷ್ಣ ಅವರು, 'ದೇಶದಲ್ಲಿ ಎ + ಗ್ರೇಡ್ ಮಾನ್ಯತೆ ಪಡೆದಿರುವ 358 ಕಾಲೇಜುಗಳ ಪೈಕಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯೂ ಒಂದಾಗಿರುವುದು ಹೆಮ್ಮೆಯ ಸಂಗತಿ' ಎಂದರು.

ಶೇಷಾದ್ರಿಪುರ ಶಿಕ್ಷಣಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಉಪಾಧ್ಯಕ್ಷರಾದ ಟಿ.ಎಸ್.ಹೆಂಜಾರಪ್ಪ, ಡಬ್ಲ್ಯು.ಎಚ್.ಅನಿಲ್ ಕುಮಾರ್, ಕೋಶಾಧ್ಯಕ್ಷ ಬಿ.ಎಂ.ಪಾರ್ಥಸಾರಥಿ, ಜಂಟಿ ಕಾರ್ಯದರ್ಶಿ ಎಸ್. ಶೇಷನಾರಾಯಣ ಇತರರು ಇದ್ದರು.

ಚಿತ್ರಾವಳಿ



ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಲೆಕ್ಕಾಧಿಕಾರಿಗಳ ಸಂಘ ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಂಗೀತ ಕಲಾವಿದ ಗಣೇಶ ದೇಸಾಯಿ, ಇತಿಹಾಸಕಾರ ಎಚ್.ಎಸ್. ಗೋಪಾಲ ರಾವ್, ಕಾದಂಬರಿಕಾರ ಗಜಾನನ ಶರ್ಮ ಅವರನ್ನು ಸನ್ಮಾನಿಸಲಾಯಿತು. ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ರಾಮಚಂದ್ರ ರೆಡ್ಡಿ, ಲಕ್ಷ್ಮೀಶ ಸೋಂದಾ, ಗಂಗಾಧರ ಕೊಳಗಿ, ಸುಮಂತ್, ಬಿ.ಪಿ. ಕುಮಾರಸ್ವಾಮಿ, ಎಂ.ಎಸ್. ಹೆಗಡೆ ಕರ್ಕಿ, ವಾಸುದೇವ ಕಾರಂತ, ವಿ.ಜಿ. ಗಾಯತ್ರಿ ಇದ್ದರು.



ಮಣಿ ಕೃಷ್ಣಸ್ವಾಮಿ ಅಕಾಡೆಮಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೃದಂಗ ವಿದ್ವಾನ್ ಜೆ.ವಿ. ಕೃಷ್ಣಪ್ರಸಾದ್ ಅವರಿಗೆ 'ಲಲಿತ ಕಲಾ ಪೋಷಕ ಮಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ.ಮಣಿ ಕೃಷ್ಣಸ್ವಾಮಿ ಫೌಂಡೇಷನ್ ಅಧ್ಯಕ್ಷ ಎಂ.ಕೆ.ಸುದರ್ಶನ್, ಅನನ್ಯ ವ್ಯವಸ್ಥಾಪಕ ಟ್ರಸ್ಟಿ ಆರ್.ವಿ. ರಾಘವೇಂದ್ರ, ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭ, ಮೃದಂಗ ವಾದಕರಾದ ಎಚ್.ಎಸ್.ಸುಧೀಂದ್ರ, ಆನೂರು ಅನಂತಕೃಷ್ಣ ಶರ್ಮ, ಪಿ.ನಿತ್ಯಾನಂದ ರಾವ್ ಇದ್ದರು –ಪ್ರಜಾವಾಣಿ ಚಿತ್ರ

ರಂಜಾನ್: ಕಿಕ್ಕಿರಿದು ಸೇರಿದ ಜನತೆ, ಮಾಂಸಾಹಾರಿ ಭಕ್ಷ್ಯಗಳಿಗೆ ಭಾರೀ ಬೇಡಿಕೆ

ತರಹೇವಾರಿ ಖಾದ್ಯಗಳ ಘಮಲು

● ಖಲೀಲಅಹ್ಮದ ಶೇಖ



ಫ್ರೇಜರ್ ಟೌನ್ ಮಸೀದಿ ರಸ್ತೆಯೊಂದರಲ್ಲಿ ಮಾರಾಟವಾಗುತ್ತಿರುವ ವೈವಿಧ್ಯಮಯ ಮಾಂಸಾಹಾರಿ ಖಾದ್ಯಗಳು —ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಪ್ರಜಾವಾಣಿ ವಿಶೇಷ

ಬೆಂಗಳೂರು: ರಂಜಾನ್ ಮಾಸದ ಇಳಿ ಸಂಜೆಯ ಹೊತ್ತಲ್ಲಿ ಶಿವಾಜಿನಗರದ ಚಾಂದನಿಚೌಕ್, ಫ್ರೇಜರ್ ಟೌನ್ ಫುಡ್ ಸ್ಟ್ರೀಟ್ ಕಡೆ ಒಮ್ಮೆ ಸುತ್ತಿದರೆ ಸಾಕು. ತರಹೇವಾರಿ ಖಾದ್ಯಗಳ ಘಮಲು ಮೂಗಿಗೆ ಬಡಿಯುತ್ತದೆ.

ಫ್ರೇಜರ್‌ಟೌನ್‌ನ ಮಸೀದಿಗೆ ಸಂಪರ್ಕಿಸುವ ಎಲ್ಲ ರಸ್ತೆಗಳಲ್ಲಿ ಸಂಜೆಯಾಗುತ್ತಲೇ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ. ಶೀರ್ ಕುರ್ಮಾ, ದೂದ್ ಕಾ ಸೇಮಿಯಾ, ಬಾದಾಮ್ ಸ್ಪೆಷಲ್ ಫಲೂದ ಸೇರಿ ಬಗೆ ಬಗೆಯ ಸಿಹಿ ತಿನಿಸುಗಳೂ ಇಲ್ಲಿ ಲಭ್ಯ. ಮತ್ತೊಂದು ಕಡೆ ಮಾಂಸಾಹಾರಿಗಳಿಗಂತೂ ಇದು ಹೇಳಿ ಮಾಡಿಸಿದ ತಾಣ. ಸಮೋಸಾ, ಚಿಕನ್ ಕಬಾಬ್, ಶೀಖ್ ಕಬಾಬ್, ಮಟನ್ ಕಬಾಬ್, ಹಲೀಂ ಸೇರಿ ಮೀನಿನ ವೈವಿಧ್ಯಮಯ ಖಾದ್ಯಗಳು ಬಾಯಲ್ಲಿ ನೀರೂರಿಸುತ್ತಿವೆ.

ಕತ್ತಲಾಗುತ್ತಿದ್ದಂತೆಯೇ ಹೊತ್ತಿ ಕೊಳ್ಳುವ ಬಣ್ಣ-ಬಣ್ಣದ ದೀಪಗಳು ಈ ರಸ್ತೆಗಳ ಮತ್ತಷ್ಟು ಮೆರುಗು ಹೆಚ್ಚಿಸುತ್ತವೆ. ಸಂಜೆ ಕಳೆಗಟ್ಟುವ ಮಾರುಕಟ್ಟೆ ಬೆಳಗಿನ ಜಾವ ನಾಲ್ಕರವರೆಗೂ ನಡೆಯುತ್ತದೆ. ಇಡೀ ರಾತ್ರಿ ಇಲ್ಲಿ ವ್ಯಾಪಾರ-ವಹಿವಾಟು ನಡೆಯುತ್ತದೆ. ಹೊಸದೊಂದು ಲೋಕವೇ ಅನಾವರಣಗೊಳ್ಳುತ್ತದೆ.

'ಇಲ್ಲಿನ ಆಹಾರ ಮಳಿಗೆಗಳಲ್ಲಿ ಪ್ರತಿನಿತ್ಯ ಮಧ್ಯಾಹ್ನ 3 ಗಂಟೆಯಿಂದ ಬೆಳಗಿನ ಜಾವ 4 ಗಂಟೆಯವರೆಗೂ ವ್ಯಾಪಾರ ನಡೆಯುತ್ತದೆ. ರಂಜಾನ್ ಮಾಸದಲ್ಲಿ ಬೇಡಿಕೆ ಹೆಚ್ಚಿರುವುದರಿಂದ ವ್ಯಾಪಾರವೂ ಹೆಚ್ಚು. ಸಂಜೆ 6.45ಕ್ಕೆ ನಮಾಜ್ ಮುಗಿಸಿ ಮನೆಗೆ ಮರಳುವ ಅನೇಕರು ಈ ತಿನಿಸುಗಳನ್ನು ಖರೀದಿಸುತ್ತಾರೆ. ಇಲ್ಲಿ ಪಾರ್ಸಲ್ ತೆಗೆದುಕೊಂಡು ಹೋಗುವವರ ಸಂಖ್ಯೆಯೂ ಹೆಚ್ಚು. ಈ ತಿಂಗಳೊಂದರಲ್ಲೇ ₹2.50 ಲಕ್ಷದಿಂದ ₹3ಲಕ್ಷದವರೆಗೂ ವಹಿವಾಟು ನಡೆಯುತ್ತದೆ' ಎಂದು ಇಲ್ಲಿನ ಹೋಟೆಲ್‌ವೊಂದರ ಮಾಲೀಕ ಮಹಮ್ಮದ್ ಯೂಸುಫ್ ಮಾಹಿತಿ ನೀಡಿದರು.

'ಒಂದು ಪ್ಲೇಟ್ ಒಂಟೆ ಮಾಂಸಕ್ಕೆ ₹280, ಚಿಕನ್ ಮಲಾಯಿ ತಂಗಡಿಗೆ ₹180, ಇದರೊಂದಿಗೆ ಹಲವಾರು ಬಗೆಯ ಮೀನು, ಏಡಿಯ ಖಾದ್ಯಗಳು ನಮ್ಮಲ್ಲಿ ಲಭ್ಯ' ಎಂದು ಜೆ.ಎಂ.ಜೆ ಹೋಟೆಲ್‌ನ ಜವಾದ್ ಪಾಷಾ ತಿಳಿಸಿದರು.

ಹೈದರಾಬಾದಿ ಹಲೀಂಗೆ ಬೇಡಿಕೆ

ರಂಜಾನ್ ಮಾಸದಲ್ಲಿ ಹೈದರಾಬಾದಿ ಹಲೀಂಗೆ ಎಲ್ಲಿಲ್ಲದ ಬೇಡಿಕೆ. ಈ ಪದಾರ್ಥ ಸೇವನೆ ಇಲ್ಲದೆ ಸೇವನೆ ಹಬ್ಬದ ಆಚರಣೆ ಅಪೂರ್ಣವಾದಂತೆ ಭಾಸವಾಗುತ್ತದೆ. ನಗರದ ಫ್ರೇಜರ್‌ಟೌನ್‌ನ ಮಸೀದಿ ರಸ್ತೆಯಲ್ಲಿ ವಿವಿಧ ಬಗೆಯ ಹಲೀಂ ತಯಾರಿಸುವ ಹೋಟೆಲ್‌ಗಳಿದ್ದು, ಸಂಜೆ ವೇಳೆ ಜನಜಂಗುಳಿ ನೆರೆದಿರುತ್ತದೆ.

'ಸ್ವಾದಿಷ್ಟ, ರುಚಿಕರ ಹಾಗೂ ಪೌಷ್ಟಿಕಾಂಶಯುಕ್ತ ಖಾದ್ಯವಾದ ಹಲೀಂ ಸೇವನೆಗೆ ಮುಸ್ಲಿಮರು, ಹಿಂದೂಗಳು ಸೇರಿದಂತೆ ಇತರೆ ಧರ್ಮೀಯರು ಆಕರ್ಷಿತರಾಗಿದ್ದಾರೆ. ನಗರದಲ್ಲಿ ಮಟನ್, ಚಿಕನ್ ಹಾಗೂ ಬೀಫ್ ಹಲೀಂ ಲಭ್ಯವಿದ್ದು, ಹೆಚ್ಚಿನ ಜನರು ಚಿಕನ್ ಮತ್ತು ಮಟನ್ ಹಲೀಂ ಅನ್ನು ಸವಿಯುತ್ತಾರೆ.

ಇರಾನಿನ ಈ ಖಾದ್ಯ ರಂಜಾನ್ ಮಾಸಕ್ಕೆ ಮತ್ತಷ್ಟು ಮೆರುಗು ನೀಡುತ್ತದೆ. ಒಂದು ಪ್ಲೇಟ್ ಮಟನ್ ಹಲೀಂಗೆ ₹200 ದರವಿದೆ' ಎಂದು ಹೈದರಾಬಾದಿ ಹಲೀಂ ಹೋಟೆಲ್‌ನ ಮಾಲೀಕ ಶೌಕತ್ ಅಹ್ಮದ್ ಅವರು ಮಾಹಿತಿ ನೀಡಿದರು.

ಅರೆಕಾಲಿಕ ಕೆಲಸ: ₹ 7.10 ಲಕ್ಷ ವಂಚನೆ

ಬೆಂಗಳೂರು: ಅರೆಕಾಲಿಕ ಕೆಲಸ ಕೊಡಿಸುವ ಸೋಗಿನಲ್ಲಿ ಮಹಿಳೆಯೊಬ್ಬರಿಂದ ₹7.10 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜಕ್ಕೂರಿನ ನಿವಾಸಿ ರಜನಿ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಮಹಿಳೆಯ ಮೊಬೈಲ್‌ಗೆ ಮಾರ್ಚ್ 31ರಂದು ಸಂದೇಶ ಬಂದಿತ್ತು. 'ಅರೆಕಾಲಿಕ ಕೆಲಸವಿದೆ. ಸ್ವಲ್ಪ ಹಣ ಹೂಡಿಕೆ ಮಾಡಿದರೆ, ಮನೆಯಿಂದಲೇ ಹಣ ಗಳಿಸಬಹುದು' ಎಂದು ಸಂದೇಶದಲ್ಲಿ ಬರೆಯಲಾಗಿತ್ತು. ಅದನ್ನು ನಂಬಿದ್ದ ಮಹಿಳೆ, ಮೊಬೈಲ್ ಮೂಲಕ ಆರೋಪಿಗಳನ್ನು ಸಂಪರ್ಕಿಸಿದ್ದರು.'

'ಟೆಲಿಗ್ರಾಂ ಗ್ರೂಪ್‌ಗೆ ಮಹಿಳೆಯನ್ನು ಸೇರಿಸಿದ್ದ ಆರೋಪಿಗಳು, ನೋಂದಣಿ ಹಾಗೂ ಶುಲ್ಕದ ಹೆಸರಿನಲ್ಲಿ ಹಂತ ಹಂತವಾಗಿ ₹7.10 ಲಕ್ಷ ಪಡೆದಿದ್ದರು.

ವೀರಭದ್ರಸ್ವಾಮಿ ಜಾತ್ರೆ ನಾಳೆಯಿಂದ

ರಾಜರಾಜೇಶ್ವರಿನಗರ: ವೀರಭದ್ರಸ್ವಾಮಿಯ ಮಹಾರಥೋತ್ಸವ, ಪಲ್ಲಕ್ಕಿ ಉತ್ಸವವು ಏಪ್ರಿಲ್ 10ರಿಂದ 12ರ ವರೆಗೆ ನಡೆಯಲಿದೆ.

ಏ.11ರಂದು ದೇವರಿಗೆ ಕುಂಬಾಭಿಷೇಕ, ನಡೆ-ಮುಡಿ ಆರತಿ ಉತ್ಸವ, ಅಗ್ನಿಕೊಂಡ ಪೂಜೆ, ಸೌದೆಗಾಡಿ ಮೆರವಣಿಗೆ ನಡೆಯಲಿದೆ. 12ರಂದು ಬೆಳಿಗ್ಗೆ 8.30ಕ್ಕೆ ವೀರಭದ್ರ ಸ್ವಾಮಿ ಅಗ್ನಿಕೊಂಡ ಪ್ರವೇಶ, ಅಂದೇ ಬೆಳಿಗ್ಗೆ 11.30ಕ್ಕೆ ಮಹಾರಥೋತ್ಸವ, ಜಾನಪದ ಕಲೆಗಳ ಉತ್ಸವ ನಡೆಯಲಿದೆ.

ರುದ್ರೇಶ್ ಹತ್ಯೆ: ಆರೋಪಿ ಸುಳಿವಿಗೆ ₹ 5 ಲಕ್ಷ

ಪ್ರಜಾವಾಣಿ ವಾರ್ತೆ



ಮೊಹಮ್ಮದ್ ಗೌಸ್ ನಯಾಜಿ

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತ ರುದ್ರೇಶ್ ಕೊಲೆ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಆರೋಪಿ ಮೊಹಮ್ಮದ್ ಗೌಸ್ ನಯಾಜಿ (41) ಬಗ್ಗೆ ಸುಳಿವು ನೀಡಿದವರಿಗೆ ₹ 5 ಲಕ್ಷ ಬಹುಮಾನ ಘೋಷಿಸಲಾಗಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ರಾಷ್ಟ್ರೀಯ ತನಿಖಾ ದಳ (ಎನ್‌ಐಎ), 'ಸುಳಿವು ನೀಡಿದವರ ಮಾಹಿತಿಯನ್ನು ಗೌಪ್ಯವಾಗಿರಿಸಲಾಗುವುದು' ಎಂದಿದೆ.

'ಆರ್.ಟಿ.ನಗರ 2ನೇ ಹಂತದ 17ನೇ ಅಡ್ಡರಸ್ತೆಯ ನಿವಾಸಿ ಗೌಸ್ ನಯಾಜಿ, ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ ಕಾರ್ಯಕರ್ತ. 2016ರ ಅಕ್ಟೋಬರ್ 16ರಂದು ನಡೆದಿದ್ದ ರುದ್ರೇಶ್ ಹತ್ಯೆ ಪ್ರಕರಣದಲ್ಲಿ ಈತನ ಕೈವಾಡವಿತ್ತು. ಈತನ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಲಾಗಿತ್ತು. ಆದರೆ, ಬಂಧನ ಭೀತಿಯಲ್ಲಿ ಈತ ತಲೆಮರೆಸಿಕೊಂಡಿದ್ದಾನೆ.'

'ಮೊಹಮ್ಮದ್ ಗೌಸ್ ನಯಾಜಿ ಬಗ್ಗೆ ಯಾರಿಗಾದರೂ ಮಾಹಿತಿ ಗೊತ್ತಿದ್ದರೆ, ದೂರವಾಣಿ ಸಂಖ್ಯೆ 080-29510900 ಹಾಗೂ ಮೊಬೈಲ್- 8904241100 ಸಂಪರ್ಕಿಸಬಹುದು' ಎಂದು ಎನ್‌ಐಎ ಹೇಳಿದೆ.

‘ನ್ಯಾಯಾಂಗ, ಮಾಧ್ಯಮದ ಸಾಮರಸ್ಯದಿಂದ ಪ್ರಜಾಪ್ರಭುತ್ವದ ಮೌಲ್ಯ ರಕ್ಷಣೆ’

ಪ್ರಜಾವಾಣಿ ವಾರ್ತೆ



ಕರ್ನಾಟಕ ಪತ್ರಕರ್ತೆಯರ ಸಂಘವು ಆಯೋಜಿಸಿದ್ದ ‘ಅಭಿವ್ಯಕ್ತಿ ಸ್ವಾತಂತ್ರ್ಯ: ನ್ಯಾಯಾಂಗ ಮತ್ತು ಮಾಧ್ಯಮ’ ಉಪನ್ಯಾಸದಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಮಾತನಾಡಿದರು. ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ, ಪತ್ರಕರ್ತೆ ನಾಗಮಣಿ ಎಸ್. ರಾವ್ ಇದ್ದರು.

ಬೆಂಗಳೂರು: ‘ನ್ಯಾಯಾಂಗ ಹಾಗೂ ಪತ್ರಿಕೋದ್ಯಮದ ಸ್ವಾತಂತ್ರ್ಯ ಇವೆರಡೂ ಪ್ರಜಾಪ್ರಭುತ್ವದ ಅಡಿಗಲ್ಲುಗಳು. ಇವೆರಡರಲ್ಲಿ ಯಾವುದಾದರೂ ಒಂದು ದುರ್ಬಲವಾದರೆ ದೇಶದ ಸ್ವಾತಂತ್ರ್ಯ, ಸ್ವಾಯತತ್ತೆಯೂ ದುರ್ಬಲವಾಗುತ್ತದೆ’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಕರ್ನಾಟಕ ಪತ್ರಕರ್ತೆಯರ ಸಂಘ ಆಯೋಜಿಸಿದ್ದ ನಾಗಮಣಿ ಎಸ್. ರಾವ್ ದತ್ತಿನಿಧಿ ಉಪನ್ಯಾಸದಲ್ಲಿ ‘ಅಭಿವ್ಯಕ್ತಿ ಸ್ವಾತಂತ್ರ್ಯ: ನ್ಯಾಯಾಂಗ ಮತ್ತು ಮಾಧ್ಯಮ’ ಕುರಿತು ಅವರು ಮಾತನಾಡಿದರು.

‘ನ್ಯಾಯಾಂಗ ಮತ್ತು ಮಾಧ್ಯಮ ಸಂಸ್ಥೆಗಳ ಉದ್ದೇಶವೆಂದರೆ ಪ್ರಜಾಪ್ರಭುತ್ವದ ತಳಪಾಯದ ಸಂರಕ್ಷಣೆ. ಈ ಎರಡೂ ಕೆಲವೊಮ್ಮೆ ಪರಸ್ಪರ ಸಂಘರ್ಷಿಸುವಂತೆ ಕಂಡರೂ ಅವುಗಳ ಮೂಲ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಸಾಮರಸ್ಯವನ್ನು ಗುರುತಿಸಬೇಕು. ಹಾಗಾದಲ್ಲಿ ಮಾತ್ರ ದೇಶದ ಪ್ರಜೆಗಳ ಪ್ರಭುತ್ವ ಸ್ಥಿರವಾಗಿ ಉಳಿಯಬಹುದು’ ಎಂದರು. ಪತ್ರಕರ್ತೆ ಚೇತನಾ ಬೆಳಗೆರೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ ಅಧ್ಯಕ್ಷತೆ ವಹಿಸಿದ್ದರು. ದತ್ತಿನಿಧಿ ಸ್ಥಾಪಕಿ ನಾಗಮಣಿ ಎಸ್. ರಾವ್, ಸಂಘದ ಉಪಾಧ್ಯಕ್ಷೆ ವಾಣಿಶ್ರೀ ಜೆ.ಎನ್., ಪ್ರಧಾನ ಕಾರ್ಯದರ್ಶಿ ಮಂಜುಶ್ರೀ ಕಡಕೋಳ, ಪತ್ರಕರ್ತೆಯರಾದ ಶಾಂತಲಾ ಧರ್ಮರಾಜ್, ಮಾಲತಿ ಭಟ್, ವಿಜಯಮ್ಮ, ಆಶಾ ಕೃಷ್ಣಸ್ವಾಮಿ, ಎಂ.ಪಿ. ಸುಶೀಲಾ ಇದ್ದರು.



ನಗರದಲ್ಲಿನ ಭಾರತೀಯ ವಿದ್ಯಾಭವನದಲ್ಲಿ ಶನಿವಾರ ಆಯೋಜಿಸಿದ್ದ ಡಾ.ಕೆ.ಎಂ. ಮುನ್ಷಿ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಹಾಗೂ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಆರ್.ವಿ. ರವೀಂದ್ರನ್ ಅವರನ್ನು ಗೌರವಿಸಲಾಯಿತು. ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್, ಅಧ್ಯಕ್ಷ ಕೆ.ಜಿ. ರಾಘವನ್ ಹಾಗೂ ಗೌರವ ಕಾರ್ಯದರ್ಶಿ ಮಾನಂದಿ ಸುರೇಶ್ ಇದ್ದಾರೆ.

ಮೊಬೈಲ್‌ನಲ್ಲಿ ಮಹಿಳೆ ಚಿತ್ರ ಸೆರೆ: ಆಂಧ್ರದ ವ್ಯಕ್ತಿ ವಶಕ್ಕೆ

ಅಪರಾಧ ಸುದ್ದಿ

ದೇವನಹಳ್ಳಿ (ಬೆಂ. ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನದ ಕಾಫಿ ಶಾಪ್‌ನಲ್ಲಿ ಕುಳಿತಿದ್ದ ಮಹಿಳೆಯ ಚಿತ್ರ ಮತ್ತು ವಿಡಿಯೊಗಳನ್ನು ಮೊಬೈಲ್‌ನಲ್ಲಿ ರಹಸ್ಯವಾಗಿ ಚಿತ್ರೀಕರಿಸಿದ್ದ ಆರೋಪದ ಮೇಲೆ ಆಂಧ್ರ ಪ್ರದೇಶದ ಲಕ್ಷ್ಮಿನಾರಾಯಣ್ ಎಂಬುವರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ.

ಏ. 1ರಂದು ಬೆಂಗಳೂರಿನಿಂದ ಡೆಹ್ರಾಡೂನ್‌ಗೆ ಹೊರಟಿದ್ದ ಮಹಿಳೆ ಟರ್ಮಿನಲ್-1ರಲ್ಲಿದ್ದ ಕಾಫಿ ಶಾಪ್‌ನಲ್ಲಿ ಕಾಫಿ ಸೇವಿಸುತ್ತಿದ್ದರು. ಅಲ್ಲಿಯೇ ಇದ್ದ ಲಕ್ಷ್ಮಿನಾರಾಯಣ್ ಎಂಬುವರು ಮಹಿಳೆಯ ಅನುಮತಿ ಪಡೆಯದೆ ಮೊಬೈಲ್‌ನಲ್ಲಿ ಆಕೆಯ ವಿಡಿಯೊ ಮತ್ತು ಚಿತ್ರಗಳನ್ನು ಸೆರೆ ಹಿಡಿದಿದ್ದರು.

‘ನಾನು ಶಾರ್ಟ್ ಧರಿಸಿ ಕಾಫಿ ಶಾಪ್‌ನಲ್ಲಿ ಕುಳಿತಿದ್ದೆ. ಅಲ್ಲಿದ್ದ ವ್ಯಕ್ತಿ ಮೊಬೈಲ್‌ನಲ್ಲಿ ನನ್ನ ಅಂಗಾಂಗಳ ಚಿತ್ರ ಸೆರೆ ಹಿಡಿದಿರುವುದು ಗಮನಕ್ಕೆ ಬಂದಿದೆ’ ಎಂದು ಮಹಿಳೆಯು ವಿಮಾನ ನಿಲ್ದಾಣ ಠಾಣೆಯಲ್ಲಿ ಏ.1ರಂದು ದೂರು ಸಲ್ಲಿಸಿದ್ದರು. ದೂರು ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಅಪಘಾತ: ಡ್ಯಾಗರ್ ತೋರಿಸಿ ಬೆದರಿಸಿದ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಸ್ತೆಯಲ್ಲಿ ಸಂಭವಿಸಿದ್ದ ಅಪಘಾತದ ವಿಚಾರವಾಗಿ ಜಗಳ ತೆಗೆದಿದ್ದ ಟಾಟಾ ಏಸ್ ವಾಹನ ಚಾಲಕ, ಡ್ಯಾಗರ್ ತೋರಿಸಿ ಜೀವ ಬೆದರಿಕೆಯೊಡ್ಡಿದ್ದಾನೆ’ ಎಂದು ಆರೋಪಿಸಿ ದ್ವಿಚಕ್ರ ವಾಹನ ಸವಾರ ಪ್ರಕಾಶ್ ಟ್ವೀಟ್ ಮೂಲಕ ಪೊಲೀಸರಿಗೆ ದೂರು ನೀಡಿದ್ದಾರೆ.

ದೂರಿಗೆ ಪ್ರತಿಕ್ರಿಯಿಸಿರುವ ಪಶ್ಚಿಮ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್, ‘ರಾಮಮೂರ್ತಿನಗರ ಠಾಣೆ ಇನ್‌ಸ್ಪೆಕ್ಟರ್ ಅವರಿಗೆ ವಿಷಯ ತಿಳಿಸಿದ್ದೇವೆ. ಅವರಿಗೆ ದೂರು ನೀಡಿದರೆ, ಚಾಲಕನ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದಿದ್ದಾರೆ. ಸದ್ಯಕ್ಕೆ ಯಾವುದೇ ದೂರು ದಾಖಲಾಗಿಲ್ಲ.

ಘಟನೆ ವಿವರ: ‘ರಾಮಮೂರ್ತಿನಗರದಲ್ಲಿ ತಂದೆ ಜೊತೆ ಪ್ರಕಾಶ್, ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಮೊಬೈಲ್‌ನಲ್ಲಿ ಮಾತನಾಡುತ್ತ ಟಾಟಾ ಏಸ್ ವಾಹನ ಚಲಾಯಿಸಿಕೊಂಡು ಬಂದಿದ್ದ ಚಾಲಕ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದ. ಪ್ರಕಾಶ್ ಹಾಗೂ ಅವರ ತಂದೆ, ಚಾಲಕನ ವರ್ತನೆ ಪ್ರಶ್ನಿಸಿದ್ದರು. ಸಿಟ್ಟಾಗಿದ್ದ ಚಾಲಕ, ವಾಹನದಿಂದ ಕೆಳಗೆ ಇಳಿದು ಜಗಳ ತೆಗೆದಿದ್ದ. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಇದೇ ವೇಳೆ ಚಾಲಕ, ಡ್ಯಾಗರ್ ಹಿಡಿದು ಪ್ರಕಾಶ್ ಹಾಗೂ ಅವರ ತಂದೆಗೆ ಬೆದರಿಕೆಯೊಡ್ಡಿದ್ದ. ಕೆಲ ನಿಮಿಷಗಳ ನಂತರ, ಸ್ಥಳದಿಂದ ಹೊರಟು ಹೋಗಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

ಉದಕಮಂಡಲ ರೇಸ್

ನಾಟಿ ಡ್ಯಾನ್ಸರ್ ಗೆಲ್ಲುವ ನಿರೀಕ್ಷೆ

ಸ್ಟೀವರ್ಡ್ಸ್ ಟ್ರೋಫಿ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಡ್ಯಾನ್ಸರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00 ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸನ್ನಿ ಐಸ್ಲ್ 5, ಅಬಿಲಿಟೇರ್ 9, ಮಾರ್ಷಲ್ 1
2ನೇ ರೇಸ್: ಲೇಡಿ ಲಕ್ 1, ಸ್ಟಾರ್ ಲ್ಯಾಪ್ 2, ಚಾಯ್ಸ್ 3
3ನೇ ರೇಸ್: ಫ್ಯಾಶನಿಸ್ಟ್ 5, ಜೆನ್ ಜೀರೊ 10, ಆಂಜಿಯೊ 1
4ನೇ ರೇಸ್: ನಾಟಿ ಡ್ಯಾನ್ಸರ್ 1, ದಿ ಅವೇಕನಿಂಗ್ 2, ಪೆನ್ಸೀ 3
5ನೇ ರೇಸ್: ಡೈಮಂಡ್ ಅಂಡ್ ಪರ್ಲ್ಸ್ 1, ಪ್ರೊಪೋಸ್ಡ್ 4, ಸ್ಟಾರ್ ಸಿಂಬಲ್ 5
6ನೇ ರೇಸ್: ಲೇಡಿ ರಾಯಲ್ 3, ರೀನ್ ಆಫ್ ಟೆರರ್ 1, ಬ್ಯೂಟಿ ಆಫ್ ದಿ ಟರ್ಫ್ 4
7ನೇ ರೇಸ್: ಡ್ಯಾಜ್ಲಿಂಗ್ ಡೈನಾಮೈಟ್ 4, ವಂಡರ್‌ಫುಲ್ ಎರಾ 8, ಗ್ರ್ಯಾಂಡ್ ರಾಯಲ್ 5

ಉತ್ತಮ ಬೆಟ್: ಫ್ಯಾಶನಿಸ್ಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

ರಾಮನವಮಿ ಕಾರ್ಯಕ್ರಮ: ಮೂಲದೇವರಿಗೆ ಮಹಾಭಿಷೇಕ: ಪಟ್ಟಾಭಿಷೇಕ, ಮಹಾಮಂಗಳಾರತಿ, ಅನ್ನ ಸಂತರ್ಪಣೆ, ಶ್ರೀರಾಮ ದೇವರ ಪ್ರಕಾರೋತ್ಸವದ ಸಮಾರೋಪ ಸಮಾರಂಭ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 7ರಿಂದ

ಶ್ರೀರಾಮೋತ್ಸವ: ಶ್ರೀರಾಮ ಪಟ್ಟಾಭಿಷೇಕ ಮತ್ತು ಪೂಜೆ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಬೆಳಿಗ್ಗೆ 8.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಮ್ಯಾಂಡೊಲಿನ್: ವಿಷ್ಣು ವೆಂಕಟೇಶ್, ಪಿಟೀಲು: ಅರ್ಜುನ್ ದಿನಕರ್, ಮೃದಂಗ: ನರಸಿಂಹನ್ ರಾಮಸ್ವಾಮಿ ಐಯ್ಯಂಗಾರ್, **ಘಟ:** ಕೃಷ್ಣ ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15 ರಿಂದ

ಶ್ರೀರಾಮೋತ್ಸವ: ಸಂಕಷ್ಟರಹರ ಚತುರ್ಥಿ ಪೂಜೆ, ಭರತನಾಟ್ಯ ಪ್ರದರ್ಶನ: ಕಾವ್ಯಶ್ರೀ ಶಿವಶಂಕರ್, ನಿರ್ದೇಶನ: ಜ್ಯೋತಿ ಪಟ್ಟಾಭಿರಾಮ್, ‘ರಮಾರಮಣ ನೃತ್ಯರೂಪಕ’: ರಮಣಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ


ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅಮತ್ ನಾರಾಯಣ್, ಪಿಟೀಲು: ಜೆ. ಜನಾರ್ಧನ್, ಮೃದಂಗ: ವಿನೋದ್ ಶ್ಯಾಮ್ ಆನೂರು, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

‘ಮತದಾನದ ಮಹತ್ವ ಸ್ವಯಂ ಜಾಗೃತಿಯ ಸಂಕಲ್ಪ’: ಆಯೋಜನೆ: ಸ್ವಯಂ ಜಾಗೃತಿ ಸೇವಾ ಟ್ರಸ್ಟ್, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 8ರಿಂದ,



ಸೌರಭಾ ನಾಡಿಗ್

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸೌರಭಾ ನಾಡಿಗ್, ಅತಿಥಿಗಳು: ವಿದ್ಯಾ ರಾವ್, ಎಂ.ಆರ್. ಹನುಮಂತರಾಯ, ಪದ್ಮಜಾ ರಾವ್, ಕೆ.ಎಸ್. ನಾಗಶ್ರೀ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 9.30



ಸಿಂಚನಾ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಿಂಚನಾ ಎನ್. ಐಯ್ಯಂಗಾರ್, ಅತಿಥಿ: ರಕ್ಷಾ ಕಾರ್ತಿಕ್, ಆಯೋಜನೆ: ನಟನಂ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಶಿವರಾತ್ರೀಶ್ವರ ವೃತ್ತ, ಜಯನಗರ, ಸಂಜೆ 6



ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಸ್ಮೃತಿ ಜಿ. ಕೌಶಿಕ್ ಮತ್ತು ತಂಡ, ಸಂಗೀತ ಕಛೇರಿ: ಪ್ರಿಯಾ ಸಹೋದರಿಯರು, ಎಚ್.ಎನ್. ಭಾಸ್ಕರ್, ದಿಲ್ಲಿ ಸಾಯಿರಾಂ, ಬಿ.ಎಸ್. ಪುರುಷೋತ್ತಮ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ತ್ರಿವೇಣಿ ಯುವ ಕಾದಂಬರಿ ಪ್ರಶಸ್ತಿ ಪುರಸ್ಕಾರ ಗೌರವ ಸನ್ಮಾನ ಹಾಗೂ ಕವಿಗೋಷ್ಠಿ: ಉದ್ಘಾಟನೆ: ಎ.ಎಚ್. ಬಸವರಾಜ್, ಅಧ್ಯಕ್ಷತೆ: ಗೋವಿಂದಹಳ್ಳಿ ಕೃಷ್ಣೇಗೌಡ, ಅತಿಥಿಗಳು: ನಟರಾಜ್ ಶರ್ಮಾ, ಬಿ. ನಾಗೇಶ್, ಕಾಕೋಳು ಶೈಲೇಶ್, ಎಂ. ಗೌರಮ್ಮ, ಚಂದ್ರಶೇಖರ್ ಆರ್.ಎಸ್., ಸುನಿಲ್ ಕುಮಾರ್ ಎಚ್.ಡಿ., ಪ್ರಶಸ್ತಿ ಪ್ರದಾನ: ಗುಣಸಾಗರಿ ನಾಗರಾಜ್, ಪ್ರಶಸ್ತಿ ಪುರಸ್ಕೃತರು: ದಿವ್ಯ ಶ್ರೀಧರ್, ನಂದಾ ದೀಪ, ರೂಪ ಜಿ.ಎಂ., ಸನ್ಮಾನ: ರಾಣಿ ಗೋವಿಂದರಾಜು, ರಂಗಸ್ವಾಮಿ, ವಿ. ಕೃಷ್ಣಮೂರ್ತಿ, ಆಯೋಜನೆ: ಕುವೆಂಪು ಕರ್ನಾಟಕ ಜನಪರ ವೇದಿಕೆ, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ವಿಶ್ವೇಶ್ವರಯ್ಯ ಮ್ಯೂಸಿಯಂ, ಕಸ್ತೂರ್ ಬಾ ರಸ್ತೆ, ಬೆಳಿಗ್ಗೆ 10

ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ವಿ. ರೇಣುಕಾಪ್ರಸನ್ನ, ಪ್ರಶಸ್ತಿ ಪ್ರದಾನ: ಆರ್. ಸದಾಶಿವಯ್ಯ ಜರಗನಹಳ್ಳಿ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿ: ಆಶಾ ಎಲ್.ಎಸ್., ಉಪಸ್ಥಿತಿ: ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಎಲ್ಲೇಗೌಡ ಬೆಸಗರಹಳ್ಳಿ, ನಿಶಾ ಮುಳಗುಂದ, ನೇತ್ರಾವತಿ ಎಚ್., ಗೀತಾ ಬನ್ನೂರು, ಆರ್. ಎಸ್. ರವೀಂದ್ರ, ಶಿವನಂಜಪ್ಪ, ಆರ್. ಶ್ರೀಧರ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಶೋಷಿತರ ಸಮುದಾಯಗಳ ಮುಖಂಡರ ರಾಜ್ಯಮಟ್ಟದ ‘ಸಂಕಲ್ಪ ಅಧಿವೇಶನ’: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿ: ರವಿವರ್ಮ ಕುಮಾರ್, ಆಯೋಜನೆ: ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ಸ್ಥಳ: ಕೆ.ಇ.ಬಿ. ಎಂಜಿನಿಯರ್ಸ್ ಅಸೋಸಿಯೇಷನ್ ಸಭಾಂಗಣ, ಸಿಲ್ವರ್ ಜುಬ್ಲಿ ಬಿಲ್ಡಿಂಗ್, ರೇಸ್‌ಕೋರ್ಸ್ ರಸ್ತೆ, ಆನಂದರಾವ್ ವೃತ್ತ, ಬೆಳಿಗ್ಗೆ 11

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಲಾವಣ್ಯ ಜಮಖಂಡಿ, ಅತಿಥಿಗಳು: ಮಹೇಶ್ ಜೋಷಿ, ಮಾಲಾ ಶಶಿಕಾಂತ್, ಗುರುರಾಜಚಾರ್ಯ ನಿಪ್ಪಾಣಿ, ಶಾಂತಲಾ ಆರ್ಟ್ಸ್, ಎಂ.ಆರ್. ಕಮಲಾ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ಚೌಡಯ್ಯ ಸ್ಮಾರಕ ಭವನದ ಹಿಂಭಾಗ, ಮಲ್ಲೇಶ್ವರ, ಸಂಜೆ 5



ಶ್ರೇಯಾ ವಿ. ಮೂರ್ತಿ

‘ಸ್ವರ ಶೃಂಗಾರ’ ಸಂಗೀತ ಕಾರ್ಯಕ್ರಮ: ಗಾಯನ: ಶ್ರೇಯಾ ವಿ. ಮೂರ್ತಿ, ತಬಲಾ: ವಿನಾಯಕ್ ಸಾಗರ್, ಹಾರ್ಮೋನಿಯಂ: ವಿನಾಯಕ ಹೆಗಡೆ, ಪಿಟೀಲು: ಮಾನಸ್ ಕುಮಾರ್, ತಬಲಾ: ರಾಹುಲ್ ಪ್ಪೋಫಲಿ, ಆಯೋಜನೆ: ಸಪ್ತಕ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

‘ನೃತ್ಯ ಸಿರಿ’: ಭರತನಾಟ್ಯ: ಸಿಂಧು ನಂದಕಿಶೋರ್, ಜ್ಯೋತಿ ಮನೋಜ್, ಶೀಲಾ ಚಂದ್ರಶೇಖರ್, ಭರತನಾಟ್ಯ: ಕೆ. ಕುಮಾರ್, ಲೇಖಾ ಕೆ.ಎಂ., ನಿಧಿ ಕೆ.ಎಂ., ಆಯೋಜನೆ: ಸುಧೀಂದ್ರ ನೃತ್ಯ ಕಲಾನಿಕೇತನ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.45

ಪ್ರವಚನ ವಾಹಿನಿ: ‘ಸಾಮೂಹಿಕ ಸಂಕಷ್ಟಹರ ಗಣಪತಿ ಪೂಜೆ’, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಮಂದಾಸನೋತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

ಮಾದರಿ ಕ್ಷೇತ್ರ

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸುತ್ತೀರಿ? ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಏ.10ರ ಮಧ್ಯಾಹ್ನ 2ರೊಳಗೆ ಕಳುಹಿಸಿ.
ಕ್ಷೇತ್ರಗಳು: ● ರಾಜರಾಜೇಶ್ವರಿನಗರ ● ಬೆಂಗಳೂರು ದಕ್ಷಿಣ ● ಕೆ.ಆರ್.ಪುರ
96060 38256

ಯಶವಂತಪುರ

ಯಶವಂತಪುರ ವಿಧಾನಸಭಾ ಕ್ಷೇತ್ರವು ತುಮಕೂರು ರಸ್ತೆಯಿಂದ ಆರಂಭವಾಗಿ ಕನಕಪುರ ರಸ್ತೆ ತನಕವೂ ವಿಸ್ತರಿಸಿಕೊಂಡಿದೆ. ನಗರವಾಗಿ ಬದಲಾಗುತ್ತಿರುವ ಗ್ರಾಮಗಳು ಅಭಿವೃದ್ಧಿ ಕಾಣಬೇಕು ಎಂಬುದು ಜನರ ಆಗ್ರಹ.

ಉದ್ಯೋಗ ಮೇಳ ಆಯೋಜಿಸಬೇಕು



ರಾಮೋಹಳ್ಳಿ ಪಂಚಾಯಿತಿ ವ್ಯಾಪ್ತಿ ದೊಡ್ಡದಿದ್ದು, ಮುಖ್ಯವಾಗಿ ಇಲ್ಲಿ ಆಸ್ಪತ್ರೆ ನಿರ್ಮಾಣ ಮಾಡಬೇಕು. ಸರ್ಕಾರಿ ಸೌಲಭ್ಯಗಳಿಗೆ ಕೆಂಗೇರಿಗೆ ಹೋಗಬೇಕಿದ್ದು, ಅದು ತಪ್ಪಬೇಕು. ನಾಡ ಕಚೇರಿಯಲ್ಲಿ ವಯೋವೃದ್ಧರಿಗೆ ಪಿಂಚಣಿ ಸೌಲಭ್ಯ ಸೇವೆ ಕೇಂದ್ರವನ್ನು ಸ್ಥಾಪಿಸಬೇಕು. ಉದ್ಯೋಗ ಮೇಳವನ್ನು ವರ್ಷಕೊಮ್ಮೆ ಆಯೋಜಿಸಬೇಕು. ಆಶ್ರಯ ಯೋಜನೆಯಡಿ ನಿವೇಶನ ಮತ್ತು ವಸತಿ ಸೌಲಭ್ಯ ಕಲ್ಪಿಸುವುದಾಗಿ ಎರಡು ಅವಧಿಯಲ್ಲಿ ಹೇಳಿದ್ದು ಇಲ್ಲಿಯ ತನಕ ಆಗಿಲ್ಲ. ಮುಂದಿನ ಅವಧಿಯಲ್ಲಿ ಇದನ್ನು ಮಾಡಬೇಕು.

ದಿಲೀಪ್ ಗೋವಿಂದರಾಜು, ರಾಮೋಹಳ್ಳಿ

ಬೀದಿ ದೀಪ ಅಳವಡಿಸಬೇಕು



ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು. ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕೆಂಪೇಗೌಡ ರಸ್ತೆಯನ್ನು ಶ್ರೀನಿವಾಸಪುರ ಮುಖ್ಯ ರಸ್ತೆಗೆ ಸೇರ್ಪಡೆ ಮಾಡಬೇಕು ಎಂಬುದು ಹಲವು ದಿನಗಳ ಬೇಡಿಕೆಯಾಗಿದೆ. ಕೆಂಪೇಗೌಡ ವೃತ್ತದಲ್ಲಿ ಬೀದಿದೀಪ ಇಲ್ಲವಾಗಿದ್ದು, ರಾತ್ರಿ ವೇಳೆ ಓಡಾಡುವುದೇ ಕಷ್ಟವಾಗಿದೆ. ವಿದ್ಯುತ್ ಕಂಬದ ವ್ಯವಸ್ಥೆ ಮಾಡಬೇಕು.

ಜಿ.ಸಿ.ಕೆಂಪೇಗೌಡ
ಹೆಮ್ಮಿಗೆಪುರ

‘ಮಹಿಳಾ ಭವನ ನಿರ್ಮಾಣ ಮಾಡಲಿ‘



ಯಶವಂತಪುರ ಕ್ಷೇತ್ರ ವ್ಯಾಪ್ತಿಯ ಕೆಂಚೆನಹಳ್ಳಿಯಲ್ಲಿ ಸರ್ಕಾರದಿಂದ ಮಹಿಳಾ ಭವನ ನಿರ್ಮಿಸಬೇಕು. ಮಹಿಳೆಯರು ವಾಯು ವಿಹಾರ ಮಾಡಲು ಭಯದಿಂದ ತೆರಳುವ ಸ್ಥಿತಿ ಇದೆ. ಪೊಲೀಸ್ ವ್ಯವಸ್ಥೆ ಹೆಚ್ಚಿಸಬೇಕು. ಮಹಿಳಾ ಪೋಲಿಸ್ ಸಿಬ್ಬಂದಿಯನ್ನು ನಿಯೋಜಿಸಬೇಕು. ಕೆಂಚೇನಹಳ್ಳಿ ಗ್ರಾಮಸ್ಥರು ಮತ ಹಾಕಲು ಪಟ್ಟಣಗೆರೆಗೆ ಹೋಗುವ ಸ್ಥಿತಿ ಇನ್ನೂ ಇದೆ. ದಯವಿಟ್ಟು ಕೆಂಚೆನಹಳ್ಳಿಯಲ್ಲಿ ಮತಗಟ್ಟೆ ಸ್ಥಾಪನೆ ಮಾಡಬೇಕು.

ಶ್ರೀಲತಾ, ಕೆಂಚೆನಹಳ್ಳಿ ನಿವಾಸಿ

ಬಿಟಿಎಂ ಲೇಔಟ್

ಬಿಟಿಎಂ ಲೇಔಟ್‌ನಲ್ಲಿ ಸಂಚಾರ ದಟ್ಟಣೆಯದ್ದೇ ಪ್ರಮುಖ ಸವಾಲು. ಒಳಚರಂಡಿ ಮತ್ತು ಕುಡಿಯುವ ನೀರಿನ ಸಮಸ್ಯೆಗೂ ಪರಿಹಾರ ದೊರಕಿಲ್ಲ. ಮುಂದಿನ ಅವಧಿಯಲ್ಲಾದರೂ ಎಲ್ಲವೂ ಸರಿಯಾಗಬೇಕು ಎಂಬುದು ಜನರ ಆಶಯ.

ಸಂಚಾರ ದಟ್ಟಣೆ ನಿವಾರಿಸಿ



ಕ್ಷೇತ್ರದಲ್ಲಿ ಹಲವು ಸಮಸ್ಯೆಗಳಿವೆ. ಈ ಪೈಕಿ ಪ್ರಮುಖವಾಗಿ ಸಿಲ್ಕ್ ಬೋರ್ಡ್, ಡೇರಿ ಸರ್ಕಲ್ ಮೊದಲಾದ ಕಡೆ ಸಂಚಾರ ದಟ್ಟಣೆಗೆ ಪರಿಹಾರ ಸಿಕ್ಕಿಲ್ಲ. ಕಾನೂನು ವ್ಯವಸ್ಥೆ, ಸಾರಿಗೆ, ಒಳಚರಂಡಿ ಸಮಸ್ಯೆ, ಕುಡಿಯುವ ನೀರಿಗೆ ಪರಿಹಾರ ಸಿಕ್ಕಿಲ್ಲ. ಕೆಲವೊಂದು ಅಭಿವೃದ್ಧಿ ಕಾರ್ಯಗಳು ಹಾಗೆಯೇ ಬಾಕಿ ಉಳಿದಿದ್ದು ಸಮಾಧಾನ ತಂದಿಲ್ಲ. ರಾಜಕಾಲುವೆ ಅಭಿವೃದ್ಧಿ, ವೈಟ್ ಟಾಪಿಂಗ್, ಸಮುದಾಯ ಭವನ ನಿರ್ಮಾಣ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ವಾಣಿಜ್ಯ ಪ್ರದೇಶಗಳಲ್ಲಿ ವಾಹನ ದಟ್ಟಣೆ ತೀವ್ರವಾಗಿದೆ. ಪಾರ್ಕಿಂಗ್ ಸಮಸ್ಯೆ ಜನರನ್ನು ಕಾಡುತ್ತಿದೆ.

ಜೆ. ಸುಮ, ಜಕ್ಕಸಂದ್ರ ನಿವಾಸಿ

ತ್ಯಾಜ್ಯ ಘಟಕದಿಂದ ಸಮಸ್ಯೆ



ದೊಡ್ಡ ಬಿದಿರಕಲ್ಲು ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಿದ್ದು, ಇದರಿಂದ ಸ್ಥಳೀಯ ಜನರಿಗೆ ಬಹಳ ಸಮಸ್ಯೆ ಉಂಟಾಗುತ್ತಿದೆ. ಕೂಡಲೇ ಇದನ್ನು ತೆರವು ಮಾಡಬೇಕು. ಹೆರೋಹಳ್ಳಿಯಿಂದ ಎಂಟನೇ ಮೈಲಿ ರಸ್ತೆ ಎರಡು– ಮೂರು ವರ್ಷಗಳಿಂದ ಕಾಮಗಾರಿ ನಡೆಯುತ್ತಲೇ ಇದೆ. ತಿಪ್ಪೇನಹಳ್ಳಿ ಸುತ್ತಮುತ್ತ ಇರುವ ಹೊಸ ಬಡಾವಣೆಯಲ್ಲಿ ಬೀದಿ ದೀಪದ ಸಮಸ್ಯೆ ಸರಿಪಡಿಸಬೇಕು.

ಟಿ.ವಿ. ಪ್ರಶಾಂತ್, ತಿಪ್ಪೇನಹಳ್ಳಿ ನಿವಾಸಿ

ಸೌಕರ್ಯಗಳಿಲ್ಲದೆ ಪರದಾಟ




ಆಕರ್ಷಕ ವಾಣಿಜ್ಯ ಕಟ್ಟಡಗಳ ಮಗ್ಗುಲಲ್ಲೇ ಫಳಫಳ ಹೊಳೆಯುವ ಮಾಲ್‌ಗಳು, ಐಟಿ-ಬಿಟಿ ಕಂಪನಿಗಳಿವೆ. ಸರ್ಕಾರಿ ನೌಕರ ವಸತಿ ಗೃಹಗಳು, ಅಪಾರ್ಟ್‌ಮೆಂಟ್‌ಗಳು, ಪೇಯಿಂಗ್ ಗೆಸ್ಟ್ ಕಟ್ಟಡಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಆದರೆ, ಈ ಕಟ್ಟಡಗಳ ಹಿಂಭಾಗದಲ್ಲೇ ಅಭಿವೃದ್ಧಿಯಲ್ಲಿ ಹಿಂದುಳಿದ ಪ್ರದೇಶಗಳು ಕಾಣಸಿಗುತ್ತವೆ. ಇಲ್ಲಿ ಮೂಲ ಸೌಕರ್ಯಗಳಿಲ್ಲದೆ ಜನ ಪರದಾಡುತ್ತಿದ್ದಾರೆ.

ಜಂಗಮಪ್ಪ, ವೆಂಕಟಾಪುರ ನಿವಾಸಿ, ಕೋರಮಂಗಲ

ಪುಲಕೇಶಿನಗರ

ಪುಲಕೇಶಿನಗರ ವಿಧಾನಸಭಾ ಕ್ಷೇತ್ರ ನಗರದ ಮಧ್ಯದಲ್ಲಿದ್ದು, ಕಿರಿದಾದ ರಸ್ತೆಗಳ ನಡುವೆ ಸಂಚಾರ ಮಾಡುವುದೆ ಕಷ್ಟದ ಕೆಲಸ. ಕಾನೂನು ಸುವ್ಯವಸ್ಥೆ ಇಲ್ಲಿನ ಪ್ರಮುಖ ಸವಾಲಾಗಿದ್ದು, ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಇಲ್ಲಿನ ನಾಗರಿಕರ ಅಂಬೋಣ.

ಸ್ಮಾರ್ಟ್ ಆಗದ ಪುಲಕೇಶಿನಗರ



ಸ್ಮಾರ್ಟ್‌ಸಿಟಿ ಯೋಜನೆಯಲ್ಲಿ ಬೆಂಗಳೂರಿನ ಪುಲಕೇಶಿನಗರವನ್ನು ಮರೆತಿದ್ದಾರೆ. ವಾಯು ವಿಹಾರಕ್ಕೆ ಒಂದೇ ಒಂದು ಸರಿಯಾದ ಉದ್ಯಾನವಿಲ್ಲ. ಕೆ.ಜೆ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಕೂಡ ಇದೇ ಕ್ಷೇತ್ರದ ವ್ಯಾಪ್ತಿಯಲ್ಲಿದ್ದು, ಕಾನೂನು ಸುವ್ಯವಸ್ಥೆ ಗಟ್ಟಿಯಾಗಬೇಕು. ಬಿಬಿಎಂಪಿ ಬೇಜವಾಬ್ದಾರಿಯಿಂದ ಸಮಸ್ಯೆಗಳ ನಡುವೆಯೇ ಮುಳುಗಿದ್ದೇವೆ. ನಮ್ಮ ಕ್ಷೇತ್ರ ಸ್ಮಾರ್ಟ್ ಆಗಲು ಇನ್ನು ಕನಿಷ್ಠ ಹತ್ತು ವರ್ಷಗಳಾದರೂ ಬೇಕಾಗಬಹುದೇನೊ, ಮುಂದೆ ಬರುವ ಶಾಸಕರು ಕಾಳಜಿ ವಹಿಸಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕು.

ಪ್ರಸಾದ್, ಪುಲಕೇಶಿನಗರ

ಕಾನೂನು ಸುವ್ಯವಸ್ಥೆ ಸುಧಾರಿಸಬೇಕು

ಅಂಗಡಿ 10 ಅಡಿಯಲ್ಲಿದ್ದರೆ, ಮುಂಗಟ್ಟುಗಳು 20 ಅಡಿಗೆ ವಿಸ್ತರಿಸಿಕೊಂಡಿರುತ್ತವೆ. ಚಿಕ್ಕ ರಸ್ತೆಗಳ ನಡುವೆ ವಾಹನ ಸಂಚಾರ ಕಷ್ಟ. ಇಷ್ಟು ವರ್ಷಗಳಿಂದ ಇದೇ ಸಮಸ್ಯೆಗಳಲ್ಲಿ ಮುಳುಗಿದ್ದೇವೆ. ಮುಂದೆ ಬರುವ ಶಾಸಕರು ಮುಂದಾದರೂ ಸರಿಪಡಿಸಬೇಕು. ಬೆಂಗಳೂರಿಗೆ ಗಾಂಜಾ ಸರಬರಾಜಾಗುವ ಮೂಲಗಳು ಇಲ್ಲಿವೆ. ಅವುಗಳನ್ನು ಇಲ್ಲದಂತೆ ಮಾಡಬೇಕು. ಕಾನೂನು ಸುವ್ಯವಸ್ಥೆ ಕಾಪಾಡಬೇಕು. ಅಕ್ರಮಗಳಿಗೆ ಕಡಿವಾಣ ಹಾಕಲು ಕಠಿಣ ಕ್ರಮಕೈಗೊಳ್ಳಬೇಕು.

ಯೋಗೇಶ್‌ಗೌಡ
ಪುಲಕೇಶಿನಗರ

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ಸಗಾಯಪುರ ವಾರ್ಡ್‌ನ ಹೊಸ ಬಾಗಲೂರು ಬಡಾವಣೆಯಲ್ಲಿ ಚಿಕ್ಕ–ಚಿಕ್ಕ ಮನೆಗಳಲ್ಲಿ ಸಾವಿರಾರು ಕುಟುಂಬಗಳು ನೆಲೆಸಿವೆ. ಆಗೊಮ್ಮೆ, ಈಗೊಮ್ಮೆ ಜಲಮಂಡಳಿ ಒದಗಿಸುವ ಕಾವೇರಿ ನೀರು ಸಂಗ್ರಹ ಮಾಡಿಕೊಳ್ಳಬೇಕು. ಕೆಲವು ಬಾರಿ ವಾರಕ್ಕೊಮ್ಮೆ ನೀರು ಬಂದರೆ, ಮತ್ತೆ ಕೆಲವೊಮ್ಮೆ 10 ದಿನಗಳ ನಂತರ ನೀರು ಬರುತ್ತದೆ. ಒಮ್ಮೊಮ್ಮೆ ಮಧ್ಯರಾತ್ರಿಯಲ್ಲಿ ಬರುವ ನೀರು ಹಿಡಿದಿಟ್ಟುಕೊಳ್ಳಬೇಕು. ಮುಂದಾದರೂ ಈ ಸಮಸ್ಯೆಗೆ ಪರಿಹಾರ ದೊರಕಬೇಕು.

ಸುಧಾಕರ
ಬಾಗಲೂರು ನಿವಾಸಿ

ಸರ್ಕಾರಗಳು ಬದಲಾದರೂ ಆಸ್ಪತ್ರೆಗಳಲ್ಲಿ ರೋಗಿಗಳ ದಟ್ಟಣೆ ನಿವಾರಣೆಗಿಲ್ಲ ಪರಿಹಾರ

ವೈದ್ಯಕೀಯ ಸೇವೆಗೆ ತಪ್ಪದ ಅಲೆದಾಟ

● ವರುಣ ಹೆಗಡೆ



ವಿವಿಧ ಊರುಗಳಿಂದ ಬಂದ ಜನರು ಕಣ್ಣಿನ ತಪಾಸಣೆಗಾಗಿ ನಗರದ ಮಿಂಟೊ ಕಣ್ಣಿನ ಆಸ್ಪತ್ರೆಯ ಹೊರಗೆ ಕಾಯುತ್ತಿರುವುದು –ಪ್ರಜಾವಾಣಿ ಚಿತ್ರ/ರಂಜು ಪಿ.

ಬೆಂಗಳೂರು: ಪ್ರತಿ ಚುನಾವಣೆಯಲ್ಲಿಯೂ ‘ಆರೋಗ್ಯ’ಯುತ ಭರವಸೆಗಳನ್ನು ನೀಡುತ್ತಾ ಬಂದಿರುವ ರಾಜಕೀಯ ಪಕ್ಷಗಳು, ಅಧಿಕಾರಕ್ಕೇರಿದಾಗ ಇಲ್ಲಿನ ಸರ್ಕಾರಿ ವೈದ್ಯಕೀಯ ಸಂಸ್ಥೆಗಳ ಮೇಲಿನ ರೋಗಿಗಳ ಭಾರವನ್ನು ಇಳಿಸುವ ಕೆಲಸ ಮಾಡಿಲ್ಲ. ಇದರಿಂದಾಗಿಯೇ ನಿಮ್ಹಾನ್ಸ್‌ನಂತಹ ಸಂಸ್ಥೆಗಳಲ್ಲಿ ದಾಖಲಾತಿ ಪಡೆಯಲು ರೋಗಿಗಳು ವಾರಗಟ್ಟಲೆ ಅಲೆಯಬೇಕಾದ ಸ್ಥಿತಿಯಿದೆ.

ವಿಧಾನಸಭೆ ಚುನಾವಣೆ ಪ್ರಯುಕ್ತ ಪ್ರಚಾರದಲ್ಲಿ ನಿರತರಾಗಿರುವ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು, ಮಹಿಳೆಯರು ಮತ್ತು ಮಕ್ಕಳಿಗೆ ‘ಸಮಗ್ರ ಆರೋಗ್ಯ ಸೌಲಭ್ಯ’ ಒದಗಿಸುವುದಾಗಿ ಭರವಸೆ ನೀಡುತ್ತಿದ್ದಾರೆ. ಪ್ರಮುಖ ವೈದ್ಯಕೀಯ ಸಂಸ್ಥೆಗಳು ಬೆಂಗಳೂರು ಕೇಂದ್ರೀಕೃತ ಆಗಿರುವುದರಿಂದ ಹೃದಯ, ಮೂತ್ರಪಿಂಡ, ಯಕೃತ್ತು ಸೇರಿ ವಿವಿಧ ಅಂಗಾಂಗಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ರಾಜಧಾನಿಯ ಆಸ್ಪತ್ರೆಗಳೇ ರಾಜ್ಯದ ಜನರಿಗೆ ಜೀವಸಂಜೀವಿನಿಯಾಗಿವೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಇಲ್ಲಿಗೆ ಚಿಕಿತ್ಸೆಗಾಗಿ ಬರುವ ರೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಆದರೆ, ಅದೇ ಪ್ರಮಾಣದಲ್ಲಿ ಆಸ್ಪತ್ರೆಗಳ ಸಾಮರ್ಥ್ಯ ವಿಸ್ತರಣೆಯಾಗದಿರುವುದು ಚಿಕಿತ್ಸೆಗೆ ಹಿನ್ನಡೆಯಾಗಿದೆ.

ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ನಗರದ ವಿವಿಧೆಡೆ ‘ನಮ್ಮ ಕ್ಲಿನಿಕ್’ಗಳನ್ನು ಸ್ಥಾಪಿಸಲಾಗಿದೆ. ಅದೇ ರೀತಿ, ವಿಕ್ಟೋರಿಯಾ ಸೇರಿ ವಿವಿಧ ಆಸ್ಪತ್ರೆಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ. ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನೂ ಒದಗಿಸಲಾಗಿದೆ. ಆದರೆ, ವೈದ್ಯರು, ತಂತ್ರಜ್ಞರು ಹಾಗೂ ಆರೋಗ್ಯ ಸಿಬ್ಬಂದಿ ಅಗತ್ಯ

ರಾಜಧಾನಿ ಒಡಲ ಧ್ವನಿ

ಸಂಖ್ಯೆಯಲ್ಲಿ ಇರದಿರುವುದು ವೈದ್ಯಕೀಯ ಸೇವೆಗೆ ತೊಡಕಾಗಿದೆ.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ, ಟ್ರಾಮಾ ಕೇರ್ ಕೇಂದ್ರ, ನೆಫ್ರೊ-ಯೂರಾಲಜಿ ಸಂಸ್ಥೆ, ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊ ಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಚಿಕಿತ್ಸೆ ಪಡೆಯಲು ಪ್ರತಿನಿತ್ಯ 2 ಸಾವಿರಕ್ಕೂ ಅಧಿಕ ಹೊರರೋಗಿಗಳು ರಾಜ್ಯದ ವಿವಿಧೆಡೆಯಿಂದ ಇಲ್ಲಿಗೆ ಬರುತ್ತಾರೆ. ಇದರಿಂದಾಗಿ ಮಳೆ-ಬಿಸಿಲನ್ನೂ ಲೆಕ್ಕಿಸದೆ ಆಸ್ಪತ್ರೆಯ ಆವರಣದಲ್ಲಿ ತಮ್ಮ ಸರದಿಗೆ ಕಾಯಬೇಕಾಗಿದೆ. ಈ ಆಸ್ಪತ್ರೆಗಳ ಚಿಕಿತ್ಸೆಗೆ ಮೆಚ್ಚುಗೆ ವ್ಯಕ್ತಪಡಿಸುವ ರೋಗಿಗಳು, ದಾಖಲಾತಿ ವಿಳಂಬಕ್ಕೆ ಅಸಮಾಧಾನ ವ್ಯಕ್ತಪಡಿಸುತ್ತಾರೆ.



ನಗರದ ನಾಲ್ಕು ಕಡೆಗಳಲ್ಲಿ ಸರ್ಕಾರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣವಾಗಬೇಕು. ವೈದ್ಯರು, ಆರೋಗ್ಯ ಸಿಬ್ಬಂದಿಯನ್ನು ನೇಮಕ ಮಾಡಬೇಕು.
ಡಾ.ಸಿ. ರಾಮಚಂದ್ರ
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿಕಟಪೂರ್ವ ನಿರ್ದೇಶಕ



ರೋಗಿಗಳ ಅಲೆದಾಟ ತಪ್ಪಿಸಲು ಒಂದೇ ಕಡೆ ಎಲ್ಲ ವೈದ್ಯಕೀಯ ಸೇವೆಗಳನ್ನು ಒದಗಿಸಬೇಕು. ಕಾಯಿಲೆಗಳ ತಪಾಸಣೆ ಹಾಗೂ ಚಿಕಿತ್ಸೆಗೆ ಆದ್ಯತೆ ನೀಡಬೇಕು.
ಡಾ.ಎಸ್. ಶ್ರೀನಿವಾಸ್, ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆ ನಿಯೋಜಿತ ಅಧ್ಯಕ್ಷ

ರೋಗಿಗಳ ದಟ್ಟಣೆ: ಇಲ್ಲಿ ಹೃದಯ ಚಿಕಿತ್ಸೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಕ್ಯಾನ್ಸರ್ ಕಾಯಿಲೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸೇರಿ ವಿವಿಧ ಸಮಸ್ಯೆ ಹಾಗೂ ಕಾಯಿಲೆಗಳಿಗೆ ಅನುಗುಣವಾಗಿ ಪರಿಣತ ವೈದ್ಯರನ್ನು ಒಳಗೊಂಡ ಸರ್ಕಾರಿ ಸಂಸ್ಥೆಗಳು ಇಲ್ಲಿವೆ. ಈ ಸಂಸ್ಥೆಗಳ ಘಟಕಗಳು ನಗರದ ವಿವಿಧೆಡೆ ತಲೆಯೆತ್ತದಿರುವುದರಿಂದ ಒಂದೇ ಕಡೆ ರೋಗಿಗಳ ದಟ್ಟಣೆ ಹೆಚ್ಚುತಿದೆ. ನಿಮ್ಹಾನ್ಸ್ ಸಂಸ್ಥೆಗೆ ಕೋವಿಡ್ ಪೂರ್ವ ಪ್ರತಿನಿತ್ಯ ಸರಾಸರಿ 1,400 ಹೊರರೋಗಿಗಳು ಬರುತ್ತಿದ್ದರು. ಈಗ ಅದು 1,700ಕ್ಕೆ ಏರಿಕೆಯಾಗಿದೆ. ಜಯದೇವ ಹೃದ್ರೋಗ ಆಸ್ಪತ್ರೆಯು ಇಲ್ಲಿ ಒಟ್ಟು 1,050 ಹಾಸಿಗೆಗಳನ್ನು ಹೊಂದಿದ್ದು, ಜಗತ್ತಿನ ಅತಿ ದೊಡ್ಡ ಹೃದ್ರೋಗ ಆಸ್ಪತ್ರೆಯಾಗಿದೆ. ಇಷ್ಟಾಗಿಯೂ ದಾಖಲಾತಿಗೆ ಕಾಯಬೇಕಿದೆ.

‘ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ರೋಗಿಗಳ ದಟ್ಟಣೆ ಇರುವುದರಿಂದ ಕೆಲ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಹಜ. ನಗರದ ವಿವಿಧೆಡೆ ಈ ರೀತಿಯ ಆಸ್ಪತ್ರೆ ನಿರ್ಮಿಸಬೇಕು’ ಎಂದು ಕೆಂಗೇರಿಯ ಮಂಜುನಾಥ್ ತಿಳಿಸಿದರು.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ, ಬೌರಿಂಗ್ ಆಸ್ಪತ್ರೆ, ಕೆ.ಸಿ. ಜನರಲ್ ಸೇರಿ ನಗರದ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಇದೇ ಸ್ಥಿತಿಯಿದ್ದು, ಸದಾ ರೋಗಿಗಳ ದಟ್ಟಣೆಯಿಂದ ಕೂಡಿರುತ್ತವೆ.

ಚಿಕಿತ್ಸೆಗಾಗಿ ಬರುತ್ತಿರುವ ವಿದೇಶಿಯರು


ಅಗ್ಗದ ಮತ್ತು ಗುಣಮಟ್ಟದ ಚಿಕಿತ್ಸೆಯನ್ನು ಅರಸಿ ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರಲಾರಂಭಿಸಿದ್ದಾರೆ. ಐಟಿ-ಬಿಟಿ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಸಿಲಿಕಾನ್ ಸಿಟಿ ಬೆಂಗಳೂರು, ವೈದ್ಯಕೀಯ ಪ್ರವಾಸೋದ್ಯಮದಲ್ಲಿಯೂ ಮುಂಚೂಣಿಯಲ್ಲಿದೆ. ಇದರಿಂದಾಗಿ ಆಫ್ರಿಕಾ ಸೇರಿ ವಿವಿಧ ದೇಶಗಳ ಜನರು ಶಸ್ತ್ರಚಿಕಿತ್ಸೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಗಳ ಮೇಲೆ ಒತ್ತಡ ಹೆಚ್ಚುತ್ತಿದೆ.

ಕೋವಿಡ್ ಪೂರ್ವದಲ್ಲಿ ಪ್ರತಿವರ್ಷ 50 ಸಾವಿರಕ್ಕೂ ಅಧಿಕ ವಿದೇಶಿಯರು ಚಿಕಿತ್ಸೆಗೆ ಇಲ್ಲಿಗೆ ಬರುತ್ತಿದ್ದರು. ಅವರಲ್ಲಿ ಹೆಚ್ಚಿನವರು ಹೃದಯ ಸಂಬಂಧಿ ಸಮಸ್ಯೆ, ಮೂಳೆ ಮುರಿತ, ಮೂತ್ರಪಿಂಡ ಸಮಸ್ಯೆಯಂತಹ ಕಾಯಿಲೆಗಳಿಗೆ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಇದರಿಂದ ಇಲ್ಲಿನ ಆಸ್ಪತ್ರೆಗಳ ವಾರ್ಷಿಕ ವರಮಾನ ಹೆಚ್ಚಳವಾಗುವುದರ ಜತೆಗೆ ವೈದ್ಯಕೀಯ ಪ್ರವಾಸೋದ್ಯಮ ಕೂಡ ಪ್ರಗತಿ ಕಂಡಿತ್ತು.

ಖಾಸಗಿ ಸೇವೆ ಅವಲಂಬನೆ

ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಡಿಯಲ್ಲಿ 400ಕ್ಕೂ ಅಧಿಕ ಆಸ್ಪತ್ರೆಗಳು ನಗರದಲ್ಲಿ ಸೇವೆ ನೀಡುತ್ತಿವೆ. ಮಣಿಪಾಲ್, ಆಸ್ಟರ್, ಅಪೋಲೊ, ಫೋರ್ಟಿಸ್, ಕೊಲಂಬಿಯಾ ಏಷ್ಯಾ, ನಾರಾಯಣ ಹೆಲ್ತ್ ಸಿಟಿ, ಎಚ್‌.ಸಿ.ಜಿ, ಎಂ.ಎಸ್. ರಾಮಯ್ಯ, ಸಕ್ರಾ ವರ್ಲ್ಡ್, ನಾರಾಯಣ ಹೃದಯಾಲಯ, ನಾರಾಯಣ ನೇತ್ರಾಲಯ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳು ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಹೊಂದಿವೆ. ಸರ್ಕಾರಿ ಆಸ್ಪತ್ರೆಗಳ ಬಲವರ್ಧನೆ ಸಾಕಾರ ಆಗದಿರುವುದರಿಂದ ಸರ್ಕಾರಗಳೂ ಖಾಸಗಿ ಆಸ್ಪತ್ರೆಗಳನ್ನೇ ಅವಲಂಬಿಸಿವೆ. ಕೋವಿಡ್ ಮೊದಲೆರಡು ಅಲೆಯಲ್ಲಿ ಕೋವಿಡ್ ಪೀಡಿತರಲ್ಲಿ ಹಲವರಿಗೆ ಶಿಫಾರಸು ಆಧಾರದಲ್ಲಿ ಖಾಸಗಿ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಒದಗಿಸಲಾಗಿತ್ತು.

ಸೆಲೆಬ್ರಿಟಿ ಮಾತು



‘ಆಮಿಷಗಳಿಗೆ ಒಳಗಾಗಬೇಡಿ’

ಡಾ.ಕೆ. ಭುಜಂಗ ಶೆಟ್ಟಿ
ನಾರಾಯಣ ನೇತ್ರಾಲಯದ ಅಧ್ಯಕ್ಷ

ಮತದಾನ ನಮ್ಮ ಹಕ್ಕು ಮತ್ತು ಕರ್ತವ್ಯ. ನಾವು ಕರ್ತವ್ಯವನ್ನು ಸರಿಯಾಗಿ ಮಾಡದೆ, ವ್ಯವಸ್ಥೆ ಹಾಗೂ ಜನಪ್ರತಿನಿಧಿಗಳನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ನಗರದ ಜನರಲ್ಲಿ ಕೆಲವರು ಮತದಾನ ಮಾಡದೆಯೇ ಜನಪ್ರತಿನಿಧಿಗಳ ಕಾರ್ಯವೈಖರಿ ಬಗ್ಗೆ ಟೀಕಿಸುವುದನ್ನು ನೋಡುತ್ತಿದ್ದೇವೆ. ಉತ್ತಮವಾದ ಪ್ರತಿನಿಧಿಯನ್ನು ಆಯ್ಕೆ ಮಾಡಲು ಮತದಾನದ ಅರ್ಹತೆ ಹೊಂದಿರುವವರು ನಿಗದಿತ ದಿನಾಂಕದಂದು ಹಕ್ಕು ಚಲಾಯಿಸಬೇಕು. ಜಾತಿ, ಹಣದಂತಹ ಆಮಿಷಗಳ ಹಿಂದೆ ಹೋಗಿ ಮತವನ್ನು ಮಾರಿಕೊಳ್ಳಬಾರದು. ಮತದಾನದ ದಿನ ಇರುವ ಕೆಲಸಗಳನ್ನು ಬಿಟ್ಟು, ಮತ ಚಲಾಯಿಸಬೇಕು.



ಕೆಂಚೇನಹಳ್ಳಿಯಲ್ಲಿ ಜೆಡಿಎಸ್ ಅಭ್ಯರ್ಥಿ ಟಿ.ಎನ್‌ಜವರಾಯಿಗೌಡ ಪರವಾಗಿ ಎಚ್‌.ಡಿ.ಕುಮಾರಸ್ವಾಮಿ ಮತಯಾಚನೆ ಮಾಡಿದರು

‘ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ನಗರ ಮತ್ತು ಗ್ರಾಮೀಣ ಪ್ರದೇಶದ ಪಿಯುಸಿ ನಂತರದ ಹೆಣ್ಣು ಮಕ್ಕಳಿಗೆ ಉಚಿತ ಎಲೆಕ್ಟ್ರಿಕಲ್ ಸ್ಕೂಟಿಯನ್ನು ನೀಡುವ ಮೂಲಕ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ, ಗೃಹಿಣಿಯರಿಗೆ 6 ತಿಂಗಳು ₹ 6 ಸಾವಿರ ನೀಡಿ ಆರೋಗ್ಯ ರಕ್ಷಣೆ, 65 ವರ್ಷ ಮೇಲ್ಪಟ್ಟ ಹಿರಿಯರಿಗೆ ತಲಾ ₹ 5 ಸಾವಿರ ನೀಡುವ ಮೂಲಕ ಅವರ ಬದುಕಿಗೆ ಸಹಾಯ ಮಾಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಘೋಷಿಸಿದರು.

ಕೆಂಚೇನಹಳ್ಳಿ, ಪಟ್ಟಣಗೆರೆ, ಮೈಲಸಂದ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಟಿ.ಎನ್. ಜವರಾಯಿಗೌಡ ಪರವಾಗಿ ಮತಯಾಚನೆ ಮಾಡಿ ಮಾತನಾಡಿದರು.

ಜೆಡಿಎಸ್ ಅಧಿಕಾರಕ್ಕೆ ಬಂದರೆ ತಕ್ಷಣ ಎಲ್ಲ ವರ್ಗದ ಬಡವರಿಗೆ ಉಚಿತ ಮನೆ ನಿರ್ಮಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಜೆಡಿಎಸ್ ಅಭ್ಯರ್ಥಿ ಟಿ.ಎನ್.ಜವರಾಯಿಗೌಡ ಮಾತನಾಡಿ, 2006ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ 7 ನಗರಸಭೆ, 1 ಪುರಸಭೆ, ನಗರದ ಸುತ್ತಲ ಪ್ರದೇಶದ ಅಭಿವೃದ್ಧಿಗೆ ಮುಂದಾಗಿದ್ದರು. ನಂತರ ಬಿಬಿಎಂಪಿಗೆ ಸೇರಿಸಿ ಮೂಲಸೌಕರ್ಯ ದೊರಕಿಸಿ ಕೊಟ್ಟಿದ್ದಾರೆ. ನಗರದ ಸಂಪೂರ್ಣ ಅಭಿವೃದ್ಧಿಗಾಗಿ ಜೆಡಿಎಸ್‌ಗೆ ಮತನೀಡಿ ಎಂದರು.

‘ಕಾಂಗ್ರೆಸ್, ಜೆಡಿಎಸ್‌ನದ್ದು ಅನಾರೋಗ್ಯದ ಮನಃಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಅನಾರೋಗ್ಯಕರ ಮನಃಸ್ಥಿತಿ ಹೊಂದಿವೆ. ಈ ಕಾರಣಕ್ಕಾಗಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ಪರ ಪ್ರಚಾರಕ್ಕೆ ಮುಂದಾಗಿರುವ ಕನ್ನಡ ಚಿತ್ರನಟ ಸುದೀಪ್ ಅವರನ್ನು ಟೀಕಿಸುತ್ತಿವೆ’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚುನಾವಣೆಯಲ್ಲಿ ಯಾವುದೇ ವ್ಯಕ್ತಿ ಅಥವಾ ಪಕ್ಷವನ್ನು ಬೆಂಬಲಿಸುವ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಅದೇ ರೀತಿ ಸುದೀಪ್ ಅವರು ಬೊಮ್ಮಾಯಿ ಮತ್ತು ಬಿಜೆಪಿಯನ್ನು ಬೆಂಬಲಿಸುವ ತೀರ್ಮಾನ ಮಾಡಿದ್ದಾರೆ. ಸುದೀಪ್ ಅವರು ರಾಹುಲ್ ಗಾಂಧಿಯವರಂತೆ ಕುಟುಂಬದ ಬಲದಲ್ಲಿ ಬೆಳೆದುಬಂದವರಲ್ಲ. ಬುಡಕಟ್ಟು ಸಮುದಾಯದಿಂದ ಬಂದು ಕನ್ನಡಿಗರ ನೆಚ್ಚಿನ ನಟನಾಗಿ ಬೆಳೆದಿರುವ ಅವರನ್ನು ಟೀಕಿಸುತ್ತಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಿಗೆ ಜನರು ತಕ್ಕ ಪಾಠ ಕಲಿಸುತ್ತಾರೆ’ ಎಂದರು.

ಬಿಜೆಪಿ ನಾಯಕರಿಗೆ ವರ್ಚಸಿಲ್ಲ ಎಂಬ ಕಾರಣಕ್ಕೆ ಸುದೀಪ್ ಅವರನ್ನು ಪ್ರಚಾರಕ್ಕೆ ಕರೆತರಲಾಗಿದೆ ಎಂದು ಕಾಂಗ್ರೆಸ್ ಟೀಕಿಸಿದೆ. ರಾಹುಲ್ ಗಾಂಧಿ ಭಾರತ್ ಜೋಡೊ ಯಾತ್ರೆ ಮಾಡಿದಾ ‘ತುಕ್ಡೇ ಗ್ಯಾಂಗ್’ ಸದಸ್ಯರು ಜತೆಗಿದ್ದರು. ಸ್ವರಾ ಭಾಸ್ಕರ್ ಅವರಂಥಹ ನಟಿಯೂ ಇದ್ದರು. ರಾಹುಲ್‌ಗೆ ವರ್ಚಸ್ಸಿಲ್ಲ ಎಂಬ ಕಾರಣಕ್ಕೆ ಸ್ವರಾ ಅವರನ್ನು ಕರೆಸಲಾಗಿತ್ತೆ ಎಂದು ಪ್ರಶ್ನಿಸಿದರು.

ದಾಸರಹಳ್ಳಿ: ಟಿಕೆಟ್ ಘೋಷಣೆಗೂ ಮುನ್ನವೇ ಕೈ ಆಕಾಂಕ್ಷಿಗಳ ನಡುವೆಯೇ ಆರೋಪ, ಪ್ರತ್ಯಾರೋಪ

ಮೂಲ, ವಲಸಿಗರ ಸಮರ ಜೋರು: ‘ಕೈ’ಗೆ ಬಿಸಿತುಪ್ಪ

● ಆದಿತ್ಯ ಕೆ.ಎ.

ಬೆಂಗಳೂರು: ಟಿ.ದಾಸರಹಳ್ಳಿ ಕ್ಷೇತ್ರದ ಕಾಂಗ್ರೆಸ್‌ನಲ್ಲಿ ಮೂಲ ಹಾಗೂ ವಲಸಿಗರು ಎಂಬ ವಿಚಾರವು ಸಮರಕ್ಕೆ ಕಾರಣವಾಗಿದ್ದು ಅಭ್ಯರ್ಥಿಯ ಹೆಸರು ಘೋಷಣೆಯು ‘ಕೈ’ ಪಡೆಯ ವರಿಷ್ಠರಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ.

ಧನಂಜಯ್ ಅವರು ಟಿಕೆಟ್ ಆಕಾಂಕ್ಷಿಗಳ ಸಾಲಿನಲ್ಲಿ ಮುಂಚೂಣಿಯಲ್ಲಿದ್ದು ಉಳಿದ ಆಕಾಂಕ್ಷಿಗಳಾದ ಜಿ. ಧನಂಜಯ್ ಸೇರಿದಂತೆ ಹಲವರು ಹೆಸರು ಘೋಷಣೆಗೂ ಮುನ್ನವೇ ತಿರುಗಿ ಬಿದ್ದಿದ್ದಾರೆ.

‘ಕೆಲವು ತಿಂಗಳ ಹಿಂದಷ್ಟೇ ಬಿಜೆಪಿಯಿಂದ ಕಾಂಗ್ರೆಸ್‌ಗೆ ಬಂದಿರುವ ಧನಂಜಯ್‌ಗೆ ಟಿಕೆಟ್ ನೀಡಿದರೆ ಮೂಲ ಕಾಂಗ್ರೆಸ್ ನಾಯಕರಿಗೆ ದ್ರೋಹ ಎಸಗಿದಂತೆ ಆಗಲಿದೆ’ ಎಂದು ಕೃಷ್ಣಮೂರ್ತಿ ಸೇರಿದಂತೆ ಟಿಕೆಟ್ ಆಕಾಂಕ್ಷಿಗಳು ಎಚ್ಚರಿಕೆ ರವಾನಿಸಿದ್ದಾರೆ.

ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಅಲೆಯಿದೆ. ಪಕ್ಷ ಕಟ್ಟಿದವರಿಗೇ ಟಿಕೆಟ್ ನೀಡಿದರೆ ಮಾತ್ರ ಕಾಂಗ್ರೆಸ್ ಅಭ್ಯರ್ಥಿ ಜಯ ಗಳಿಸಲು ಸಾಧ್ಯ.
ಪಿ.ಎನ್.ಕೃಷ್ಣಮೂರ್ತಿ

ಕೃಷ್ಣಮೂರ್ತಿ ಬಹಿರಂಗವಾಗಿಯೇ ವರಿಷ್ಠರ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ.

ಗೀತಾ ಶಿವರಾಮ್, ದಂತ ವೈದ್ಯೆ ನಾಗಲಕ್ಷ್ಮಿ ಚೌಧರಿ, ರಮೇಶ್‌ಗೌಡ, ಕೆ.ಸಿ. ಅಶೋಕ್, ನಾಗಭೂಷಣ್ ಅವರೂ ಟಿಕೆಟ್‌ಗಾಗಿ ಪಟ್ಟು ಹಿಡಿದಿದ್ದಾರೆ. ಆಕಾಂಕ್ಷಿಗಳ ದೊಡ್ಡಪಟ್ಟಿಯಿರುವ ಕಾರಣಕ್ಕೆ ವರಿಷ್ಠರಿಗೆ ದಾಸರಹಳ್ಳಿ ಕ್ಷೇತ್ರದಲ್ಲಿ ಅಭ್ಯರ್ಥಿ ಹೆಸರನ್ನು ಘೋಷಿಸಲು ಇನ್ನೂ ಸಾಧ್ಯವಾಗಿಲ್ಲ.

ಶಾಂತಿಧಾಮ ಶಿಕ್ಷಣ ಸಂಸ್ಥೆಯ ಮಾಲೀಕ ಧನಂಜಯ್ ಕ್ಷೇತ್ರದಾದ್ಯಂತ ಸಂಚಾರ ನಡೆಸುತ್ತಿದ್ದು ಪ್ರಚಾರದಲ್ಲಿ ಮುಂಚೂಣಿಯಲ್ಲಿದ್ದಾರೆ. ನಾಗಲಕ್ಷ್ಮಿ ಅವರು ಕ್ಷೇತ್ರದಲ್ಲಿ ಆರೋಗ್ಯ ಶಿಬಿರ ಸೇರಿ ಸಾಕಷ್ಟು ಕಾರ್ಯಕ್ರಮ ನಡೆಸಿದ್ದರು. ಗೀತಾ ಸಹ ಕೋವಿಡ್ ಲಾಕ್‌ಡೌನ್ ವೇಳೆ ಜನರಿಗೆ ನೆರವಾಗಿದ್ದರು. ಇದನ್ನೇ ಆಧರಿಸಿ ಇವರೂ ಟಿಕೆಟ್‌ಗೆ ಪಟ್ಟು ಹಿಡಿದಿದ್ದು ಹಗ್ಗಜಗ್ಗಾಟ ಮುಂದುವರಿದಿದೆ.



ಪಕ್ಷದ ವಿರುದ್ಧ ಕೆಲಸ ಮಾಡಲ್ಲ. ಆದರೆ, ನಮ್ಮ ಇಚ್ಛೆಗೆ ವಿರುದ್ಧವಾಗಿ ಟಿಕೆಟ್ ನೀಡಿದರೆ ಆಕಾಂಕ್ಷಿಗಳೆಲ್ಲರೂ ಒಂದಾಗುತ್ತೇವೆ. ಮಾತುಕತೆಯೂ ಆಗಿದೆ.
ಡಾ.ನಾಗಲಕ್ಷ್ಮಿ ಚೌಧರಿ



ನಾನೂ ಕಾಂಗ್ರೆಸ್ ಸದಸ್ಯ. ಆರೋಪ ಮಾಡುತ್ತಿರುವ ಮುಖಂಡರೊಬ್ಬರು 5 ವರ್ಷದಿಂದ ಕೆಲಸ ಮಾಡಿದ್ದರೆ, ಕ್ಷೇತ್ರದಲ್ಲಿ ಪಕ್ಷವು ಅಧೋಗತಿಗೆ ಹೋಗುತ್ತಿರಲಿಲ್ಲ.
ಜಿ.ಧನಂಜಯ್

ಹಾಲಿ ಶಾಸಕ ಮಂಜುನಾಥ್ ಅವರ ಹೆಸರನ್ನೇ ಒಂದು ತಿಂಗಳ ಹಿಂದೆ ಜೆಡಿಎಸ್ ಪ್ರಕಟಿಸಿತ್ತು. ಕ್ಷೇತ್ರದಲ್ಲಿ ಪಂಚರತ್ನ ಯಾತ್ರೆ ನಡೆದಿದ್ದು ಪ್ರಚಾರದಲ್ಲಿ ಜೆಡಿಎಸ್ ಒಂದು ಹೆಜ್ಜೆ ಮುಂದಿದೆ. ಬಿಜೆಪಿಯಿಂದ ಮಾಜಿ ಶಾಸಕ ಎಸ್. ಮುನಿರಾಜ್, ಎನ್.ಲೋಕೇಶ್‌ಗೌಡ ನಡುವೆ ಟಿಕೆಟ್‌ಗೆ ಪೈಪೋಟಿ ಏರ್ಪಟ್ಟಿದೆ. ಕಾಂಗ್ರೆಸ್, ಬಿಜೆಪಿಯಲ್ಲಿ ಅಭ್ಯರ್ಥಿಗಳ ಅಧಿಕೃತ ಘೋಷಣೆಯಾಗಿಲ್ಲ. ಹೀಗಾಗಿ ಕ್ಷೇತ್ರದಲ್ಲಿ ಪ್ರಚಾರದ ಅಬ್ಬರ ಇನ್ನೂ ಆರಂಭಗೊಂಡಿಲ್ಲ.

‘2018ರಲ್ಲಿ ಇದೇ ಕ್ಷೇತ್ರದ ಅಭ್ಯರ್ಥಿಯಾಗಿದ್ದೆ. ಐದು ವರ್ಷದಿಂದ ಪಕ್ಷದ ಪರ ಕೆಲಸ ಮಾಡುತ್ತಿರುವೆ. ಬಿಜೆಪಿಯಲ್ಲಿದ್ದ ಧನಂಜಯ್ ಅವರನ್ನು ಕರೆ ತರಲಾಗಿದೆ. 30 ವರ್ಷಗಳಿಂದ ಕ್ಷೇತ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿಲ್ಲ. ಈ ಬಾರಿ ಉತ್ತಮ ವಾತಾವರಣವಿತ್ತು. ಅವರಿಗೆ ಟಿಕೆಟ್ ನೀಡಿದರೆ ಮೂಲ ಕಾಂಗ್ರೆಸ್ ನಾಯಕರು ಹಾಗೂ ಕ್ಷೇತ್ರದ ಜನರಿಗೆ ನ್ಯಾಯ ಕಲ್ಪಿಸಲು ಸಾಧ್ಯವಿಲ್ಲ’ ಎಂದು ಕೃಷ್ಣಮೂರ್ತಿ ಆಕ್ರೋಶ ಹೊರಹಾಕಿದ್ದಾರೆ.

‘ಧನಂಜಯ್ ಬಿಜೆಪಿಯಿಂದ ನಮ್ಮ ಪಕ್ಷಕ್ಕೆ ಬಂದು 4 ತಿಂಗಳಾಗಿದೆ. ನಾವು ಕ್ಷೇತ್ರದಲ್ಲಿ ಪಕ್ಷ ಕಟ್ಟಿದ್ದೇವೆ. ಭಾರತ್ ಜೋಡೊ ಯಾತ್ರೆ, ರ‍್ಯಾಲಿ, ಪ್ರತಿಭಟನೆ, ಡಿಜಿಟಲ್ ಸದಸ್ಯತ್ವ... ಹೀಗೆ ನಾನಾ ಕೆಲಸ ಮಾಡಿದ್ದೇವೆ. ಮೂಲ ಕಾಂಗ್ರೆಸ್‌ನವರು ಒಂದಾಗಿದ್ದು ನಮ್ಮಲ್ಲಿಯೇ ಯಾರಿಗಾದರೂ ಟಿಕೆಟ್ ಕೊಡಲಿ’ ಎಂದು ಡಾ.ನಾಗಲಕ್ಷ್ಮಿ ಚೌಧರಿ ಹೇಳುತ್ತಾರೆ.

‘2013ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಸೋಲಿನ ಅಂತರ ಕೇವಲ 10 ಸಾವಿರವಿತ್ತು. ಅದನ್ನು 2018ರಲ್ಲಿ 63 ಸಾವಿರಕ್ಕೆ ಏರಿಸಿದವರು ಯಾರು? ಡಿ.ಕೆ.ಶಿವಕುಮಾರ್ ಅವರ ಸೂಚನೆಯಂತೆ ಸಿದ್ಧತೆ ಮಾಡಿಕೊಂಡಿದ್ದೇನೆ. ನಗರದ ದಕ್ಷಿಣ ಕ್ಷೇತ್ರದ ಬಿಜೆಪಿ ಶಾಸಕ ಎಂ.ಕೃಷ್ಣಪ್ಪ ಅವರು ನನ್ನ ತಮ್ಮನಿಗೆ ಮಾವ ಆಗಬೇಕು. ಅದೇ ಕಾರಣಕ್ಕೆ ಆರೋಪ ಮಾಡುತ್ತಿದ್ದಾರೆ. ನನ್ನ ರಾಜಕೀಯವೇ ಬೇರೆ. ನಾನು ಎನ್‌ಎಸ್‌ಯುಐ ರಾಜ್ಯ ಉಪಾಧ್ಯಕ್ಷ, ಯುವ ಕಾಂಗ್ರೆಸ್ ಉಪಾಧ್ಯಕ್ಷನಾಗಿಯೂ ಕೆಲಸ ಮಾಡಿರುವೆ. ದಿಢೀರ್ ಪ್ರತ್ಯಕ್ಷವಾಗಿಲ್ಲ’ ಎಂದು ಧನಂಜಯ್ ಪ್ರತ್ಯುತ್ತರ ನೀಡುತ್ತಾರೆ.





1. ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಶ್ರೀರಾಮನವಮಿ ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಅವರು ಜನರಿಗೆ ಮಜ್ಜಿಗೆ– ಪಾನಕ ವಿತರಿಸಿದರು 2. ಶಾಂತಿನಗರ ವಿಧಾನಸಭಾ ಕ್ಷೇತ್ರದ ಜೋಗುಪಾಳ್ಯದಲ್ಲಿರುವ ಅಯ್ಯಪ್ಪ ದೇವಸ್ಥಾನದ ಪ್ರತಿಷ್ಠಾಪನಾ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎನ್.ಎ. ಹ್ಯಾರಿಸ್ ಮತದಾರರಿಗೆ ಕೈ ಮುಗಿದು ಕುಶಲೋಪರಿ ವಿಚಾರಿಸಿದರು 3. ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಎಸ್. ರಘು ಪ್ರಚಾರ ನಡೆಸಿದರು

ಶಿವಾಜಿನಗರ, ಶಾಂತಿನಗರ, ಸಿ.ವಿ. ರಾಮನ್ ನಗರದಲ್ಲಿ ಕೈ–ಕಮಲ ಪೈಪೋಟಿ • ಕಣದಲ್ಲಿ ಜೆಡಿಎಸ್, ಆಪ್

ಕೇಂದ್ರ ಸ್ಥಾನ ಕ್ಷೇತ್ರಗಳ ಗದ್ದುಗೆಗೆ ಜಿದ್ದಾಜಿದ್ದಿ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರಾಜಧಾನಿಯ ಕೇಂದ್ರ ವಾಣಿಜ್ಯ ಪ್ರದೇಶದ (ಸಿಬಿಡಿ) ಪ್ರಮುಖ ವಿಧಾನಸಭಾ ಕ್ಷೇತ್ರಗಳಾದ ಶಿವಾಜಿನಗರ, ಶಾಂತಿನಗರ ಹಾಗೂ ಸಿ.ವಿ.ರಾಮನ್ ನಗರ ಗದ್ದುಗೆ ಏರಲು ಬಿಜೆಪಿ– ಕಾಂಗ್ರೆಸ್ ನಡುವೆ ಜಿದ್ದಾಜಿದ್ದಿ ಏರ್ಪಟ್ಟಿದೆ. ಜೆಡಿಎಸ್, ಆಮ್ ಆದ್ಮಿ ಪಾರ್ಟಿ (ಆಪ್) ಹಾಗೂ ಪಕ್ಷೇತರ ಅಭ್ಯರ್ಥಿಗಳೂ ಮತದಾರರನ್ನು ತಮ್ಮತ್ತ ಸೆಳೆಯಲು ಪ್ರಚಾರಕ್ಕೆ ಇಳಿದಿದ್ದಾರೆ.

ಪ್ರಮುಖ ವ್ಯಾಪಾರ ಸ್ಥಳಗಳು ಹಾಗೂ ವಸತಿ ಪ್ರದೇಶಗಳನ್ನು ಒಳಗೊಂಡಿರುವ ಮೂರು ಕ್ಷೇತ್ರಗಳಲ್ಲಿ ಈ ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್– ಬಿಜೆಪಿ ನಡುವೆ ನೇರ ಹಣಾಹಣಿ ಇತ್ತು. ಈ ಬಾರಿಯೂ ಇದೇ ಪಕ್ಷಗಳ ಅಭ್ಯರ್ಥಿಗಳ ನಡುವೆ ಬಿರುಸಿನ ಸ್ಪರ್ಧೆ ಏರ್ಪಡಲಿದೆ ಎಂಬುದು ಇಲ್ಲಿಯ ಮತದಾರರ ಲೆಕ್ಕಾಚಾರ.

ಮೊದಲ ಬಾರಿಗೆ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿರುವ ಆಪ್ ಅಭ್ಯರ್ಥಿಗಳು, ಹೆಚ್ಚು ಮತ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. ಜೆಡಿಎಸ್ ಸದ್ಯ ಅಭ್ಯರ್ಥಿಗಳ ಹೆಸರು ಪ್ರಕಟಿಸಿಲ್ಲ. ಆದರೆ, ಕೆಲವರು ಅಭ್ಯರ್ಥಿಗಳೆಂಬ ಹುರುಪಿನಲ್ಲಿ ಪ್ರಚಾರ ಆರಂಭಿಸಿದ್ದಾರೆ.

ಶಿವಾಜಿನಗರ ತೆಕ್ಕೆಗೆ ಕಸರತ್ತು: ಕಾಂಗ್ರೆಸ್ ಪಕ್ಷದಿಂದ ರಿಜ್ವಾನ್ ಅರ್ಷದ್ ಅವರಿಗೆ ಈ ಬಾರಿಯೂ ಶಿವಾಜಿನಗರದ ಟಿಕೆಟ್ ಲಭಿಸಿದೆ. ಕಾಂಗ್ರೆಸ್ ತೆಕ್ಕೆಯಲ್ಲಿರುವ ಕ್ಷೇತ್ರವನ್ನು ತನ್ನದಾಗಿಸಿಕೊಳ್ಳಲು ಬಿಜೆಪಿ ಕಸರತ್ತು ನಡೆಸುತ್ತಿದೆ.

ಬಿಜೆಪಿ ಟಿಕೆಟ್ ಪಡೆಯಲು ಎನ್. ಚಂದ್ರ ಹಾಗೂ ಇತರರು ಪೈಪೋಟಿ ನಡೆಸುತ್ತಿದ್ದಾರೆ. ಈ ಹಿಂದೆ ಶಾಸಕರಾಗಿದ್ದ ಆರ್. ರೋಷನ್ ಬೇಗ್ ಸಹ ಟಿಕೆಟ್ ಪಡೆಯಲು ಹಾಗೂ ತಮ್ಮ ಮಗನಿಗಾದರೂ ಟಿಕೆಟ್ ಕೊಡಿಸಲು ನಾಯಕರ ಬೆನ್ನು ಬಿದ್ದಿದ್ದಾರೆ.

ಈ ಬಾರಿಯೂ ಗೆಲ್ಲಬೇಕೆಂಬ ಜಿದ್ದಿಗೆ ಬಿದ್ದಿರುವ ರಿಜ್ವಾನ್, ಮುಸ್ಲಿಂ–ಹಿಂದೂ– ಕ್ರೈಸ್ತ ಎಲ್ಲ ಸಮುದಾಯದವರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ತಮ್ಮ ಕ್ಷೇತ್ರದಲ್ಲಿ ಶ್ರೀರಾಮನವಮಿ ಆಚರಿಸಿ ಪಾನಕ–ಮಜ್ಜಿಗೆ ಹಂಚಿದ್ದಾರೆ.

ಇದೇ ಕ್ಷೇತ್ರದಲ್ಲಿ ಆಪ್ ಅಭ್ಯರ್ಥಿ ಪ್ರಕಾಶ್ ನೆಡುಂಗಡಿ ಕಣದಲ್ಲಿದ್ದು, ಸ್ಥಳೀಯ ಮುಖಂಡರ ಜೊತೆ ಪ್ರಚಾರ ಆರಂಭಿಸಿದ್ದಾರೆ

ಶಾಂತಿನಗರದಲ್ಲಿ ಕೈ– ಕಮಲ ಪೈಪೋಟಿ: ಕಾಂಗ್ರೆಸ್ ಶಾಸಕ ಎನ್.ಎ. ಹ್ಯಾರಿಸ್ ಅವರಿಗೆ ಈ ಬಾರಿಯೂ ಶಾಂತಿನಗರದಲ್ಲಿ ಟಿಕೆಟ್ ಘೋಷಣೆಯಾಗಿದೆ. 2018ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಕೆ. ವಾಸುದೇವಮೂರ್ತಿ ಸೋತಿದ್ದರು. ಈ ಬಾರಿ ಕಾಂಗ್ರೆಸ್ ಸೋಲಿಸಲು ಸೂಕ್ತ ಅಭ್ಯರ್ಥಿಗಾಗಿ ಬಿಜೆಪಿ ಹುಡುಕಾಡುತ್ತಿದೆ.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಮಿತಿಯ ವಿಶೇಷ ಆಹ್ವಾನಿತರಾಗಿರುವ ಸೆಬಾಸ್ಟಿಯನ್ ಆ್ಯಂಟನಿ, ಶಾಂತಿನಗರ ಮಂಡಲ ಅಧ್ಯಕ್ಷ ಕೆ. ಶಿವಕುಮಾರ್, ಮಾಜಿ ಮೇಯರ್ ಎಂ. ಗೌತಮ್‌ಕುಮಾರ್ ಹಾಗೂ ಇತರರು ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾರೆ.

ಈ ಪ್ರದೇಶದಲ್ಲಿ ಕ್ರೈಸ್ತರ ಜನಸಂಖ್ಯೆ ಮತ್ತು ಸಂಸ್ಥೆಗಳು ಹೆಚ್ಚಾಗಿವೆ. ಇಲ್ಲಿ ಅಂದಾಜು ಶೇ 35ರಷ್ಟು ಕ್ರೈಸ್ತರ ಮತಗಳಿವೆ. ಹೀಗಾಗಿ, ಬಿಜೆಪಿಯ ಸಾಂಪ್ರದಾಯಿಕ ಮತಗಳ ಜತೆ ಕ್ರೈಸ್ತರ ಮತಗಳನ್ನು ಸೆಳೆಯುವ ನಿಟ್ಟಿನಲ್ಲಿ ಬಿಜೆಪಿ ಕಾರ್ಯತಂತ್ರ ರೂಪಿಸುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಆಪ್ ಅಭ್ಯರ್ಥಿಯಾಗಿ ಮಾಜಿ ಕೆಎಎಸ್ ಅಧಿಕಾರಿ ಕೆ. ಮಥಾಯ್ ಪ್ರಚಾರ ಶುರು ಮಾಡಿದ್ದಾರೆ. ಜೆಡಿಎಸ್ ಮಾತ್ರ ಅಭ್ಯರ್ಥಿ ಅಂತಿಮಗೊಳಿಸಿಲ್ಲ.

ಸಿ.ವಿ.ರಾಮನ್ ನಗರ ಟಿಕೆಟ್ ಗೊಂದಲ: ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಹಾಗೂ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಮತದಾರರು ಹೆಚ್ಚಿರುವ ಕ್ಷೇತ್ರವಾಗಿರುವ ಸಿ.ವಿ. ರಾಮನ್ ನಗರದಲ್ಲಿ ಕಾಂಗ್ರೆಸ್–ಬಿಜೆಪಿ ಅಭ್ಯರ್ಥಿಗಳನ್ನು ಘೋಷಣೆ ಮಾಡಿಲ್ಲ. ಹಾಲಿ ಶಾಸಕ ಬಿಜೆಪಿಯ ಎಸ್. ರಘು, ಈಗಾಗಲೇ ಪ್ರಚಾರ ಆರಂಭಿಸಿದ್ದಾರೆ.

ಕಾಂಗ್ರೆಸ್ ತನ್ನ ಎರಡು ಪಟ್ಟಿಯಲ್ಲೂ ಈ ಕ್ಷೇತ್ರದ ಅಭ್ಯರ್ಥಿ ಯಾರು ಎಂಬುದನ್ನು ತಿಳಿಸಿಲ್ಲ. ಕಳೆದ ಬಾರಿ ಚುನಾವಣೆಗೆ ಸ್ಪರ್ಧಿಸಿದ್ದ ಮಾಜಿ ಮೇಯರ್ ಆರ್. ಸಂಪತ್ ರಾಜ್, ಪಾಲಿಕೆ ಮಾಜಿ ಸದಸ್ಯ ಎಸ್. ಆನಂದ್ ಕುಮಾರ್ ನಡುವೆ ಪೈಪೋಟಿ ಇದೆ. ಜಿ. ಅಮುದಾ ಗೋಪಿಚಂದರ್ ಅವರಿಗೆ ಟಿಕೆಟ್ ನೀಡುವ ಮೂಲಕ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವಂತೆ ಬೆಂಬಲಿಗರು ಪ್ರತಿಭಟನೆ ಸಹ ಮಾಡಿದ್ದಾರೆ.

ಆಪ್ ಅಭ್ಯರ್ಥಿಯಾಗಿರುವ ಮೋಹನ್ ದಾಸರಿ ಕ್ಷೇತ್ರದಲ್ಲಿ ಭರ್ಜರಿ ಪ್ರಚಾರ ಆರಂಭಿಸಿದ್ದಾರೆ. ಜೆಡಿಎಸ್ ಅಭ್ಯರ್ಥಿ ಯಾರು ಎಂಬುದು ಇನ್ನೂ ಗುಟ್ಟಾಗಿದೆ. 'ಹೆಂಡ–ಹಣದ ಆಮಿಷಕ್ಕೆ ಮತ ಹಾಕಲು ಬಿಡುವುದಿಲ್ಲ' ಎನ್ನುತ್ತಲೇ ಪಕ್ಷೇತರ ಅಭ್ಯರ್ಥಿ ಎಸ್. ಚಂದ್ರಶೇಖರ್ ಕಣಕ್ಕಿಳಿದಿದ್ದಾರೆ

'ಲೋಕಸಭೆಯ ಗೆಲುವಿಗಾಗಿ ಈಗ ಬಿಜೆಪಿ ಬೆಂಬಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ರ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪುನರಾಯ್ಕೆ ಮಾಡುವುದಕ್ಕೆ ಪೂರಕವಾಗಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ನೀಡಬೇಕು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮ್ಮಿಶ್ರ ಸರ್ಕಾರ ಶಾಪವಿದ್ದಂತೆ. ರಾಜ್ಯದಲ್ಲಿ ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಬಿಜೆಪಿಗೆ ಸ್ಪಷ್ಟ ಬಹುಮತ ನೀಡಬೇಕು. ಈ ಚುನಾವಣೆಯ ಫಲಿತಾಂಶವು 2024ರ ಲೋಕಸಭಾ ಚುನಾವಣೆಯ ಜನಾದೇಶಕ್ಕೆ ಪೂರಕವಾಗಿರಬೇಕು' ಎಂದರು.

ಕಾಂಗ್ರೆಸ್ ಪಕ್ಷ ರಾಜ್ಯದ ಪಾಲಿಗೆ ಶಾಪ. ಅದನ್ನು ಜನರು ಬೆಂಬಲಿಸಬಾರದು. ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲೂ ಕಾಂಗ್ರೆಸ್‌ನವರು ಲಸಿಕೆ, ಆಮ್ಲಜನಕದ ವಿಚಾರಗಳನ್ನು ರಾಜಕೀಯಕ್ಕೆ ಬಳಸಿಕೊಂಡರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರ ಒದಗಿಸಿದರು. ಎಲ್ಲವೂ ಜನರಿಗೆ ಸರಿಯಾಗಿ ಗೊತ್ತಿದೆ ಎಂದು ಅವರು ಹೇಳಿದರು.

'ಕೇಂದ್ರ ಮತ್ತು ರಾಜ್ಯ ಎರಡೂ ಕಡೆ ಬಿಜೆಪಿ ಸರ್ಕಾರಗಳೇ ಇದ್ದುದ್ದರಿಂದ ಆರೋಗ್ಯ ಕ್ಷೇತ್ರದಲ್ಲಿ ಗಣನೀಯ ಸುಧಾರಣೆಗಳನ್ನು ತರಲು ಸಾಧ್ಯವಾಯಿತು. ಪೋಲಿಯೊ, ಹೆಪಟೈಟಿಸ್–ಬಿಯಂತಹ ಕಾಯಿಲೆಗಳಿಗೆ ಲಸಿಕೆ ತಯಾರಿಸಲು ಹತ್ತಾರು ವರ್ಷ ಬೇಕಾಯಿತು. ಆದರೆ, ಬಿಜೆಪಿ ಸರ್ಕಾರ ಕೋವಿಡ್ ಸೋಂಕಿಗೆ ತಿಂಗಳುಗಳಲ್ಲೇ ಲಸಿಕೆ ಉತ್ಪಾದಿಸಿ, ವಿತರಿಸಿತು. ಜನಪರವಾಗಿ ಕೆಲಸ ಮಾಡುವ ಬಿಜೆಪಿಯನ್ನು ಈ ಬಾರಿಯೂ ಜನರು ಬೆಂಬಲಿಸುವ ವಿಶ್ವಾಸವಿದೆ' ಎಂದರು.

ಬಿಎಸ್‌ಪಿಗೆ ಮುಖಂಡರ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬಹುಜನ ಸಮಾಜ ಪಕ್ಷದ ಪ್ರಾಥಮಿಕ ಸದಸ್ಯತ್ವ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಈರಣ್ಣ ಜಿ. ಮೌರ್ಯ ಸೇರಿ ಹಲವು ಪದಾಧಿಕಾರಿಗಳು ರಾಜೀನಾಮೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಈರಣ್ಣ ಮೌರ್ಯ, 'ಕಳೆದ 26 ವರ್ಷಗಳಿಂದ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ರಾಜ್ಯದಾದ್ಯಂತ ಪಕ್ಷ ಸಂಘಟನೆ ಮಾಡಿದ್ದೇವೆ. ಆದರೆ, ನಮ್ಮ ಸೇವೆಯನ್ನು ಪರಿಗಣಿಸದೆ ನಮ್ಮನ್ನು ಕಡೆಗಣಿಸಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಮಾರಸಂದ್ರ ಮುನಿಯಪ್ಪ ಅವರು, ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾಗಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ನನ್ನಂತ ಅದೆಷ್ಟೋ ಕಾರ್ಯಕರ್ತರಿಗೆ ಅನ್ಯಾಯವಾಗಿದೆ' ಎಂದರು.

ಪಕ್ಷದ ಮುಖಂಡರಾದ ಪಿ.ಲಕ್ಷ್ಮೀಪತಿ, ಕೆ.ಮಹೇಂದ್ರ, ಕೆ.ಬೈಲಪ್ಪ, ವಿ.ಮಂಜುನಾಥ್ ಇದ್ದರು.

'ತೆನೆ' ಹೊರಲು ಮುಂದಾದ ಚಿಕ್ಕಪೇಟೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಕೆಜಿಎಫ್ ಬಾಬು

ಜೆಡಿಎಸ್‌ನತ್ತ ಜಿಗಿಯಲು 'ಕೈ' ಆಕಾಂಕ್ಷಿಗಳು ಸಜ್ಜು

ಪ್ರಜಾವಾಣಿ ವಾರ್ತೆ



ಕೆಜಿಎಫ್ ಬಾಬು

ಬೆಂಗಳೂರು: ಕಾಂಗ್ರೆಸ್ ಟಿಕೆಟ್ ಕೈತಪ್ಪುವ ಭೀತಿಯಲ್ಲಿರುವ ಕೆಲವು ವಿಧಾನಸಭಾ ಕ್ಷೇತ್ರಗಳ ಆಕಾಂಕ್ಷಿಗಳು ಕೊನೆ ಗಳಿಗೆಯಲ್ಲಿ ಜೆಡಿಎಸ್‌ನಿಂದ ಕಣಕ್ಕಿಳಿಯುವ ಪ್ರಯತ್ನ ಆರಂಭಿಸಿದ್ದಾರೆ. ಮೊದಲ ಎರಡು ಪಟ್ಟಿಗಳಲ್ಲಿ ಅವಕಾಶ ಕೈತಪ್ಪಿದವರು ಜೆಡಿಎಸ್ ಟಿಕೆಟ್‌ಗೆ ಪ್ರಯತ್ನಿಸುತ್ತಿದ್ದಾರೆ. ಮೂರನೇ ಪಟ್ಟಿ ಪ್ರಕಟವಾಗುವ ಮೊದಲೇ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಯೂಸುಫ್ ಷರೀಫ್ ಜೆಡಿಎಸ್‌ನತ್ತ ವಾಲಿದ್ದಾರೆ.

ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಪ್ರಬಲ ಆಕಾಂಕ್ಷಿಯಾಗಿದ್ದ ವಿಧಾನ ಪರಿಷತ್‌ನ ಮಾಜಿ ಸದಸ್ಯ ಜಿ. ರಘು ಆಚಾರ್, ಟಿಕೆಟ್ ಕೈತಪ್ಪುತ್ತಿದ್ದಂತೆಯೇ ಜೆಡಿಎಸ್‌ಗೆ ಜಿಗಿದಿದ್ದಾರೆ. ಚಿತ್ರದುರ್ಗ, ತುಮಕೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕಾಂಗ್ರೆಸ್ ಟಿಕೆಟ್ ಪಡೆಯಲು ಕಸರತ್ತು ನಡೆಸಿ ವಿಫಲವಾಗಿರುವ ಅನೇಕರು, ಕೊನೆಯ ಕ್ಷಣದಲ್ಲಿ ಜೆಡಿಎಸ್‌ಗೆ ಜಿಗಿದು ಚುನಾವಣಾ ಕಣಕ್ಕಿಳಿಯುವ ಸಿದ್ಧತೆ ನಡೆಸಿದ್ದಾರೆ.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿರುವ ಯೂಸುಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಕಾಂಗ್ರೆಸ್‌ನಿಂದ ಹೊರನಡೆಯುವ ಸಿದ್ಧತೆ ಆರಂಭಿಸಿದ್ದಾರೆ. ಚಿಕ್ಕಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ದೊರೆಯುವುದಿಲ್ಲ ಎಂಬ ಸುಳಿವು ದೊರೆತಿರುವುದರಿಂದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿಮಾಡಿ ಮಾತುಕತೆ ನಡೆಸಿದರು. ಕುಮಾರಸ್ವಾಮಿ ಅವರು ಶನಿವಾರ ಸಂಜೆ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹೆಮ್ಮಿಗೆಪುರದಲ್ಲಿ 'ಪಂಚರತ್ನ' ರಥಯಾತ್ರೆ ನಡೆಸುತ್ತಿದ್ದರು. ಅಲ್ಲಿಯೇ ಇಬ್ಬರ ಭೇಟಿ ನಡೆದಿದೆ.

ಡಿಸೆಂಬರ್‌ನಲ್ಲೇ 93 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ್ದ ಜೆಡಿಎಸ್, ಉಳಿದ ಕ್ಷೇತ್ರಗಳ ಪಟ್ಟಿ ಬಿಡುಗಡೆ ಮಾಡದೇ ಕಾದು ನೋಡುವ ತಂತ್ರ ಅನುಸರಿಸುತ್ತಿದೆ. ಬಿಜೆಪಿಯ ಅಭ್ಯರ್ಥಿಗಳ ಪಟ್ಟಿ ಪ್ರಕಟವಾದ ಬಳಿಕವೇ ಎರಡನೇ ಪಟ್ಟಿ ಪ್ರಕಟಿಸಲು ಜೆಡಿಎಸ್ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಪಕ್ಷ ಸೇರಲು 15 ಮಂದಿ ಸಿದ್ಧ: ಈ ಕುರಿತು ಪ್ರತಿಕ್ರಿಯಿಸಿದ ಎಚ್.ಡಿ. ಕುಮಾರಸ್ವಾಮಿ, 'ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಗಳಾಗಿದ್ದ 15 ಮಂದಿ ಜೆಡಿಎಸ್ ಸೇರಲು ಸಿದ್ಧರಾಗಿದ್ದಾರೆ. 224 ಕ್ಷೇತ್ರಗಳಲ್ಲೂ ನಮ್ಮ ಪಕ್ಷದ ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಗೆಲುವು ಸಾಧಿಸಬಲ್ಲ ಅಭ್ಯರ್ಥಿಗಳ ಅಗತ್ಯವೂ ನಮಗಿದೆ' ಎಂದರು.

'ವರುಣದಲ್ಲಿ ಅಭ್ಯರ್ಥಿ ಬದಲಿಸಲು ನಿರ್ಧಾರ'

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸ್ಪರ್ಧಿಸುತ್ತಿರುವ ವರುಣ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯನ್ನು ಬದಲಿಸಲು ಪಕ್ಷದ ವರಿಷ್ಠರು ನಿರ್ಧರಿಸಿದ್ದಾರೆ.

ಎಸ್.ಎಂ. ಅಭಿಷೇಕ್ ಅವರನ್ನು ವರುಣ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಜೆಡಿಎಸ್ ಆಯ್ಕೆಮಾಡಿತ್ತು. ಆದರೆ, ಸಿದ್ದರಾಮಯ್ಯ ಅವರಿಗೆ ವರುಣದಲ್ಲಿ ಕಾಂಗ್ರೆಸ್ ಟಿಕೆಟ್ ಘೋಷಣೆಯಾದ ಬಳಿಕ ಅಭಿಷೇಕ್ ಪ್ರಚಾರ ನಿಲ್ಲಿಸಿ ತಟಸ್ಥರಾಗಿದ್ದಾರೆ.

'ವರುಣದಲ್ಲಿ ಅಭ್ಯರ್ಥಿ ಬದಲಿಸಲು ನಿರ್ಧರಿಸಲಾಗಿದೆ. ಶೀಘ್ರದಲ್ಲಿ ಈ ಕುರಿತು ತೀರ್ಮಾನಕ್ಕೆ ಬರಲಾಗುವುದು' ಎಂದು ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

'ವಿಧಾನಸಭೆ ಚುನಾವಣೆಗೆ ಯುವಕರೇ ರಾಯಭಾರಿಗಳು'

ಮತದಾನ ಪ್ರಮಾಣ ಹೆಚ್ಚಿಸಲು ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ



ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಶನಿವಾರ ನಡೆದ ಮತದಾನ ಹಬ್ಬದಲ್ಲಿ (ವೋಟ್ ಫೆಸ್ಟ್) ಯಕ್ಷಗಾನ ಕಲಾವಿದರೊಬ್ಬರು ಮತದಾನ ಮಾಡುವಂತೆ ಜಾಗೃತಿ ಮೂಡಿಸಿದ ದೃಶ್ಯ... ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಬೆಂಗಳೂರು: 'ರಾಜಧಾನಿಯಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಬಾರಿಯ ವಿಧಾನಸಭೆ ಚುನಾವಣೆಗೆ ಯುವ ಸಮೂಹವೇ ರಾಯಭಾರಿಗಳು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ನಗರದಲ್ಲಿ ಚರ್ಚ್ ಸ್ಟ್ರೀಟ್‌ನಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಶನಿವಾರ ಆಯೋಜಿಸಿದ್ದ ಮತದಾನ ಹಬ್ಬದಲ್ಲಿ(ವೋಟ್ ಫೆಸ್ಟ್) ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಈ ಚುನಾವಣೆಯಲ್ಲಿ ಮೊದಲನೇ ಬಾರಿ ಮತದಾನ ಮಾಡುವ ಯುವಕರ ಸಂಖ್ಯೆ 1 ಲಕ್ಷಕ್ಕೂ ಹೆಚ್ಚಿದೆ. ಈ ಬಗ್ಗೆ ಅರಿವು ಮೂಡಿಸಲು ಕಾಲೇಜುಗಳಲ್ಲಿ 4,000 ಹೊಸ ಮತದಾರರ ಕ್ಲಬ್‌ಗಳನ್ನು (ಎಲೆಕ್ಟೋರಲ್ ಲಿಟ್ರಸಿ ಕ್ಲಬ್) ಪ್ರಾರಂಭಿಸಲಾಗಿದೆ. ಹಿರಿಯ ನಾಗರಿಕರು, ಅಂಗವಿಕಲರಿಗೆ ಮತಗಟ್ಟೆಗಳಲ್ಲಿ ಮತದಾನ ಮಾಡಲು ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಬೆಂಗಳೂರಿನ ಮತದಾನ ಹೆಚ್ಚಿಸುವ ದೃಷ್ಟಿಯಿಂದ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್‌ಗಳು, ಮತದಾನದ ದಿನ ನೌಕರರಿಗೆ ರಜೆ ನೀಡಬೇಕೆಂದು ಐಟಿ–ಬಿಟಿ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಯುತ್ತಿದೆ' ಎಂದು ಹೇಳಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಮಾತನಾಡಿ, 'ಬೆಂಗಳೂರು ಜಾಗತಿಕ ನಗರವಾಗಿದ್ದು, ಗರಿಷ್ಠ ಪ್ರಮಾಣದಲ್ಲಿ ಮತದಾನವನ್ನು ದಾಖಲಿಸುವ ಗುರಿಯನ್ನು ಯಶಸ್ವಿಗೊಳಿಸಬೇಕಿದೆ. ನಗರದ ಮತದಾನದ ಪ್ರಮಾಣ ಕಡಿಮೆಯಿದ್ದು, ಈ ಬಾರಿಯ ಚುನಾವಣೆಯಲ್ಲಿ ಈ ಪ್ರಮಾಣವನ್ನು ಸುಧಾರಿಸಲು ಹಾಗೂ ಯುವ ಸಮೂಹವನ್ನು ಮತಗಟ್ಟೆಯತ್ತ ಸೆಳೆಯಲು ಈ ಕಾರ್ಯಕ್ರಮ ನಾಂದಿ ಹಾಡಲಿದೆ' ಎಂದು ತಿಳಿಸಿದರು.

ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ಬೀದಿ ನಾಟಕ, ಯಕ್ಷಗಾನದ ಮೂಲಕ ಮತದಾನ ಪ್ರಕ್ರಿಯೆಯ ಮಹತ್ವ, ಮತಚಲಾಯಿಸದೆ ಇದ್ದಲ್ಲಿ ಆಗಬಹುದಾದ ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಯಿತು.

ಬೆಂಗಳೂರು ನಗರದ ಜಿಲ್ಲಾಧಿಕಾರಿ ಟಿ.ಕೆ. ದಯಾನಂದ, ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ರಾಜೇಂದ್ರ ಕುಮಾರ್ ಚೋಳನ್, ವಿಶೇಷ ಚುನಾವಣಾಧಿಕಾರಿ ಎ.ವಿ. ಸೂರ್ಯಸೇನ್ ಇದ್ದರು.

ಜಾಲಪ್ಪ ಪುತ್ರ ಮರಳಿ ಕಾಂಗ್ರೆಸ್‌ಗೆ

ಪ್ರಜಾವಾಣಿ ವಾರ್ತೆ



ನರಸಿಂಹಸ್ವಾಮಿ

ದೊಡ್ಡಬಳ್ಳಾಪುರ: ದಿವಂಗತ ಆರ್. ಎಲ್.ಜಾಲಪ್ಪ ಅವರ ಪುತ್ರ ಹಾಗೂ ಮಾಜಿ ಶಾಸಕ ಜೆ.ನರಸಿಂಹಸ್ವಾಮಿ ಬೆಂಗಳೂರಿನಲ್ಲಿ ಶನಿವಾರ ಕಾಂಗ್ರೆಸ್ ಸೇರ್ಪಡೆಯಾದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಜೆ.ನರಸಿಂಹಸ್ವಾಮಿ ಮತ್ತು ಅವರ ಪುತ್ರ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎನ್. ಅರವಿಂದ್ ಕಾಂಗ್ರೆಸ್ ಸೇರಿದರು.

'ಆಪರೇಷನ್ ಕಮಲದ ಮೂಲಕ ಬಿಜೆಪಿ ಸೇರ್ಪಡೆಯಾಗಿದ್ದಕ್ಕೆ ನರಸಿಂಹಸ್ವಾಮಿ ಅವರಿಗೆ ಪಶ್ಚಾತಾಪವಾಗಿದೆ. ಹಾಗಾಗಿ ಮತ್ತೆ ಅವರು ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಮತದಾನ ಜಾಗೃತಿ ಗೀತೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆ ಪ್ರಯುಕ್ತ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತದಾನ ಜಾಗೃತಿ ಗೀತೆಗಳನ್ನು ಆಹ್ವಾನಿಸಿದೆ.

ಕನ್ನಡ, ಕರ್ನಾಟಕದ ನೆಲೆಯಲ್ಲಿ ಆಲೋಚಿಸಿ, ಮತ ಚಲಾಯಿಸಬೇಕು. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಪ್ರಜ್ಞೆಗಳನ್ನೂ ಜನರಲ್ಲಿ ಮೂಡಿಸಬೇಕು. ಜಾಗೃತಿ ಗೀತೆಯು ಒಂದು ಪಲ್ಲವಿ, ಮೂರು ಚರಣಗಳನ್ನು ಹೊಂದಿರಬೇಕು. ರಾಗ ಸಂಯೋಜನೆಗೆ ಒಗ್ಗುವಂತೆ ಗೇಯತೆಯನ್ನು ಒಳಗೊಂಡಿರಬೇಕು. ಗೀತೆಯು ನಕಲು ಆಗಿರಬಾರದು. ಒಬ್ಬರು ಒಂದು ಗೀತೆಯನ್ನು ಮಾತ್ರ ಕಳುಹಿಸಿಕೊಡಬೇಕು. ಕನ್ನಡದ ಪ್ರಸಿದ್ಧ ಗೀತರಚನೆಕಾರರ ಹಾಗೂ ಗೀತ-ಸಂಯೋಜನೆಕಾರರ ಸಮಿತಿ ಆಯ್ಕೆ ಮಾಡಿದ ಐದು ಗೀತೆಗಳಿಗೆ ರಾಗ ಸಂಯೋಜನೆಯೊಂದಿಗೆ ಹಾಡಿಸಿ, ಮೇ 5ರೊಳಗೆ ಬಿಡುಗಡೆ ಮಾಡಲಾಗುವುದು ಎಂದು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ತಿಳಿಸಿದ್ದಾರೆ.

ಆಯ್ಕೆಯಾದ ಗೀತೆಗಳಿಗೆ ತಲಾ ₹ 1 ಸಾವಿರ ನಗದು ಬಹುಮಾನ ನೀಡಲಾಗುವುದು. ಗೀತೆಗಳನ್ನು ಇದೇ 15ರೊಳಗೆ ಎಂ.ಪ್ರಕಾಶಮೂರ್ತಿ, ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, #97/166, 6ನೇ ಅಡ್ಡರಸ್ತೆ, 40 ಅಡಿ ರಸ್ತೆ, ಕನ್ನಡ ಧ್ವಜ ಸ್ತಂಭದ ಹತ್ತಿರ, ಕೆಂಪೇಗೌಡ ನಗರ, ಬ್ಯಾಡರಹಳ್ಳಿ ಉತ್ತರ ಬಡಾವಣೆ, ಮಾಗಡಿ ಮುಖ್ಯರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು-560091 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಂಪರ್ಕಕ್ಕೆ: 9448709651

ರಾಜಸ್ಥಾನದಿಂದ ಆರೋಪಿಗಳ ಕರೆತಂದ ಪೊಲೀಸರು

ಪ್ರಜಾವಾಣಿ ವಾರ್ತೆ

ರಾಮನಗರ: ಇದ್ರಿಷ್ ಪಾಷಾ ಅನುಮಾನಾಸ್ಪದ ಸಾವು ಪ್ರಕರಣದ ಆರೋಪಿಗಳಾದ ಪುನೀತ್ ಕೆರೆಹಳ್ಳಿ ಹಾಗೂ ಸಹಚರರನ್ನು ಪೊಲೀಸರು ಶನಿವಾರ ರಾತ್ರಿ ಕನಕಪುರಕ್ಕೆ ಕರೆತಂದಿದ್ದಾರೆ. ಆರೋಪಿಗಳನ್ನು ಭಾನುವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಿದ್ದಾರೆ.

ಇದೇ 5ರಂದು ರಾಜಸ್ಥಾನದ ಬಾನ್ಸವಾಡ್‌ನಲ್ಲಿ ಆರೋಪಿಗಳಾದ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಸಂಸ್ಥಾಪಕ ಪುನೀತ್ ಕೆರೆಹಳ್ಳಿ, ಸಂಘಟನೆಯ ಕಾರ್ಯಕರ್ತರಾದ ಗೋಪಿ, ಪವನ್‌ಕುಮಾರ್, ಪಿಲ್ಲಿಂಗ್ ಅಂಬಿಗಾರ ಹಾಗೂ ಸುರೇಶ್ ಕುಮಾರ್ ಎಂಬುವರನ್ನು ಪೊಲೀಸರು ಬಂಧಿಸಿದ್ದರು. ಬಳಿಕ ಆರೋಪಿಗಳನ್ನು ಅಲ್ಲಿನ ನ್ಯಾಯಾ ಲಯದ ಮುಂದೆ ಹಾಜರುಪಡಿಸಿ ಟ್ರಾನ್ಸಿಟ್ ಕಸ್ಟಡಿಗೆ ಪಡೆಯ ಲಾಗಿತ್ತು. ನಂತರ ರಾಜಸ್ಥಾನ ದಿಂದ ಮೂರು ದಿನಗಳ ಪ್ರಯಾಣದ ನಂತರ ಆರೋಪಿಗಳನ್ನು ಕರೆತರಲಾಗಿದೆ.

ಶನಿವಾರ ಸಂಜೆ ಐವರು ಆರೋಪಿಗಳನ್ನು ಪೊಲೀಸರು ಕೆಂಗೇರಿಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸಿದರು. ಬಳಿಕ ಠಾಣೆಗೆ ಕರೆದೊಯ್ಯಲಾಗಿದೆ.

ಸೈಲೆಂಟ್ ಸುನೀಲ್‌ಗೆ ಎಚ್ಚರಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಪೊಲೀಸರು, ಅಪರಾಧ ಹಿನ್ನಲೆಯುಳ್ಳವರು ಹಾಗೂ ರೌಡಿಗಳಿಗೆ ಎಚ್ಚರಿಕೆ ನೀಡಿ ಮುಚ್ಚಳಿಕೆ ಪತ್ರ ಬರೆಸಿಕೊಳ್ಳುತ್ತಿದ್ದಾರೆ. ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂಬುದಾಗಿ ಹೇಳಿಕೊಂಡಿದ್ದ ರೌಡಿ ಸುನೀಲ್‌ಕುಮಾರ್ ಅಲಿಯಾಸ್ ಸೈಲೆಂಟ್ ಸುನೀಲ್‌ನನ್ನು ಅಮೃತಹಳ್ಳಿ ಠಾಣೆಗೆ ಕರೆಸಿದ್ದ ಪೊಲೀಸರು, 'ಜನರನ್ನು ಬೆದರಿಸಿದರೆ ಹಾಗೂ ಅಪರಾಧ ಕೃತ್ಯಗಳಲ್ಲಿ ಭಾಗಿಯಾದರೆ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದ್ದಾರೆ.

'ರೌಡಿ ಸೈಲೆಂಟ್ ಸುನೀಲ್, ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದಾನೆ. ಚುನಾವಣೆ ಇರುವುದರಿಂದ ಆತನ ಚಲನವಲನ ಗಮನಿಸಲಾಗುತ್ತಿದೆ. ಹೀಗಾಗಿ, ಠಾಣೆಗೆ ಕರೆಸಿ ಬಾಂಡ್ ಮೇಲೆ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಿ ಕಳುಹಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮೀಸಲಾತಿ ಹೆಚ್ಚಳ ಕಣ್ಣೊರೆಸುವ ತಂತ್ರ’

ವಿಧಾನಸಭೆ ಚುನಾವಣೆ ಹೊತ್ತಿನಲ್ಲಿ ‘ಪ್ರಜಾವಾಣಿ’ ಹಮ್ಮಿಕೊಂಡಿದ್ದ ಸಂವಾದದಲ್ಲಿ ಪಾಲ್ಗೊಂಡ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸದ್ಯ–ಭವಿಷ್ಯದ ರಾಜಕೀಯದ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.



• ವೈ.ಗ.ಜಗದೀಶ್/ರಾಜೇಶ್ ರೈ ಚಟ್ಲ

• 2018 ಚುನಾವಣೆಯಲ್ಲಿ ಮೋದಿ ನಿಮ್ಮ ಸರ್ಕಾರವನ್ನು ‘ಶೇ 10 ಕಮಿಷನ್ ಸರ್ಕಾರ’ ಎಂದು ಟೀಕಿಸಿದ್ದರು. ನಿಮ್ಮನ್ನು ‘ಸೀದಾರೂಪಯ್ಯ’ ಎಂದೂ ಕರೆದಿದ್ದರಲ್ಲವೇ?

ಅವರು ಯಾವ ಆಧಾರದಲ್ಲಿ ಹಾಗೆ ಹೇಳಿದ್ರೋ? ನನ್ನ ಮೇಲೆ ಆರೋಪ ಇದ್ದರೆ ಪರಿಶೀಲಿಸಬೇಕಿತ್ತು. ಸಾಕ್ಷ್ಯ ಕೊಡಬೇಕಿತ್ತು. ಆದರೆ, ಅವರ ಪಕ್ಷದ ಸರ್ಕಾರವನ್ನು ಶೇ 40 ಕಮಿಷನ್ ಸರ್ಕಾರವೆಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಪತ್ರ ಬರೆದ್ರಲ್ಲ. ಅದಕ್ಕೆ ಮೋದಿ ಮೌನವಾಗಿದ್ದಾರೆ. ಶೇ 40 ಕಮಿಷನ್ ಸರ್ಕಾರ ಅಲ್ಲವೆಂದಾದರೆ ಕೆಂಪಣ್ಣ ವಿರುದ್ಧ ಯಾಕೆ ಕ್ರಮ ತೆಗೆದುಕೊಂಡಿಲ್ಲ. ನಾನೂ ತಿನ್ನಲ್ಲ. ತಿನ್ನೋಕೂ ಬಿಡಲ್ಲ, ನಾನು ಚೌಕಿದಾರ್ ಎನ್ನುವ ಮೋದಿ ಹೇಳಿಕೆ ಸುಂದರವಾಗಿ ಕಾಣುತ್ತದೆ. ಹೀಗೆ ಹೇಳುವವರು, ಅವರ ಸರ್ಕಾರ ಶೇ 40 ಸರ್ಕಾರವೆಂದರೂ ಯಾಕೆ ಸುಮ್ಮನಿದ್ದಾರೆ?

• ‘40 ಪರ್ಸೆಂಟ್ ಸರ್ಕಾರ’ ಆರೋಪ ಚುನಾವಣೆಯಲ್ಲಿ ನಿಮ್ಮ ನೆರವಿಗೆ ಬರುತ್ತಾ?

ಖಂಡಿತ. ಈ ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯಲು ಜನ ಮತ ಹಾಕುತ್ತಾರೆ.

• ಮೀಸಲಾತಿ ಬಗ್ಗೆ ನಿಮ್ಮ ನಿಲುವು ಏನು?

ನಾವು ಅಧಿಕಾರಕ್ಕೆ ಬಂದ ಬಳಿಕ ಸದಾಶಿವ ಆಯೋಗದ ವರದಿಯನ್ನು ಸದನದಲ್ಲಿ ಮಂಡಿಸುತ್ತೇವೆ. ಎಲ್ಲ ವರ್ಗಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳ ಮೀಸಲಾತಿ ವರ್ಗೀಕರಣ ಮಾಡಬೇಕಿತ್ತು. ನಾವು ಆ ಕೆಲಸ ಮಾಡುತ್ತೇವೆ. ಅವರು (ಬಿಜೆಪಿ) ಪರಿಶಿಷ್ಟ ಜಾತಿಯವರಿಗೆ ಮೀಸಲಾತಿಯನ್ನು ಶೇ 17ರಷ್ಟು ಹೆಚ್ಚಿಸಿ ಒಳ ಮೀಸಲಾತಿ ಕೊಟ್ಟಿದ್ದಾರೆ. ಅದು ಹೇಗೆ ಸಾಧ್ಯ? ಪ್ರಾಮಾಣಿಕವಾಗಿ ಮೀಸಲಾತಿ ಕೊಡಬೇಕು. ಈಗ ಸರ್ಕಾರ ಮಾಡಿರುವುದು ಕಣ್ಣೊರೆಸುವ ತಂತ್ರವಷ್ಟೆ.

• ಟಿಕೆಟ್ ಹಂಚಿಕೆಯಲ್ಲಿ ನಿಮ್ಮಿಬ್ಬರ ಮಧ್ಯೆ ಭಿನ್ನಧ್ವನಿ?

ಟಿಕೆಟ್ ಹಂಚಿಕೆಗೆ ಮಾನದಂಡ ಇದೆ. ಅವರ ಪರ ಅಭ್ಯರ್ಥಿ, ಇವರ ಪರ ಅಭ್ಯರ್ಥಿ ಎನ್ನುವುದಕ್ಕಿಂತ ಅಭ್ಯರ್ಥಿ ಗೆಲ್ಲಬೇಕು ಅಷ್ಟೆ.

• ವರುಣ ಕ್ಷೇತ್ರವನ್ನು ಬಿಟ್ಟುಕೊಡುವಂತೆ ನಿಮ್ಮ ಮಗನಿಗೆ ಕೇಳುವಾಗ ನಿಮಗೆ ಏನನ್ನಿಸಿತು?

ನಾನು ಹುಟ್ಟಿದ ಹಳ್ಳಿ ಇರುವುದು ಈ ಕ್ಷೇತ್ರದಲ್ಲಿ. ಕ್ಷೇತ್ರದ ಜೊತೆ ಭಾವನಾತ್ಮಕ ಸಂಬಂಧವಿದೆ. ವರುಣದಿಂದ ಆಯ್ಕೆಯಾಗಿ ಒಮ್ಮೆ ಮುಖ್ಯಮಂತ್ರಿ, ಒಮ್ಮೆ ವಿರೋಧಪಕ್ಷದ ನಾಯಕ ಆಗಿದ್ದೇನೆ. ಇದು ನನ್ನ ಕೊನೆಯ ಚುನಾವಣೆ. ಮುಂದೆ ಚುನಾವಣಾ ರಾಜಕೀಯದಲ್ಲಿ ಇರುವುದಿಲ್ಲ. ಆದರೆ, ಸಕ್ರಿಯ ರಾಜಕೀಯದಲ್ಲಿ ಇರುತ್ತೇನೆ. ಹುಟ್ಟಿದ ಊರಿನ ಜನರ ಅಶೀರ್ವಾದದಿಂದ ರಾಜಕೀಯದಲ್ಲಿದ್ದೇನೆ. ಹುಟ್ಟಿದ ಊರಿನಿಂದಲೇ ಕೊನೆಯ ಚುನಾವಣೆ ಗೆಲ್ಲಬೇಕು ಎನ್ನುವುದು ಊರಿನವರ ಆಸೆ. ಆ ಕಾರಣಕ್ಕೆ, ನನ್ನ ಮಗ ಕೂಡಾ ಇಲ್ಲೇ ನಿಲ್ಲುವಂತೆ ಹೇಳಿದ್ದಾನೆ. ಅದಕ್ಕೆ ಆಯ್ಕೆ ಮಾಡಿದ್ದೇನೆ.

• 2013ರಲ್ಲಿಯೇ ಆ ಚುನಾವಣೆ ಕೊನೆಯದು ಎಂದು ಹೇಳಿದ್ರಲ್ಲ?

ಹೌದು. ಹೇಳಿದ್ದೆ. ಆದರೆ, ಚುನಾವಣಾ ಕಣದಿಂದ ಓಡಿ ಹೋಗುವುದು ಬೇಡ ಎಂದು ಈ ಬಾರಿ ಮತ್ತೆ ಕಣಕ್ಕಿಳಿಯುತ್ತಿದ್ದೇನೆ. ಬಿಜೆಪಿಯವರು ಕೋಮು ಕಾರ್ಯಸೂಚಿ ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ. ಅದನ್ನು ಎದುರಿಸಬೇಕೆಂದು ನಿರ್ಧರಿಸಿದ್ದೇನೆ. ಇದು ಕೊನೆ, ಕೊನೆಯ ಚುನಾವಣೆ.

• ಚುನಾವಣೆಯಲ್ಲಿ ಮತ ಧ್ರುವೀಕರಣ ಸಾಧ್ಯತೆ?

ಹಿಜಾಬ್, ಹಲಾಲ್, ಅಜಾನ್ ವಿಷಯಗಳು ಈಗ ವಿಷಯವೇ ಅಲ್ಲ. ರಾಜ್ಯದ ಜನ ಪ್ರಬುದ್ಧರಾಗಿದ್ದಾರೆ. ಅರ್ಥ ಮಾಡಿಕೊಳ್ಳುತ್ತಾರೆ. ಬಿಜೆಪಿಯವರು ಹಿಂದುತ್ವ, ದುಡ್ಡು, ಮೋದಿ ಮುಖ ತೋರಿಸಿ ಗೆಲ್ಲಲು ಹೊರಟಿದ್ದಾರೆ. ಆದರೆ, ಈ ಬಾರಿ ಅದು ಸಾಧ್ಯ ಇಲ್ಲ.

• ನಿಮ್ಮ ‘ಗ್ಯಾರಂಟಿ ಯೋಜನೆ’ಗಳಿಗೆ ಹಣ ಎಲ್ಲಿಂದ ಹೊಂದಿಸುತ್ತೀರಿ?

ಎಲ್ಲವನ್ನೂ ಲೆಕ್ಕ ಹಾಕಿಯೇ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದೇವೆ. ಬದ್ಧ ವೆಚ್ಚ ಕಡಿಮೆ ಮಾಡಿದರೆ, ಕಡಿಮೆ ಸಾಲ ಪಡೆದರೆ, ತೆರಿಗೆ ಸೋರಿಕೆ ತಡೆದರೆ ಹಣ ಹೊಂದಿಸುವುದು ಕಷ್ಟವೇನೂ ಅಲ್ಲ. ನಾವು ಅಧಿಕಾರದಲ್ಲಿದ್ದಾಗ ಬದ್ಧ ವೆಚ್ಚವನ್ನು ಶೇ 74ಕ್ಕೆ ತಂದಿದ್ದೇವೆ. ಈಗ ಅದು ಶೇ 98 ಇದೆ. ಅದನ್ನು ಕಡಿಮೆ ಮಾಡಿದರೆ ಯೋಜನೆಗಳಿಗೆ ವೆಚ್ಚ ಮಾಡಲು ಹಣ ಸಿಗಲಿದೆ. ಸಾಲ ಪಡೆಯುವುದು ಕಡಿಮೆ ಮಾಡಿದರೆ ಅಸಲು, ಬಡ್ಡಿ ಕಟ್ಟುವ ಮೊತ್ತ ಕಡಿಮೆಯಾಗುತ್ತದೆ.

ಸಂದರ್ಶನ ವೀಕ್ಷಿಸಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

• ನಾನೇ ಮುಂದಿನ ಮುಖ್ಯಮಂತ್ರಿ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರಲ್ಲ?

ಅವರ ಸ್ವಂತ ಬಲದಿಂದ ಆಗಲ್ಲ. ಆಗುತ್ತಾ? ನಾನೂ ಇದ್ದಾಗ ಜೆಡಿಎಸ್‌ಗೆ ಅತೀ ಹೆಚ್ಚು 59 ಸ್ಥಾನ ಸಿಕ್ಕಿತ್ತು. ನಂತರ ಚುನಾವಣೆಗಳಲ್ಲಿ ಅದಕ್ಕಿಂತ ಜಾಸ್ತಿ ಆಗಿದ್ದಾರಾ?

• ಎನ್‌ಪಿಎಸ್ ಬಗ್ಗೆ ನಿಮ್ಮ ನಿಲುವು ಏನು?

ನಮ್ಮ ನಿಲುವು ಸಕಾರಾತ್ಮಕವಾಗಿದೆ. ಹಿಮಾಚಲ ಪ್ರದೇಶ, ರಾಜಸ್ಥಾನದಲ್ಲಿ ಎನ್‌ಪಿಎಸ್ ಜಾರಿಯಲ್ಲಿದೆ. ಅಲ್ಲಿ ಜಾರಿಯಾದ ನಂತರದ ಸಾಧಕ–ಬಾಧಕಗಳನ್ನು ಗಮನಿಸುತ್ತೇವೆ. ನಂತರ ಪ್ರಣಾಳಿಕೆಯಲ್ಲಿ ಸೇರಿಸಲು ಏನು ಮಾಡಬೇಕು ಎಂಬ ಬಗ್ಗೆ ಸರ್ಕಾರಿ ನೌಕರರ ಜೊತೆ ಚರ್ಚೆ ಮಾಡುತ್ತೇವೆ.

• ಎರಡು ಕಡೆ ಟಿಕೆಟ್ ಯಾಕೆ ಕೇಳಿದ್ದೀರಿ?

ನಾನು ಕೇಳಿಲ್ಲ. ಕೋಲಾರದಿಂದ ನಿಲ್ಲಿ ಎಂದು ಅಲ್ಲಿನವರು ಒತ್ತಾಯಿಸುತ್ತಿದ್ದಾರೆ. ಸ್ವಂತ ಊರಿನಿಂದ ನಿಲ್ಲೋಣವೆಂದು ತೀರ್ಮಾನಿಸಿದ್ದರಿಂದ ಹೈಕಮಾಂಡ್‌ನವರು ವರುಣದಿಂದ ಟಿಕೆಟ್ ನೀಡಿದ್ದಾರೆ. ಕೋಲಾರದವರ ಒತ್ತಾಯವನ್ನು ಹೈಕಮಾಂಡ್‌ಗೆ ತಿಳಿಸಿದ್ದೇನೆ.

• ನಿಮ್ಮ ಡಬಲ್ ಎಂಜಿನ್ (ಡಿ.ಕೆ. ಶಿವಕುಮಾರ್ – ಸಿದ್ದರಾಮಯ್ಯ) ಬಗ್ಗೆ ಏನು ಹೇಳುತ್ತೀರಿ?

ಡಿ.ಕೆ. ಶಿವಕುಮಾರ್ ಪಕ್ಷದ ಅಧ್ಯಕ್ಷ. ನಾನು ಶಾಸಕಾಂಗ ಪಕ್ಷದ ನಾಯಕ. ನಾವು ಒಟ್ಟಿಗೆ ಹೋಗುತ್ತೇವೆ. ನಮ್ಮ ಮಧ್ಯೆ ಒಡಕು ತರಲು ಬಿಜೆಪಿಯವರು ಯತ್ನಿಸುತ್ತಾರೆ. ನಮ್ಮ ಮಧ್ಯೆ ಆ ರೀತಿ ಏನೂ ಇಲ್ಲ.

• ಮಹಿಳೆಯರಿಗೆ ಟಿಕೆಟ್ ಕೊಡಲು ಯಾಕೆ ಕಷ್ಟ?

ನಿಜ. ಮಹಿಳೆಯರಿಗೆ ಹೆಚ್ಚು ಟಿಕೆಟ್ ಕೊಡಲು ಆಗುತ್ತಿಲ್ಲ. ಅದಕ್ಕೆ ಮಹಿಳಾ ಮೀಸಲಾತಿ ಬರಬೇಕು. ಮಹಿಳೆಯರಿಗೆ ಮೀಸಲಾತಿ ಇಲ್ಲದಿರುವುದು, ಸರ್ವೆ ವರದಿಗಳು ಮಹಿಳೆಯರ ಪರ ಬಾರದಿರುವುದು ಅವರಿಗೆ ಟಿಕೆಟ್ ಕೊಡದೇ ಇರಲು ಕಾರಣವಾಗುತ್ತದೆ. ಮೀಸಲಾತಿ ಬಂದರೆ ಮಾತ್ರ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಹಂಚಿಕೆಯಲ್ಲಿ ನ್ಯಾಯ ಕೊಡಲು ಸಾಧ್ಯ.

• ಒಂದು ಕಾಲದ ನಿಮ್ಮ ಆಪ್ತ ಬಸವರಾಜ ಬೊಮ್ಮಾಯಿ ಆಡಳಿತದ ಬಗ್ಗೆ ರಾಜಕೀಯ ಬದಿಗಿಟ್ಟರೆ ನೀವು ಹೇಳುವುದೇನು?

ಇಷ್ಟರ ಮಟ್ಟಿಗೆ ಭ್ರಷ್ಟಾಚಾರವನ್ನು ಅವರು ಮುಗಿಲು ಮುಟ್ಟಿಸುತ್ತಾರೆ ಅಂದುಕೊಂಡಿರಲಿಲ್ಲ. ಇಷ್ಟೊಂದು ಭ್ರಷ್ಟಾಚಾರ ಎಂದೂ ಇರಲಿಲ್ಲ

• ಹಿಂದಿ ಹೇರಿಕೆಯ ಬಗ್ಗೆ?

ಹಿಂದಿ ಹೇರಬಾರದು. ಅದು ನಮ್ಮ ರಾಷ್ಟ್ರೀಯ ಭಾಷೆ ಅಲ್ಲ. ಇಲ್ಲಿ ಕನ್ನಡ ಅಧಿಕೃತ ಭಾಷೆ. ಅದೇ ಸುಪ್ರೀಂ. ಹಿಂದಿಯನ್ನು ಒಂದು ಭಾಷೆಯಾಗಿ ವಿರೋಧಿಸಲ್ಲ. ಎಲ್ಲ ಭಾಷೆಗಳಂತೆ ಹಿಂದಿಯನ್ನೂ ಕಲಿಯಿರಿ. ಅದಕ್ಕೆ ತಕರಾರು ಇಲ್ಲ. ಆದರೆ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ನಮ್ಮ ಪಕ್ಷ, ಸರ್ಕಾರ ಇದನ್ನು ಒಪ್ಪಲ್ಲ.

• ಕಾಂಗ್ರೆಸ್‌ನಲ್ಲಿ ಅನೇಕ ನಾಯಕರಿದ್ದರೂ ನೀವೇ ಗುರಿ ಯಾಕೆ?

ನನ್ನನ್ನು ಕಂಡರೆ ಭಯ. ಅದಕ್ಕೆ ನನ್ನನ್ನು ಗುರಿ ಮಾಡುತ್ತಾರೆ. ನನ್ನ ಶಕ್ತಿ ಕುಂದಿಸಲು ಅವರು ಹಾಗೆ ಮಾಡುತ್ತಾರೆ. ಅವನೊಬ್ಬ ಅಶ್ವತ್ಥನಾರಾಯಣ, ಟಿಪ್ಪುನನ್ನು ಮುಗಿಸಿದ ರೀತಿಯಲ್ಲೇ ಸಿದ್ದರಾಮಯ್ಯ ಅವರನ್ನೂ ಹೊಡೆದು ಹಾಕಬೇಕು ಎಂದಿದ್ದಾನೆ. ಪೊಲೀಸರು ಸ್ವಯಂ ಪ್ರೇರಿತರಾಗಿ ಪ್ರಕರಣ ದಾಖಲಿಸಿಕೊಳ್ಳಬೇಕು.

ಸಂಕ್ಷಿಪ್ತ ಸುದ್ದಿ

ವಿಮಾನ ನಿಲ್ದಾಣ: ಕಮಲ ಚಿಹ್ನೆ ಮುಚ್ಚಲು ಆಗ್ರಹ

ಶಿವಮೊಗ್ಗ: ಬಿಜೆಪಿಯ ಚಿಹ್ನೆಯಾದ ‘ಕಮಲ’ದ ಆಕಾರದಲ್ಲಿ ವಿನ್ಯಾಸ ಮಾಡಿರುವ ಸೋಗಾನೆ ವಿಮಾನ ನಿಲ್ದಾಣದ ಕಟ್ಟಡದ ಮೇಲ್ಭಾಗವನ್ನು ಬಟ್ಟೆಯಿಂದ ಮುಚ್ಚಬೇಕು ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಜಿಲ್ಲಾಡಳಿತವನ್ನು ಆಗ್ರಹಿಸಿದೆ.

‘ವಿರೋಧ ಲೆಕ್ಕಿಸದೇ ವಿಮಾನ ನಿಲ್ದಾಣದ ಕಟ್ಟಡದ ವಿನ್ಯಾಸವನ್ನು ‘ಕಮಲ’ ಆಕಾರದಲ್ಲೇ ಉಳಿಸಿಕೊಳ್ಳಲಾಗಿದೆ. ನೀತಿ ಸಂಹಿತೆ ಜಾರಿ ಇರುವುದರಿಂದ ಕಮಲದ ಆಕಾರ ಕಾಣದಂತೆ ಕ್ರಮ ಕೈಗೊಳ್ಳಬೇಕು’ ಎಂದು ಜಿಲ್ಲಾಧಿಕಾರಿಗೆ ಸಲ್ಲಿಸಿರುವ ಮನವಿಯಲ್ಲಿ ಎಚ್ಚರಿಕೆ ನೀಡಲಾಗಿದೆ.

2 ಕಡೆ ಸ್ಪರ್ಧಿಸಲ್ಲ: ಜಿ. ಪರಮೇಶ್ವರ

ಕೊರಟಗೆರೆ(ತುಮಕೂರು): ‘ಕೊರಟಗೆರೆ ವಿಧಾನಸಭಾ ಕ್ಷೇತ್ರ ಹೊರತುಪಡಿಸಿ ಬೇರೆ ಎಲ್ಲೂ ಸ್ಪರ್ಧೆ ಮಾಡುವುದಿಲ್ಲ. ಎರಡು ಕಡೆ ಸ್ಪರ್ಧೆಗೆ ಟಿಕೆಟ್ ಕೇಳಿಲ್ಲ’ ಎಂದು ಶಾಸಕ ಡಾ.ಜಿ.ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,‘ಕೊರಟಗೆರೆ ಕ್ಷೇತ್ರದ ಜನರು ನನ್ನ ಮೇಲೆ ವಿಶ್ವಾಸ ಇಟ್ಟು ಎರಡು ಬಾರಿ ಗೆಲ್ಲಿಸಿದ್ದಾರೆ. ಹಾಗಿರುವಾಗ ನಾನೇಕೆ ಬೇರೆ ಕಡೆಗೆ ಹೋಗಬೇಕು’ ಎಂದು ಪ್ರಶ್ನಿಸಿದರು. ‘ನಾನು ಎರಡು ಕಡೆ ಸ್ಪರ್ಧಿಸುತ್ತೇನೆ ಎಂದು ಎಲ್ಲೂ ಹೇಳಿಲ್ಲ. ಹೈಕಮಾಂಡ್ ಕೊರಟಗೆರೆ ಕ್ಷೇತ್ರಕ್ಕೆ ಟಿಕೆಟ್ ನೀಡಿದೆ. ಇಲ್ಲಿ ಮಾತ್ರ ಸ್ಪರ್ಧೆ ಮಾಡುತ್ತೇನೆ’ ಎಂದರು.

ಬಿಜೆಪಿ ಮುಖಂಡರ ವಿರುದ್ಧ ಪ್ರಕರಣ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ನೀತಿ ಸಂಹಿತೆ ಉಲ್ಲಂಘನೆ ಆರೋಪದ ಅಡಿ ವಿಧಾನ ಪರಿಷತ್ ಸದಸ್ಯ ಪ್ರದೀಪ್ ಶೆಟ್ಟರ್, ಶಾಸಕ ರಾಮಣ್ಣ ಲಮಾಣಿ ಸೇರಿದಂತೆ ಶಿರಹಟ್ಟಿ ಮತಕ್ಷೇತ್ರದ ಆರು ಮಂದಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ವಿರುದ್ಧ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಏ.6ರಂದು ಬಿಜೆಪಿ ಮುಖಂಡರು ವಿಧಾನ ಪರಿಷತ್ ಸದಸ್ಯ ಪ್ರದೀಪ್ ಶೆಟ್ಟರ್ ನೇತೃತ್ವದಲ್ಲಿ ವಿಜಯ ಕಂಕಣ ಹೆಸರಿನಲ್ಲಿ ಆಣೆ ಪ್ರಮಾಣ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಈ ವೇಳೆ ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಗಳು ಬಿಜೆಪಿಗೆ ನಿಷ್ಠರಾಗಿರುತ್ತೇವೆ. ಯಾರಿಗೆ ಟಿಕೆಟ್ ನೀಡಿದರೂ ಒಗ್ಗಟ್ಟಿನಿಂದ ದುಡಿಯುತ್ತೇವೆ ಎಂದು ಆಣೆ ಮಾಡಿದ್ದರು.

‘ಭವಾನಿಗೆ ಟಿಕೆಟ್ ನೀಡದಿದ್ದರೆ ನನಗೂ ಬೇಡ’

ಆಪ್ತರ ಮೂಲಕ ಜೆಡಿಎಸ್ ವರಿಷ್ಠ ದೇವೇಗೌಡರಿಗೆ ಸಂದೇಶ ರವಾನಿಸಿದ ಎಚ್‌.ಡಿ.ರೇವಣ್ಣ

ಪ್ರಜಾವಾಣಿ ವಾರ್ತೆ

ಹಾಸನ: ‘ಪತ್ನಿ ಭವಾನಿ ಅವರಿಗೆ ಹಾಸನ ಕ್ಷೇತ್ರದ ಜೆಡಿಎಸ್ ಟಿಕೆಟ್ ನೀಡದಿದ್ದರೆ, ಹೊಳೆನರಸೀಪುರದಿಂದ ನನಗೂ ಟಿಕೆಟ್ ಬೇಡ’ ಎಂಬ ಸಂದೇಶವನ್ನು ಶಾಸಕ ಎಚ್‌.ಡಿ. ರೇವಣ್ಣ ರವಾನಿಸಿದ್ದಾರೆ.

ಶುಕ್ರವಾರ ರಾತ್ರಿ ಆಪ್ತರು ಹಾಗೂ ಮುಖಂಡರೊಂದಿಗೆ ಇಲ್ಲಿನ ಕಲ್ಯಾಣ ಮಂಟಪದಲ್ಲಿ ಸಭೆ ನಡೆಸಿ ಅವರು ಮಂಡಿಸಿದ ವಾದಕ್ಕೆ ಬಹುತೇಕ ಮುಖಂಡರೂ ಸಮ್ಮತಿಸಿದ್ದಾರೆ ಎಂದು ತಿಳಿದು ಬಂದಿದೆ.

‘ಹಾಸನ ಕ್ಷೇತ್ರದಲ್ಲಿ ಬಿಜೆಪಿಯನ್ನು ಎದುರಿಸಲು ಪ್ರಬಲ ಅಭ್ಯರ್ಥಿ ಅಗತ್ಯ. ಸಾಮಾನ್ಯ ಕಾರ್ಯಕರ್ತರನ್ನು ಕಣಕ್ಕಿಳಿಸಿದರೆ ಗೆಲುವು ಸಾಧ್ಯವಿಲ್ಲ. ಮತ್ತೆ ಕ್ಷೇತ್ರ ಕೈತಪ್ಪಿದರೆ, ಕಾರ್ಯಕರ್ತರು ಅನಾಥಪ್ರಜ್ಞೆ ಅನುಭವಿಸಬೇಕಾಗುತ್ತದೆ. ಈ ಬಾರಿ ಏನಾದರೂ ಆಗಲಿ, ಪಕ್ಷ ಗೆಲ್ಲಬೇಕು’ ಎಂದು ಮುಖಂಡರು ಪ್ರತಿಪಾದಿಸಿದ್ದಾರೆ.

ಅದರಿಂದ ಮತ್ತಷ್ಟು ಉತ್ತೇಜನಗೊಂಡಿರುವ ರೇವಣ್ಣ, ‘ಕ್ಷೇತ್ರವನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಹೊಳೆನರಸೀಪುರದಲ್ಲಿ ಗೆದ್ದು ಏನು ಮಾಡುವುದು? ನನಗೂ ಅಲ್ಲಿನ ಟಿಕೆಟ್ ಬೇಡ. ಈ ಬಗ್ಗೆ ದೇವೇಗೌಡರಿಗೆ ಸಂದೇಶ ರವಾನಿಸುವೆ’ ಎಂದು ಮುಖಂಡರಿಗೆ ತಿಳಿಸಿದ್ದಾರೆ.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ.....
ಪ್ರಜಾವಾಣಿ ನೋಡಿಯೊ

‘ಹಿರಿಯ ಸಹೋದರ ಬಾಲಕೃಷ್ಣೇಗೌಡ ಸೇರಿದಂತೆ ದೇವೇಗೌಡರ ಆಪ್ತರ ಮೂಲಕ ಈ ಸಂದೇಶವನ್ನು ದೇವೇಗೌಡರಿಗೆ ರವಾನಿಸಿದ್ದಾರೆ’ ಎಂದು ಹೇಳಲಾಗುತ್ತಿದೆ.

ಈ ಕುರಿತು ದೇವೇಗೌಡರೂ ರೇವಣ್ಣ ಜೊತೆಗೆ ಚರ್ಚಿಸಿದ್ದು, ಗೊಂದಲಕ್ಕೆ ಅವಕಾಶ ವಿಲ್ಲದಂತೆ ಚರ್ಚಿಸಿ ತೀರ್ಮಾನಿಸಲಾಗುವುದು. ಆತುರದ ನಿರ್ಧಾರ ಕೈಗೊಳ್ಳ ಬಾರದೆಂದು ತಾಕೀತು ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಭವಾನಿ ಅವರು ಪಟ್ಟು ಸಡಿಲಿಸುತ್ತಿಲ್ಲ. ಪುತ್ರರು ಕೂಡ ತಾಯಿಯನ್ನು ಹಾಸನದಿಂದ ಕಣಕ್ಕಿಳಿಸಲೇಬೇಕೆಂದು ಹಟ ತೊಟ್ಟಿದ್ದಾರೆ. ಇದೇ ಹಿನ್ನೆಲೆಯಲ್ಲಿ ಕೊನೆಯ ಅಸ್ತ್ರವಾಗಿ ‘ನನಗೆ ಹೊಳೆನರಸೀಪುರ ಟಿಕೆಟ್ ಬೇಡ’ ಎಂಬ ದಾಳವನ್ನು ರೇವಣ್ಣ ಉರುಳಿಸಿದ್ದಾರೆ ಎನ್ನಲಾಗುತ್ತಿದೆ. ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಲು ರೇವಣ್ಣ ನಿರಾಕರಿಸಿದರು.

‘ಸೋಮವಾರದ ನಂತರ ಜೆಡಿಎಸ್ ಎರಡನೇ ಪಟ್ಟಿ’

ಪ್ರಜಾವಾಣಿ ವಾರ್ತೆ

ರಾಮನಗರ: ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಸೋಮವಾರದ ನಂತರ ಬಿಡುಗಡೆ ಮಾಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಕಾಂಗ್ರೆಸ್ಸಿನವರು ನಮ್ಮ ಶಾಸಕರನ್ನು ರಾಜೀನಾಮೆ ಕೊಡಿಸಿ ಪಕ್ಷಕ್ಕೆ ಸೇರಿಸಿಕೊಂಡಿದ್ದರು. ಈಗ ಅದು ಯೂ ಟರ್ನ್ ತೆಗೆದುಕೊಳ್ಳುತ್ತಿದೆ’ ಎಂದರು.

‘ಕಾಂಗ್ರೆಸ್‌ನಿಂದ 15ಕ್ಕೂ ಹೆಚ್ಚು ಸಮರ್ಥ ಅಭ್ಯರ್ಥಿಗಳು ಜೆಡಿಎಸ್‌ನತ್ತ ಮುಖ ಮಾಡಿದ್ದು, ನಮ್ಮ ಅಭ್ಯರ್ಥಿಗಳ ಕೊರತೆಯೂ ನೀಗುತ್ತಿದೆ. ಮತ್ತೊಂದು ರಾಷ್ಟ್ರೀಯ ಪಕ್ಷ ಇನ್ನೂ ಮೊದಲ ಪಟ್ಟಿಯನ್ನೇ ಬಿಡುಗಡೆ ಮಾಡಿಲ್ಲ’ ಎಂದು ವ್ಯಂಗ್ಯವಾಡಿದರು.

‘ಈ ಬಾರಿ ಚನ್ನಪಟ್ಟಣ ಕ್ಷೇತ್ರದಿಂದ ಮಾತ್ರ ನನ್ನ ಸ್ಪರ್ಧೆ. ಕಾರ್ಯಕರ್ತರ ಒತ್ತಡ ಇರುವ ಕ್ಷೇತ್ರಗಳಲ್ಲೂ ಬೇರೆ ಅಭ್ಯರ್ಥಿಗಳನ್ನು ನಿಲ್ಲಿಸಿ ಗೆಲ್ಲಿಸಿಕೊಳ್ಳುತ್ತೇನೆ’ ಎಂದು ಕುಮಾರಸ್ವಾಮಿ ಹೇಳಿದರು.

ಶ್ರೀನಾಥ್ ಮನೆಗೆ ಬಿಜೆಪಿ ಶಾಸಕರು

ಗಂಗಾವತಿ (ಕೊಪ್ಪಳ ಜಿಲ್ಲೆ): ಗಂಗಾವತಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ವಂಚಿತರಾದ ಎಚ್‌.ಆರ್. ಶ್ರೀನಾಥ ಅವರ ಮನೆಗೆ ಶನಿವಾರ ಬಿಜೆಪಿ ಶಾಸಕರಾದ ಗಂಗಾವತಿಯ ಪರಣ್ಣ ಮುನವಳ್ಳಿ, ಕನಕಗಿರಿಯ ಬಸವರಾಜ ದಢೇಸುಗೂರು ಮತ್ತು ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಜನಾರ್ದನ ರೆಡ್ಡಿ ಪ್ರತ್ಯೇಕವಾಗಿ ಭೇಟಿ ನೀಡಿ, ವಿವಿಧ ವಿಷಯಗಳನ್ನು ಚರ್ಚಿಸಿದರು.

ಇಬ್ಬರೂ ಶಾಸಕರು ಶ್ರೀನಾಥ್ ಅವರ ತಂದೆ ಹಾಗೂ ಮಾಜಿ ಸಂಸದ ಎಚ್‌.ಜಿ. ರಾಮುಲು ಅವರ ಆರೋಗ್ಯ ವಿಚಾರಿಸಿದರು.‘ರಾಮುಲು ಅವರ ಆರೋಗ್ಯ ವಿಚಾರಿಸಲು ಬಂದಿದ್ದೆವು’ ಎಂದು ಶಾಸಕರು ಹೇಳಿದರು. ಅವರಿಬ್ಬರೂ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಎಚ್‌.ಆರ್.ಶ್ರೀನಾಥ, ‘ಚುನಾವಣೆಯಲ್ಲಿ ಬೆಂಬಲಿಸುವಂತೆ ಮುನವಳ್ಳಿ ಮತ್ತು ದಢೇಸೂಗೂರು ಕೋರಿದ್ದಾರೆ. ಜನಾರ್ದನ ರೆಡ್ಡಿ ಜೊತೆ ಚರ್ಚಿಸಿರುವೆ. ಮುಂದಿನ ದಿನಗಳಲ್ಲಿ ಕಾರ್ಯಕರ್ತರ ಸಭೆ ನಡೆಸಿ, ತೀರ್ಮಾನಿಸುವೆ’ ಎಂದರು.

‘ಜಿಲ್ಲೆಯಲ್ಲಿ ಪ್ರಚಾರ ಮಾಡಲ್ಲ’: ‘ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಯಾವ ಅಭ್ಯರ್ಥಿ ಪರವೂ ಪ್ರಚಾರ ಮಾಡುವುದಿಲ್ಲ. ಹೊರ ಜಿಲ್ಲೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಮತ ಕೇಳುವೆ. ಜಿಲ್ಲೆಯ ಕಾಂಗ್ರೆಸ್ ನಾಯಕರೇ ನನಗೆ ಟಿಕೆಟ್ ತಪ್ಪಿಸಿದ್ದಾರೆ. ಅನ್ಸಾರಿಗೆ ಟಿಕೆಟ್ ನೀಡಿದರೆ ಪಕ್ಷ ಸೋಲುತ್ತದೆ ಎಂದು ಆಂತರಿಕ ಸಮೀಕ್ಷೆಯಲ್ಲಿ ಗೊತ್ತಾಗಿದೆ. ಇದನ್ನು ವರಿಷ್ಠರ ಗಮನಕ್ಕೆ ತಂದಿರುವೆ’ ಎಂದು ಮುಖಂಡ ಎಚ್‌.ಆರ್.ಶ್ರೀನಾಥ ತಿಳಿಸಿದರು.

‘1991ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಕೊಪ್ಪಳದಿಂದ ಸ್ಪರ್ಧಿಸಿದ್ದಾಗ ಯಾರೂ ಅವರನ್ನು ಬೆಂಬಲಿಸಲಿಲ್ಲ. ತಿಂಗಳವರೆಗೆ ನನ್ನ ತೋಟದಲ್ಲಿ ಇರಲು ವ್ಯವಸ್ಥೆ ಮಾಡಿ, ಚುನಾವಣೆ ಮಾಡಿದ್ದೇನೆ. ಜಿಲ್ಲೆಯ ಕೆಲ ನಾಯಕರ ಮಾತುಗಳನ್ನು ಕೇಳಿ ಸಿದ್ದರಾಮಯ್ಯ ಅವರು ಅನ್ಸಾರಿಗೆ ಟಿಕೆಟ್ ಕೊಡಿಸಿದ್ದಾರೆ ’ ಎಂದರು.

ಸಿದ್ದರಾಮಯ್ಯ ಪುನಃ ಸಿ.ಎಂ ಆಗಲಿ: ರಘು ಆಚಾರ್

ಚಿತ್ರದುರ್ಗ: ‘ನನಗೆ ಯಾರೂ ಮೋಸ ಮಾಡಿಲ್ಲ. ನಮ್ಮೂರಿನ (ಮೈಸೂರು) ನಾಯಕ ಸಿದ್ದರಾಮಯ್ಯ ಪುನಃ ಮುಖ್ಯಮಂತ್ರಿಯಾಗಬೇಕು ಎಂಬ ಆಸೆ ನನಗಿದೆ’ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಜಿ. ರಘು ಆಚಾರ್ ಹೇಳಿದರು.

ಕಾಂಗ್ರೆಸ್ ಟಿಕೆಟ್ ವಂಚಿತರಾದ ಮಾಜಿ ಶಾಸಕ ಎಸ್‌.ಕೆ. ಬಸವರಾಜನ್ ಅವರ ನಿವಾಸಕ್ಕೆ ಪತ್ನಿಯೊಂದಿಗೆ ಶನಿವಾರ ಭೇಟಿ ನೀಡಿ ಮಾತುಕತೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ಕೈತಪ್ಪಿದ್ದಕ್ಕೆ ಯಾವುದೇ ಬೇಸರವಿಲ್ಲ. ಯಾರ ಮೇಲೂ ಕೋಪ, ಅಸಮಾಧಾನವಿಲ್ಲ. ಏ. 14ರಂದು ಜೆಡಿಎಸ್ ಸೇರ್ಪಡೆಯಾಗಿ, ಏ.17ರಂದು ನಾಮಪತ್ರ ಸಲ್ಲಿಸುತ್ತೇನೆ’ ಎಂದು ಹೇಳಿದರು. ‘ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ. ಹೊರಗಿನಿಂದ ಬಂದವರು ಗೆದ್ದರೂ, ಸೋತರೂ ಕ್ಷೇತ್ರದಲ್ಲಿ ಇರುವುದಿಲ್ಲ. ಅಧಿಕಾರ ಇಲ್ಲದಿದ್ದರೂ ಜನರಿಗೆ ಸ್ಪಂದಿಸುವರು ನಾವು. ಬೆಂಬಲಿಗರು ಹಾಗೂ ಹಿತೈಷಿಗಳು ಸ್ಪರ್ಧೆಗೆ ಒತ್ತಡ ಹಾಕುತ್ತಿದ್ದಾರೆ. ಭಾನುವಾರ ನಿರ್ಧಾರ ಪ್ರಕಟಿಸುತ್ತೇನೆ’ ಎಂದು ಎಸ್‌.ಕೆ. ಬಸವರಾಜನ್ ತಿಳಿಸಿದರು.

‘ಕೈ’ ತೊರೆದ ರಾಜಣ್ಣ ಬೆಂಬಲಿಗ

ಮಧುಗಿರಿ: ಮಧುಗಿರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎನ್. ರಾಜಣ್ಣ ಅವರ ಬೆಂಬಲಿಗ ಹಾಗೂ ತುಮುಲ್ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಲು ಸಜ್ಜಾಗಿದ್ದಾರೆ.


ಟಿಕೆಟ್ ಸಿಗದ ಕಾರಣ ಭಾನುವಾರ ಜೆಡಿಎಸ್ ಸೇರ್ಪಡೆ ಆಗಲಿದ್ದಾರೆ. ಚುನಾವಣೆ ವೇಳೆ ಚಂದ್ರಶೇಖರ್ ಪಕ್ಷ ತೊರೆದಿರುವುದು ರಾಜಣ್ಣ ಅವರಿಗೆ ಹಿನ್ನಡೆಯಾದಂತಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಕೆ.ಎನ್. ರಾಜಣ್ಣ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಚಂದ್ರಶೇಖರ್ ಅವರು ತುಮುಲ್ ಅಧ್ಯಕ್ಷರಾಗಿ ಮತ್ತು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾಗಿದ್ದರು.

32 ಹಾಲಿ ಶಾಸಕರ ವಿರುದ್ಧ ಇವೆ ಕ್ರಿಮಿನಲ್ ಪ್ರಕರಣ

ರಾಜ್ಯದಲ್ಲಿನ **219** ಹಾಲಿ ಶಾಸಕರಲ್ಲಿ ಶೇ **15**ರಷ್ಟು ಶಾಸಕರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಅಂದರೆ **32** ಶಾಸಕರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ಇವೆ. 2018ರ ವಿಧಾನಸಭಾ ಚುನಾವಣೆ ವೇಳೆ ಸಲ್ಲಿಸಿದ್ದ ನಾಮಪತ್ರದಲ್ಲೇ ಈ ಶಾಸಕರು ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣಗಳು ಇವೆ ಎಂದು ಘೋಷಿಸಿಕೊಂಡಿದ್ದರು. ಈ ಪ್ರಕರಣಗಳಲ್ಲಿ ಗರಿಷ್ಠ ಶಿಕ್ಷೆಯಾದರೆ, ಈ ಶಾಸಕರೆಲ್ಲರೂ ಅನರ್ಹರಾಗುವ ಅಪಾಯ ಇದೆ. ಆದರೆ, ಹಲವು ವರ್ಷಗಳಿಂದ ಈ ಪ್ರಕರಣಗಳ ತನಿಖೆ ಮತ್ತು ವಿಚಾರಣೆಯಲ್ಲಿ ಯಾವುದೇ ಪ್ರಗತಿ ಆಗಿಲ್ಲ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ತನ್ನ ವರದಿಯಲ್ಲಿ ಹೇಳಿದೆ

ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವವರು



ಕಾಂಗ್ರೆಸ್: ರಂಗನಾಥ್ ಎಚ್‌.ಡಿ., ವೈ.ಜಿ.ಪಾಟೀಲ, ಕೆ.ವೈ.ನಂಜೇಗೌಡ, ಬಿ.ಕೆ.ಸಂಗಮೇಶ್ವರ, ಭೀಮಾ ನಾಯ್ಕ್

ಜೆಡಿಎಸ್: ಡಿ.ಸಿ.ತಮ್ಮಣ್ಣ, ಕೆ.ಅನ್ನದಾನಿ, ಎಂ.ಶ್ರೀನಿವಾಸ, ನಾಗನಗೌಡ

ಪಕ್ಷೇತರ: ಶರತ್ ಬಚ್ಚೇಗೌಡ

ಬಿಜೆಪಿ: ಜಿ.ಸೋಮಶೇಖರ ರೆಡ್ಡಿ, ಬಿ.ಶ್ರೀರಾಮುಲು, ಎಂ.ಪಿ.ರೇಣುಕಾಚಾರ್ಯ, ಅಭಯಕುಮಾರ್ ಪಾಟೀಲ, ವೀರಭದ್ರಯ್ಯ (ವೀರಣ್ಣ) ಚರಂತಿಮಠ, ಬಸನಗೌಡ ಪಾಟೀಲ ಯತ್ನಾಳ, ಬಸವರಾಜ ದುರುಗಪ್ಪ ದಢೇಸುಗೂರು, ಪರಣ್ಣ ಮುನುವಳ್ಳಿ, ಮಾಡಾಳ್ ವಿರೂಪಾಕ್ಷಪ್ಪ, ಸಿ.ಟಿ.ರವಿ, ಎಸ್‌.ಎ. ರಾಮದಾಸ್, ದೊಡ್ಡನಗೌಡ ಜಿ.ಪಾಟೀಲ, ರಾಜಕುಮಾರ್, ಹರೀಶ್ ಪೂಂಜಾ, ಸಂಜೀವ ಮಠಂದೂರು, ಎನ್‌.ಮಹೇಶ್, ಜೆ.ಸಿ.ಮಾಧುಸ್ವಾಮಿ, ನೆಹರು ಓಲೇಕಾರ್, ದಿನಕರ ಕೇಶವ ಶೆಟ್ಟಿ, ಕೆ.ಸಿ. ನಾರಾಯಣಗೌಡ, ಅರುಣಕುಮಾರ್ ಗುತ್ತೂರ್, ಶರಣು ಸಲಗರ

ಟಿಕೆಟ್ ಸಿಗದಿದ್ದರೆ ಬಿಜೆಪಿಗೆ ಸಂಗಣ್ಣ ಸಡ್ಡು?

ಪ್ರಜಾವಾಣಿ ವಾರ್ತೆ

ಕೊಪ್ಪಳ: ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ಇಚ್ಛೆಯನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿರುವ ಬಿಜೆಪಿ ಸಂಸದ ಸಂಗಣ್ಣ ಕರಡಿ ಅವರು, ‘ನನಗೆ ಟಿಕೆಟ್ ಕೊಟ್ಟರೆ ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷ ಇನ್ನಷ್ಟು ಗಟ್ಟಿಗೊಳ್ಳುತ್ತದೆ. ಇದು ಕಾರ್ಯಕರ್ತರ ಆಸೆಯೂ ಹೌದು’ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಕೊಪ್ಪಳ ಕ್ಷೇತ್ರದ ಟಿಕೆಟ್‌ಗಾಗಿ ಸಂಗಣ್ಣ ಕರಡಿ ಮತ್ತು ಸಿ.ವಿ. ಚಂದ್ರಶೇಖರ್ ನಡುವೆ ಭಾರಿ ಪೈಪೋಟಿ ಇದೆ. ಟಿಕೆಟ್ ಸಿಕ್ಕರೆ ಸಂಗಣ್ಣ ಪಕ್ಷದಿಂದ, ಇಲ್ಲವಾದರೆ ಪಕ್ಷೇತರ ಅಥವಾ ಜೆಡಿಎಸ್‌ನಿಂದ ಸ್ಪರ್ಧಿಸುತ್ತಾರೆ ಎಂಬ ಚರ್ಚೆ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆದಿದೆ. ಟಿಕೆಟ್‌ಗಾಗಿ ಪಕ್ಷದ ನಾಯಕರನ್ನು ಭೇಟಿಯಾಗಿ, ಕ್ಷೇತ್ರಕ್ಕೆ ಮರಳಿದ್ದಾರೆ.

ಬೇರೆ ಪಕ್ಷದಿಂದಲೂ ಸ್ಪರ್ಧಿಸುತ್ತಾರೆ ಎಂಬ ಚರ್ಚೆಗೆ ಪುಷ್ಟಿ ನೀಡುವಂತೆ ಜೆಡಿಎಸ್‌ನ ಸ್ಥಳೀಯ ಮಟ್ಟದ ಕೆಲ ನಾಯಕರು ಶನಿವಾರ ಸಂಗಣ್ಣ ಅವರ ಮನೆಗೆ ಭೇಟಿ ನೀಡಿ ಅನೌಪಚಾರಿಕವಾಗಿ ಪಕ್ಷಕ್ಕೆ ಆಹ್ವಾನಿಸಿದ್ದಾರೆ. ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಮುಖಂಡರು ಕೂಡ ಸಂಸದರ ನಿಕಟ ಸಂಪರ್ಕದಲ್ಲಿದ್ದಾರೆ.

‘ಸಂಗಣ್ಣ ಕರಡಿ ಅವರೊಂದಿಗೆ ಸಂಪರ್ಕದಲ್ಲಿದ್ದೇವೆ. ಅವರ ಮಗನಿಗೂ ಟಿಕೆಟ್ ಕೇಳಿದ್ದಾರೆ. ಒಂದು ವಾರದಲ್ಲಿ ಎಲ್ಲವೂ ಸ್ಪಷ್ಟವಾಗುತ್ತದೆ’ ಎಂದು ಜೆಡಿಎಸ್ ಜಿಲ್ಲಾ ಉಸ್ತುವಾರಿ ಟಿ.ಎ.ಶರವಣ ತಿಳಿಸಿದ್ದಾರೆ

ಎಸ್‌ಯುಸಿಐ: 14 ಕಡೆ ಸ್ಪರ್ಧೆ

ಕಲಬುರಗಿ: ‘ ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದಿಂದ ಕಲಬುರಗಿ ದಕ್ಷಿಣ ಹಾಗೂ ಕಲಬುರಗಿ ಗ್ರಾಮೀಣ ಸೇರಿ ರಾಜ್ಯದ 14 ಕಡೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು’ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಚ್‌.ವಿ. ದಿವಾಕರ್ ತಿಳಿಸಿದರು.

‘ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ನಡೆಸುವ ಸಂದರ್ಭದಲ್ಲಿ ಇತರ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದೆವು. ಆದರೆ, ಈ ಬಾರಿ ಮೈತ್ರಿ ಮಾಡಿಕೊಳ್ಳುವುದಿಲ್ಲ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಮತದಾನ ಜಾಗೃತಿ ಮತದಾನ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕಲಬುರಗಿಯಲ್ಲಿ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಶನಿವಾರ ಟಾಂಗಾ ಜಾಥಾ ನಡೆಯಿತು.
–ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಸುಳ್ಯ ಕ್ಷೇತ್ರ: ಸ್ವಪಕ್ಷೀಯರಿಂದಲೇ ವಿರೋಧ

ಸಚಿವ ಅಂಗಾರಗೆ ಟಿಕೆಟ್ ‘ಗೆಲ್ಲುವ’ ಸವಾಲು!

• ಪ್ರವೀಣ ಕುಮಾರ್ ಪಿ.ವಿ



ಮಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಸತತ ಆರು ಬಾರಿ ಗೆದ್ದಿರುವ ಸುಳ್ಯ ಮೀಸಲು ಕ್ಷೇತ್ರದ ಶಾಸಕ, ಮೀನುಗಾರಿಕಾ ಸಚಿವ ಎಸ್. ಅಂಗಾರ ‘ಏಳನೇ ಗೆಲುವಿನ’ ನಿರೀಕ್ಷೆಯಲ್ಲಿದ್ದಾರೆ. ಆದರೆ, ಅವರಿಗೆ ಈ ಬಾರಿ ‘ಟಿಕೆಟ್ ಗೆಲ್ಲುವುದೇ’ (ಗಿಟ್ಟಿಸಿಕೊಳ್ಳುವುದು) ಸವಾಲಾಗಿ ಪರಿಣಮಿಸಿದೆ.

ಅಂಗಾರ ಅವರ ವ್ಯಕ್ತಿತ್ವದ ಬಗ್ಗೆ ಕ್ಷೇತ್ರದ ಮತದಾರರಿಗೆ ಅಸಮಾಧಾನವೇನಿಲ್ಲ. ಸಚಿವರಾದ ಬಳಿಕವೂ ಅಧಿಕಾರದ ದರ್ಪವನ್ನು ಹತ್ತಿರ ಸುಳಿಯಗೊಡದ ಸಜ್ಜನಿಕೆಯ ವ್ಯಕ್ತಿ ಎಂಬ ಒಳ್ಳೆಯ ಮಾತುಗಳನ್ನೇ ಬಿಜೆಪಿ ಕಾರ್ಯಕರ್ತರೂ ಹೇಳಿಕೊಳ್ಳುತ್ತಾರೆ.

ಆದರೂ ಪಕ್ಷದ ಸ್ಥಳೀಯ ಕೆಲವು ಮುಖಂಡರಿಗೆ ಅಂಗಾರ ಅಪಥ್ಯವಾಗಿಬಿಟ್ಟಿದ್ದಾರೆ. ಹಾಗಾಗಿ ಈ ಬಾರಿ ‘ಅಭ್ಯರ್ಥಿಯನ್ನು ಬದಲಾಯಿಸಬೇಕು’ ಎಂದು ಬಿಜೆಪಿ ಸ್ಥಳೀಯ ಮುಖಂಡರ ಒಂದು ಗುಂಪು ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಲು ಶುರು ಮಾಡಿದೆ. ಈ ಮುನಿಸಿನ ಪರಿಣಾಮವಾಗಿಯೇ ಚುನಾವಣೆಗೆ ಸಾಕಷ್ಟು ಮುನ್ನವೇ ‘ಚುನಾವಣಾ ಬಹಿಷ್ಕಾರ’ದ ಬ್ಯಾನರ್‌ಗಳು ಕ್ಷೇತ್ರದ ಹಲವೆಡೆ ಕಾಣಿಸಿಕೊಂಡಿವೆ.

ಅಂಗಾರ ಆರು ಬಾರಿ ಶಾಸಕರಾದರೂ ಸುಳ್ಯ ಕ್ಷೇತ್ರದಲ್ಲಿ ಗಮನ ಸೆಳೆಯುವ ಅಭಿವೃದ್ಧಿ ಕಾರ್ಯ ಮಾಡಿಸಿಲ್ಲ. ಕ್ಷೇತ್ರದ ಹಲವಾರು ಊರುಗಳಿಗೆ ಸುಸಜ್ಜಿತ ರಸ್ತೆಯೂ ಇಲ್ಲ ಎಂದು ಬಿಜೆಪಿಯದ್ದೇ ಒಂದು ಬಣ ದೂರುತ್ತಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಅವರ ವಿರುದ್ಧ ಸಂದೇಶಗಳನ್ನು ಹಂಚಿಕೊಳ್ಳುತ್ತಿದೆ.

‘ಅರ್ಜಿ ಕೊಟ್ಟ ಕೂಡಲೆ ಕೆಲಸ ಆಗುವುದಿಲ್ಲ’ ಎಂದು ತಮ್ಮನ್ನು ಭೇಟಿಯಾದ ಸಾರ್ವಜನಿಕರನ್ನು ಉದ್ದೇಶಿಸಿ ಅಂಗಾರ ಹೇಳಿದ್ದಾರೆ ಎನ್ನಲಾದ ವಿಡಿಯೊ ತುಣುಕನ್ನು ಮುಂದಿಟ್ಟುಕೊಂಡು ಟೀಕೆಯಲ್ಲಿ ತೊಡಗಿದೆ. ಕಾರ್ಯಕ್ರಮದ ಶಂಕುಸ್ಥಾಪನೆಗೆ ಹೋದಾಗ ಅಂಗಾರ ಅವರಿದ್ದ ಜೀಪು ರಸ್ತೆಯಲ್ಲಿ ಹೂತು ಹೋಗಿ, ಅವರು ಕೆಲ ದೂರ ನಡೆದೇ ಹೋದ ವಿಡಿಯೊ ತುಣುಕೂ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಆದರೆ, ಈ ಪರ–ವಿರೋಧಗಳ ಲೆಕ್ಕಿಸದೇ ಅಂಗಾರ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಅವರು ಮಾತ್ರ ಈ ಸಲವೂ ತಮಗೇ ಟಿಕೆಟ್ ಸಿಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ.

‘ಕೆಲವರು ಅಪಪ್ರಚಾರ ನಡೆಸುತ್ತಿದ್ದಾರೆ. ಸಣ್ಣಪುಟ್ಟ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ. ಪಕ್ಷ ಈ ಸಲವೂ ಟಿಕೆಟ್ ನೀಡುತ್ತದೆ ಎಂಬ ವಿಶ್ವಾಸ ಇದೆ’ ಎಂದು ಎಸ್.ಅಂಗಾರ ‘ಪ್ರಜಾವಾಣಿ’ಗೆ ತಿಳಿಸಿದರು.

‘1989ರಲ್ಲಿ ಕಾಂಗ್ರೆಸ್‌ನ ಕೆ.ಕುಶಲ ವಿರುದ್ಧ ಸ್ಪರ್ಧಿಸಿ ಸೋಲು ಕಂಡಿದ್ದ ಅಂಗಾರ, 1994ರಲ್ಲಿ ಮೊದಲ ಸಲ ಗೆಲುವಿನ ನಗೆ ಬೀರಿದ್ದರು. ಆ ಬಳಿಕ ಒಮ್ಮೆಯೂ ಸೋತಿಲ್ಲ.

ಬಿಜೆಪಿ ಮಾನ ಉಳಿಸಿದ್ದ ಅಂಗಾರ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭದ್ರ ನೆಲೆ ಹೊಂದಿರುವ ಬಿಜೆಪಿ 2013ರ ವಿಧಾನಸಭಾ ಚುನಾವಣೆಯಲ್ಲಿ ಸಂಪೂರ್ಣ ನೆಲಕಚ್ಚಿತ್ತು. ಜಿಲ್ಲೆಯ ಎಂಟು ಕ್ಷೇತ್ರಗಳಲ್ಲಿ ಏಳು ಕಡೆ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದಿದ್ದರು. ಆದರೆ, ಎಸ್. ಅಂಗಾರ ಅವರು ಕಾಂಗ್ರೆಸ್‌ನ ಡಾ.ಬಿ.ರಘು ಅವರನ್ನು1,373 ಮತಗಳಿಂದ ಸೋಲಿಸುವ ಮೂಲಕ ಪಕ್ಷಕ್ಕೆ ಜಿಲ್ಲೆಯಲ್ಲಿ ಪ್ರಾತಿನಿಧ್ಯ ಸಿಗುವಂತೆ ಮಾಡಿದ್ದರು.

ವರುಣ: ಜೆಡಿಎಸ್ ಅಭ್ಯರ್ಥಿ ಬದಲಾವಣೆ ಸಾಧ್ಯತೆ

ಮೈಸೂರು: ರಾಜ್ಯದ ಗಮನ ಸೆಳೆದಿರುವ ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಮತ ಯಾಚಿಸುತ್ತಿದ್ದಾರೆ. ಆದರೆ, ಜೆಡಿಎಸ್ ಅಭ್ಯರ್ಥಿ ಅಭಿಷೇಕ್ ಎಲ್ಲಿಯೂ ಕಾಣಿಸಿಕೊಳ್ಳದಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿದೆ. ಸಿದ್ದರಾಮಯ್ಯ ಅವರಿಗೆ ಜೆಡಿಎಸ್ ಪರೋಕ್ಷವಾಗಿ ಬೆಂಬಲ ನೀಡುತ್ತಿದೆಯೇ ಎಂಬ ಪ್ರಶ್ನೆಯೂ ಎದ್ದಿದೆ.

ಅಭ್ಯರ್ಥಿಯೇ ಕ್ಷೇತ್ರದಲ್ಲಿ ಕಾಣಿಸಿಕೊಳ್ಳದಿರುವುದರಿಂದ, ಕಾರ್ಯಕರ್ತರಲ್ಲೂ ಉತ್ಸಾಹವಿಲ್ಲದಂತಾಗಿದೆ. ಪಕ್ಷದಲ್ಲೂ ಚಟುವಟಿಕೆಗಳಿಲ್ಲದಿರುವುದು ಚರ್ಚೆಗೆ ದಾರಿ ಮಾಡಿದ್ದು, ಅಭ್ಯರ್ಥಿ ಬದಲಾಯಿಸುವ ಸಾಧ್ಯತೆಯೂ ಇದೆ.

‘ಹಿಂದಿನ ಚುನಾವಣೆಯಲ್ಲಿ ಸೋತಿ ದ್ದರೂ ಅಭಿಷೇಕ್ ಅವರಿಗೆ ಮೊದಲ ಪಟ್ಟಿಯಲ್ಲೇ ಟಿಕೆಟ್ ಘೋಷಿಸಿದ ಬಳಿಕ ಸ್ವಲ್ಪ ಓಡಾಡಿದ್ದರು. ಸಿದ್ದರಾಮಯ್ಯ ಸ್ಪರ್ಧೆ ಘೋಷಣೆಯಾದ ನಂತರ ನಿಷ್ಕ್ರಿಯವಾಗಿದ್ದಾರೆ. ನಮ್ಮ ಸಂಪರ್ಕಕ್ಕೂ ಸಿಕ್ಕಿಲ್ಲ. ಏನು ಸಮಸ್ಯೆ ಎಂಬುದೂ ಗೊತ್ತಿಲ್ಲ’ ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎನ್.ನರಸಿಂಹಸ್ವಾಮಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕುಮಾರಸ್ವಾಮಿ ಅವರಿಗೂ ವಿಷಯ ಗೊತ್ತಿದೆ. ಮೊದಲ ಪಟ್ಟಿ ಅಂತಿಮವೇನಲ್ಲ, ಸಕ್ರಿಯರಲ್ಲದವರನ್ನು ಬದಲಾಯಿಸಬೇಕಾಗುತ್ತದೆ ಎಂದಿದ್ದಾರೆ. ಬೇರೆ ಆಕಾಂಕ್ಷಿಗಳೂ ಅವರ ಸಂಪರ್ಕದಲ್ಲಿದ್ದಾರೆ. ಅಭ್ಯರ್ಥಿ ಬದಲಾಯಿಸುವ ಸಾಧ್ಯತೆ ಇದೆ’ ಎಂದರು. ಈ ಬಗ್ಗೆ ಪ್ರತಿಕ್ರಿಯೆಗೆ ಅಭಿಷೇಕ್ ಲಭ್ಯವಾಗಲಿಲ್ಲ.

ಪ್ರಜಾ ಪತ್ರ

ನಮ್ಮ ಭವಿಷ್ಯ ವರ್ತಮಾನದಲ್ಲಿದೆ



ರಾಜಕೀಯವೆಂದರೆ ಮೂಗು ಮುರಿಯುವವರೇ ಹೆಚ್ಚು. ಅನುಭವ ಇರಲಿ ಇಲ್ಲದಿರಲಿ ಎಲ್ಲರೂ ಮನಬಂದಂತೆ ಮಾತನಾಡುವವರೇ. ರಾಜಕೀಯ ವ್ಯವಸ್ಥೆ ಕೇವಲ ವೈಯಕ್ತಿಕ ಹಿತಾಸಕ್ತಿಯಿಂದ ಸೃಷ್ಟಿ ಆದದ್ದಲ್ಲ, ಅದು ಸಂಘಟಿತ ಪ್ರಯತ್ನದ ಫಲ. ಹೀಗಾಗಿಯೇ ನಮಗೆ ಯಾವ ರೀತಿಯ ಸರ್ಕಾರ ಬೇಕು ಎಂಬುದನ್ನು ನಾವೇ ತೀರ್ಮಾನಿಸಬೇಕು. ಈ ವಿಷಯದಲ್ಲಿ ಬೇರೊಬ್ಬರ ಪ್ರಭಾವಕ್ಕೆ ಅಥವಾ ಒತ್ತಡಕ್ಕೆ ಮಣಿಯಬಾರದು. ಆದ್ದರಿಂದ ಯಾವುದೇ ರಾಜಕೀಯ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಏನನ್ನು ಹೇಳುತ್ತದೆ? ಅವುಗಳು ಎಷ್ಟರಮಟ್ಟಿಗೆ ಜಾರಿಯಾಗಬಹುದು ಎಂಬುದನ್ನು ಮತದಾರರು ಗ್ರಹಿಸಬೇಕು. ಬಳಿಕ ಸಮುದಾಯ ಮತ್ತು ದೇಶದ ಒಳಿತನ್ನು ಕಾಪಾಡುವ ನಿಟ್ಟಿನಲ್ಲಿ ಮತ ಚಲಾಯಿಸಬೇಕು.

ಯಾವುದೇ ರಾಜಕೀಯ ಪಕ್ಷ ಅಥವಾ ರಾಜಕಾರಣಿಯ ಪ್ರಲೋಭನೆಗೆ ಹಾಗೂ ಆಮಿಷಕ್ಕೆ ಒಳಗಾಗದೆ ಪ್ರಚಲಿತ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿ ತುಲನೆ ಮಾಡಿ ನಮ್ಮ ಭವಿಷ್ಯವನ್ನು ನಿರ್ಧರಿಸಬೇಕು. ನಮ್ಮ ಭವಿಷ್ಯ ವರ್ತಮಾನದಲ್ಲಿಯೇ ಇದೆ ಎನ್ನುವುದು ಅರಿವಿದ್ದರೆ ಮಾತ್ರ ಜವಾಬ್ದಾರಿಯುತ ಮತದಾರರಾಗಿ ನಡೆದುಕೊಳ್ಳಲು ಸಾಧ್ಯ.

ಸುವರ್ಣ ವಿ. ಡಿ., ಮಂಡ್ಯ

ಅಯೋಗ್ಯರ ಆಯ್ಕೆ ಬೇಡ



ಈಗಾಗಲೇ ಅಭ್ಯರ್ಥಿಗಳು ಮತದಾರರಿಗೆ ಆಮಿಷಗಳನ್ನು ಒಡ್ಡುವ ಮೂಲಕ ಪ್ರಚಾರದಲ್ಲಿ ತೊಡಗಿದ್ದಾರೆ. ಮತದಾರ ನಾಡಿನ ಗೌರವಾನ್ವಿತ ಪ್ರಜೆ. ಮತದಾನ ಮಾಡುವುದು ಪ್ರತಿಯೊಬ್ಬರ ಪವಿತ್ರವಾದ ಹಕ್ಕು. ನಮ್ಮ ಈ ಹಕ್ಕನ್ನು ಆಮಿಷಗಳಿಗೆ ಮಾರಿಕೊಂಡರೆ ಅಯೋಗ್ಯರು ಗೆದ್ದು, ಐದು ವರ್ಷ ಸರ್ಕಾರ ಮತ್ತು ಸಾರ್ವಜನಿಕರನ್ನು ಸುಲಿಗೆ ಮಾಡುತ್ತಾರೆ. ಆದ್ದರಿಂದ, ಮತದಾರರು ಜಾಗೃತರಾಗಬೇಕು. ಅಭ್ಯರ್ಥಿಗಳ ಸ್ವವಿವರಗಳನ್ನೊಮ್ಮೆ ಪರಿಶೀಲಿಸಿ ಒಳ್ಳೆಯ ವ್ಯಕ್ತಿತ್ವವುಳ್ಳ ನಿಷ್ಠಾವಂತರನ್ನು ಆಯ್ಕೆ ಮಾಡಬೇಕು. ಪ್ರಜಾಪ್ರಭುತ್ವ ಬಲಪಡಿಸುವ ಕೈಂಕರ್ಯದಲ್ಲಿ ಪ್ರತಿಯೊಬ್ಬರು ಕೈಜೋಡಿಸಬೇಕು.

ಎಸ್.ಜಿ. ಹವಾಲದಾರ, ಬಾಗಲಕೋಟೆ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಮತ ಆಮಿಷ, ಸಿಕ್ಕಿದ್ದೇನು?

₹13.33 ಲಕ್ಷ ನಗದು ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕೊಗನೊಳಿ ಚೆಕ್‌ಪೋಸ್ಟ್ ಬಳಿ ವಶ

₹7.68 ಲಕ್ಷ ಮೌಲ್ಯದ ಸೀರೆಗಳು ಗದಗ ಜಿಲ್ಲೆಯ ಬಿಂಕದಕಟ್ಟಿ ಚೆಕ್‌ಪೋಸ್ಟ್

ಗಾಳಿ ಮಾತು

ಕೋಲಾರ: ಸಿದ್ದರಾಮಯ್ಯ ಕಟ್ಟಿಹಾಕುವ ಕಸರತ್ತು!



ಕೋಲಾರ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪರ್ಧಿಸುತ್ತಾರೆ ಎಂಬ ವಿಚಾರ ನಾಲ್ಕೈದು ತಿಂಗಳಿನಿಂದ ಚಾಲ್ತಿಯಲ್ಲಿದೆ. ಆದರೆ, ಅವರ ಎದುರಾಳಿಯಾಗಿ ಸ್ಪರ್ಧಿಸುವ ಅಭ್ಯರ್ಥಿಗಳು ಮಾತ್ರ ವಾರಕ್ಕೊಬ್ಬರು ಸೃಷ್ಟಿಯಾಗುತ್ತಿದ್ದಾರೆ.

ಸಿದ್ದರಾಮಯ್ಯ ಕೋಲಾರದಲ್ಲಿ ಕಣಕ್ಕಿಳಿದರೆ ಜೆಡಿಎಸ್‌ನಿಂದ ಎಚ್.ಡಿ.ಕುಮಾರಸ್ವಾಮಿ ಅವರೇ ಸ್ಪರ್ಧಿಸುತ್ತಾರೆ ಎಂಬ ವದಂತಿ ಆರಂಭದಲ್ಲಿ ಹರಿದಾಡಿತ್ತು. ಖುದ್ದಾಗಿ ಕುಮಾರಸ್ವಾಮಿ ಸ್ಪಷ್ಟನೆ ನೀಡಿ 'ನಾನೇಕೆ ಸ್ಪರ್ಧೆ ಮಾಡಲಿ, ಸಾಮಾನ್ಯ ಕಾರ್ಯಕರ್ತನನ್ನು ಕಣಕ್ಕಿಳಿಸುತ್ತೇನೆ' ಎಂದಿದ್ದರು. ಇದಾಗಿ ಕೆಲವೇ ದಿನಗಳಲ್ಲಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಹೆಸರು ಹರಿದುಬಂತು. 'ಕೋಲಾರದಲ್ಲಿ ಮುಸ್ಲಿಂ ಮತದಾರರು ಹೆಚ್ಚಿರುವುದರಿಂದ ಸಿದ್ದರಾಮಯ್ಯ ಅವರನ್ನು ಕಟ್ಟಿಹಾಕಲು ಕುಮಾರಸ್ವಾಮಿ ತಂತ್ರಗಾರಿಕೆ ರೂಪಿಸಿದ್ದಾರೆ' ಎಂದು ಕಾರ್ಯಕರ್ತರು ಮಾತನಾಡಿಕೊಳ್ಳುವ ಹಂತಕ್ಕೆ ತಲುಪಿತು. ಇನ್ನು ಕೆಲವರು, 'ಸಿದ್ದರಾಮಯ್ಯ– ಇಬ್ರಾಹಿಂ ಹಳೆ ದೋಸ್ತಿಗಳು. ಅವರು ಪರಸ್ಪರ ಸ್ಪರ್ಧೆ ಮಾಡಲಾರರು. ಇಬ್ರಾಹಿಂ ಪುತ್ರನಿಗೆ ಹುಮನಾಬಾದ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಸಹಕಾರ ನೀಡುತ್ತಾರಂತೆ' ಎಂದು ಮಾತನಾಡಿಕೊಳ್ಳತೊಡಗಿದರು.

ಅಷ್ಟರಲ್ಲಿ ವಿಧಾನ ಪರಿಷತ್ ಸದಸ್ಯ ಬಿಜೆಪಿಯ ವೈ.ಎ.ನಾರಾಯಣಸ್ವಾಮಿ ಹೆಸರು ಬಂದು ಹೋಯಿತು. ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಕೋಲಾರಕ್ಕೆ ಭೇಟಿ ನೀಡಿ ಹೋದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಹೆಸರು ಮೇಲೆ ಬಂತು. 'ಸಿದ್ದರಾಮಯ್ಯ–ಮುನಿರತ್ನ' ಹಣಾಹಣಿ ಎಂದು ಬಿಜೆಪಿ ಕಾರ್ಯಕರ್ತರು ಮಾತನಾಡಿಕೊಳ್ಳಲು ಶುರು ಮಾಡಿದರು. ಅದಕ್ಕೆ ತಕ್ಕಂತೆ ಮುನಿರತ್ನ, 'ಹೈಕಮಾಂಡ್ ಸೂಚಿಸಿದರೆ ಎಲ್ಲಿಯಾದರೂ ಸ್ಪರ್ಧೆಗೆ ಸಿದ್ಧ' ಎನ್ನತೊಡಗಿದರು.

ತೀರಾ ಈಚೆಗೆ ಕೋಲಾರದ ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ಹೆಸರು ಹರಿದಾಡತೊಡಗಿದೆ. ಸಿದ್ದರಾಮಯ್ಯ ವಿರುದ್ಧ ಸ್ಪರ್ಧೆಗೆ ಸಿದ್ಧರಾಗುವಂತೆ ಹೈಕಮಾಂಡ್‌ನಿಂದ ಸೂಚನೆ ಬಂದಿದೆ ಎಂಬ ವದಂತಿ ಸುತ್ತಾಡುತ್ತಿದೆ.

ಇನ್ನೊಂದು ಕಡೆ ಕಳೆದ ವರ್ಷ ಬಿಜೆಪಿ ಸೇರಿ, ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿರುವ ವರ್ತೂರು ಪ್ರಕಾಶ್ ಮಾತ್ರ ಗ್ರಾಮಗಳಲ್ಲಿ ಸುತ್ತಾಡುತ್ತಾ ಪ್ರಚಾರದಲ್ಲಿ ತೊಡಗಿದ್ದಾರೆ. 2018ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಓಂಶಕ್ತಿ ಚಲಪತಿ ತಮಗೂ ಟಿಕೆಟ್ ಬೇಕು ಎನ್ನುತ್ತಿದ್ದಾರೆ. ಕೋಲಾರದಲ್ಲಿ ಇದೇ 10ರಂದು ನಡೆಯಬೇಕಿದ್ದ ಕಾಂಗ್ರೆಸ್ ಜೈ ಭಾರತ್ ಸಮಾವೇಶದಲ್ಲಿ ಕೋಲಾರದಿಂದ ಸಿದ್ದರಾಮಯ್ಯ ಸ್ಪರ್ಧೆ ಕುರಿತು ರಾಹುಲ್ ಗಾಂಧಿ ಹೈಕಮಾಂಡ್ ನಿರ್ಧಾರವನ್ನು ಘೋಷಣೆ ಮಾಡಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಸಮಾವೇಶವನ್ನು ಏ.16ಕ್ಕೆ ಮುಂದೂಡಲಾಗಿದೆ!

ಏದುಸಿರು ಬಿಡುವ ಪ್ರಜೆಗಳಿಗೆ ಪ್ರಾಣವಾಯುವಾದೀತೆ ರಾಜಕೀಯ ಪಕ್ಷಗಳ ಭರವಸೆಗಳು

ಮತ ಕೊಯ್ಲಿಗೆ ಆಮಿಷದ ಪ್ರಣಾಳಿಕೆ

• ಸಚ್ಚಿದಾನಂದ ಕುರಗುಂದ

ಪಕ್ಷಗಳು ಪ್ರಕಟಿಸುವ ಪ್ರಣಾಳಿಕೆಗಳೇ ಚುನಾವಣೆಗಳಲ್ಲಿ ಸೋಲು–ಗೆಲುವನ್ನು ನಿರ್ಧರಿಸುವ ಕಾಲವಿತ್ತು. ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳು ಸಿದ್ಧಾಂತ ಮತ್ತು ಬದ್ಧತೆಯನ್ನು ಪ್ರತಿನಿಧಿಸಬೇಕು ಎಂದು ಜನರೂ ಬಯಸುತ್ತಿದ್ದರು. ಆದರೆ, ವರ್ಷಗಳು ಕಳೆದಂತೆಲ್ಲಾ ಚುನಾವಣಾ ಪ್ರಣಾಳಿಕೆಗಳು ಹಗುರವಾಗುತ್ತಿವೆ. ಟೊಳ್ಳು ಭರವಸೆಗಳನ್ನು ಮುದ್ರಿಸಿ ಮತದಾರರ ಮುಂದಿಟ್ಟು ಚುನಾವಣೆ ಮುಗಿಸುವುದನ್ನೇ ರಾಜಕೀಯ ಪಕ್ಷಗಳು ರೂಢಿ ಮಾಡಿಕೊಳ್ಳುತ್ತಿವೆ. 2023ರ ವಿಧಾನಸಭಾ ಚುನಾವಣೆಗೆ ತಿಂಗಳಷ್ಟೇ ಬಾಕಿ ಉಳಿದಿದೆ. ಈಗ ಮತ್ತೆ ರಾಜ್ಯದಲ್ಲಿ ರಾಜಕೀಯ ಪಕ್ಷಗಳ ಚುನಾವಣಾ ಭರವಸೆ ಮತ್ತು ಪ್ರಣಾಳಿಕೆಗಳ 'ತೂಕ'ದ ಕುರಿತು ಚರ್ಚೆ ಆರಂಭವಾಗಿದೆ.

ಎಲ್ಲ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಬಣ್ಣ ಬಣ್ಣದ ಕನಸುಗಳನ್ನು ಬಿಡಿಸಿಡುತ್ತವೆ. ಜನಸಾಮಾನ್ಯರ ಬದುಕು ಹಸನುಗೊಳಿಸಿ, ಸಂಪದ್ಭರಿತ ನಾಡು ಕಟ್ಟುವ ಸಂಕಲ್ಪ ತೋರಿಸುತ್ತವೆ. ಆದರೆ, ಕೊಟ್ಟ ಮಾತು, ಬರಹರೂಪಿ ವಚನಗಳಿಗೆ ಬದ್ಧವಾಗುವ, ಅದನ್ನೊಂದು ದೊಡ್ಡ ಅನುಶಾಸನವೆಂದು ಬಗೆಯುವವರ ಸಂಖ್ಯೆ ಕಡಿಮೆ. ಇದರಿಂದ, ಎಷ್ಟೇ ಮಹತ್ವದ ಅಂಶಗಳನ್ನು ಪ್ರಣಾಳಿಕೆ ಒಳಗೊಂಡಿದ್ದರೂ ಜನರ ಮನಸ್ಸನ್ನು ಅದು ತಟ್ಟುವುದಿಲ್ಲ. ಪ್ರಣಾಳಿಕೆಗಳಲ್ಲಿನ ಘೋಷಣೆಗಳು ಕ್ರಾಂತಿಕಾರಿ ಎನ್ನುವಂತಿದ್ದರೂ ಮತದಾರರು ಗಂಭೀರವಾಗಿ ಪರಿಗಣಿಸುತ್ತಿಲ್ಲ.

ಜನಪರ ಕಾಳಜಿ ಹಾಗೂ ಸಾಮಾಜಿಕ ಹೋರಾಟಗಳ ಹಿನ್ನೆಲೆಗಿಂತ ಜೇಬು ಗಟ್ಟಿ ಇರುವವರೇ ಚುನಾವಣೆಗಳಲ್ಲಿ ಸ್ಪರ್ಧಿಗಳಾಗಿರುವುದು ಪ್ರಣಾಳಿಕೆಯ ಚಿಂತನೆಗಳನ್ನು ಮೂಲೆಗುಂಪಾಗಿಸಿವೆ. ಮತದಾರರು ಸಹ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳ ಕುರಿತು ಚರ್ಚಿಸುವ ಅಥವಾ ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಇಂಥ ಮೂಲಭೂತ ಮಿತಿಗಳ ನಡುವೆಯೂ ರಾಜಕೀಯ ಪಕ್ಷಗಳು ಪ್ರಣಾಳಿಕೆ ಬಿಡುಗಡೆ ಮಾಡುತ್ತಿವೆ. ಘೋಷಿಸುವ ಯೋಜನೆಗಳಿಗೂ ಮತ್ತು ಅನುಷ್ಠಾನದ ಹಂತದಲ್ಲಿನ ವಾಸ್ತವ ಅಂಶಗಳಿಗೂ ಅಜಗಜ ವ್ಯತ್ಯಾಸಗಳಿರುತ್ತವೆ. ದೂರದೃಷ್ಟಿ ಇಲ್ಲದ, ಕೇವಲ ಮತದಾರರನ್ನು ಸೆಳೆಯಲು ಆದ್ಯತೆ ನೀಡುವ ಪ್ರಣಾಳಿಕೆಗಳು ಹಣಕಾಸಿನ ಅಗತ್ಯತೆ ವಿಷಯಗಳ ಬಗ್ಗೆ ವಿಶ್ಲೇಷಿಸುವುದಿಲ್ಲ. ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಚ್ಛಾಶಕ್ತಿ ರಾಜಕೀಯ ಪಕ್ಷಗಳಲ್ಲಿ ಕಾಣುವವರೆಗೂ ಪ್ರಣಾಳಿಕೆಗಳ ಮೇಲೆ ನಂಬಿಕೆ ಮೂಡುವುದಿಲ್ಲ ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

ಮತದಾರರನ್ನು ತಕ್ಷಣಕ್ಕೆ ಓಲೈಸಲು ರಾಜಕೀಯ ಪಕ್ಷಗಳು ಕಂಡುಕೊಂಡಿರುವ ಮತ್ತೊಂದು ಸುಲಭ ದಾರಿ 'ಉಚಿತ ಕೊಡುಗೆ'ಗಳು. ಈ ಭರವಸೆಗಳಿಗೂ ಸಂಪನ್ಮೂಲ ಕ್ರೋಡೀಕರಣ ಮತ್ತು ಬಜೆಟ್‌ನಲ್ಲಿ ಒದಗಿಸುವ ಅನುದಾನದ ವಿವರಗಳನ್ನು ಮತದಾರರ ಮುಂದೆ ಇರಿಸುವುದಿಲ್ಲ. ಉಚಿತ ಕೊಡುಗೆಗಳ ಭರಪೂರ ಘೋಷಣೆಗಳು ಈ ಚುನಾವಣೆಯಲ್ಲಿ ಜೋರಾಗಿ ಸದ್ದು ಮಾಡುತ್ತಿವೆ. ಚುನಾವಣೆ ಘೋಷಣೆಗೆ ತಿಂಗಳಿರುವಾಗಲೇ ಭರವಸೆಗಳ ಘೋಷಣೆಯೂ ಆರಂಭವಾಗಿತ್ತು.

'ಉಚಿತ ಕೊಡುಗೆ ನೀಡುವುದು ಬೇಜವಾಬ್ದಾರಿ ಸಂಸ್ಕೃತಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದು ಚರ್ಚೆಗೆ ಗ್ರಾಸವಾಗಿತ್ತು. ಈ ಹೇಳಿಕೆ ನಂತರ, ಚುನಾವಣಾ ಆಯೋಗವು, ಉಚಿತ ಕೊಡುಗೆಯ ಘೋಷಣೆಗಳನ್ನು ಸಹ ಮಾದರಿ ನೀತಿ ಸಂಹಿತೆ ವ್ಯಾಪ್ತಿಗೆ ತರುವ ಬಗ್ಗೆ ಕಳೆದ ವರ್ಷ ಅಕ್ಟೋಬರ್‌ನಲ್ಲಿ ರಾಜಕೀಯ ಪಕ್ಷಗಳ ಅಭಿಪ್ರಾಯ ಕೋರಿತ್ತು. ಮತದಾರರ ಮೇಲೆ ಪ್ರಭಾವ ಬೀರುವ ವಿಷಯ ಇದಾಗಿರುವುದರಿಂದ ಪ್ರಣಾಳಿಕೆಯಲ್ಲಿ ಘೋಷಿಸುವ ಯೋಜನೆಗಳಿಗೆ ಹಣಕಾಸಿನ ಲಭ್ಯತೆಯ ವಿವರಗಳನ್ನು ಮತದಾರರಿಗೆ ನೀಡುವ ಬಗ್ಗೆ ಅಭಿಪ್ರಾಯ ಸಲ್ಲಿಸುವಂತೆ ರಾಜಕೀಯ ಪಕ್ಷಗಳಿಗೆ ಸೂಚಿಸಲಾಗಿತ್ತು. 'ಉಚಿತ ಕೊಡುಗೆಗಳ ಮಹಾಪೂರ ಹರಿಸುವ ಸಂದರ್ಭದಲ್ಲಿ ಆಯೋಗವು ಮೌನ ವೀಕ್ಷಕ ರೀತಿ ಕುಳಿತುಕೊಳ್ಳಲು ಸಾಧ್ಯವಿಲ್ಲ' ಎಂದು ಅದು ಅಭಿಪ್ರಾಯಪಟ್ಟಿತ್ತು. ಉಚಿತ ಕೊಡುಗೆಗಳನ್ನು ನಿಯಂತ್ರಿಸುವ ಕ್ರಮಗಳಿಗೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ದುರ್ಬಲ ವರ್ಗದವರಿಗೆ ನೆರವಾಗಲು ಇಂತಹ ಯೋಜನೆಗಳು ಅಗತ್ಯ. ತೆರಿಗೆದಾರರ ಹಣವನ್ನು ಬಳಸಿಕೊಂಡು ಜನರಿಗೆ ಸೌಲಭ್ಯಗಳನ್ನು ಕಲ್ಪಿಸಲು ಬಳಸಲಾಗುತ್ತಿದೆ ಎಂದು ಪ್ರತಿಪಾದಿಸಿದ್ದವು. ಸುಪ್ರೀಂ ಕೋರ್ಟ್ ಸಹ ಉಚಿತ ಕೊಡುಗೆಗಳ ವಿಷಯ ಮಹತ್ವದ್ದಾಗಿದ್ದು, ಈ ಬಗ್ಗೆ ವಿಸ್ತೃತ ಚರ್ಚೆ ನಡೆಯಬೇಕಾಗಿದೆ ಎಂದು ಹೇಳಿದೆ. ಜನ ಕಲ್ಯಾಣ ಯೋಜನೆಗಳಿಗೂ ಮತ್ತು ಮತಕ್ಕಾಗಿ ಘೋಷಿಸುವ ಉಚಿತ ಕೊಡುಗೆಗಳ ನಡುವಣ ವ್ಯತ್ಯಾಸದ ಬಗ್ಗೆ ವಿಶ್ಲೇಷಣೆ ನಡೆಸುವುದು ಅಗತ್ಯವಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.



ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಪ್ರಕಟಿಸುವ ಪ್ರಣಾಳಿಕೆ ತಮಾಷೆಯ ವಿಷಯವಾಗಿದೆ. ಮತದಾರರು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಚುನಾವಣೆ ಎನ್ನುವುದು ನಿರ್ದಿಷ್ಟ ಅಂಶಗಳ ಮೇಲೆ ನಡೆಯಬೇಕು. ಆಗ ಮಾತ್ರ ಪ್ರಣಾಳಿಕೆಗೂ ಮಹತ್ವ ದೊರೆಯುತ್ತದೆ. ಆದರೆ, ದೇಶದಲ್ಲಿ ಆ ರೀತಿ ನಡೆಯುತ್ತಿಲ್ಲ. ಬೇರೆ, ಬೇರೆ ಕಾರಣಕ್ಕೆ ಜನರು ಪಕ್ಷಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಮೆರಿಕ ಮುಂತಾದ ರಾಷ್ಟ್ರಗಳಲ್ಲಿ ಸಿದ್ಧಾಂತ, ನಿಲುವುಗಳನ್ನು ಆಧರಿಸಿ ಪಕ್ಷಗಳನ್ನು ಮತದಾರರು ಆಯ್ಕೆ ಮಾಡಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಪರಿಸ್ಥಿತಿ ಭಿನ್ನ. ರಾಷ್ಟ್ರೀಯ ಮತ್ತು ರಾಜ್ಯ ನಾಯಕರು ಹಾಗೂ ಅಭ್ಯರ್ಥಿಗಳ ಜಾತಿ, ಹಣಬಲ ಮಹತ್ವ ಪಡೆಯುತ್ತವೆ.

ಪ್ರೊ. ಜೆ.ಎಸ್. ಸದಾನಂದ
ನಿವೃತ್ತ ಪ್ರಾಧ್ಯಾಪಕ, ಕುವೆಂಪು ವಿಶ್ವವಿದ್ಯಾಲಯ

'ಉಚಿತ ಕೊಡುಗೆ ತಪ್ಪೇನಲ್ಲ'

2006ರಲ್ಲಿ ತಮಿಳುನಾಡಿನಲ್ಲಿ ಬಡವರಿಗೆ ಉಚಿತವಾಗಿ ಟಿ.ವಿ. ಸೆಟ್‌ಗಳನ್ನು ನೀಡುವುದಾಗಿ ಪ್ರಕಟಿಸಿ ಡಿಎಂಕೆ ಅಧಿಕಾರಕ್ಕೆ ಬಂದಿತ್ತು. ಈ ವಿಷಯವೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, 'ರಾಜ್ಯ ನಿರ್ದೇಶಕ ತತ್ವಗಳು' ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಇಂತಹ ಯೋಜನೆಗಳನ್ನು ಜಾರಿಗೊಳಿಸುವ ಅವಕಾಶವಿದೆ ಮತ್ತು ಶಾಸಕಾಂಗ ಅನುಮೋದನೆ ನೀಡುವ ಯೋಜನೆಗಳನ್ನು ಪ್ರಶ್ನಿಸಲು ಅವಕಾಶವಿಲ್ಲ ಎಂದು 2013ರಲ್ಲಿ ಅಭಿಪ್ರಾಯಪಟ್ಟಿತ್ತು. ಜತೆಗೆ, ಚುನಾವಣೆಗಳಲ್ಲಿ ನೀಡುವ ಭರವಸೆಗಳನ್ನು 'ಭ್ರಷ್ಟ ಪದ್ಧತಿ' ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಪೀಠ ಹೇಳಿತ್ತು.

ಉಚಿತ ಕೊಡುಗೆಗಳು, ಹತ್ತಾರು ಭರವಸೆಗಳಿಂದ ಮತದಾರರನ್ನು ಸೆಳೆಯಲು ಪ್ರಯತ್ನಿಸುತ್ತಿರುವ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದಾಗ ತಮ್ಮ ಬದ್ಧತೆಯನ್ನು ಪ್ರಕಟಿಸಬೇಕು ಎನ್ನುವುದು ಸಾಮಾನ್ಯ ಮತದಾರರ ಆಶಯ.

ಕಾಂಗ್ರೆಸ್ ಆಶ್ವಾಸನೆಗಳೇನು?

- ಪ್ರತಿ ಮನೆಗೂ 200 ಯುನಿಟ್ ಉಚಿತ ವಿದ್ಯುತ್ ನೀಡುವ 'ಗೃಹ ಜ್ಯೋತಿ'
- ಪ್ರತಿ ಮನೆ ಯಜಮಾನಿಗೆ ತಿಂಗಳಿಗೆ ₹2000 'ಗೃಹ ಲಕ್ಷ್ಮಿ' ಯೋಜನೆ
- ಪ್ರತಿ ತಿಂಗಳು ಪ್ರತಿ ವ್ಯಕ್ತಿಗೆ 10 ಕೆ.ಜಿ ಅಕ್ಕಿ ನೀಡುವ 'ಅನ್ನಭಾಗ್ಯ'
- ಪ್ರತಿ ತಿಂಗಳು ನಿರುದ್ಯೋಗಿ ಪದವೀಧರರಿಗೆ ₹3000 ಮತ್ತು ಡಿಪ್ಲೊಮಾ ಪಡೆದವರಿಗೆ ₹1,500 ನೀಡುವ 'ಯುವ ನಿಧಿ' ಯೋಜನೆ
- ದುಡಿಯುವ ಮಹಿಳೆಯರಿಗೆ ಉಚಿತ್ ಬಸ್ ಪಾಸ್ ವಿತರಣೆಗೆ ₹ 1,000 ಕೋಟಿ.
- 'ವಿದ್ಯಾವಾಹಿನಿ' ಯೋಜನೆಯಡಿ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್.
- ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಸ್ವಯಂನಿವೃತ್ತಿ ವೇಳೆ ಗ್ರ್ಯಾಚ್ಯುಟಿ.
- 'ಮುಖ್ಯಮಂತ್ರಿ ವಿದ್ಯಾಶಕ್ತಿ' ಯೋಜನೆಯಡಿ ಸರ್ಕಾರಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಉಚಿತ ಶಿಕ್ಷಣ.

ಬಿಜೆಪಿ ಸರ್ಕಾರದ ಭರವಸೆಗಳೇನು?

- ಬಡ್ಡಿರಹಿತ ಸಾಲದ ಮಿತಿ ₹ 3 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಳ.
- ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವ ರೈತರಿಗೆ 'ಭೂ ಸಿರಿ' ಯೋಜನೆಯಡಿ ₹ 10 ಸಾವಿರ ಸಹಾಯಧನ
- ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಗಳಿಗೆ ಜೀವನ್ ಜ್ಯೋತಿ ವಿಮಾ ಯೋಜನೆ
- ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ರಫ್ತು ಹಾಗೂ ಸಂಸ್ಕರಣೆ ಉತ್ತೇಜಿಸಲು ₹ 100 ಕೋಟಿ
- ಕನಿಷ್ಠ ಬೆಂಬಲ ಬೆಲೆ ಆವರ್ತನಿಧಿ ಮೊತ್ತ ₹ 3,500 ಕೋಟಿಯಿಂದ ₹ 5,000 ಕೋಟಿಗೆ ಹೆಚ್ಚಳ
- ಶ್ರಮ ಶಕ್ತಿ ಯೋಜನೆಯಡಿ ಮಹಿಳಾ ಕೃಷಿ ಕಾರ್ಮಿಕರಿಗೆ ತಿಂಗಳಿಗೆ ₹ 500 ಸಹಾಯಧನ.

ಜೆಡಿಎಸ್ ಆಶ್ವಾಸನೆಗಳೇನು?

ರಾಜ್ಯದ ಸಮಗ್ರ ಅಭಿವೃದ್ಧಿಗೆ 'ಪಂಚರತ್ನ' ಯೋಜನೆಗಳು

- ಶಿಕ್ಷಣವೇ ಆಧುನಿಕ ಶಕ್ತಿ
- ಆರೋಗ್ಯವೇ ಸಂಪತ್ತು
- ರೈತ ಚೈತನ್ಯ
- ಯುವ ನವ ಮಾರ್ಗ
- ಮಹಿಳಾ ಸಬಲೀಕರಣ
- ವಸತಿಯ ಆಸರೆ

ಎಎಪಿ ಭರವಸೆಗಳೇನು?

- ಪ್ರತಿ ಮನೆಗೆ 300 ಯುನಿಟ್ ಉಚಿತ ವಿದ್ಯುತ್
- ನಿರುದ್ಯೋಗಿಗಳಿಗೆ ತಿಂಗಳಿಗೆ ₹3000 ಭತ್ಯೆ
- ಗುಣಮಟ್ಟದ ಆರೋಗ್ಯ ಸೇವೆಗಾಗಿ ಕ್ಲಿನಿಕ್‌ಗಳು
- ಸರ್ಕಾರಿ ಶಾಲೆಗಳ ಅಭಿವೃದ್ಧಿ
- ಹಳೆ ಪಿಂಚಣಿ ಯೋಜನೆ ಜಾರಿ


ದಿನಕ್ಕೆ ಎರಡು ಪಕ್ಷ ಬದಲಿಸುವ ಗ್ರಾಮಸ್ಥರು!

ಪ್ರಜಾವಾಣಿ ವಾರ್ತೆ

ಹೊಸಕೋಟೆ (ಬೆಂ. ಗ್ರಾಮಾಂತರ): ಪಕ್ಷಕ್ಕಿಂತ ಕುಟುಂಬ ರಾಜಕಾರಣದ ಪ್ರತಿಷ್ಠೆಯ ಕಣವಾಗಿರುವ ಹೊಸಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮಸ್ಥರು ದಿನಕ್ಕೆ ಎರಡು ಪಕ್ಷ ಬದಲಾಯಿಸುತ್ತಾರೆ. ಮುಂಜಾನೆಗೊಂದು ಪಕ್ಷ, ಸಂಜೆಗೊಂದು ಪಕ್ಷ ಎಂದು ಪಕ್ಷದಿಂದ ಪಕ್ಷಕ್ಕೆ ಜಿಗಿಯುತ್ತಿರುತ್ತಾರೆ!

ಶಾಸಕ ಶರತ್ ಬಚ್ಚೇಗೌಡ ಭೇಟಿಯ ವೇಳೆ ಸಾಮೂಹಿಕವಾಗಿ ಕಾಂಗ್ರೆಸ್‌ಗೆ ಸೇರ್ಪಡೆಯಾಗುವ ಗ್ರಾಮಸ್ಥರು, ಸಚಿವ ಎಂ.ಟಿ.ಬಿ ನಾಗರಾಜ್ ಮತ್ತು ಪುತ್ರ ನಿತೀಶ್ ಪುರುಷೋತ್ತಮ್ ಗ್ರಾಮಕ್ಕೆ ಬಂದರೆ ಸಾಮೂಹಿಕವಾಗಿ ಬಿಜೆಪಿ ಸೇರುತ್ತಾರೆ. ಹೀಗೆ ದಿನಕ್ಕೆ ಎರಡು ಪಕ್ಷ ಬದಲಾಯಿಸುತ್ತಾರೆ!

ಹೊಸಕೋಟೆ ವಿಧಾನಸಭಾ ಕ್ಷೇತ್ರವು ಸಂಸದ ಬಿ.ಎನ್. ಬಚ್ಚೇಗೌಡ ಮತ್ತು ಎಂ.ಟಿ.ಬಿ ನಾಗರಾಜ್



ಶರತ್ ಬಚ್ಚೇಗೌಡ



ಎಂ.ಟಿ.ಬಿ. ನಾಗರಾಜ್

ಕುಟುಂಬಗಳ ರಾಜಕೀಯ ಪ್ರತಿಷ್ಠೆಯ ಕಣ. ಶಾಸಕ ಶರತ್ ಬಚ್ಚೇಗೌಡ ಭೇಟಿ ನೀಡಿದಾಗ ಗ್ರಾಮಸ್ಥರು ಕೈಯಲ್ಲಿ ಕಾಂಗ್ರೆಸ್ ಬಾವುಟ, ಹೆಗಲ ಮೇಲೆ ಕಾಂಗ್ರೆಸ್ ಶಾಲು ಹಾಕಿಕೊಂಡು ಓಡಾಡುತ್ತಾರೆ. ಸಚಿವ ಎಂ.ಟಿ.ಬಿ. ನಾಗರಾಜ್ ಗ್ರಾಮಕ್ಕೆ ಬಂದಾಗ ಬಿಜೆಪಿ ಬಾವುಟ, ಹೆಗಲ ಮೇಲೆ ಬಿಜೆಪಿ ಶಾಲು ಬರುತ್ತದೆ. ಅಧಿಕೃತ ಪಕ್ಷ ಸೇರ್ಪಡೆ ಕಾರ್ಯಕ್ರಮವೂ ನಡೆಯುತ್ತದೆ. ಇಂದು ಬಿಜೆಪಿಯಲ್ಲಿದ್ದವರು ನಾಳೆ ಕಾಂಗ್ರೆಸ್‌ನಲ್ಲಿರುತ್ತಾರೆ.

ಹೊಸಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಗಳು ಅದಲು ಬದಲು ಆಗಿದ್ದಾರೆ. 2018ರಲ್ಲಿ ನಡೆದ ವಿಧಾನ ಚುನಾವಣೆಯಲ್ಲಿ ಎಂ.ಟಿ.ಬಿ. ನಾಗರಾಜ್ ಕಾಂಗ್ರೆಸ್‌ನಿಂದ ಮತ್ತು ಶರತ್ ಬಚ್ಚೇಗೌಡ ಬಿಜೆಪಿಯಿಂದ ಸ್ಪರ್ಧಿಸಿದ್ದರು. ಆಗ ಗೆಲುವು ಸಾಧಿಸಿದ್ದ ಎಂ.ಟಿ.ಬಿ ನಾಗರಾಜ್ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರು.

2019ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯ ಎಂ.ಟಿ.ಬಿ ನಾಗರಾಜ್ ವಿರುದ್ಧ ಶರತ್ ಬಚ್ಚೇಗೌಡ ಪಕ್ಷೇತರರಾಗಿ ಗೆಲುವು ಸಾಧಿಸಿದ್ದರು. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಪದ್ಮಾವತಿ ಭೈರತಿ ಸುರೇಶ್ ಅವರು ಎಂ.ಟಿ.ಬಿ. ಗೆಲುವಿಗೆ ತಡೆಯೊಡ್ಡಿದರು. ಈ ಬಾರಿ ಕಾಂಗ್ರೆಸ್‌ನಿಂದ ಶರತ್ ಮತ್ತು ಬಿಜೆಪಿಯಿಂದ ಎಂ.ಟಿ.ಬಿ. ನಾಗರಾಜ್ ಪುತ್ರ ಪುರುಷೋತ್ತಮ್ ಮುಖಾಮುಖಿಯಾಗುವ ಸಾಧ್ಯತೆ ಇದೆ.



ಮತ ಜಾಗೃತಿ...

ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಶನಿವಾರ ಆಯೋಜಿಸಿದ್ದ ಮತದಾನ ಹಬ್ಬದ (ವೋಟ್ ಫೆಸ್ಟ್) ಬೈಕ್ ರ್ಯಾಲಿಯಲ್ಲಿ ಯುವತಿಯರು ಮತದಾನದ ಕುರಿತು ಜಾಗೃತಿ ಮೂಡಿಸಿದರು. ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್.ಜಿ.

ಸೆಲೆಬ್ರಿಟಿ ಮಾತು




ದೇಶದ ಭವಿಷ್ಯಕ್ಕೆ ಮತದಾನ ಮಾಡಿ

ಬಿ.ಪ್ರಾಣೇಶ್
ಹಾಸ್ಯ ಭಾಷಣಕಾರ, ಗಂಗಾವತಿ

ಚುನಾವಣೆ ವೇಳೆ ಎಲ್ಲ ದಾನಗಳಿಗಿಂತ ಮತದಾನ ಶ್ರೇಷ್ಠವಾದದ್ದು. ರಕ್ತದಾನ ಒಬ್ಬ ವ್ಯಕ್ತಿಯನ್ನು ಬದುಕಿಸಿದಂತೆ, ಮತದಾನ ಒಂದು ದೇಶ ಅಥವಾ ರಾಜ್ಯದ ಉತ್ತಮ ಭವಿಷ್ಯ ರೂಪಿಸುತ್ತದೆ. ಮತದಾನ ಎಂಬುದು ರಕ್ತದಾನದಷ್ಟೇ ಪವಿತ್ರ ಕಾರ್ಯ. ಪ್ರಜಾಪ್ರಭುತ್ವ ವ್ಯವಸ್ಥೆ ಉಳಿವಿಗೆ ಮತ್ತು ಸದೃಢತೆಗೆ ಮತ ಚಲಾಯಿಸುವ ಕೆಲಸವನ್ನು ಎಲ್ಲರೂ ಮಾಡಬೇಕು. ಮತದಾನ ಮಾಡುವ ಪ್ರಕ್ರಿಯೆಯಿಂದ ಯಾರೂ ದೂರ ಉಳಿಯಬಾರದು.

ಮಾತಿನೇಟು



ಪ್ರಧಾನಿ ನರೇಂದ್ರ ಮೋದಿ ಅವರು ವಿಹಾರಕ್ಕಾಗಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಬರುತ್ತಿದ್ದಾರೆಯೇ ಹೊರತು ರಾಜ್ಯದ ಜನರ ಕಷ್ಟ ಕೇಳಲು ಅಲ್ಲ. ಅವರು ದೇಶದ ಅಭಿವೃದ್ಧಿ ಮಾಡಿ ಸುಸ್ತಾಗಿದ್ದಾರೆ. ಹೀಗಾಗಿ ವಿಶ್ರಾಂತಿಗಾಗಿ ರಾಜ್ಯಕ್ಕೆ ಬರುತ್ತಿದ್ದಾರೆ.

ಎಚ್.ಡಿ.ಕುಮಾರಸ್ವಾಮಿ,
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಪ್ರಜಾಕೀಯ' ಆಕಾಂಕ್ಷಿ ವಿಭಿನ್ನ ಶೈಲಿಯ ಪ್ರಚಾರ

ಕನ್ನಡಿ ಬಾಕ್ಸ್ ಧರಿಸಿ ಮತಯಾಚನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಧಾನಸಭೆ ಚುನಾವಣಾ ಅಖಾಡ ದಿನದಿಂದ ದಿನಕ್ಕೆ ರಂಗೇರುತ್ತಿದೆ. ವಿವಿಧ ಪಕ್ಷಗಳ ಅಭ್ಯರ್ಥಿಗಳು, ಟಿಕೆಟ್ ಆಕಾಂಕ್ಷಿಗಳು ವಿಭಿನ್ನ ಪ್ರಚಾರ ತಂತ್ರದ ಮೂಲಕ ಮತದಾರರನ್ನು ಆಕರ್ಷಿಸುತ್ತಿದ್ದಾರೆ.

ಪ್ರಚಾರದ ಹೊಸ ಬಗೆ

ಉತ್ತಮ ಪ್ರಜಾಕೀಯ ಪಕ್ಷದ (ಯುಪಿಪಿ) ಟಿಕೆಟ್ ಆಕಾಂಕ್ಷಿಯಾಗಿರುವ ನಗರದ ಮಹಾವೀರ ಗಲ್ಲಿ ನಿವಾಸಿ ಇಷ್ಟಲಿಂಗ ಪಾವಟೆ ಕನ್ನಡಿಗಳನ್ನು ಬಳಸಿ ರೂಪಿಸಿರುವ ಚೌಕಾಕಾರದ ಬಾಕ್ಸ್ ಅನ್ನು ತಲೆ ಮತ್ತು ಮುಖ ಮುಚ್ಚುವಂತೆ ಧರಿಸಿ, ಮತದಾರರಿಗೆ ಕರಪತ್ರಗಳನ್ನು ಹಂಚುತ್ತಿದ್ದಾರೆ. 'ಮತದಾನ ಮಾಡಿ– ಮತ ಮಾರಬೇಡಿ' ಎಂದು ಜಾಗೃತಿ ಮೂಡಿಸುತ್ತಿದ್ದಾರೆ.

ಪ್ರಣಾಳಿಕೆ: 'ಈ ಕೆಳಕಂಡವರಿಗೆ ಬೇಕಾದದ್ದನ್ನು ಬಿಟ್ಟು ಬೇರೇನೂ ಮಾಡುವುದಿಲ್ಲ. ಈ ಕೆಳಕಂಡವರೇ ನನಗೆ ಹೈಕಮಾಂಡ್, ಈ ಕೆಳಕಂಡವರ ನಿಯಮಾನುಸಾರ ನಡೆದುಕೊಳ್ಳುತ್ತೇನೆ' ಎಂದು ಕರಪತ್ರದಲ್ಲಿ ಮುದ್ರಿಸಿದ್ದು, ಕರಪತ್ರದ ಕೊನೆಗೊಂದು ಪುಟಾಣಿ ಕನ್ನಡಿ ಅಂಟಿಸಿದ್ದಾರೆ. 'ಕೆಳಕಂಡವರು' ಕರ ಪತ್ರ ಓದುವ ವ್ಯಕ್ತಿಯೇ ಆಗುವಂತೆ ಕರ ಪತ್ರ ರೂಪಿಸಿರುವುದು ವಿಶೇಷ.

'ನಾನು ಹುಬ್ಬಳ್ಳಿ– ಧಾರವಾಡ ಸೆಂಟ್ರಲ್ ಮತಕ್ಷೇತ್ರದಿಂದ ಚುನಾವಣೆ ಎದುರಿಸಲು ಸಿದ್ಧತೆ ನಡೆಸಿರುವೆ. ಮತದಾನ ಮಾಡಿ ಅಖಂಡ ಬಹುಮತದಿಂದ ಕೆಲಸ ಕೊಡಬೇಕಾಗಿ ಕಳಕಳಿಯ ವಿನಂತಿ' ಎಂದು ಪಾವಟೆ ಕರಪತ್ರದಲ್ಲಿ ಕೋರುತ್ತಿದ್ದಾರೆ.

'ಕಳೆದೊಂದು ವಾರದಿಂದ ಸೆಂಟ್ರಲ್ ಕ್ಷೇತ್ರದ ವಿಶ್ವೇಶ್ವರ ನಗರ, ವಿಜಯನಗರ, ವಿದ್ಯಾನಗರ, ಲಿಂಗರಾಜನಗರ, ಉಣಕಲ್‌ನಲ್ಲಿ ಜಾಗೃತಿ ಮೂಡಿಸಿರುವೆ. ಶನಿವಾರ ಸಿಬಿಟಿ, ಕಾರ್ಪೊರೇಷನ್, ಕೆ.ಎಂ.ಸಿ, ಹೊಸೂರು ಭಾಗದಲ್ಲಿ ಪ್ರಚಾರ ನಡೆಸುತ್ತಿದ್ದೇನೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.



ಕನ್ನಡಿಗಳನ್ನು ಬಳಸಿ ರೂಪಿಸಿರುವ ಚೌಕಾಕಾರದ ಬಾಕ್ಸ್ ಅನ್ನು ತಲೆ ಮತ್ತು ಮುಖ ಮುಚ್ಚುವಂತೆ ಧರಿಸಿಕೊಂಡಿದ್ದ ಇಷ್ಟಲಿಂಗ ಪಾವಟೆ ಅವರು ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲೆಯ ಬಸ್ ತಂಗುದಾಣದಲ್ಲಿ ಶನಿವಾರ ಪ್ರಯಾಣಿಕರಿಗೆ ಕರಪತ್ರ ವಿತರಿಸಿ ಪ್ರಚಾರ ನಡೆಸಿದರು –ಪ್ರಜಾವಾಣಿ ಚಿತ್ರ

ಕ್ಷೇತ್ರದ ಕೂಗು

- **ಕ್ಷೇತ್ರ: ವಿಜಯಪುರ**
- **ಶಾಸಕ: ಬಸನಗೌಡ ಪಾಟೀಲ ಯತ್ನಾಳ** (ಬಿಜೆಪಿ)

▸ ವಿಶ್ವ ಪ್ರಸಿದ್ಧ ಗೋಳಗುಮ್ಮಟ, ಬಾರಾ ಕಮಾನ್, ಇಬ್ರಾಹಿಂ ರೋಜಾ ಸೇರಿದಂತೆ 82ಕ್ಕೂ ಅಧಿಕ ಪ್ರಮುಖ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಮೂಲ ಸೌಲಭ್ಯ, ಸಮಗ್ರ ಅಭಿವೃದ್ಧಿಯಾಗಬೇಕಿದೆ. ಗೋಳಗುಮ್ಮಟಕ್ಕೆ ರಾತ್ರಿ ವೇಳೆ ವಿದ್ಯುತ್ ದೀಪಾಲಂಕಾರವಾಗಬೇಕು. ವಿಜಯಪುರ ನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಆರಂಭಿಸಬೇಕಿದೆ, 24x7 ಕುಡಿಯುವ ನೀರು ಪೂರೈಕೆಯಾಗಬೇಕಿದೆ.




- **ಕ್ಷೇತ್ರ: ಇಂಡಿ**
- **ಶಾಸಕ: ಯಶವಂತರಾಯಗೌಡ ಪಾಟೀಲ** (ಕಾಂಗ್ರೆಸ್)

▸ ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಇಂಡಿ ತಾಲ್ಲೂಕನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕು, ಲಿಂಬೆ ಬೆಳೆಗೆ ಭೌಗೋಳಿಕ ಮಾನ್ಯತೆ (ಜಿಐ) ಮತ್ತು ಆಧುನಿಕ ಮಾರುಕಟ್ಟೆ ಸೌಲಭ್ಯ ಸಿಗಬೇಕು, ತಾಲ್ಲೂಕು ಸಮಗ್ರ ನೀರಾವರಿಗೆ ಒಳಪಡಿಸಬೇಕು. ಕೈಗಾರಿಕೆಗಳು ಆಗಬೇಕಿದೆ.



- **ಕ್ಷೇತ್ರ: ಮುದ್ದೇಬಿಹಾಳ**
- **ಶಾಸಕ: ಎ.ಎಸ್.ಪಾಟೀಲ ನಡಹಳ್ಳಿ** (ಬಿಜೆಪಿ)

▸ ಸಮಗ್ರ ನೀರಾವರಿಯಾಗಬೇಕು, ಪ್ರಾದೇಶಿಕ ಉಪ ಸಾರಿಗೆ ಕಚೇರಿ ಮತ್ತು ಉಪ ವಿಭಾಗಾಧಿಕಾರಿಗಳ (ಎಸಿ) ಕಚೇರಿ ಆರಂಭಿಸಬೇಕು. ತಾಳಿಕೋಟೆ– ವಿಜಯಪುರ ಸಂಪರ್ಕಿಸುವ ಡೋಣಿ ನದಿ ಸೇತುವೆ ಶಿಥಿಲವಾಗಿದ್ದು, ಹೊಸ ಸೇತುವೆ ನಿರ್ಮಾಣವಾಗಬೇಕಿದೆ. ತಾಳಿಕೋಟೆ ತಾಲ್ಲೂಕಿನಲ್ಲಿ ಕ್ರೀಡಾಂಗಣ, ನ್ಯಾಯಾಲಯ ಸಂಕೀರ್ಣ ಆಗಬೇಕಿದೆ. ಮುಳವಾಡ ಏತ ನೀರಾವರಿ ಯೋಜನೆಯಡಿ ನಾಲತವಾಡ ವ್ಯಾಪ್ತಿಯಲ್ಲಿ ಕಾಲುವೆ ಪೂರ್ಣವಾಗಬೇಕು, ರೈತರ ಹೊಲಕ್ಕೆ ಸಮರ್ಪಕವಾಗಿ ನೀರು ಹರಿಯಬೇಕು.



- **ಕ್ಷೇತ್ರ: ಬಬಲೇಶ್ವರ**
- **ಶಾಸಕ: ಎಂ.ಬಿ.ಪಾಟೀಲ** (ಕಾಂಗ್ರೆಸ್)

▸ ಡೋಣಿ ನದಿ ಪ್ರವಾಹ ತಡೆಗೆ ಶಾಶ್ವತ ಪರಿಹಾರ, ದ್ರಾಕ್ಷಿಗೆ ಮಾರುಕಟ್ಟೆ, ಕೋಲ್ಡ್ ಸ್ಟೋರೇಜ್ ಅಗತ್ಯವಿದೆ. ಬಬಲೇಶ್ವರ, ತಿಕೋಟಾ ತಾಲ್ಲೂಕು ಕ್ರೀಡಾಂಗಣ ಆಗಬೇಕಿದೆ, ಹೊಸ ನ್ಯಾಯಾಲಯ ಮತ್ತು ನ್ಯಾಯಾಲಯ ಸಂಕೀರ್ಣ ಆರಂಭವಾಗಬೇಕಿದೆ.



- **ಕ್ಷೇತ್ರ: ಬಸವನ ಬಾಗೇವಾಡಿ**
- **ಶಾಸಕ: ಶಿವಾನಂದ ಪಾಟೀಲ** (ಕಾಂಗ್ರೆಸ್)

▸ ಆಲಮಟ್ಟಿ ಜಲಾಶಯಕ್ಕೆ ಸಂಬಂಧಿಸಿದ ಕೃಷ್ಣಾ ನ್ಯಾಯಾಧೀಕರಣ ತೀರ್ಪಿಗೆ ಸಂಬಂಧಿಸಿದಂತೆ ಕೇಂದ್ರ ಗೆಜೆಟ್ ನೋಟಿಫಿಕೇಷನ್ ಶೀಘ್ರದಲ್ಲೇ ಹೊರಡಿಸಬೇಕು. ಜಲಾವೃತ 20 ಗ್ರಾಮಗಳ ಸ್ಥಳಾಂತರ, ಜಲಾವೃತ ಜಮೀನಿನ ಸ್ವಾಧೀನ ಕ್ರಿಯೆ ತ್ವರಿತಗೊಳ್ಳಬೇಕು. ಕೋಲ್ಹಾರ ತಾಲ್ಲೂಕು ಕೇಂದ್ರವಾದರೂ ಅಭಿವೃದ್ಧಿಯಾಗಿಲ್ಲ, ಮೂಲ ಸೌಲಭ್ಯಗಳಿಲ್ಲ. ಪುನರ್ವಸತಿ ಕೇಂದ್ರಗಳ ಅಭಿವೃದ್ಧಿಯಾಗಬೇಕು. ತಾಲ್ಲೂಕಿನ ಹಳ್ಳಿಗಳಿಗೆ ಸಮರ್ಪಕ ಸಾರಿಗೆ ಸೌಲಭ್ಯ ಬೇಕಿದೆ.




- **ಕ್ಷೇತ್ರ: ನಾಗಠಾಣ**
- **ಶಾಸಕ: ಡಾ.ದೇವಾನಂದ ಚವ್ಹಾಣ** (ಜೆಡಿಎಸ್)

▸ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆ ಶೀಘ್ರ ಪೂರ್ಣಗೊಳಿಸಿ, ನೀರಾವರಿ ಸೌಲಭ್ಯ ಕಲ್ಪಿಸಬೇಕು. ನಾಗಠಾಣ ಕ್ಷೇತ್ರದ ಮೂಲಕ ಹಾದುಹೋಗಿರುವ ಮಹಾರಾಷ್ಟ್ರದ ಶ್ರೀ ಕ್ಷೇತ್ರ ಫಂಡರಾಪುರವನ್ನು ಸಂಪರ್ಕಿಸುವ ಶಿರಡೋಣ– ಲಿಂಗಸೂಗೂರು ಹೆದ್ದಾರಿ ತೀವ್ರ ಹದಗೆಟ್ಟಿದ್ದು, ದುರಸ್ತಿಯಾಗಬೇಕಿದೆ. ಚಡಚಣ ನಗರಕ್ಕೆ ಮೂಲ ಸೌಲಭ್ಯ, ಸಮಗ್ರ ಅಭಿವೃದ್ಧಿಯಾಗಬೇಕು.




- **ಕ್ಷೇತ್ರ: ದೇವರ ಹಿಪ್ಪರಗಿ**
- **ಶಾಸಕ: ಸೋಮನಗೌಡ ಪಾಟೀಲ ಸಾಸನೂರ** (ಬಿಜೆಪಿ)

▸ ನೀರಾವರಿ ಸೌಲಭ್ಯ ಲಭಿಸಬೇಕಿದೆ. ಕಬ್ಬನ್ನು ಹೆಚ್ಚಾಗಿ ಬೆಳೆಯಲಾಗುತ್ತಿದ್ದು, ಸಕ್ಕರೆ ಕಾರ್ಖಾನೆ ಆರಂಭಿಸಬೇಕು. ತಹಶೀಲ್ದಾರ್ ಕಚೇರಿ, ತಾಲ್ಲೂಕು ಪಂಚಾಯ್ತಿ ಕಾರ್ಯಾಲಯ, ಉಪ ಖಜಾನೆ, ಪದವಿ ಕಾಲೇಜು, ಐಟಿಐ ಕಾಲೇಜಿಗೆ ಕಟ್ಟಡದ ಅಗತ್ಯವಿದೆ. ತಾಲ್ಲೂಕಿನ ಅತಿ ದೊಡ್ಡ ಗ್ರಾಮವಾದ ಕೋರವಾರಕ್ಕೆ ಸರ್ಕಾರಿ ಪಿಯು ಕಾಲೇಜು, ಪ್ರೌಢಶಾಲೆ ಬೇಕಿದೆ.



- **ಕ್ಷೇತ್ರ: ಸಿಂದಗಿ**
- **ಶಾಸಕ: ರಮೇಶ ಭೂಸನೂರ** (ಬಿಜೆಪಿ)

▸ ಸಿಂದಗಿ ಪುರಸಭೆ ನಗರಸಭೆಯಾಗಿ ಮೇಲ್ದರ್ಜೆ ಏರಬೇಕು, ಆಲಮೇಲದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆಯಾಗಬೇಕು. ಸಿಂದಗಿ ಮೂಲಕ ಹಾದುಹೋಗಿರುವ ಹುಬ್ಬಳ್ಳಿ– ವಿಜಯಪುರ– ಕಲಬುರ್ಗಿ ರಾಷ್ಟ್ರೀಯ ಹೆದ್ದಾರಿಯು ಚತುಷ್ಪಥ ರಸ್ತೆಯಾಗಿ ಮೇಲ್ದರ್ಜೆಗೆ ಏರಿಸಬೇಕಾಗಿದೆ.



ಸಂರಕ್ಷಣೆಯ ಸಾಧನೆ, ಸವಾಲು



ರಣಥಂಬೋರ್ ರಾಷ್ಟ್ರೀಯ ಉದ್ಯಾನದಲ್ಲಿ ಹುಲಿಗಳು

...ಒಂದನೇ ಪುಟದಿಂದ

1973ರಲ್ಲಿ ಹುಲಿ ಯೋಜನೆ ಆರಂಭಿಸುವ ಮೊದಲೇ ಈ ಪ್ರದೇಶದಲ್ಲಿ ಹುಲಿ ಸಂರಕ್ಷಣೆಗೆ ಕ್ರಮ ತೆಗೆದುಕೊಳ್ಳಲಾಗಿತ್ತು. 1900ರಲ್ಲೇ ಮೈಸೂರಿನ ಅರಸರು 'ಮೈಸೂರು ಅರಣ್ಯ ಕಾಯ್ದೆ' ಜಾರಿಗೆ ತಂದಿದ್ದರು. ಈಗಿನ ಬಂಡೀಪುರ ಪ್ರದೇಶದಲ್ಲಿ ಕೆಲವು ಭಾಗಗಳನ್ನು ಗುರುತಿಸಿ, ಅಲ್ಲಿ ಬೇಟೆಯಾಡುವುದನ್ನು ನಿಷೇಧಿಸಲಾಗಿತ್ತು. ಹಿಮವದ್ ಗೋಪಾಲಸ್ವಾಮಿ ಬೆಟ್ಟವನ್ನೂ ಒಳ ಗೊಂಡಿದ್ದ 30 ಚದರ ಕಿ.ಮೀ.ನಷ್ಟು ಪ್ರದೇಶವನ್ನು ವೇಣುಗೋಪಾಲ ವನ್ಯ ಜೀವಿ ಉದ್ಯಾನ ಎಂದು ಕರೆಯಲಾಗಿತ್ತು.ವೇಣುಗೋಪಾಲ ವನ್ಯಜೀವಿ ಉದ್ಯಾನ ಹಾಗೂ ಸುತ್ತಮುತ್ತಲಿನ ಅರಣ್ಯ ಪ್ರದೇಶವನ್ನು ಸೇರಿಸಿ 1941ರ ಫೆಬ್ರುವರಿ 19ರಂದು ರಾಷ್ಟ್ರೀಯ ಉದ್ಯಾನ ಎಂದು ಘೋಷಿಸಲಾಗಿತ್ತು.


ಈ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿ, 1973ರ ನವೆಂಬರ್‌ನಲ್ಲಿ ಹುಲಿ ಯೋಜನೆಗೆ ಈ ಪ್ರದೇಶವನ್ನು ಸೇರಿಸಲಾಯಿತು. 'ಹುಲಿ ಯೋಜನೆ ಘೋಷಣೆಯಾದಾಗ ಬಂಡೀಪುರ ಅರಣ್ಯದಲ್ಲಿ 12 ಹುಲಿಗಳಿದ್ದವು. 2020ರ ಮಾಹಿತಿ ಪ್ರಕಾರ 143 ಹುಲಿಗಳಿವೆ. 2022ರ ಹುಲಿ ಗಣತಿ ವರದಿ ಬಿಡುಗಡೆಯಾದರೆ, ಈ ಪ್ರದೇಶದಲ್ಲಿ ಈಗ ಇರುವ ಹುಲಿಗಳ ಸಂಖ್ಯೆ ಎಷ್ಟು ಎಂಬುದರ ನಿಖರ ಅಂದಾಜು ಸಂಖ್ಯೆ ಸಿಗಲಿದೆ.

ಬಂಡೀಪುರ ರಾಷ್ಟ್ರೀಯ ಉದ್ಯಾನವು ಈಗ ದೇಶದ ಅತ್ಯಂತ ಪ್ರಮುಖ ಹುಲಿ ಆವಾಸಸ್ಥಾನಗಳಲ್ಲಿ ಮೊದಲ ಸಾಲಿನಲ್ಲಿದೆ. 1985ರಲ್ಲಿ ಈ ಹುಲಿ ಯೋಜನೆ ಪ್ರದೇಶವನ್ನು ಮತ್ತಷ್ಟು ವಿಸ್ತರಿಸಿ ಬಂಡೀಪುರ ರಾಷ್ಟ್ರೀಯ ಉದ್ಯಾನ ಎಂದು ಹೆಸರಿಸಲಾಗಿತ್ತು. ಆಗ ಈ ಉದ್ಯಾನದ ವಿಸ್ತೀರ್ಣ 874.20 ಚದರ ಕಿ.ಮೀ ಇತ್ತು. ನಂತರದ ವರ್ಷಗಳಲ್ಲಿ ಸುತ್ತಮುತ್ತಲಿನ ಅರಣ್ಯವನ್ನು ಮತ್ತಷ್ಟು ಸೇರ್ಪಡೆ ಮಾಡಲಾಗಿದೆ. ತಮಿಳುನಾಡಿನ ಮುಧುಮಲೆ, ಕೇರಳದ ವಯನಾಡು ಹಾಗೂ ನಮ್ಮದೇ ಆದ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಿರುವ ಸಂರಕ್ಷಿತ ಪ್ರದೇಶ ಸದ್ಯ 912.04 ಚದರ ಕಿ.ಮೀ ವಿಸ್ತೀರ್ಣವಿದೆ. ಬಂಡೀಪುರ, ನಾಗರಹೊಳೆ, ಬಿಆರ್‌ಟಿ, ಮುಧುಮಲೆ, ಸತ್ಯಮಂಗಲ ಮತ್ತು ವಯನಾಡ್ ಹುಲಿ ಯೋಜನೆ ಪ್ರದೇಶಗಳನ್ನು ನೀಲಗಿರಿ ಜೈವಿಕ ತಾಣವು 12,134 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶವು ದೇಶದ ಅತ್ಯಂತ ದೊಡ್ಡ ಹುಲಿ ಆವಾಸಸ್ಥಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅದಲ್ಲದೇ, ಈ ಪ್ರದೇಶದಲ್ಲಿ ಹುಲಿ ಸಾಂದ್ರತೆಯು ದೇಶದಲ್ಲೇ ಹೆಚ್ಚು. ಈ ಪ್ರದೇಶದಲ್ಲಿ 724 ವಯಸ್ಕ ಹುಲಿಗಳಿವೆ ಎಂದು 2018ರ ಹುಲಿಗಣತಿಯಲ್ಲಿ ಅಂದಾಜಿಸಲಾಗಿತ್ತು. ಈಗ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗಿದೆ ಎಂದು ನಿರೀಕ್ಷಿಸಲಾಗಿದೆ. ದೇಶದ ಬೇರೆ ಯಾವುದೇ ಹುಲಿ ಆವಾಸ ಸ್ಥಾನಗಳಲ್ಲಿ ಇಷ್ಟೊಂದು ಹುಲಿಗಳು ಇಲ್ಲ.

ಹುಲಿಗಳ ಸಂರಕ್ಷಣೆಯ ಉದ್ದೇಶದಿಂದ ದೇಶದಲ್ಲಿ ರಕ್ಷಿತ ಅಭಯಾರಣ್ಯಗಳು, ರಾಷ್ಟ್ರೀಯ ಉದ್ಯಾನಗಳ ಸಂಖ್ಯೆ ಏರಿಕೆಯಾಗಿದೆ. ಈ ಉದ್ಯಾನಗಳಲ್ಲಿ ಇತರೆ ಬೇಟೆ ಮತ್ತು ಬಲಿ ಪ್ರಾಣಿಗಳ ಸಂಖ್ಯೆಯೂ ಏರಿಕೆಯಾಗಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನವು ಇದಕ್ಕೆ ಉತ್ತಮ ನಿದರ್ಶನ. ಈ ಉದ್ಯಾನದಲ್ಲಿ ಈಗ 200ಕ್ಕೂ ಹೆಚ್ಚು ಚಿರತೆಗಳು ಮತ್ತು 3,046 ಆನೆಗಳಿವೆ ಎನ್ನುತ್ತಾರೆ ಹುಲಿ ಯೋಜನೆ ಅಧಿಕಾರಿಗಳು. ದೇಶದ ಬೇರೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲೂ ಇದೇ ರೀತಿಯ ಪ್ರಗತಿ ಸಾಧ್ಯವಾಗಿದೆ.

ಸವಾಲುಗಳು ಮತ್ತು ಆಕ್ಷೇಪಗಳು: ದೇಶದಲ್ಲಿನ ಹುಲಿ ಸಂರಕ್ಷಣೆ ಯೋಜನೆಯ ಎದುರು ಹಲವು ಸವಾಲುಗಳಿವೆ. ಹುಲಿ ಸಂರಕ್ಷಣೆಯ ಸ್ವರೂಪದ ಬಗ್ಗೆ ಆಕ್ಷೇಪಗಳೂ ವ್ಯಕ್ತವಾಗುತ್ತಿವೆ. ಭಾರತದಲ್ಲಿ ಈಗ ಇರುವ ಹುಲಿಗಳಲ್ಲಿ ತಳಿ ವೈವಿಧ್ಯತೆ ಇಲ್ಲ ಎಂಬುದು ಇಂತಹ ಆಕ್ಷೇಪಗಳಲ್ಲಿ ಒಂದು.

'ಭಾರತದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಿದೆ ಎಂದು ನಾವೆಲ್ಲಾ ಸಂಭ್ರಮಪಡುತ್ತಿದ್ದೇವೆ. ಆದರೆ, ಅವುಗಳ ದೀರ್ಘಕಾಲದ ಉಳಿಯುವಿಕೆ ಬಗ್ಗೆಯೂ ವೈಜ್ಞಾನಿಕ ವಿಧಾನದಡಿ ಚಿಂತಿಸಬೇಕಿದೆ. ಜೀವ ಪರಿಸರದಲ್ಲಿ ಪ್ರಬೇಧವೊಂದು ದೀರ್ಘಕಾಲ ಬದುಕುಳಿಯಲು ಸದೃಢವಾದ ತಳಿಗಳ ಪಾತ್ರ ಅತ್ಯಂತ ಮಹತ್ವದ್ದು. ಆ ಪ್ರಬೇಧದ ಗುಣಮಟ್ಟದ ವಂಶವಾಹಿನಿ ಪರಿಣಾಮಕಾರಿ ಹಾಗೂ ನಿರಂತರವಾಗಿ ಪ್ರವಹಿಸುತ್ತಿರಬೇಕು. ಆಗ ಮಾತ್ರ ಆ ಜೀವ ಸಂಕುಲದ ಭವಿಷ್ಯದಲ್ಲಿ ಸದೃಢವಾಗಿರುತ್ತದೆ. ಆದರೆ, ಭಾರತದಲ್ಲಿರುವ ಹುಲಿಗಳ ವಂಶವಾಹಿ ಗುಣಮಟ್ಟದಿಂದ ಕೂಡಿಲ್ಲ. ಕಾಡುಗಳು ದ್ವೀಪ ಸ್ವರೂಪದಲ್ಲಿ ಇರುವುದೇ ಇದಕ್ಕೆ ಮೂಲ ಕಾರಣ. ಹುಲಿ ಸಂಕುಲದ ದೀರ್ಘಕಾಲದ ಬಾಳಿಕೆಗೆ ಒಂದು ಪ್ರದೇಶದಲ್ಲಿ ಕನಿಷ್ಠ 500 ಸದೃಢವಾದ ಹುಲಿಗಳು ಇರಬೇಕು ಎಂದು ಜೀವ ವಿಜ್ಞಾನ ಹೇಳುತ್ತದೆ. ನಮ್ಮಲ್ಲಿ ಕಾಡುಗಳು ದ್ವೀಪ ಸ್ವರೂಪದಲ್ಲಿದೆ. ಹುಲಿಗಳ ಸಂಚಾರಕ್ಕೆ ಕಾಡುಗಳ ನಡುವೆ ಸಂಪರ್ಕ ಕೊಂಡಿಯಾದ ಕಾರಿಡಾರ್‌ಗಳೇ ಇಲ್ಲ. ಕೆಲವೆಡೆ ಇರುವ ಕಾರಿಡಾರ್‌ಗಳು ದುರ್ಬಲವಾಗಿವೆ. ಇದರಿಂದ ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಸಂಪರ್ಕವೇ ಇಲ್ಲದಂತಾಗಿದೆ. ಹಾಗಾಗಿ, ತಳಿ ವೈವಿಧ್ಯತೆ ಕಾಣಲು ಸಾಧ್ಯವಾಗುತ್ತಿಲ್ಲ' ಎನ್ನುತ್ತಾರೆ ವನ್ಯಜೀವಿ ತಜ್ಞ ಕೃಪಾಕರ.




ಕೃಪಾಕರ

'ಜೀವಿಗಳ ತಳಿ ವೈವಿಧ್ಯತೆ ಎಷ್ಟು ಮುಖ್ಯ ಎಂಬುದಕ್ಕೆ ತಾಂಜಾನಿಯಾದ ಸೆರೆಂಗೆಟ್ಟಿ ಕಾಡಿನಲ್ಲಿ 20 ವರ್ಷಗಳ ಹಿಂದೆ ಸಾಕು ನಾಯಿಗಳಿಗೆ ಕಾಣಿಸಿಕೊಂಡ ಕೆನನ್ ಡಿಸ್ಟೆಂಪರ್ ವೈರಾಣು ದಾಳಿ ನಿದರ್ಶನವಾಗಿದೆ. ಅಲ್ಲಿ ಈ ವೈರಾಣು ದಾಳಿಗೆ 300ಕ್ಕೂ ಹೆಚ್ಚು ಸಿಂಹಗಳು ಪ್ರಾಣ ಕಳೆದುಕೊಂಡವು. ಆದರೆ, ಕಾಡಿನ ಬೇರೆ ಬೇರೆ ಪ್ರದೇಶದಲ್ಲಿ ಜೀವಿಸಿದ್ದ ಸಿಂಹಗಳಿಂದ ಮತ್ತೆ ಅವುಗಳ ಸಂತತಿ ಅಲ್ಲಿ ವೃದ್ಧಿಸಿದ್ದು ಈಗ ಇತಿಹಾಸ. ಅಲ್ಲಿನ ಸಿಂಹಗಳಲ್ಲಿ ತಳಿವೈವಿಧ್ಯ ಇದ್ದುದ್ದರಿಂದ ಅದು ಸಾಧ್ಯವಾಯಿತು. ಭಾರತದ ಅರಣ್ಯಗಳಲ್ಲಿ ಅಂತಹ ಗಂಡಾಂತರ ಸಂಭವಿಸಿದರೆ ಇಲ್ಲಿನ ಹುಲಿಗಳು ಬದುಕುಳಿಯುವುದು ಕಷ್ಟ' ಎಂದು ಕಳವಳ ವ್ಯಕ್ತಪಡಿಸುತ್ತಾರೆ.

'ತಳಿ ವೈವಿಧ್ಯತೆ ಸದೃಢವಾಗಿದ್ದಾಗ ಮಾತ್ರ ಪರಿಸರದ ಎಲ್ಲಾ ಸವಾಲುಗಳನ್ನು ಜಯಿಸಿ ಜೀವಿಗಳು ಬದುಕುಳಿಯಲು ಸಾಧ್ಯ. ದೇಶದ ಕಾಡುಗಳಲ್ಲಿರುವ ಹುಲಿಗಳಿಗೂ ಈ ಮಾತು ಅನ್ವಯಿಸುತ್ತದೆ. ಆದರೆ, ನಮ್ಮಲ್ಲಿನ ಅರಣ್ಯಗಳಲ್ಲಿ ಹುಲಿಗಳ ತಳಿ ವೈವಿಧ್ಯತೆ ಬೆಳೆಯುವ ಅವಕಾಶ ಇರುವುದು ತೀರಾ ಕಡಿಮೆ. ಆದರೆ, ನೀಲಗಿರಿ ಜೈವಿಕ ತಾಣ ಈ ನಿಟ್ಟಿನಲ್ಲಿ ಭವಿಷ್ಯದ ಭರವಸೆಯಾಗಿ ನಿಲ್ಲಬಲ್ಲದು ಎನ್ನಲು ಅಡ್ಡಿಯಿಲ್ಲ. ಕರ್ನಾಟಕ, ತಮಿಳುನಾಡು ಮತ್ತು ಕೇರಳ ಒಳಗೊಂಡ ನೀಲಗಿರಿ ಜೈವಿಕ ವಲಯದಲ್ಲಿ ಹುಲಿ ಸಂತತಿ ದೀರ್ಘಕಾಲ ಬದುಕುಳಿಯುವಂತಹ ಅವಕಾಶಗಳು ಹೆಚ್ಚಿವೆ. ಇಲ್ಲಿನ ಪರಿಸರಕ್ಕೆ ಧಕ್ಕೆಯಾಗದಂತೆ ಆಳುವವರು ಎಚ್ಚರವಹಿಸಬೇಕಿದೆ' ಎಂದು ಅವರು ವಿವರಿಸಿದ್ದಾರೆ.

ಹುಲಿ ಯೋಜನೆ ಪ್ರದೇಶಗಳಲ್ಲಿ ಜನವಸತಿ ಇರುವುದು, ಹುಲಿಗಳ ಸಂರಕ್ಷಣೆಯಲ್ಲಿ ಎದುರಾಗಿರುವ ದೊಡ್ಡ ಸವಾಲು ಎಂಬ ವಾದವಿದೆ. ಯಾವುದೇ ವನ್ಯಜೀವಿ ಸಂರಕ್ಷಿತ ಪ್ರದೇಶದಲ್ಲಿ ಇರುವ ಬುಡಕಟ್ಟು ನಿವಾಸಿಗಳನ್ನು ಹೊರಗಿಡಬೇಕು. ಮನುಷ್ಯನ ಚಟುವಟಿಕೆಗಳಿಂದ ಅವು ಮುಕ್ತವಾಗಿರಬೇಕು ಎಂಬುದು ಬಹುತೇಕ ಪರಿಸರವಾದಿಗಳ ಪ್ರತಿಪಾದನೆ. ವನ್ಯಜೀವಿಗಳು ಮತ್ತು ಮಾನವರು ಸಹಜೀವನ ನಡೆಸಬೇಕು. ಪರಸ್ಪರರಿಗೆ ಧಕ್ಕೆಯಾಗದೇ ಇರುವ ರೀತಿಯಲ್ಲಿ ಜೀವನಕ್ರಮವನ್ನು ರೂಪಿಸಿಕೊಳ್ಳಬೇಕು ಎಂಬ ವಾದವೂ ಇದೆ. ಆದರೆ, ಜನವಸತಿ ಪ್ರದೇಶಗಳನ್ನು ಸಂರಕ್ಷಿತ ಅರಣ್ಯ ಪ್ರದೇಶಗಳಿಂದ ಹೊರಗಿಡಬೇಕು ಎಂಬ ಪ್ರತಿಪಾದನೆಯನ್ನು ಆಧರಿಸಿಯೇ ಕೇಂದ್ರ ಸರ್ಕಾರದ ಯೋಜನೆಗಳು ರೂಪುಗೊಂಡಿವೆ. ಆದರೆ, ಇಂತಹ ಪುನರ್ವಸತಿ ಯೋಜನೆಗಳೂ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದಿಲ್ಲ.



ಪ್ರವೀಣ್ ಭಾರ್ಗವ

ನಾಗರಹೊಳೆ ರಾಷ್ಟ್ರೀಯ ಉದ್ಯಾನದಿಂದ ಜನವಸತಿ ಪ್ರದೇಶಗಳ ಪುನರ್ವಸತಿ ಪರಿಣಾಮಕಾರಿಯಾಗಿ ಜಾರಿಯಾಗದೇ ಇರುವುದು ಇದಕ್ಕೆ ತಾಜಾ ಉದಾಹರಣೆ ಎನ್ನುತ್ತಾರೆ 'ವೈಲ್ಡ್ ಲೈಫ್ ಫಸ್ಟ್'ನ ವ್ಯವಸ್ಥಾಪಕ ಟ್ರಸ್ಟಿ ಹಾಗೂ ರಾಷ್ಟ್ರೀಯ ವನ್ಯಜೀವಿ ಮಂಡಳಿ ಮಾಜಿ ಸದಸ್ಯ ಪ್ರವೀಣ್ ಭಾರ್ಗವ್.

'ಹುಲಿ ಮತ್ತು ಮನುಷ್ಯ ಒಟ್ಟಾಗಿ ಜೀವಿಸುವುದು, ಹುಲಿಗಳ ಸಂರಕ್ಷಣೆ ದೃಷ್ಟಿಯಿಂದ ಸೂಕ್ತವಲ್ಲ. ಕಾಡಿನೊಳಗಿರುವ ಜನರು ಸ್ವಯಂಪ್ರೇರಿತರಾಗಿ ಹೊರಗೆ ಬರುವುದಾದರೆ ಅವರಿಗೆ ಸೂಕ್ತ ಪುನರ್ವಸತಿ ಸೌಲಭ್ಯ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ. 2018ರಲ್ಲಿ ಕೇಂದ್ರ ಸರ್ಕಾರದ ಮಟ್ಟದಲ್ಲಿಯೇ ಕಾಡಿನೊಳಗಿರುವ ಜನರು ಸ್ವಯಂಪ್ರೇರಿತರಾಗಿ ಹೊರಬಂದರೆ ಅವರಿಗೆ ಪುನರ್ವಸತಿ ಕಲ್ಪಿಸಲು ಹೊಸ ಮಾರ್ಗಸೂಚಿಯನ್ನೂ ರಚಿಸಲಾಗಿದೆ. ಇದರಡಿ ₹ 48 ಸಾವಿರ ಕೋಟಿ ಇದೆ. ಇದರಡಿ ಕರ್ನಾಟಕಕ್ಕೆ ₹ 1,300 ಕೋಟಿ ಅನುದಾನ ಹಂಚಿಕೆಯಾಗಿದೆ. ಆದರೆ, ಈ ಅನುದಾನವನ್ನು ಬಳಸಿಕೊಂಡಿಲ್ಲ' ಎಂಬುದು ಭಾರ್ಗವ್ ಅವರ ಅಸಮಾಧಾನ.

ಹುಲಿ ರಕ್ಷಿತಾರಣ್ಯದ ಹೃದಯಭಾಗವಾದ ಕೇಂದ್ರ ವಲಯದಲ್ಲಿ ಕಾಡಿನ ಮೇಲೆ ಒತ್ತಡ ಕಡಿಮೆ ಇರಬೇಕು. ಅಲ್ಲಿ ಸ್ಥಳೀಯರ ಸಂಚಾರ ಇರಬಾರದು. ಪ್ರವಾಸೋದ್ಯಮಕ್ಕೆ ಸಂಪೂರ್ಣ ಕಡಿವಾಣ ಹಾಕಬೇಕು. ಈ ಬಗ್ಗೆ ಸುಪ್ರೀಂ ಕೋರ್ಟ್ ಆದೇಶಗಳು ಮತ್ತು ಪರಿಸರ ಸಂರಕ್ಷಣಾ ಕಾನೂನುಗಳು ಕೂಡ ಹೇಳುತ್ತವೆ. ಆದರೆ, ಅದು ಜಾರಿಗೊಂಡಿಲ್ಲ. ಈ ನಿಯಮದ ಅನುಷ್ಠಾನ ಕೇವಲ ಹುಲಿ ಸಂಕುಲದ ಸಂರಕ್ಷಣೆಗಷ್ಟೇ ಸೀಮಿತವಲ್ಲ. ಉಳಿದ ವನ್ಯಜೀವಿಗಳ ಬದುಕಿಗೂ ಸಹಕಾರಿಯಾಗಲಿದೆ ಎನ್ನುವುದು ಅಲ್ಲಗಳೆಯುವಂತಿಲ್ಲ ಎಂಬುದು ಭಾರ್ಗವ್ ಅವರ ಅಭಿಮತ.

ಲಂಟಾನಾ ಕಳೆ ಸಸ್ಯವು ದೇಶದ ಕಾಡುಗಳಿಗೆ, ವನ್ಯಜೀವಿಗಳಿಗೆ ಮಾರಕ ಎನ್ನುತ್ತವೆ ಹಲವು ಅಧ್ಯಯನ ವರದಿಗಳು. ಭಾರತದ ಕಾಡುಗಳಲ್ಲಿ ಲಂಟಾನಾ ಕಮಾರಾ ಜೀವ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಿದೆ. ದೇಶದಾದ್ಯಂತ ಇರುವ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶಗಳ ಒಟ್ಟು ವಿಸ್ತೀರ್ಣ 1.54 ಲಕ್ಷ ಚದರ ಕಿ.ಮೀ. ನಷ್ಟಾಗುತ್ತದೆ. ಇದರಲ್ಲಿ ಶೇ 40ರಷ್ಟು ಲಂಟಾನಾ ಆವರಿಸಿದೆ ಎನ್ನುತ್ತದೆ ಇತ್ತೀಚೆಗೆ ಬಿಡುಗಡೆಯಾಗಿರುವ ಗ್ಲೋಬಲ್ ಇಕಾಲಜಿ ಮತ್ತು ಕನ್ಸರ್ವೇಷನ್ ವರದಿ. ಅದರಲ್ಲೂ ಶಿವಾಲಿಕ್ ಪರ್ವತ ಪ್ರದೇಶ, ಮಧ್ಯ ಭಾರತ ಹಾಗೂ ಪಶ್ಚಿಮ ಘಟ್ಟ ಪ್ರದೇಶದ ವ್ಯಾಪ್ತಿಯ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಲಂಟಾನಾ ಹಾವಳಿ ಮಿತಿಮೀರಿದೆ. ಗಣತಿ ಪ್ರಕಾರ ಹುಲಿಗಳ ಸಾಂದ್ರತೆ ಹೆಚ್ಚಿರುವುದು ಈ ಭಾಗದಲ್ಲಿಯೇ. ಆದರೆ, ಈ ಪ್ರದೇಶದಲ್ಲೇ ಲಂಟಾನಾ ಹಾವಳಿ ವಿಪರೀತವಾಗಿರುವುದು ಹುಲಿ ಸಂರಕ್ಷಣೆಯಲ್ಲಿನ ಅತ್ಯಂತ ದೊಡ್ಡ ತೊಡಕುಗಳಲ್ಲಿ ಒಂದು ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

ಜೀವಜಾಲದಲ್ಲಿ ಹುಲ್ಲಿನ ಪಾತ್ರ ಮಹತ್ವಪೂರ್ಣವಾದುದು. ಅರಣ್ಯ ಪ್ರದೇಶಗಳಲ್ಲಿನ ಬಹುತೇಕ ಬಲಿಪ್ರಾಣಿಗಳ ಪ್ರಧಾನ ಆಹಾರ ಹುಲ್ಲು. ಲಂಟಾನಾ ಬೆಳೆದಲ್ಲಿ, ಹುಲ್ಲು ನಾಶವಾಗುತ್ತದೆ. ಇದರಿಂದ ಹುಲ್ಲನ್ನು ಅವಲಂಬಿಸಿರುವ ಬಲಿ ಪ್ರಾಣಿಗಳ ಆಹಾರ ಕೊರತೆಯಾಗುತ್ತದೆ. ಬಲಿ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಲೂ ಇದು ಕಾರಣವಾಗುತ್ತದೆ. ಪರಿಣಾಮವಾಗಿ ಹುಲಿ, ಚಿರತೆಯಂತಹ ಬೇಟೆ ಪ್ರಾಣಿಗಳಿಗೆ ಆಹಾರ ಲಭ್ಯತೆ ಪ್ರಮಾಣ ಕಡಿಮೆಯಾಗುತ್ತದೆ. ಲಂಟಾನಾದಿಂದಾಗಿ ದೇಶದ ಕಾಡುಗಳಲ್ಲಿನ ಆಹಾರ ಸರಪಳಿಗೆ ಧಕ್ಕೆಯಾಗುತ್ತಿದೆ. ಹುಲಿಗಳ ಸಂಖ್ಯಾವೃದ್ಧಿಯನ್ನು ಇದು ಕುಂಠಿತಗೊಳಿಸುತ್ತದೆ. ದೇಶದ ಹುಲಿ ಸಂರಕ್ಷಣೆ ಯೋಜನೆಯಲ್ಲಿ ಇದು ಅತ್ಯಂತ ದೊಡ್ಡ ಸವಾಲುಗಳಲ್ಲಿ ಒಂದು. ಆದರೂ, ವೈಜ್ಞಾನಿಕ ವಿಧಾನದಡಿ ಲಂಟಾನಾ ಸಮಸ್ಯೆಯ ನಿರ್ವಹಣೆಗೆ ಸರ್ಕಾರ ಮತ್ತು ಅರಣ್ಯ ಇಲಾಖೆ ಕ್ರಮವಹಿಸಿಲ್ಲ.

ಪೂರಕ ಮಾಹಿತಿ: ಕೆ.ಎಚ್.ಓಬಳೇಶ್, ಸೂರ್ಯನಾರಾಯಣ ವಿ., ಅಮೃತಕಿರಣ ಬಿ.ಎಂ.



ನಾಗರಹೊಳೆ ಅಭಯಾರಣ್ಯದ ದಮ್ಮನಕಟ್ಟೆ ವ್ಯಾಪ್ತಿಯಲ್ಲಿ ಮರಿಗಳೊಂದಿಗೆ ಪ್ರವಾಸಿಗರಿಗೆ ಗೋಚರಿಸಿದ ಹುಲಿ

ಹುಲಿಗಳ ಕಳ್ಳಬೇಟೆ ನಿಂತಿದೆ




ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ 200ಕ್ಕೂ ಹೆಚ್ಚು ಕಳ್ಳಬೇಟೆ ತಡೆ ಶಿಬಿರ ಮಾಡಲಾಗಿದೆ. ಸುಮಾರು 20 ವರ್ಷಗಳ ಹಿಂದೆ ಹುಲಿಗಳ ಕಳ್ಳಬೇಟೆ ಹೆಚ್ಚಾಗಿತ್ತು. ಅವುಗಳ ಚರ್ಮ, ಉಗುರುಗಳಿಗಾಗಿ ಕೊಲ್ಲಲಾಗುತ್ತಿತ್ತು. ಈಗ ಇದಕ್ಕೆ ಸಂಪೂರ್ಣ ಕಡಿವಾಣ ಹಾಕಲಾಗಿದೆ. ನಾವು ಕೈಗೊಳ್ಳುತ್ತಿರುವ ಹುಲಿಗಳ ಸಂರಕ್ಷಣಾ ಕಾರ್ಯದಿಂದ ಇದು ಸಾಧ್ಯವಾಗಿದ್ದು, ಇದರಲ್ಲಿ ಅರಣ್ಯ ಸಿಬ್ಬಂದಿಯ ಶ್ರಮ ಹೆಚ್ಚಿದೆ. ಪ್ರತಿ ಶಿಬಿರದಲ್ಲಿ ನಾಲ್ವರು ಅರಣ್ಯ ವೀಕ್ಷಕರನ್ನು (ವಾಚರ್ಸ್) ನಿಯೋಜಿಸಲಾಗಿದ್ದು, ಅವರಿಗೆ ಎಲ್ಲಾ ಸೌಲಭ್ಯ ನೀಡಲಾಗುತ್ತಿದೆ ಮತ್ತು ಹುಲಿ ಸಂರಕ್ಷಣೆಗೆ ಸ್ಥಳೀಯರ ನೆರವನ್ನೂ ಪಡೆಯಲಾಗುತ್ತಿದೆ.

ಕುಮಾರ್ ಪುಷ್ಕರ್
ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)

ದೇಶದಲ್ಲಿ ಹುಲಿ ಹೆಜ್ಜೆ

ಹುಲಿ ಸಂರಕ್ಷಿತ ಪ್ರದೇಶಗಳ ಬ್ಲಾಕ್‌ಗಳು



ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 9-4-1998

● **ಕಾವೇರಿ ಮಧ್ಯಂತರ ತೀರ್ಪು ಜಾರಿ ಬೇಡ: ಪ್ರಧಾನಿಗೆ ಪಟೇಲ್ ಆಗ್ರಹ**

ನವದೆಹಲಿ, ಏ. 8– ಉದ್ದೇಶಿತ ರಾಷ್ಟ್ರೀಯ ಜಲ ನೀತಿಯನ್ನು ಇನ್ನೂ ಪ್ರಕಟಿಸದಿರುವ ಹಿನ್ನೆಲೆಯಲ್ಲಿ ಕಾವೇರಿ ಜಲ ವಿವಾದದ ಬಗ್ಗೆ ನ್ಯಾಯಪಂಚಾಯತಿ ನೀಡಿರುವ ಮಧ್ಯಂತರ ತೀರ್ಪನ್ನು ಜಾರಿಗೊಳಿಸಲು ಅಧಿಸೂಚನೆ ಹೊರಡಿಸಬಾರದೆಂದು ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ರಾಜ್ಯ ಸರ್ಕಾರ ಒತ್ತಾಯಿಸಿದೆ.

ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದ ಉನ್ನತ ಮಟ್ಟದ ನಿಯೋಗವು ಇಂದು ಪ್ರಧಾನ ಮಂತ್ರಿ ಅವರನ್ನು ಭೇಟಿ ಮಾಡಿ ಅಗತ್ಯವಾದರೆ ಸಂಬಂಧಪಟ್ಟ ರಾಜ್ಯಗಳ ಮುಖ್ಯಮಂತ್ರಿ ಸಭೆಯನ್ನು ಕರೆದು ಸೂಕ್ತ ಪರಿಹಾರ ಕಂಡುಹಿಡಿಯಬೇಕೆಂದು ಆಗ್ರಹಪಡಿಸಿತು.

50 ವರ್ಷಗಳ ಹಿಂದೆ — ಸೋಮವಾರ, 9-4-1973

● **ವರ್ಣ ಚಿತ್ರಕಾರ ಪಿಕಾಸೋ ನಿಧನ**

ಮೌಗಿನ್ಸ್ (ಫ್ರಾನ್ಸ್), ಏ. 8– ಈ ಶತಮಾನದ ಅತ್ಯಂತ ಶ್ರೇಷ್ಠ ವರ್ಣ ಚಿತ್ರಕಾರ ಪಾಬ್ಲೋ ಪಿಕಾಸೋ ಅವರು ಇಂದು ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು.

ಇತ್ತೀಚಿನ ಮೂರು ವರ್ಷಗಳನ್ನು ಏಕಾಂತದಲ್ಲಿ ಕಳೆದ ಕಲಾವಿದ ಕೆಲವರಿಗೆ ಮಾತ್ರ ಸಂದರ್ಶನ ನೀಡಿದ್ದರು. ಕೊನೆ ಉಸಿರು ಇರುವವರೆಗೂ ಕಲಾಪೋಷಣೆಯಲ್ಲೇ ಕಳೆದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಏಪ್ರಿಲ್ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ತೃತೀಯ ಗಂ. 09-36 ನಕ್ಷತ್ರ: ವಿಶಾಖಾ ಗಂ. 14-00 ಯೋಗ: ಸಿದ್ಧಿ(ಆಸ್ರಿಕ್) ಗಂ. 22-13, ಕರಣ: ವಿಷ್ಟಿ ಗಂ. 09-36, ಮೀನ ಮಾಸದ 25 ನೇ ದಿನ, ಮಳೆನಕ್ಷತ್ರ: ರೇವತಿ 3
ರಾಹುಕಾಲ : ಸಾಯಂಕಾಲ 04-30 – 06-00,
ಸೂರ್ಯೋದಯ : 06-25 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 17 ರಂಜಾನ್
ದಿನ ವಿಶೇಷ : ಈಸ್ಟರ್ ಭಾನುವಾರ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 2, 11

ಮೇಷ: ಸಂಧಾನ ಅಥವಾ ಮಧ್ಯಸ್ಥಿಕೆ ವಹಿಸುವ ಕೆಲಸಗಳನ್ನು ಮಾಡುವಿರಿ. ಯಾರ ಪರವನ್ನು ವಹಿಸುವುದಿದ್ದರು ಸಹ ಸರಿಯಾದ ವಿಚಾರ ತಿಳಿಯದೆ ಮುಂದುವರೆಯಬೇಡಿ. ಉಷ್ಣದಿಂದಾಗಿ ಆರೋಗ್ಯ ಹದಗೆಡಬಹುದು.

ವೃಷಭ: ಜನತಾ ನಿರ್ಧಾರ ಅರಿಯದೆ ರಾಜಕೀಯ ನಾಯಕರು ಇಟ್ಟ ತಪ್ಪು ಹೆಜ್ಜೆ ನಿಂದನೆಗೊಳಗಾಗುವ ಸಾಧ್ಯತೆಯಿದೆ. ನಿಮ್ಮ ಕುಟುಂಬದ ಭಿನ್ನಾಭಿಪ್ರಾಯಗಳನ್ನು ಬೇರೆಯವರಲ್ಲಿ ಹೇಳಿಕೊಳ್ಳಬೇಡಿ. ದುರುಪಯೋಗಕ್ಕೊಳಗಾಗಬಹುದು.

ಮಿಥುನ: ನಿಮ್ಮ ಒಳ್ಳೆಯತನದಿಂದ ನೀವು ನುಂಗಿಕೊಂಡ ಸಿಟ್ಟು, ತಪ್ಪು ಮಾಡಿದವರ ನಿರ್ಲಕ್ಷ್ಯಕ್ಕೆ ಕಾರಣವಾಗುತ್ತದೆ. ಐಹಿಕ ಸುಖಗಳನ್ನು ಆದಷ್ಟು ಬಿಟ್ಟುಬಿಡುವ ಮನಸ್ಥಿತಿ ಹಿರಿಯ ನಾಗರಿಕರಲ್ಲಿ ಉಂಟಾಗುತ್ತದೆ.

ಕರ್ಕಾಟಕ: ಸ್ವಪ್ರಯತ್ನದಿಂದಾಗಿ ನೀವು ತಲುಪಿದ ಸ್ಥಾನ ಇತರರ ಸಹಾಯದಿಂದ ಪಡೆದದ್ದು ಎಂಬ ಮಾತನ್ನು ಜನರ ಬಾಯಲ್ಲಿ ಕೇಳಿ ಅಸಮಾಧಾನವಾಗಬಹುದು. ನಿಮ್ಮ ವ್ಯವಹಾರ ಪಾರದರ್ಶಕತೆ ಶುಭವನ್ನುಂಟು ಮಾಡುತ್ತದೆ.

ಸಿಂಹ: ಹಿರಿಯ ವ್ಯಕ್ತಿಗಳ ಮಾತುಕತೆಯ ಮೂಲಕ ಪಡೆದ ಮಾರ್ಗದರ್ಶನ ಭೂಗೋಳ ಶಾಸ್ತ್ರಜ್ಞರಿಗೆ ಬಹಳ ಪ್ರಯೋಜನಕ್ಕೆ ಬರಲಿದೆ. ಮನೋನಿಯಂತ್ರಣದಿಂದಾಗಿ ಮನಸ್ಸಿನ ಅಸಮಧಾನಗಳನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ.

ಕನ್ಯಾ: ಮನಸ್ಸು ಕೆಟ್ಟ ಆಲೋಚನೆ, ವಂಚನೆ ಮಾಡದಂತೆ ತಡೆಯೊಡ್ಡಿ. ಯಾರಾದರು ಆತ್ಮಹತ್ಯೆಯ ಪ್ರಯತ್ನದಲ್ಲಿದ್ದರೆ ಅದು ನಿಮ್ಮಿಂದ ತಡೆಗಟ್ಟಲು ಸಾಧ್ಯ. ಹೆಚ್ಚು ಜ್ಞಾನ ಪಡೆಯುವ ಮನಸ್ಸಿನಿಂದ ಪರ ಊರಿಗೆ ತೆರಳುವ ಸಾಧ್ಯತೆ.

ವೃಶ್ಚಿಕ: ಉತ್ತಮ ಮಾತಿನ ಕಲೆಯು ನಿಮ್ಮ ಬೆಂಬಲಕ್ಕೆ ಸದಾ ಇದ್ದೇ ಇರುತ್ತದೆ. ಕಂಕಣ ಭಾಗ್ಯ ನಿಮ್ಮನ್ನರಸಿ ಬಂದಾಗ ನಿರಾಕರಿಸುವಂತಹ ಮೂರ್ಖತನದ ಕೆಲಸ ಮಾಡಬೇಡಿ. ಸೋದರ ಮಾವನ ಮಾತನ್ನು ಕೇಳಿ.

ತುಲಾ: ನಿಮ್ಮ ಶೀಘ್ರ ಕಲಿಕಾ ಸಾಮರ್ಥ್ಯ ಇತರರ ಹುಬ್ಬು ಮೇಲೇರುವಂತೆ ಮಾಡುತ್ತದೆ. ನಿಮ್ಮ ನಿಲುವಿನಲ್ಲಿ ಆದಷ್ಟು ಸ್ಥಿರವಾಗಿರುವಂತಹ ಯೋಚನೆಯನ್ನು ಮಾಡಿ. ಅಭಿಮಾನಿಗಳ ಅಭಿಲಾಶೆಯನ್ನು ಕಡೆಗಣಿಸದಿರಿ.

ಧನು: ಭವಿಷ್ಯವನ್ನು ಗ್ರಹಿಸುವ ನಿಮ್ಮ ವಿಶೇಷ ಗುಣವನ್ನು ಮಿತ್ರರೆದುರು ಪ್ರದರ್ಶಿಸಿದಾಗ ಅವರು ಅವಕ್ಕಾಗುವ ಸಂಭವವಿದೆ. ನಿಷ್ಠಾವಂತ ಸಂಗಾತಿಯಾಗಿರುವ ನಿಮಗೆ ಉಡುಗೊರೆ ದೊರೆಯುವ ಸಂಭವವಿದೆ.

ಮಕರ: ನಿಮ್ಮ ಕೃಪಣತೆ ಹೆಚ್ಚು ಪ್ರದರ್ಶಿಸಿ, ಮನೆಯ ಸಾಮಾಗ್ರಿಗಳನ್ನು ತಂದು ಹಾಕುವಲ್ಲಿ ಕಡಿಮೆ ಮಾಡಿ ಮನೆಯವರ ಅಸಮಧಾನಕ್ಕೆ ಕಾರಣವಾಗಬೇಡಿ. ಸಂಗೀತ ಹಾಗು ಭರತನಾಟ್ಯದಲ್ಲಿ ಆಸಕ್ತಿ ಹೆಚ್ಚಾಗಬಹುದು.


ಕುಂಭ: ಸಹೋದರನ ಕೆಲವು ಅಹಿತಕರ ನಡವಳಿಕೆಗಳು ನಿಮಗೆ ಅಪಮಾನ ಆದಂತೆ ಆಗಬಹುದು. ಅನುಷ್ಠಾನದ ಉತ್ತಮ ಫಲ ನಿಮ್ಮ ವರ್ಚಸ್ಸನ್ನು ಅಧಿಕಗೊಳಿಸುತ್ತದೆ. ಕೆಲಸದ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ಮಾಡುವಿರಿ.

ಮೀನ: ಪ್ರಾಚೀನ ಕಾಲದಿಂದ ನಿಮ್ಮ ಪೂರ್ವಿಕರು ನಡೆಸಿಕೊಂಡು ಬರುತ್ತಿರುವ ಸಂಪ್ರದಾಯಗಳನ್ನು ಕೈಬಿಡುವ ಯೋಚನೆ ಮಾಡಬೇಡಿ. ನಿಮ್ಮ ದೃಷ್ಟಿಕೋನದಲ್ಲಿ ಸಾಮ್ಯತೆ ಇರುವವರಲ್ಲಿ ಮಾತ್ರ ಯೋಜನೆಗಳನ್ನು ಹಂಚಿಕೊಳ್ಳಿ.

ಪದಬಂಧ 5283 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತರ್ಕ ಮಾಡುತ್ತಿರುವ ಹಂಚಿಕೆದಾರ (4)
3.ಒಳ್ಳೆಯ ಬುದ್ಧಿ (3)
5.ಕರುವಿಗೆ ತೋರಿದ ದಯೆ (3)
7.ಪಾಯ ತೋಡುವಾಗ ಹೂಡಿದ ಯುಕ್ತಿ (3)
8.ಸಮಯವನ್ನು ವ್ಯರ್ಥವಾಗಿ ಕಳೆಯುವುದು (5)
11.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)
12.ಮೈಸೂರು ಎಂದಾಗ ನೆನಪಾಗುವ ಹೂವು (3)
15.ನಗ ಖರೀದಿಗೆ ತಕ್ಕುದಾದ ಷಹರು (3)
16.ದಾಯಾದಿ ಮನೆ ಹತ್ತಿರ ಕೂಡಿರುವ ಗುಂಪು (4)

ಮೇಲಿಂದ ಕೆಳಕ್ಕೆ
1.ಬಿಡುವು ಹೀಗೆ ಬಂದಿದೆ (3)
2.ಕೆಮ್ಮಿದಾಗ ಹೊರ ಬೀಳುವ ಶ್ಲೇಷ್ಮ (2)
3.ಯಮನ ಹತ್ತಿರ ಕಳೆದ ಕಾಲ (3)
4.ಪ್ರತಿಯಾಗಿ ಹೇಳುವ ಮಂತ್ರ (4)
6.ಕಾಯ ಬಗ್ಗಿಸಿ ಮಾಡಿದ ಕೆಲಸವಿಲ್ಲಿ ಉಲ್ಟಾ ಆಗಿದೆ (3)
7.ಕನ್ನಡಿಗ ನೀಡಿದ ಎಕ್ಸಾಂಪಲ್ (5)
9.ತಿರುಗಿದಾಗ ಕಾಣಿಸಿರುವ ಸಾವು (3)
10.ಕೊನೆಗೆ ಮರ್ಯಾದೆಯನ್ನಿಟ್ಟು ಮಾಡಿರುವ ಹೋಲಿಕೆ (4)
11.ಹತ್ತು ನೂರಿದು (3)
13.ಇಳೆಯ ಹತ್ತಿರವಿರುವ ಮಿತ್ರ (3)
14.ವಂಚನೆಗೊಂದು ಪರ್ಯಾಯ ಪದ (2)



5282ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದ್ಧಕಂಕಣ 2.ಪ್ರಧಾನ 5.ಮರುನುಡಿ 7.ಯಜಮಾನ 9.ಪದವೀದಾನ 13.ಮನೋಗತ 15.ರಸಾಭಾಸ 16.ರಹಸ್ಯ 17.ವಾಚನಾಲಯ

ಮೇಲಿಂದ ಕೆಳಕ್ಕೆ:
1.ಬಹುಮತ 3.ನಸುನಗು 4.ಗಾಯ 6.ಡಿಮದ 8.ಜವಾನ 9.ಪರಾಗ 10.ದಾತಾರ 11.ನಮಸ್ಕಾರ 12.ಸುಸಮಯ 14.ತಜ್ಞ

ಸುಡೊಕು 5669

	2			5		8		
8			3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5668 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ನಂದಿನಿ ಉಳಿಸಿ ಅಭಿಯಾನ ತೀವ್ರ

ಅಮುಲ್ ವಿರುದ್ಧ ಕಾಂಗ್ರೆಸ್, ಜೆಡಿಎಸ್ ಕಿಡಿ: ಬಿಜೆಪಿ ಸಮರ್ಥನೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮುಲ್ ಹಾಲು ರಾಜ್ಯದಲ್ಲಿ ಮಾರಾಟ ಮಾಡುವುದನ್ನು ವಿರೋಧಿಸಿ 'ನಂದಿನಿ ಉಳಿಸಿ' ಅಭಿಯಾನ ಮತ್ತಷ್ಟು ತೀವ್ರತೆ ಪಡೆದುಕೊಂಡಿದೆ.

ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಅಭಿಯಾನ ನಡೆಯುತ್ತಿದ್ದು, ನಂದಿನಿ ಎಂದರೆ ಕನ್ನಡಿಗರ ಅಸ್ಮಿತೆಯಾಗಿದ್ದು, ಗುಜರಾತಿನ ಅಮುಲ್ ಪ್ರವೇಶಕ್ಕೆ ಅವಕಾಶ ನೀಡಬಾರದು ಎಂಬ ಕೂಗು ದೊಡ್ಡದಾಗಿದೆ. ಅಮುಲ್ ಹಾಲು ಮತ್ತು ಮೊಸರು ಮಾರಾಟಕ್ಕೆ ಮುಂದಾದರೆ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ ಎಚ್ಚರಿಕೆ ನೀಡಿದೆ.

ಈ ವಿಷಯ ರಾಜಕೀಯ ಸ್ವರೂಪವನ್ನೂ ಪಡೆದುಕೊಂಡಿದ್ದು, ರಾಜ್ಯಕ್ಕೆ ಅಮುಲ್ ಪ್ರವೇಶ ಮಾಡುವುದನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ವಿರೋಧಿಸುತ್ತಿದ್ದು, ಬಿಜೆಪಿ ಮುಖಂಡರು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ.

'ನಂದಿನಿಯನ್ನು ಅಮುಲ್‌ನಲ್ಲಿ ವಿಲೀನ ಎಂದರೂ ಸಮರ್ಥನೆ, ಮೊಸರಿಗೆ ದಹಿ ಎಂದರೂ ಸಮರ್ಥನೆ, ನಂದಿನಿ ಮುಳುಗಿಸುವ ಷಡ್ಯಂತ್ರಕ್ಕೂ ಸಮರ್ಥನೆ, ಹಿಂದಿ ಹೇರಿಕೆಗೂ ಸಮರ್ಥನೆ' ಎಂದು ಬಿಜೆಪಿಯನ್ನು ಕಾಂಗ್ರೆಸ್ ಟೀಕಿಸಿದೆ. 'ದೊಡ್ಲ, ಹೆರಿಟೇಜ್, ಆರೋಕ್ಯ, ತಿರುಮಲ, ಹ್ಯಾಟ್ಸನ್ ಹಾಲು ರಾಜ್ಯಕ್ಕೆ ಪ್ರವೇಶಿಸಿ ಎಷ್ಟೋ ವರ್ಷಗಳಾಗಿವೆ. ಈ ಬಗ್ಗೆ ಚಕಾರವೆತ್ತದೆ ಅಮುಲ್ ಹಾಲನ್ನು ಮಾತ್ರ ಕಾಂಗ್ರೆಸ್ ವಿರೋಧಿಸುತ್ತಿದೆ' ಎಂದು ಟೀಕಿಸಿದ್ದಾರೆ.



ಹೋರಾಟಕ್ಕೆ ಸಜ್ಜು

'ಇ-ಕಾಮರ್ಸ್ ಅಡಿಯಲ್ಲಿ ಅಮುಲ್ ಹಾಲು, ಮೊಸರು ಮಾರಾಟಕ್ಕೆ ಮುಂದಾದರೆ ಅಂಥ ಸಂಸ್ಥೆಗಳ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ ತೀವ್ರ ಸ್ವರೂಪದ ಹೋರಾಟ ನಡೆಸಲಿದೆ. ಅಮುಲ್ ಹಾಲು ಮಾರಾಟ ನಿಲ್ಲಿಸಬೇಕು, ಇಲ್ಲವಾದಲ್ಲಿ ಆಗುವ ಅನಾಹುತಕ್ಕೆ ಆ ಸಂಸ್ಥೆಗಳೇ ಜವಾಬ್ದಾರಿಯಾಗುತ್ತವೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ಎಚ್ಚರಿಕೆ ನೀಡಿದ್ದಾರೆ.

ಈ ಹಿಂದೆ ಆಂಧ್ರಪ್ರದೇಶದ ಕಲಬೆರಕೆ ಹಾಲಿನ ವಿರುದ್ಧ ಹೋರಾಟ ಸಂಘಟಿಸಿ ನಿಲ್ಲಿಸುವಲ್ಲಿ ಕರವೇ ಯಶಸ್ವಿಯಾಗಿತ್ತು. ಅದೇ ರೀತಿ ಈಗ ಅಮುಲ್ ವಿರುದ್ಧವೂ ಚಳವಳಿ ರೂಪಿಸಲಿದೆ. ನಂದಿನಿ ವಿರುದ್ಧ ನಡೆದಿರುವ ಪಿತೂರಿಗೆ ಕರವೇ ಸಂಬಂಧಪಟ್ಟವರಿಗೆ ತಕ್ಕ ಪಾಠ ಕಲಿಸಲಿದೆ ಎಂದು ತಿಳಿಸಿದ್ದಾರೆ.



ಮುಂದಿನ ವಾರದಿಂದ ಅಮುಲ್ ಹಾಲು ರಾಜ್ಯದ ಮಾರುಕಟ್ಟೆಗೆ

ಬೆಂಗಳೂರು: 'ಕರ್ನಾಟಕದಲ್ಲಿ ಮುಂದಿನ ವಾರದಿಂದ ಅಮುಲ್ ಹಾಲು ಮತ್ತು ಮೊಸರು ಮಾರಾಟವನ್ನು ಇ-ಕಾಮರ್ಸ್ ಮೂಲಕ ಆರಂಭಿಸಲಾಗುವುದು' ಎಂದು ಅಮುಲ್ ವ್ಯವಸ್ಥಾಪಕ ನಿರ್ದೇಶಕ ಜಯನ್ ಮೆಹ್ತಾ ತಿಳಿಸಿದ್ದಾರೆ.

ಟಿವಿ9 ವಾಹಿನಿಯೊಂದಿಗೆ ಮಾತನಾಡಿರುವ ಅವರು, 'ಅಮುಲ್ ಮತ್ತು ಕೆಎಂಎಫ್ ಎರಡೂ ರೈತರ ಸಹಕಾರ ಸಂಸ್ಥೆಗಳಾಗಿದ್ದು, ನಮ್ಮ ಸಂಬಂಧ ಚೆನ್ನಾಗಿದೆ. ಅನಾರೋಗ್ಯಕರ ಪೈಪೋಟಿ ನಡೆಸುವುದಿಲ್ಲ' ಎಂದಿದ್ದಾರೆ.

'ಅಮುಲ್ ತಾಜಾ ಟೋನ್ಡ್ ಮಿಲ್ಕ್(ಲೀಟರ್‌ಗೆ ₹54), ಗೋಲ್ಡ್ ಮಿಲ್ಕ್(₹64), ಮೊಸರನ್ನು(₹66) ಇ-ಕಾಮರ್ಸ್‌ನಲ್ಲಿ ಮಾತ್ರ ಮಾರಾಟ ಮಾಡಲಾಗುವುದು' ಎಂದು ವಿವರಿಸಿದರು.



ಗುಜರಾತಿನ ಬ್ರ್ಯಾಂಡ್

ಅಮುಲ್ ವಿಷಯದಲ್ಲಿ ನಾವು ಸುಮ್ಮನಿರಲ್ಲ. ಅಮುಲ್ ಗುಜರಾತ್‌ನಲ್ಲಿರುವುದು. ಅದು ಅವರ ಬ್ರ್ಯಾಂಡ್. ನಮ್ಮದು ನಂದಿನಿ. ಅದನ್ನು ಇಲ್ಲಿ ಬ್ರ್ಯಾಂಡ್ ಮಾಡಿದಾಗ ನೀವು ಸುಮ್ಮನಿದ್ದೀರಲ್ಲ. ಯಾಕೆ? ನಮ್ಮ ನಂದಿನಿ ಉತ್ಪನ್ನ ಬಿದ್ದು ಹೋದರೆ ನಮ್ಮ ರೈತರಿಗೆ ಸಮಸ್ಯೆ ಆಗಲಿದೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ರಾಜ್ಯ ಬಿಜೆಪಿಯ ದುರ್ಬಲ ನಾಯಕತ್ವದಿಂದಾಗಿ ಕೆಎಂಎಫ್ ಬಲಿ ಕೊಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರೇ ನೇರ ಕಾರಣ. ಕೆಎಂಎಫ್‌ನ ಕಬಳಿಕೆಯ ವಿರುದ್ಧ ಕನ್ನಡಿಗರೆಲ್ಲರೂ ಒಮ್ಮತದಿಂದ ವಿರೋಧಿಸಬೇಕಾಗುತ್ತದೆ. ಅಮುಲ್ ಉತ್ಪನ್ನಗಳನ್ನು ಖರೀದಿಸುವುದಿಲ್ಲ ಎಂದು ಕನ್ನಡಿಗರೆಲ್ಲರೂ ಪ್ರತಿಜ್ಞೆ ಮಾಡಬೇಕು.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ಕೆಎಂಎಫ್ ಮುಳುಗಿಸಲು ಅಧಿಕಾರಿಗಳೂ ಶಾಮೀಲು'

ಕೆಎಂಎಫ್ ಅನ್ನು ಹಂತ-ಹಂತವಾಗಿ ಮುಗಿಸಲು ಹುನ್ನಾರ ನಡೆದಿದೆ. ಹಣದ ಆಸೆಗಾಗಿ ಕೆಎಂಎಫ್ ಅಧಿಕಾರಿಗಳೇ ಇದರಲ್ಲಿ ಶಾಮೀಲಾಗಿದ್ದಾರೆ. ಅಮುಲ್ ವಿಚಾರದಲ್ಲಿ ರಾಜ್ಯದ ಬಿಜೆಪಿ ನಾಯಕರು ಗುಜರಾತಿನವರನ್ನು ಓಲೈಸಲು ಹೊರಟಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಇದರ ಅರಿವು ಇದೆಯೋ ಇಲ್ಲವೋ ಗೊತ್ತಿಲ್ಲ. ರೈತರ ಬದುಕಿನಲ್ಲಿ ಚೆಲ್ಲಾಟ ಆಡಬಾರದು.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸುಳ್ಳು ಸುದ್ದಿಗೆ ಆತಂಕ ಬೇಡ: ಕೆಎಂಎಫ್

'ನಂದಿನಿ ಹಾಲು ಲಭ್ಯವಾಗುವುದಿಲ್ಲ ಎಂಬ ಸುದ್ದಿಗಳು ಹರಿದಾಡುತ್ತಿದ್ದು, ಇದು ಸುಳ್ಳು' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಸ್ಪಷ್ಟಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಗುಣಮಟ್ಟ ಮತ್ತು ಸ್ಪರ್ಧಾತ್ಮಕ ಬೆಲೆಯ ಮೂಲಕವೇ ನಂದಿನಿ ಹಾಲು ಮನೆ ಮಾತಾಗಿದೆ. ಚೆನ್ನೈ ಮತ್ತು ಗೋವಾದಲ್ಲಿ ನಿತ್ಯ 7 ಲಕ್ಷ ಲೀಟರ್ ಹಾಲು ಮತ್ತು ಮೊಸರು ಮಾರಾಟ ಮಾಡಲಾಗುತ್ತಿದೆ. ಮಾರುಕಟ್ಟೆ ವಿಸ್ತರಣೆಗೆ ಮತ್ತಷ್ಟು ಯೋಜನೆ ರೂಪಿಸಲಾಗಿದೆ. ಗ್ರಾಹಕರು ಸುಳ್ಳು ಸುದ್ದಿಗಳಿಗೆ ಆತಂಕಪಡಬಾರದು' ಎಂದು ಹೇಳಿದ್ದಾರೆ.

'ಉಳಿಕೆ ಹಾಲನ್ನು ರೈತರು ಎಲ್ಲಿ ಮಾರಾಟ ಮಾಡಬೇಕು'

ಇಲ್ಲಿ ಅಮುಲ್ ಹಾಲು ಮಾರಾಟ ಪ್ರಯತ್ನ ಹೊಸದಲ್ಲ. ಇಲ್ಲಿ ಮುಖ್ಯವಾಗಿರುವುದು ಆಯಾ ರಾಜ್ಯದ ರೈತರ ಹಿತಾಸಕ್ತಿ ವಿಷಯ ಮಾತ್ರ. ಲಕ್ಷಾಂತರ ಲೀಟರ್ ಹಾಲು ಅಮುಲ್‌ನಿಂದ ಮಾರಾಟಕ್ಕೆ ಬಂದರೆ ಪರಿಸ್ಥಿತಿ ಕಷ್ಟವಾಗಲಿದೆ. 73 ಲಕ್ಷ ಕೆಜಿಗೂ ಹೆಚ್ಚು ಹಾಲು ಇಲ್ಲಿ ಉತ್ಪಾದನೆಯಾಗುತ್ತಿದೆ. ಹಾಲು ಉಳಿದರೆ ಮಾರಾಟ ಮಾಡಲು ರೈತರು ಎಲ್ಲಿಗೆ ಹೋಗಬೇಕು? ಅಮುಲ್ ಎಲ್ಲ ಉತ್ಪನ್ನಗಳನ್ನು ಇಲ್ಲಿ ಮೊದಲಿನಿಂದ ಮುಕ್ತವಾಗಿ ಮಾರಾಟ ಮಾಡುತ್ತಿದೆ. ಅದಕ್ಕೆ ಯಾವ ವಿರೋಧವೂ ಇಲ್ಲ. ಆದರೆ, ಈಗ ನೇರವಾಗಿ ಹೊಸದಾಗಿ ಪಾಲಿಥಿನ್ ಪ್ಯಾಕ್‌ನಲ್ಲಿ ಹಾಲು ಮಾರಾಟ ಮಾಡಲು ಬರುತ್ತಿದೆ.

ಎ.ಎಸ್. ಪ್ರೇಮನಾಥ್, ಕೆಎಂಎಫ್ ಹಿಂದಿನ ವ್ಯವಸ್ಥಾಪಕ ನಿರ್ದೇಶಕ

'ಕಾಂಗ್ರೆಸ್ ನಾಯಕರಿಗೆ ರಾತ್ರೋರಾತ್ರಿ ಪ್ರೀತಿ'

ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್‌ನ ಉತ್ಪನ್ನ ಎಂಬ ಕಾರಣಕ್ಕೆ ಕಾಂಗ್ರೆಸ್ ನಾಯಕರು ಬೆಂಗಳೂರಿನಲ್ಲಿ 'ಅಮುಲ್' ಉತ್ಪನ್ನಗಳ ಮಾರಾಟ ವಿರೋಧಿಸುತ್ತಿದ್ದಾರೆ. ನಂದಿನಿ ಉತ್ಪನ್ನಗಳ ಮೇಲೆ ಕಾಂಗ್ರೆಸ್‌ನವರಿಗೆ ರಾತ್ರೋರಾತ್ರಿ ಪ್ರೀತಿ ಹುಟ್ಟಿಕೊಂಡಿದೆ. ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದ ಸಾಕಷ್ಟು ಹಾಲು ಮತ್ತು ಹಾಲಿನ ಉತ್ಪನ್ನಗಳು ರಾಜ್ಯದಲ್ಲಿ ಮಾರಾಟ ಆಗುತ್ತಿದ್ದರೂ ಏಕೆ ವಿರೋಧಿಸುತ್ತಿಲ್ಲ.

ತೇಜಸ್ವಿ ಸೂರ್ಯ, ಅಧ್ಯಕ್ಷ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಘಟಕ

'ಹಾಲಿನ ವಿಚಾರವನ್ನು ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ'

ನಂದಿನಿ ಉತ್ಪನ್ನಗಳು ಬೇರೆ ರಾಜ್ಯ ಹಾಗೂ ದೇಶಗಳಲ್ಲೂ ಮಾರಾಟವಾಗುತ್ತಿದ್ದು, ಯಾವುದೇ ಸ್ಪರ್ಧೆ ಎದುರಿಸಲು ಸಿದ್ಧವಾಗಿವೆ. ಅಮೂಲ್ ಉತ್ಪನ್ನಗಳ ಮಾರಾಟದ ವಿಚಾರವನ್ನು ಕಾಂಗ್ರೆಸ್‌ನವರು ರಾಜಕೀಯಗೊಳಿಸಿದ್ದಾರೆ. ನಂದಿನಿ ಉತ್ಪನ್ನಗಳು ನಮ್ಮ ರಾಜ್ಯದ ಹೆಮ್ಮೆಯಾಗಿದೆ. ಯಾವುದೇ ಉತ್ಪನ್ನ ಯಾವುದೇ ಭಾಗಗಳಲ್ಲಿ ಮಾರಾಟವಾಗಬಹುದು. ರಾಜ್ಯದಲ್ಲಿ ಈಗಾಗಲೇ 16 ರಿಂದ 18 ಕಂಪನಿಗಳು ತಮ್ಮ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿವೆ. ಆಗ ಇವರಿಗೆ ಯಾವುದೇ ಸಮಸ್ಯೆ ಇರಲಿಲ್ಲ. ಅಮೂಲ್ ಕಂಪನಿ ತನ್ನ ಉತ್ಪನ್ನ ಮಾರಾಟ ಮಾಡಲು ಮುಂದಾದಾಗ ಮಾತ್ರ ಸಮಸ್ಯೆ ಆರಂಭವಾಗಿದೆ.

ಡಾ.ಕೆ.ಸುಧಾಕರ್, ಆರೋಗ್ಯ ಸಚಿವ



ಮೈಸೂರಿನ ಮಂಡಕಳ್ಳಿ ವಿಮಾನನಿಲ್ದಾಣಕ್ಕೆ ಶನಿವಾರ ರಾತ್ರಿ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೇಂದ್ರ ಸಚಿವರಾದ ಭೂಪೇಂದ್ರ ಯಾದವ್ ಮತ್ತು ಅಶ್ವಿನಿಕುಮಾರ್ ಚೌಬೆ ಬರ ಮಾಡಿಕೊಂಡರು

ಮೈಸೂರಿಗೆ ಬಂದ ಮೋದಿ

ಪ್ರಜಾವಾಣಿ ವಾರ್ತೆ

ಮೈಸೂರು/ ಚಾಮರಾಜನಗರ: 'ಹುಲಿ ಯೋಜನೆ'ಯ ಸುವರ್ಣ ಸಂಭ್ರಮದ ಪ್ರಯುಕ್ತ ಚಾಮರಾಜನಗರ ಜಿಲ್ಲೆಯ ಬಂಡಿಪುರ ಮತ್ತು ಮೈಸೂರಿನಲ್ಲಿ ಅರಣ್ಯ ಇಲಾಖೆಯು ಏ.9ರಂದು ಏರ್ಪಡಿಸಿರುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಶನಿವಾರ ರಾತ್ರಿ ಮೈಸೂರಿಗೆ ಆಗಮಿಸಿದರು.

ಬಂಡೀಪುರ ಹುಲಿ ರಕ್ಷಿತಾರಣ್ಯದಲ್ಲಿ ಅವರು ಸಫಾರಿ ನಡೆಸಲಿದ್ದು, ಮೈಸೂರಿನ ಕಾರ್ಯಕ್ರಮದಲ್ಲಿ ಹುಲಿ ಗಣತಿಯ ವರದಿಯನ್ನು ಬಿಡುಗಡೆ ಮಾಡಲಿದ್ದಾರೆ.

ಏ.9ರಂದು ಬೆಳಿಗ್ಗೆ 6.30ಕ್ಕೆ ಹೆಲಿಕಾಪ್ಟರ್‌ನಲ್ಲಿ ಮೈಸೂರಿನಿಂದ ಬಂಡೀಪುರಕ್ಕೆ ತೆರಳುತ್ತಾರೆ. ಬೆಳಿಗ್ಗೆ 7ಕ್ಕೆ ಗುಂಡ್ಲುಪೇಟೆ ತಾಲ್ಲೂಕಿನ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಬಳಿ ನಿರ್ಮಿಸಲಾಗಿರುವ ಹೆಲಿಪ್ಯಾಡ್‌ನಲ್ಲಿ ಇಳಿದು, ರಸ್ತೆ ಮೂಲಕ 7.15ಕ್ಕೆ ಬಂಡೀಪುರ ಕ್ಯಾಂಪಸ್‌ಗೆ ಬರಲಿದ್ದಾರೆ. 7.15ರಿಂದ ಎರಡು ತಾಸು ಬಂಡೀಪುರ ಅರಣ್ಯದಲ್ಲಿ ಸಫಾರಿ ಮಾಡಲಿದ್ದಾರೆ.

9.35ಕ್ಕೆ ರಸ್ತೆ ಮಾರ್ಗದ ಮೂಲಕ ನೆರೆಯ ತಮಿಳುನಾಡಿನ ಮಧುಮಲೆ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ಭೇಟಿ ನೀಡಲಿದ್ದಾರೆ. ಅಲ್ಲಿ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರದಲ್ಲಿ ಭಾಗವಹಿಸಿರುವ ಬೊಮ್ಮ-ಬೆಳ್ಳಿ ದಂಪತಿಯನ್ನು ಭೇಟಿಯಾಗಲಿದ್ದಾರೆ. ನಂತರ ವಿವಿಧ 12 ಹುಲಿ ಸಂರಕ್ಷಿತ ಪ್ರದೇಶಗಳ ನಿರ್ದೇಶಕರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಬೆಳಿಗ್ಗೆ 10ಕ್ಕೆ ಮೈಸೂರಿಗೆ ವಾಪಸಾಗುವ ಅವರು, ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ನಡೆಯಲಿರುವ ಹುಲಿ ಯೋಜನೆಯ ಸುವರ್ಣ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಹುಲಿ ಸಂರಕ್ಷಿತ ಪ್ರದೇಶಗಳ ನಿರ್ವಹಣೆಯ ಪರಿಣಾಮಕಾರಿ ಮೌಲ್ಯ ಮಾಪನದ 5ನೇ ಆವೃತ್ತಿಯ ಸಾರಾಂಶ ವರದಿ ಮತ್ತು ಹುಲಿ ಯೋಜನೆಯು 50 ವರ್ಷಗಳನ್ನು ಪೂರೈಸಿದ ಸ್ಮರಣಾರ್ಥ ಹೊರತಂದಿರುವ ನಾಣ್ಯ ಬಿಡುಗಡೆ ಮಾಡಲಿದ್ದಾರೆ.

ಉತ್ತರ ಒಳನಾಡಿನಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೆಳಗಾವಿ, ವಿಜಯಪುರ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ, ಕಲಬುರಗಿ, ಬೀದರ್ ಹಾಗೂ ಕೊಪ್ಪಳ ಜಿಲ್ಲೆಯ ಕೆಲವು ಭಾಗದಲ್ಲಿ ಮುಂದಿನ 24 ಗಂಟೆಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಈ ಭಾಗದಲ್ಲಿ ಪ್ರತಿ ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಮುನ್ನೆಚ್ಚರಿಕೆ ನೀಡಿದೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗಿನ ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮಧ್ಯಾಹ್ನದ ಬಳಿಕ ಮೋಡ ಮುಸುಕಿದ ವಾತಾವರಣ ಇರಲಿದೆ ಎಂದು ಸೂಚನೆ ನೀಡಿದೆ.

ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಬೆಳಗಾವಿ ಜಿಲ್ಲೆಯ ಗೋಕಾಕನಲ್ಲಿ 5 ಸೆಂ.ಮೀ, ಬೀದರ್‌ನ ಔರಾದ್‌ನಲ್ಲಿ 3, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಗದಗದ ನರಗುಂದ, ಬೀದರ್‌ನ ಹುಮನಾಬಾದ್, ಚಿಕ್ಕಮಗಳೂರಿನ ಶೃಂಗೇರಿಯಲ್ಲಿ 1 ಸೆಂ.ಮೀ ಮಳೆಯಾಗಿದೆ.

ಸಿಡಿಲು ಬಡಿದು 12 ಕುರಿ ಸಾವು

ಹುಬ್ಬಳ್ಳಿ: ಧಾರವಾಡ ತಾಲ್ಲೂಕಿನ ಸುತ್ತಮುತ್ತ, ಉತ್ತರ ಕನ್ನಡ ಜಿಲ್ಲೆಯ ಜೊಯಿಡಾದಲ್ಲಿ ಶನಿವಾರ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ.

ವಿಜಯಪುರ ಜಿಲ್ಲೆಯ ಕೊಲ್ಹಾರ ತಾಲ್ಲೂಕಿನ ಮಸೂತಿ ಕ್ರಾಸ್ ಬಳಿ ಶುಕ್ರವಾರ ತಡರಾತ್ರಿ ಸಿಡಿಲು ಬಡಿದು 12 ಕುರಿಗಳು ಸಾವಿಗೀಡಾಗಿವೆ. ಕುರಿಗಾಹಿ ಚಂದ್ರಶೇಖರ ಅವರಿಗೂ ಗಾಯಗಳಾಗಿದ್ದು, ವಿಜಯಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮುಂದಿನ ಐದು ದಿನಗಳಲ್ಲಿ ತಾಪಮಾನದಲ್ಲಿ ಹೆಚ್ಚಳ: ಐಎಂಡಿ

ನವದೆಹಲಿ: ದೇಶದ ಬಹುತೇಕ ಭಾಗಗಳಲ್ಲಿ ಮುಂದಿನ ಐದು ದಿನಗಳ ಕಾಲ ಬಿಸಿಲ ಝಳ ಹೆಚ್ಚಾಗಲಿದ್ದು, ಉಷ್ಣಾಂಶದಲ್ಲಿ 2ರಿಂದ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆ ಕಂಡುಬರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶನಿವಾರ ಹೇಳಿದೆ.

ಮುಂದಿನ ಐದು ದಿನಗಳ ಅವಧಿಯಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆ ಇಲ್ಲ ಎಂದು ಐಎಂಡಿ ಟ್ವೀಟ್ ಮಾಡಿದೆ.

ತಮಿಳುನಾಡು, ಪುದುಚೇರಿ, ಕಾರೈಕಲ್‌ನಲ್ಲಿ ಭಾನುವಾರ ಹಾಗೂ ಸೋಮವಾರ ಗುಡುಗು, ಸಿಡಿಲು ಸಹಿತ ಸಾಧಾರಣ ಮಳೆ ಬೀಳಲಿದೆ. ಮಂದಿನ ಐದು ದಿನಗಳಲ್ಲಿ ಕೇರಳದಲ್ಲಿ ಜೋರಾದ ಗಾಳಿಯೊಂದಿಗೆ ಸಾಧಾರಣ ಮಳೆಯಾಗಲಿದೆ.

ಬಿಜೆಪಿ ಅಭ್ಯರ್ಥಿ ಪಟ್ಟಿ: ಮುಗಿಯದ ಗೊಂದಲ

ಒಂದನೇ ಪುಟದಿಂದ...

ನಡ್ಡಾ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ, ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರದಾನ್, ಸಹ ಉಸ್ತುವಾರಿ ಮನ್ಸುಖ್ ಮಾಂಡವೀಯಾ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮತ್ತಿತರರು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.

ಪ್ರತಿ ಕ್ಷೇತ್ರದಲ್ಲಿ ಪಕ್ಷದ ಸ್ಥಿತಿಗತಿ ಹಾಗೂ ಆಕಾಂಕ್ಷಿಗಳ ಕುರಿತು ಬಸವರಾಜ ಬೊಮ್ಮಾಯಿ ಎರಡು, ನಳಿನ್ ಕುಮಾರ್ ಕಟೀಲು ಒಂದು ಹಾಗೂ ಕೇಂದ್ರ ನಾಯಕತ್ವ ಒಂದು ಸಮೀಕ್ಷೆ ನಡೆಸಿದ್ದು, ಈ ಸಮೀಕ್ಷೆಗಳ ಕುರಿತು ಸುದೀರ್ಘವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ನಾಲ್ಕು ಸಮೀಕ್ಷೆಗಳನ್ನು ತುಲನೆ ಮಾಡಿ ಅಂಕಗಳನ್ನು ನೀಡಲಾಗಿದ್ದು, ಗರಿಷ್ಠ ಅಂಕ ಪಡೆದವರ ಹೆಸರನ್ನು ಅಂತಿಮಗೊಳಿಸಲಾಗಿದೆ. ಪ್ರತಿ ಕ್ಷೇತ್ರದ ಕುರಿತು ಕೂಲಂಕಷವಾಗಿ ಚರ್ಚೆ ನಡೆದಿದ್ದು, ಹೀಗಾಗಿ ಸಭೆ ತಡ ರಾತ್ರಿಯ ವರೆಗೆ ಮುಂದುವರಿಯಿತು.

ಅನೇಕ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಸಂಸದರು ಶಿಫಾರಸು ಮಾಡಿದ್ದಾರೆ. ಇವರಿಗೆ ಟಿಕೆಟ್ ನೀಡಿದರೆ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ಸಂಸದರು ಹೇಳಿಕೊಂಡಿದ್ದಾರೆ. ಇಂತಹ ಶಿಫಾರಸುಗಳಿಗೆ ಮನ್ನಣೆ ನೀಡದಂತೆ ಕೇಂದ್ರ ನಾಯಕರು ತಾಕೀತು ಮಾಡಿದ್ದಾರೆ.

ಬಿಜೆಪಿಯ ಹಲವು ಟಿಕೆಟ್ ಆಕಾಂಕ್ಷಿಗಳು ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ಮುಖ್ಯಮಂತ್ರಿ ಹಾಗೂ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಲಾಬಿ ನಡೆಸುವ ಪ್ರಯತ್ನ ಮಾಡಿದರು. ಬೆಳಿಗ್ಗೆಯಿಂದ ರಾತ್ರಿಯವರೆಗೂ ಪಕ್ಷದ ಪ್ರಮುಖರ ಸಭೆ ನಡೆದಿದ್ದರಿಂದ ಅವರ ಯತ್ನಕ್ಕೆ ಫಲ ಸಿಗಲಿಲ್ಲ.

'ಭಾನುವಾರ ನಡೆಯುವ ಸಂಸದೀಯ ಮಂಡಳಿ ಸಭೆಯಲ್ಲಿ ಎಲ್ಲ 224 ಕ್ಷೇತ್ರಗಳ ಕುರಿತು ಚರ್ಚಿಸಲಾಗುತ್ತದೆ' ಎಂದು ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಹಾಲಿ ಶಾಸಕರಿಗೆ ಟಿಕೆಟ್ ಕೈತಪ್ಪುವ ವಿಚಾರದ ಕುರಿತು ಪ್ರತಿಕ್ರಿಯಿಸಿದ ಅವರು, 'ಕ್ಷೇತ್ರ ಮಟ್ಟ, ಪಕ್ಷದ ಹಂತ ಹಾಗೂ ಜನರ ಹಂತದಲ್ಲಿ ಅಭಿಪ್ರಾಯ ಏನಿದೆ ಎಂಬುದು ಬಹಳ ಮುಖ್ಯ. ಕೆಲವು ಕಡೆಗಳಲ್ಲಿ ಹೊಸ ನಾಯಕತ್ವ ಹೊರಹೊಮ್ಮಿದೆ. ಅದೆಲ್ಲ ನೋಡಿಕೊಂಡು ಟಿಕೆಟ್ ನೀಡುವ ಕುರಿತು ನಿರ್ಧಾರ ಮಾಡುತ್ತೇವೆ' ಎಂದು ಅವರು ಸ್ಪಷ್ಟಪಡಿಸಿದರು.

ರಾಹುಲ್ ರ‍್ಯಾಲಿ 3ನೇ ಬಾರಿ ಮುಂದೂಡಿಕೆ

ಒಂದನೇ ಪುಟದಿಂದ...

ಈ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಸ್ಪರ್ಧೆ ಕುರಿತು ರಾಹುಲ್ ಗಾಂಧಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂಬುದು ರಾಜ್ಯ ನಾಯಕರ ಮಾತು. ಕೋಲಾರ ಕ್ಷೇತ್ರದ ಗೊಂದಲ ಮುಂದುವರಿದಿರುವುದು ಸಹ ರ‍್ಯಾಲಿ ಮುಂದೂಡಿಕೆಗೆ ಕಾರಣ ಎಂಬುದು ಕೆಲವು ನಾಯಕರ ಅಭಿಪ್ರಾಯ.

ಚುನಾವಣಾ ಸಮಿತಿಯು 15 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಿದೆ. ಉಳಿದ 43 ಕ್ಷೇತ್ರಗಳ ಪೈಕಿ ಕೆಲವು ಕಡೆಗಳಲ್ಲಿ ಟಿಕೆಟ್‌ಗೆ ಪೈಪೋಟಿ ಜೋರಾಗಿದೆ. ಹಲವು ಕ್ಷೇತ್ರಗಳಲ್ಲಿ ಗೆಲ್ಲುವಂತಹ ಅಭ್ಯರ್ಥಿಗಳು ಕಾಂಗ್ರೆಸ್‌ನಲ್ಲಿ ಇಲ್ಲ. ಬಿಜೆಪಿ ಪಟ್ಟಿ ಬಿಡುಗಡೆಯಾದ ಬಳಿಕ ಟಿಕೆಟ್ ವಂಚಿತರು ಪಕ್ಷದ ಕದ ತಟ್ಟಬಹುದು ಎಂಬ ನಿರೀಕ್ಷೆಯಲ್ಲಿ 'ಕೈ' ನಾಯಕರು ಇದ್ದಾರೆ. ಈ ಎಲ್ಲ ಗೊಂದಲಗಳು ಮುಂದಿನ ವಾರದ ಅಂತ್ಯದ ವೇಳೆಗೆ ಬಗೆಹರಿಯಬಹುದು. ಆ ಬಳಿಕವೇ ರ‍್ಯಾಲಿ ನಡೆಸುವುದು ಸೂಕ್ತ ಎಂಬುದು ರಾಜ್ಯ ನಾಯಕರು ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದ ಜಾತ್ರೆ 11ರಂದು

ದೇವಾಲಯದ ಪ್ರಾಂಗಣದಲ್ಲಿ ವ್ಯಾಪಾರಕ್ಕಿಲ್ಲ ಅವಕಾಶ

ಪ್ರಜಾವಾಣಿ ವಾರ್ತೆ

ಮೂಲ್ಕಿ: ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಪ್ರಾಂಗಣದಲ್ಲಿ ಈ ಬಾರಿ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸದೇ ಇರಲು ಆಡಳಿತ ಮಂಡಳಿ ನಿರ್ಧರಿಸಿದೆ.

ಮುಸ್ಲಿಂ ಸಮುದಾಯದ ಬಪ್ಪ ಬ್ಯಾರಿಯೇ ನಿರ್ಮಿಸಿದ ದೇವಾಲಯ ಎಂಬ ಐತಿಹ್ಯ ಹೊಂದಿರುವ ಈ ದೇವಸ್ಥಾನದ ಜಾತ್ರೆ ವೇಳೆ ವರ್ತಕರು ಜಾತಿ– ಧರ್ಮಗಳ ಭೇದವಿಲ್ಲದೇ ದೇವಾಲಯದ ಪ್ರಾಂಗಣದಲ್ಲಿ ವ್ಯಾಪಾರ ನಡೆಸುತ್ತಿದ್ದರು. ಜಾತ್ರೆಯ ಸಂದರ್ಭದಲ್ಲಿ ಭಕ್ತರು ದೇವರಿಗೆ (ಶಯನ ಸೇವೆ) ಮಲ್ಲಿಗೆಯ ಹರಕೆಯನ್ನು ತೀರಿಸುವ ಸಂಪ್ರದಾಯವಿದೆ.

ಆ ದಿನ ಇಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಮಲ್ಲಿಗೆ ಹೂ ಮಾರಾಟವಾಗುತ್ತದೆ. 2022ರ ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನದ ಪ್ರಾಂಗಣದಲ್ಲಿ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶ ಕಲ್ಪಿಸುವುದಕ್ಕೆ ವಿಶ್ವ ಹಿಂದೂ ಪರಿಷತ್ ತಕರಾರು ತೆಗೆದಿತ್ತು. 'ಹಿಂದೂ ದೇವಾಲಯಗಳಲ್ಲಿ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶ ಇಲ್ಲ' ಎಂಬ ಬ್ಯಾನರ್ ಅನ್ನೂ ಪ್ರದರ್ಶಿಸಿತ್ತು. ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ಪರ-ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿದ್ದವು.

ಈ ಬಾರಿ ಇದೇ 11ರಂದು ಹಗಲು ರಥೋತ್ಸವ ನಡೆಯಲಿದೆ. ಬುಧವಾರದಿಂದಲೇ (ಏ.5) ಜಾತ್ರೆಯ ವಿಧಿ ವಿಧಾನಗಳು ಆರಂಭವಾಗಿದೆ. ಯಾವುದೇ ವಿವಾದಕ್ಕೆ ಆಸ್ಪದ ನೀಡುವುದು ಬೇಡ ಎಂಬ ಕಾರಣಕ್ಕೆ ದೇವಸ್ಥಾನದ ಪ್ರಾಂಗಣವನ್ನು ವಾಹನ ನಿಲುಗಡೆ ಸಲುವಾಗಿ ಬಳಸಿಕೊಳ್ಳಲು ದೇವಸ್ಥಾನದ ಆಡಳಿತ ಮಂಡಳಿ ಮುಂದಾಗಿದೆ.

'ಜಾತ್ರೆ ಸಂದರ್ಭದಲ್ಲಿ ದೇವಸ್ಥಾನಕ್ಕೆ ಬರುವ ಭಕ್ತರು ವಾಹನ ನಿಲುಗಡೆ ಮಾಡುವುದಕ್ಕೆ ಜಾಗದ ಕೊರತೆ ಇತ್ತು. ಹಾಗಾಗಿ ದೇವಸ್ಥಾನಕ್ಕೆ ಸಂಬಂಧಿಸಿದ ಜಾಗವನ್ನು ವ್ಯಾಪಾರಿ ಮಳಿಗೆಗಳ ಸ್ಥಾಪನೆಗಾಗಿ ಹರಾಜು ಹಾಕುವ ಬದಲು, ಅದನ್ನು ವಾಹನ ನಿಲುಗಡೆಗೆ ಬಳಸಿಕೊಳ್ಳುವುದಕ್ಕೆ ನಿರ್ಧರಿಸಿದ್ದೇವೆ. ದೇವಸ್ಥಾನದ ಆಸುಪಾಸಿನ ಜಾಗದಲ್ಲಿ ಮಳಿಗೆಗಳನ್ನು ಹಾಕಲು ಅವಕಾಶ ಕಲ್ಪಿಸಿದರೆ ಅದರಿಂದ ಭಕ್ತರಿಗೂ ಅನನುಕೂಲವಾಗುತ್ತದೆ' ಎಂದು ದೇವಸ್ಥಾನದ ಆಡಳಿತ ಮೊಕ್ತೇಸರ ಮನೋಹರ ಶೆಟ್ಟಿ ತಿಳಿಸಿದರು.



ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ

'ಕೋಮು ಸಾಮರಸ್ಯಕ್ಕೆ ಧಕ್ಕೆಯಿಲ್ಲ'

'ಬಪ್ಪ ಬ್ಯಾರಿಗೆ ಒಲಿದ ಶ್ರೀದುರ್ಗೆ ಎನ್ನುವ ಚರಿತ್ರೆಗೆ ಎಂದೂ ಧಕ್ಕೆ ಬಂದಿಲ್ಲ. ಪರಂಪರೆಯಂತೆ ಇಂದಿಗೂ ಬಪ್ಪಬ್ಯಾರಿಯ ಮನೆತನಕ್ಕೆ ದೇವಳದಿಂದ ಪ್ರಸಾದ ನೀಡಲಾಗುತ್ತಿದೆ. ಮುಜರಾಯಿ ಇಲಾಖೆಯ ನಿಯಮ ದೇವಳದ ಜಾಗಕ್ಕೆ ಸಂಬಂಧಿಸಿ ಮಾತ್ರ ಅನ್ವಯಿಸುತ್ತದೆ. ಖಾಸಗಿ ಜಮೀನಿನಲ್ಲಿ ನಾವು ಹಕ್ಕು ಚಲಾಯಿಸಲು ಅವಕಾಶ ಇಲ್ಲ' ಎಂದು ದೇವಸ್ಥಾನದ ಆನುವಂಶಿಕ ಮೊಕ್ತೇಸರ ಎಂ. ದುಗ್ಗಣ್ಣ ಸಾವಂತ ತಿಳಿಸಿದರು.

ದೊರಕದ ಅರ್ಜಿ: ಪಿಯು ಕಾಲೇಜು ಬದಲಾವಣೆಗೆ ವಿಘ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಥಮ ಪಿಯು ಪೂರೈಸಿ, ದ್ವಿತೀಯ ಪಿಯುಗೆ ಕಾಲೇಜು ಬದಲಾವಣೆ ಮಾಡಿಕೊಳ್ಳಲು ಬಯಸಿದ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳು ದೊರಕದೇ ವಿಳಂಬವಾಗುತ್ತಿದೆ ಎಂದು ಪೋಷಕರು ದೂರಿದ್ದಾರೆ.

ಪ್ರಥಮ ಪಿಯು ಫಲಿತಾಂಶ ಮಾರ್ಚ್ 31ಕ್ಕೆ ಪ್ರಕಟವಾಗಿದೆ. ಕೆಲ ಕಾಲೇಜುಗಳಲ್ಲಿ ದ್ವಿತೀಯ ಪಿಯು ವಿಜ್ಞಾನ ವಿಭಾಗದ ತರಗತಿಗಳು ಈಗಾಗಲೇ ಆರಂಭವಾಗಿವೆ. ಒಂದು ಜಿಲ್ಲೆಯಲ್ಲಿ ಪ್ರಥಮ ಪಿಯು ಪೂರೈಸಿದ ವಿದ್ಯಾರ್ಥಿಗಳು ಮತ್ತೊಂದು ಜಿಲ್ಲೆಯ ಬೇರೆ ಕಾಲೇಜಿಗೆ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆಯಲು ಅಗತ್ಯವಾದ ಆನ್‌ಲೈನ್ ಅರ್ಜಿಯನ್ನೇ ಪದವಿಪೂರ್ವ ಶಿಕ್ಷಣ ಇಲಾಖೆ ಅಪ್‌ಲೋಡ್ ಮಾಡಿಲ್ಲ. ಇದರಿಂದ ಪಿಯು ಉಪ ನಿರ್ದೇಶಕರು ಕಾಲೇಜು ಬದಲಾವಣೆಗೆ ಸಹಿ ಹಾಕಲು ನಿರಾಕರಿಸುತ್ತಿದ್ದಾರೆ. ತಕ್ಷಣ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪೋಷಕ ಗಿರೀಶ್ ಉಮ್ರಾಯ್ ಒತ್ತಾಯಿಸಿದ್ದಾರೆ.

ವಿದ್ಯಾರ್ಥಿಗಳ ಆರೋಗ್ಯ ಸಮಸ್ಯೆ, ಪೋಷಕರ ವರ್ಗಾವಣೆ, ವಲಸೆ ಮತ್ತಿತರ ಕಾರಣಗಳಿಂದ ಮಕ್ಕಳು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ಬದಲಾವಣೆ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಳೆದ ಸಾಲಿನಿಂದ ಪಿಯು ವಿದ್ಯಾರ್ಥಿಗಳು 'ಎಸ್‌ಎಟಿಎಸ್' ತಂತ್ರಾಂಶದ ಮೂಲಕ ಪ್ರವೇಶ ನೋಂದಣಿ ಮಾಡಿಕೊಳ್ಳುತ್ತಿರುವ ಕಾರಣ ಕಾಲೇಜು ಬದಲಾವಣೆಗೆ ಪಿಯು ಉಪ ನಿರ್ದೇಶಕರ ಅನುಮೋದನೆ ಅಗತ್ಯ. ಆದರೆ, ಈ ಕುರಿತು ಇಲಾಖೆ ಸುತ್ತೋಲೆ ಹೊರಡಿಸಿಲ್ಲ. ಹಾಗಾಗಿ, ಹಳೇ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಇದರಿಂದ ಸಾಕಷ್ಟು ತೊದರೆಯಾಗುತ್ತಿದೆ ಎಂದು ಬೆಂಗಳೂರಿನ ವಿದ್ಯಾರ್ಥಿ ಅರ್ಜುನ್ ಗೌರವ್ ತಮ್ಮ ಬವಣೆ ತೋಡಿಕೊಂಡರು.


'ಪಿಯು ಕಾಲೇಜುಗಳ ಶೈಕ್ಷಣಿಕ ವೇಳಾಪಟ್ಟಿ ಪ್ರಕಾರ ಕಾಲೇಜುಗಳು ಜೂನ್‌ನಿಂದ ಆರಂಭವಾಗಬೇಕು. ಆದರೆ, ಕೆಲ ಖಾಸಗಿ ವಿಜ್ಞಾನ ಕಾಲೇಜುಗಳು ಅನಧಿಕೃತವಾಗಿ ಕಾಲೇಜುಗಳನ್ನು ಆರಂಭಿಸಿವೆ. ಇದರಿಂದ ಕಾಲೇಜು ಬದಲಾವಣೆ ಬಯಸಿರುವ ಮಕ್ಕಳ ಪೋಷಕರು ಒತ್ತಡಕ್ಕೆ ಒಳಗಾಗಿದ್ದಾರೆ. ಈ ಕುರಿತು ಶೀಘ್ರ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

ಬಿಎಸ್‌ಪಿ: 57 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ

ಬೆಂಗಳೂರು: ಮುಂಬರುವ ವಿಧಾನ ಸಭಾ ಚುನಾವಣೆಗೆ 57 ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳ ಹೆಸರನ್ನು ಶನಿವಾರ ಬಿಡುಗಡೆ ಮಾಡಲಾಗಿದೆ ಎಂದು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ರಾಜ್ಯ ಘಟಕದ ಅಧ್ಯಕ್ಷ ಎಂ. ಕೃಷ್ಣಮೂರ್ತಿ ತಿಳಿಸಿದ್ದಾರೆ.

ನಿಧನ ವಾರ್ತೆ

ಅಭಿರುಚಿ ಚಂದ್ರು



ಬೆಂಗಳೂರು: ರಂಗ ನಿರ್ದೇಶಕ, ಕಲಾವಿದ ಅಭಿರುಚಿ ಚಂದ್ರು (70) ಅವರು ಇಲ್ಲಿ ಶುಕ್ರವಾರ ರಾತ್ರಿ ನಿಧನರಾಗಿದ್ದಾರೆ.

ಕೆಲ ದಿನಗಳಿಂದ ಅವರು ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಅವರಿಗೆ ಪತ್ನಿ ಇದ್ದಾರೆ. ಬನಶಂಕರಿಯ ಚಿತಾಗಾರದಲ್ಲಿ ಶನಿವಾರ ಅಂತ್ಯಸಂಸ್ಕಾರ ನೆರವೇರಿತು.

ಹಾಸನ ಜಿಲ್ಲೆಯ ಅರಕಲಗೂಡಿನ ಮಲ್ಲಿಪಟ್ಟಣದಲ್ಲಿ ಜನಿಸಿದ ಅವರು, ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕಾನೂನು ಪದವಿ ಪಡೆದಿದ್ದಾರೆ. ಕಾಲೇಜು ದಿನಗಳಲ್ಲಿಯೇ ರಂಗಭೂಮಿ, ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದರು. ರಂಗಭೂಮಿ ನಟ, ನಿರ್ದೇಶಕರಾಗಿ ಪ್ರಸಿದ್ಧಿ ಪಡೆದಿದ್ದರು. 'ಅಭಿರುಚಿ ಬಳಗ' ಎಂಬ ತಂಡ ಕಟ್ಟಿ, ನಾಟಕಗಳನ್ನು ಪ್ರಸ್ತುತಪಡಿಸಿದ್ದರು. ಅವರು ಧಾರಾವಾಹಿ, ನಾಟಕಗಳಿಗೆ ಸಂಭಾಷಣೆ ಬರೆದಿದ್ದಾರೆ. ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯ ಟ್ರಸ್ಟಿಯಾಗಿ ಕಾರ್ಯನಿರ್ವಹಿಸಿದ್ದರು. ಮೈಸೂರು, ಚಾಮರಾಜನಗರದ ಸಾಮಾಜಿಕ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಅವರು ಇಂದಿರಾ ಗಾಂಧಿ ಅವರು ತುರ್ತು ಪರಿಸ್ಥಿತಿ ಹೇರಿದಾಗ ಬಂಧಿತರಾಗಿದ್ದರು.

ಸೂಳೆಕೆರೆ ಹಿನ್ನೀರಿನ ಪ್ರದೇಶದ ಗ್ರಾಮಗಳ ಜನರಲ್ಲಿ ಆತಂಕ

ಕಾಡಾನೆ ದಾಳಿ: ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ



ಕವನಾ

ಸಂತೇಬೆನ್ನೂರು (ದಾವಣಗೆರೆ ಜಿಲ್ಲೆ): ಚನ್ನಗಿರಿ ತಾಲ್ಲೂಕಿನ ಸೋಮಲಾಪುರ ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ ಕಾಡಾನೆ ದಾಳಿಯಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯೊಬ್ಬಳು ಮೃತಪಟ್ಟಿದ್ದಾಳೆ.

ಸೋಮಲಾಪುರದ ಗ್ರಾಮದ ಉಮೇಶ್ ಹಾಗೂ ಮಂಜುಳಾ ದಂಪತಿಯ ಪುತ್ರಿ ಕವನಾ (17) ಮೃತ ವಿದ್ಯಾರ್ಥಿನಿ.

ಬೆಳಿಗ್ಗೆ 7.45ಕ್ಕೆ ತೋಟದಲ್ಲಿ ಅವರೆಕಾಯಿ ಬಿಡಿಸುತ್ತಿದ್ದಾಗ ಹಿಂದಿನಿಂದ ಬಂದ ಕಾಡಾನೆಯು, ಕವನಾಳನ್ನು ಸೊಂಡಿಲಿನಿಂದ ಎತ್ತಿ ಬಿಸಾಕಿದೆ. ಬಳಿಕ ಕಾಲಿನಿಂದ ತುಳಿದಿದೆ. ಅಲ್ಲಿಯೇ ಇದ್ದ ಮಂಜುಳಾ ಅವರ ಮೇಲೂ ದಾಳಿ ಮಾಡಿದೆ. ಗಾಯಗೊಂಡ ಇಬ್ಬರನ್ನೂ ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಕರೆತರಲಾಗಿತ್ತು. ತೀವ್ರವಾಗಿ ಗಾಯಗೊಂಡಿರುವ ಮಂಜುಳಾ ಅವರಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಕಳೆದ ಎರಡು ದಿನಗಳಿಂದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ ಭಾಗದಲ್ಲಿ ಸಂಚರಿಸುತ್ತಿದ್ದ ಕಾಡಾನೆಯು, ಶುಕ್ರವಾರ ತಡರಾತ್ರಿ ಚನ್ನಗಿರಿ ತಾಲ್ಲೂಕಿನ ಕಾಶೀಪುರ ಹೊರವಲಯಕ್ಕೆ ಬಂದು ಬೀಡುಬಿಟ್ಟಿತ್ತು. ಮುಂಜಾನೆ 6.30ರ ವೇಳೆಗೆ ಕಾಶೀಪುರದ ಬಾಬಾ ನಾಯ್ಕ್, ಭೂಮಲ್ಯ ನಾಯ್ಕ, ಲಕ್ಷ್ಮೀಬಾಯಿ ಹಾಗೂ ಶಾಂತಿಬಾಯಿ ಅವರ ಮೇಲೆ ದಾಳಿ ಮಾಡಿದೆ. ನಂತರ ಸೋಮಲಾಪುರಕ್ಕೆ ಬಂದು ಅಟ್ಟಹಾಸ ಮೆರೆದಿದೆ. ಇದು ಸೂಳೆಕೆರೆ ಹಿನ್ನೀರಿನ ಪ್ರದೇಶದ ಗ್ರಾಮಗಳ ಜನರಲ್ಲಿ ಆತಂಕ ಮೂಡಿಸಿದೆ.

ಜಕ್ಕಲಿ ಗ್ರಾಮದ ರಸ್ತೆಯನ್ನು ದಾಟಿ ಸೂಳೆಕೆರೆ ಹಿನ್ನೀರು ಪ್ರದೇಶಕ್ಕೆ ತೆರಳಿದೆ. ನಂತರ ಕಗತೂರು ಕಡೆ ಹೋಗಿದ್ದ ಆನೆಯು, ಬಿಸಿಲಿನ ಝಳ ಹೆಚ್ಚಿದ್ದರಿಂದ ಸೂಳೆಕೆರೆಯ ಆನೆಹೊಂಡದಲ್ಲಿ ಕೆಲ ಕಾಲ ವಿರಮಿಸಿತು.

ಪಟಾಕಿಗಳನ್ನು ಸಿಡಿಸಿದ ಅರಣ್ಯ ಇಲಾಖೆ ಸಿಬ್ಬಂದಿ, ಕಾಡಾನೆಯು ಹಿನ್ನೀರಿನಲ್ಲೇ ತಂಗುವಂತೆ ಮಾಡುವಲ್ಲಿ ಯಶಸ್ವಿಯಾದರು. ನಂತರ ಇಟಗಿ ಗ್ರಾಮದ ಹಿನ್ನೀರಿನತ್ತ ಆನೆ ಸಾಗಿತು. ಕಾಡಾನೆಯನ್ನು ನೋಡಲು ನೂರಾರು ಜನ ಸ್ಥಳಕ್ಕೆ ಬರುತ್ತಿದ್ದರು. ಆನೆ ಸಂಚರಿಸುತ್ತಿರುವ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದುಕೊಳ್ಳುತ್ತಿದ್ದರು.

'ಕಾಡಾನೆ ದಾಳಿಯಿಂದ ಮೃತಪಟ್ಟ ಕವನಾ ಕುಟುಂಬಕ್ಕೆ ಅರಣ್ಯ ಇಲಾಖೆಯಿಂದ ₹ 15 ಲಕ್ಷ ಪರಿಹಾರ ನೀಡಲಾಗುವುದು' ಎಂದು ವಲಯ ಅರಣ್ಯಾಧಿಕಾರಿ ವಿ.ಜಗದೀಶ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ವಿದ್ಯಾರ್ಥಿನಿ ತಾಯಿಯ ಮೇಲೂ ಕಾಡಾನೆಯಿಂದ ದಾಳಿ
- ಕವನಾ ಕುಟುಂಬಕ್ಕೆ ಅರಣ್ಯ ಇಲಾಖೆಯಿಂದ ₹ 15 ಲಕ್ಷ ಪರಿಹಾರ

ಅದಾನಿ ಪ್ರಕರಣ: ಜೆಪಿಸಿಗಿಂತ ಸುಪ್ರೀಂ ಕೋರ್ಟ್ ಸಮಿತಿ ಹೆಚ್ಚು ಸೂಕ್ತ ಎಂದ ಎನ್‌ಸಿಪಿ ಮುಖ್ಯಸ್ಥ

ಪವಾರ್ ಮಾತು: ಇಕ್ಕಟ್ಟಿನಲ್ಲಿ ವಿಪಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ/ಮುಂಬೈ: ಅದಾನಿ ಪ್ರಕರಣದಲ್ಲಿ ಜಂಟಿ ಸಂಸದೀಯ ಸಮಿತಿಯಿಂದ ತನಿಖೆ (ಜೆಪಿಸಿ) ಆಗಬೇಕು ಎಂದು ಪ್ರತಿಪಕ್ಷಗಳು ಪಟ್ಟು ಹಿಡಿದಿರುವ ಸಮಯದಲ್ಲಿ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ನೀಡಿರುವ ಹೇಳಿಕೆಯು ಪ್ರತಿಪಕ್ಷಗಳಲ್ಲಿ ಇರಿಸುಮುರಿಸು ಉಂಟು ಮಾಡಿದೆ.

ಜಂಟಿ ಸಂಸದೀಯ ಸಮಿತಿಗಿಂತ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯ ಸಮಿತಿ ಹೆಚ್ಚು ಉಪಯುಕ್ತ ಎಂದು ಪವಾರ್ ಅವರು ಎನ್‌ಡಿಟಿವಿ ಸಂದರ್ಶನದಲ್ಲಿ ಶುಕ್ರವಾರ ಹೇಳಿದ್ದರು. ಜೆಪಿಸಿ ತನಿಖೆಯನ್ನು ತಾವು ಸಂಪೂರ್ಣವಾಗಿ ವಿರೋಧಿಸುವುದಿಲ್ಲ ಎಂದು ತಮ್ಮ ಮಾತಿಗೆ ಶನಿವಾರ ಸ್ಪಷ್ಟನೆ ನೀಡಿದ್ದಾರೆ.

'ಒಂದು ವೇಳೆ ಜಂಟಿ ಸಂಸದೀಯ ಸಮಿತಿ ರಚನೆಯಾದರೆ, ಸಮಿತಿಯ 21 ಸದಸ್ಯರಲ್ಲಿ 15 ಸದಸ್ಯರು ಆಡಳಿತ ಪಕ್ಷದವರೇ ಇರುತ್ತಾರೆ. ಪ್ರತಿಪಕ್ಷಗಳಿಂದ ಆರು ಸದಸ್ಯರು ಮಾತ್ರ ಇರುತ್ತಾರೆ. ಸಂಸತ್ತಿನಲ್ಲಿ ಆಡಳಿತ ಪಕ್ಷದ ಸದಸ್ಯರ ಸಂಖ್ಯಾಬಲ ಹೆಚ್ಚಿರುವುದರಿಂದ ಹೀಗಾಗುತ್ತದೆ. ಆದರೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಗೆ ಕಾಲಮಿತಿಯಲ್ಲಿ ವರದಿ ನೀಡುವಂತೆ ಕೋರ್ಟ್ ಸೂಚಿಸುತ್ತದೆ' ಎಂದು ಅವರು ಹೇಳಿದ್ದಾರೆ.


'ನಾನು ಹಲವು ಜೆಪಿಸಿ ಸಮಿತಿಗಳನ್ನು ನೋಡಿದ್ದೇನೆ. ಕೆಲವು ಸಮಿತಿಗಳಿಗೆ ಅಧ್ಯಕ್ಷನಾಗಿಯೂ ಕೆಲಸ ಮಾಡಿದ್ದೇನೆ. ಆದರೆ ಸಂಸತ್ತಿನ ಸಂಖ್ಯಾಬಲದ ಆಧಾರದಲ್ಲಿ ಜೆಪಿಸಿ ರಚನೆಯಾಗುತ್ತದೆ. ಹೀಗಾಗಿಯೇ ಜೆಪಿಸಿಗಿಂತ ಸುಪ್ರೀಂ ಕೋರ್ಟ್ ಸಮಿತಿಯೇ ಹೆಚ್ಚು ಸೂಕ್ತ ಎಂಬುದು ನನ್ನ ಅಭಿಪ್ರಾಯ' ಎಂದು ಪವಾರ್ ಅಭಿಪ್ರಾಯಪಟ್ಟಿದ್ದಾರೆ.

'ಒಗ್ಗಟ್ಟು ಮುರಿಯದು': ಪವಾರ್ ಅವರು ಜೆಪಿಸಿ ಕುರಿತು ನೀಡಿರುವ ಹೇಳಿಕೆಯಿಂದ ಪ್ರತಿಪಕ್ಷಗಳ ಒಗ್ಗಟ್ಟಿನ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಎಂದು ಶಿವಸೇನಾ (ಠಾಕ್ರೆ ಬಣ) ಪ್ರತಿಕ್ರಿಯಿಸಿದೆ. 'ಪವಾರ್ ಅವರು ಜೆಪಿಸಿ ಮಾಡಲೇಬಾರದು ಎಂದೇನೂ ಹೇಳಿಲ್ಲ. ಮುಂದಿರುವ ಆಯ್ಕೆಗಳ ಬಗ್ಗೆ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೆಪಿಸಿ ರಚನೆ ಬಗ್ಗೆ ಟಿಎಂಸಿ ಹಾಗೂ ಎನ್‌ಸಿಪಿ ಭಿನ್ನ ನಿಲುವು ತಳೆದಿರಬಹುದು. ಆದರೆ ಇದು ಒಗ್ಗಟ್ಟನ್ನು ಬಾಧಿಸುವುದಿಲ್ಲ' ಎಂದು ಪಕ್ಷದ ವಕ್ತಾರ ಸಂಜಯ ರಾವುತ್ ಹೇಳಿದ್ದಾರೆ.

ಅದಾನಿ ಹಾಗೂ ಪ್ರಧಾನಿ ನರೇಂದ್ರ ಮೋದಿ ನಡುವೆ ಇದೆ ಎನ್ನಲಾದ ಆಳ ನಂಟನ್ನು ಸುಪ್ರೀಂ ಕೋರ್ಟ್ ಸಮಿತಿಯಿಂದ ಹೊರಗೆಡವಲು ಸಾಧ್ಯವಾಗದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅಭಿಪ್ರಾಯಪಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಸಮಿತಿ ಸೀಮಿತವಾಗಿರುತ್ತದೆ. ಜೆಪಿಸಿಯಿಂದ ಮಾತ್ರ ಪ್ರಶ್ನೆಗಳಿಗೆ ಉತ್ತರ ಸಿಗಲಿದೆ. 1992 ಹಾಗೂ 2001ರ ಜೆಪಿಸಿಗಳು ಉತ್ತಮ ಯತ್ನಗಳಾಗಿದ್ದವು ಎಂದು ರಮೇಶ್ ಉದಾಹರಣೆ ನೀಡಿದ್ದಾರೆ.

'ಎನ್‌ಸಿಪಿಗೆ ಅದರದ್ದೇ ಆದ ಅಭಿಪ್ರಾಯ ಇರಬಹುದು. ಆದರೆ, ಸಮಾನ ಮನಸ್ಕ 19 ವಿರೋಧ ಪಕ್ಷಗಳಿಗೆ ಅದಾನಿ ಸಂಸ್ಥೆ ನಡೆಸಿದ ಅವ್ಯವಹಾರದ ಬಗ್ಗೆ ಯಾವುದೇ ಸಂಶಯವಿಲ್ಲ' ಎಂದು ಕಾಂಗ್ರೆಸ್ ಶುಕ್ರವಾರ ಹೇಳಿತ್ತು. ಸಂವಿಧಾನ ಹಾಗೂ ಪ್ರಜಾಪ್ರಭುತ್ವವನ್ನು ಬಿಜೆಪಿ ದಾಳಿಯಿಂದ ರಕ್ಷಿಸಲು ಎನ್‌ಸಿಪಿಯೂ ಸೇರಿ 20 ವಿರೋಧ ಪಕ್ಷಗಳು ಒಗ್ಗೂಡಿ ಕೆಲಸ ಮಾಡಲಿವೆ ಎಂದು ಹೇಳಿತ್ತು.

ಗುರಿ ಮಾಡಲಾಗಿದೆ: ಶರದ್ ಪವಾರ್



ಎನ್‌ಡಿಟಿವಿಗೆ ನೀಡಿದ್ದ ಸಂದರ್ಶನದಲ್ಲಿ, ಹಿಂಡನ್‌ಬರ್ಗ್ ರಿಸರ್ಚ್ ವರದಿಯ ಕುರಿತಂತೆ ಮಾಡಲಾಗುತ್ತಿರುವ ವ್ಯಾಖ್ಯಾನಗಳ ಬಗ್ಗೆ ಶರದ್ ಪವಾರ್ ಅವರು ಮಾತನಾಡಿದ್ದರು. ವೈಯಕ್ತಿಕವಾಗಿ ಇಂತಹ ರೀತಿಯ ಆರೋಪಗಳನ್ನು ಹಿಂದೆ ಮಾಡಲಾಗಿತ್ತು. ಆಗ ಕೆಲವು ದಿನ ಸಂಸತ್ತಿನಲ್ಲಿ ಕೋಲಾಹಲವೇ ನಡೆದಿತ್ತು. ಆದರೆ ವರದಿ ಬಹಿರಂಗವಾದ ಬಳಿಕ ಈ ವಿಷಯಕ್ಕೆ ಅತಿಯಾದ ಮಹತ್ವ ನೀಡಲಾಗುತ್ತಿದೆ ಎಂದು ಪವಾರ್ ಹೇಳಿದ್ದರು.

'ಇಂತಹ ವಿಷಯಗಳು ಪ್ರಸ್ತಾಪವಾದಾಗ, ದೇಶದಾದ್ಯಂತ ಕೋಲಾಹಲ ಸೃಷ್ಟಿಯಾಗುತ್ತದೆ. ಇದು ದೇಶದ ಆರ್ಥಿಕತೆಗೆ ಹೊಡೆತ ನೀಡುತ್ತದೆ. ಇಂತಹ ವಿಷಯಗಳನ್ನು ನಾವು ಉಪೇಕ್ಷಿಸಬಾರದು. ದೇಶದ ಒಂದು ಉದ್ಯಮ ಸಂಸ್ಥೆಯನ್ನು ಗುರಿ ಮಾಡಲಾಗಿದೆ ಎಂಬಂತೆ ತೋರುತ್ತಿದೆ' ಎಂದು ಪವಾರ್ ಹೇಳಿಕೆ ನೀಡಿದ್ದರು.

ಪವಾರ್ ಅವರು ಮಿತ್ರಪಕ್ಷಗಳನ್ನು ಹೀಗೆ ಇಕ್ಕಟ್ಟಿಗೆ ಸಿಲುಕಿಸಿದ್ದು ಇದೇ ಮೊದಲಲ್ಲ. ವಿ.ಡಿ. ಸಾವರ್ಕರ್ ಬಗ್ಗೆ ಕಾಂಗ್ರೆಸ್ ಪ್ರಬಲ ವಿರೋಧ ವ್ಯಕ್ತಡಿಸುತ್ತಿದ್ದಾಗ ಪವಾರ್ ಅವರು 'ಸಾವರ್ಕರ್ ಅವರು ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಯನ್ನು ಅಲ್ಲಗಳೆಯಲಾಗದು' ಎಂದು ಹೇಳುವ ಮೂಲಕ ಪ್ರತಿಪಕ್ಷಗಳಲ್ಲಿ ಮುಜುಗರ ಸೃಷ್ಟಿಸಿದ್ದರು.

ಪ್ರತಿಪಕ್ಷಗಳು ಪವಾರ್ ಮಾತು ಕೇಳಿಸಿಕೊಳ್ಳಲಿ: ಶಿಂದೆ

ಕಾಂಗ್ರೆಸ್ ಹಾಗೂ ಉದ್ಧವ್ ಠಾಕ್ರೆ ಬಣದ ಶಿವಸೇನಾಗೆ ತಿರುಗೇಟು ನೀಡಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು, ಅದಾನಿ ಪ್ರಕರಣದಲ್ಲಿ ಶರದ್ ಪವಾರ್ ಅವರು ಹೇಳಿರುವ ಮಾತುಗಳನ್ನು ಕೇಳಿಸಿಕೊಳ್ಳಿ ಎಂದು ಸಲಹೆ ನೀಡಿದ್ದಾರೆ.

'₹20 ಸಾವಿರ ಕೋಟಿ ಬಗ್ಗೆ ವಿವರಣೆ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟಿಸುತ್ತಿದೆ. ಉದ್ಧವ್ ಠಾಕ್ರೆ ಅವರೂ ನಿರಂತರವಾಗಿ ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಪವಾರ್ ಅವರು ಹಿರಿಯ ರಾಜಕಾರಣಿ. ಸಂಶೋಧನೆ ನಡೆಸಿಯೇ ಅವರು ಅದಾನಿ ಪ್ರಕರಣದ ಬಗ್ಗೆ ಮಾತನಾಡಿರುತ್ತಾರೆ. ವಿರೋಧಿಸುವವರು ಪವಾರ್ ಮಾತುಗಳನ್ನು ಒಮ್ಮೆ ಕೇಳಿಸಿಕೊಂಡು ತಮ್ಮ ನಿಲುವು ಕುರಿತು ಯೋಚಿಸಬೇಕು' ಎಂದು ಶಿಂದೆ ಹೇಳಿದ್ದಾರೆ.

ರಾಹುಲ್ ಗಾಂಧಿ ರಾಜಕೀಯವಾಗಿ ವಿಫಲರಾಗಿದ್ದಾರೆ. ಅವರ ರಾಜಕೀಯ ಹಾದಿಗೆ ನೆರವಾಗಲು ಅದಾನಿ ವಿಷಯವನ್ನು ಉದ್ದೇಶಪೂರ್ವಕವಾಗಿ ಬೆಳೆಸಲಾಗುತ್ತಿದೆ
ಕಿರಣ್ ರಿಜಿಜು, ಕೇಂದ್ರ ಸಚಿವ

ಕಾಂಗ್ರೆಸ್ ತೊರೆದಿರುವ ನಾಯಕರು ಸತ್ಯ ಮುಚ್ಚಿಟ್ಟರು. ಅವರು ದಿನವೂ ದಾರಿ ತಪ್ಪಿಸುತ್ತಿದ್ದಾರೆ. ಅದಾನಿ ಕಂಪನಿಗಳಲ್ಲಿ ₹20 ಸಾವಿರ ಕೋಟಿ ಹೂಡಿದ ಬೇನಾಮಿ ಯಾರೆಂಬ ಪ್ರಶ್ನೆ ಹಾಗೆಯೇ ಉಳಿದಿದೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಮಾವು ಖರೀದಿ: ಹಣ ಪಾವತಿಗೆ ಕಂತು ಸೌಲಭ್ಯ

ಪುಣೆ (ಪಿಟಿಐ): ಅಲ್ಫಾನ್ಸೊ ತಳಿಯ ಮಾವಿನಹಣ್ಣಿನ ದರವು ದುಬಾರಿಯಾಗಿರುವ ಕಾರಣ, ಮಹಾರಾಷ್ಟ್ರದ ಪುಣೆಯ ವ್ಯಾಪಾರಿಯೊಬ್ಬರು ಇದನ್ನು ಖರೀದಿಸುವ ಗ್ರಾಹಕರಿಗೆ ಮಾಸಿಕ ಕಂತಿನಲ್ಲಿ ಹಣ ಪಾವತಿಸುವ (ಇಎಂಐ) ಸೌಲಭ್ಯ ಒದಗಿಸಿದ್ದಾರೆ.

ಗುರುಕೃಪಾ ಟ್ರೇಡರ್ಸ್ ಮತ್ತು ಫ್ರೂಟ್ ಪ್ರಾಡಕ್ಟ್‌ನ ಗೌರವ್ ಸನಸ್ ಎಂಬವರು ಗ್ರಾಹಕರಿಗೆ ಈ ಕೊಡುಗೆ ನೀಡಿದ್ದು, 'ರೆಫ್ರಿಜರೇಟರ್ ಮತ್ತು ಏರ್ ಕಂಡಿಷನರ್‌ಗಳನ್ನು ಇಎಂಐಯಲ್ಲಿ ಖರೀದಿಸಬಹುದಾದರೆ ಮಾವಿನ ಹಣ್ಣುಗಳನ್ನು ಯಾಕೆ ಈ ಸೌಲಭ್ಯದಲ್ಲಿ ಖರೀದಿಸಬಾರದು' ಎಂದು ಪ್ರಶ್ನಿಸುತ್ತಾರೆ.

'ದೇಶದಲ್ಲಿ ಮಾವಿನ ಹಣ್ಣುಗಳನ್ನು ಇಎಂಐಯಲ್ಲಿ ಮಾರಾಟ ಮಾಡುತ್ತಿರುವುದು ನಾವೇ ಮೊದಲು' ಎಂದೂ ಅವರು ಹೇಳಿಕೊಂಡಿದ್ದಾರೆ.

'ಇಎಂಐ ಸೌಲಭ್ಯದೊಂದಿಗೆ ಮಾರಾಟ ಮಾಡುವುದರಿಂದ ಎಲ್ಲರಿಗೂ ಈ ತಳಿಯ ಮಾವಿನ ಹಣ್ಣುಗಳನ್ನು ಖರೀದಿಸಲು ಸಾಧ್ಯವಾಗಬಹುದು' ಎಂದೂ ಗೌರವ್ ಸನಸ್ ಹೇಳಿದ್ದಾರೆ.

ಮೊಬೈಲ್ ಫೋನ್‌ಗಳನ್ನು ಇಎಂಐಯಲ್ಲಿ ಖರೀದಿಸುವಾಗ ಪಾಲಿಸುವ ವಿಧಾನಗಳನ್ನೇ ಮಾವಿನ ಹಣ್ಣುಗಳನ್ನು ಖರೀದಿಸುವಾಗಲೂ ಪಾಲಿಸಲಾಗುತ್ತಿದೆ. ಗ್ರಾಹಕರು ಕ್ರೆಡಿಟ್ ಕಾರ್ಡ್ ಬಳಸಬೇಕಾಗುತ್ತದೆ ಮತ್ತು ಖರೀದಿಯ ಮೊತ್ತವನ್ನು ಮೂರು, ಆರು ಅಥವಾ 12 ತಿಂಗಳ ಕಂತುಗಳಲ್ಲಿ ಪಾವತಿಸಬೇಕಾಗುತ್ತದೆ. ಆದರೆ, ಇಎಂಐ ಸೌಲಭ್ಯ ಸಿಗಬೇಕಾದರೆ ಕನಿಷ್ಠ ₹5,000 ಮೌಲ್ಯದ ಮಾವಿನ ಹಣ್ಣುಗಳನ್ನು ಖರೀದಿ ಮಾಡಬೇಕಾಗುತ್ತದೆ. ಇದುವರೆಗೆ ನಾಲ್ವರು ಗ್ರಾಹಕರು ಈ ಸೌಲಭ್ಯದ ಮೂಲಕ ಮಾವಿನ ಹಣ್ಣುಗಳನ್ನು ಖರೀದಿಸಿದ್ದಾರೆ ಎಂದು ಗೌರವ್ ಸನಸ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕೊಚ್ಚರ್ ದಂಪತಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): '₹3,250 ಕೋಟಿ ಸಾಲ ವಂಚನೆ ಪ್ರಕರಣದ ಆರೋಪಿಗಳಾಗಿರುವ ಐಸಿಐಸಿಐ ಬ್ಯಾಂಕ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಚಂದಾ ಕೊಚ್ಚರ್, ಅವರ ಪತಿ ದೀಪಕ್ ಕೊಚ್ಚರ್ ಹಾಗೂ ವಿಡಿಯೊಕಾನ್ ಸಮೂಹದ ಸಂಸ್ಥಾಪಕ ವೇಣುಗೋಪಾಲ್ ಧೂತ್ ಅವರ ವಿರುದ್ಧ ಸಿಬಿಐ, ಮುಂಬೈನ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದೆ' ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ತನಿಖಾ ಸಂಸ್ಥೆಯು ಐಪಿಸಿ ಸೆಕ್ಷನ್ 120–ಬಿ, 409 ಹಾಗೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದು, ಅದರಲ್ಲಿ ಕೆಲ ವ್ಯಕ್ತಿಗಳು ಹಾಗೂ ಕಂಪನಿಗಳನ್ನೂ ಹೆಸರಿಸಿದೆ' ಎಂದು ಹೇಳಿದ್ದಾರೆ.

'ಚಂದಾ ಕೊಚ್ಚರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಐಸಿಐಸಿಐ ಬ್ಯಾಂಕ್‌ನಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಆದರೆ ಬ್ಯಾಂಕ್‌ನ ಅನುಮತಿ ಪಡೆಯದೆಯೇ ದೋಷಾರೋಪ ಪಟ್ಟಿ ಸಲ್ಲಿಸಲು ಸಿಬಿಐ ಮುಂದಾಗಿದೆ. ಅನುಮತಿ ಕೋರಿ ಈಗಾಗಲೇ ಬ್ಯಾಂಕ್‌ಗೆ ಪತ್ರವೊಂದನ್ನು ರವಾನಿಸಲಾಗಿದೆ. ಬ್ಯಾಂಕ್‌ನ ಪ್ರತಿಕ್ರಿಯೆಗಾಗಿ ಸಿಬಿಐ ಎದುರು ನೋಡುತ್ತಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಿ.ರಾಜಗೋಪಾಲಾಚಾರಿ ಮರಿ ಮೊಮ್ಮಗ ಬಿಜೆಪಿ ಸೇರ್ಪಡೆ



ನವದೆಹಲಿ (ಪಿಟಿಐ): ಸ್ವಾತಂತ್ರ್ಯ ಹೋರಾಟಗಾರ ಹಾಗೂ ದೇಶದ ಕೊನೆಯ ಗವರ್ನರ್ ಜನರಲ್ ಆಗಿ ಸೇವೆ ಸಲ್ಲಿಸಿದ್ದ ಸಿ.ರಾಜಗೋಪಾಲಾಚಾರಿ ಅವರ ಮರಿ ಮೊಮ್ಮಗ ಸಿ.ಆರ್.ಕೇಶವನ್ ಅವರು ಬಿಜೆಪಿಗೆ ಶನಿವಾರ ಸೇರ್ಪಡೆಯಾಗಿದ್ದಾರೆ.

ತಮಿಳುನಾಡಿನ ಕೇಶವನ್ ಅವರು ಈ ಮೊದಲು ಕಾಂಗ್ರೆಸ್ ಪಕ್ಷದಲ್ಲಿದ್ದರು. ಕೇಂದ್ರ ಸಚಿವ ವಿ.ಕೆ.ಸಿಂಗ್ ಹಾಗೂ ಬಿಜೆಪಿ ಮುಖ್ಯ ವಕ್ತಾರ ಅನಿಲ್ ಬಲೂನಿ ಅವರು ಕೇಶವನ್ ಅವರನ್ನು ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷಕ್ಕೆ ಬರಮಾಡಿಕೊಂಡರು.

'ಪ್ರಧಾನಿ ನರೇಂದ್ರ ಮೋದಿಯವರು ಜನಕೇಂದ್ರಿತ ನೀತಿಗಳು ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತದ ಮೂಲಕ ದೇಶವನ್ನು ಅಭಿವೃದ್ಧಿಯತ್ತ ಮುನ್ನಡೆಸುತ್ತಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಪ್ರಾಧಾನ್ಯ ನೀಡುತ್ತಿದ್ದಾರೆ. ಅನೇಕ ಕಾರ್ಯಕ್ರಮಗಳ ಮೂಲಕ ಈ ದೇಶದ ಇತಿಹಾಸ ಹಾಗೂ ಸಂಪ್ರದಾಯಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದ್ದಾರೆ' ಎಂದು ಕೇಶವನ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

'ರಾಜಗೋಪಾಲಾಚಾರಿಯವರು ಈ ದೇಶಕ್ಕೆ ಹಲವು ಕೊಡುಗೆಗಳನ್ನು ನೀಡಿದ್ದಾರೆ. ಇಂತಹ ಮಹಾನ್ ವ್ಯಕ್ತಿಯನ್ನು ಸ್ವಾತಂತ್ರ್ಯಾನಂತರ ಮೂಲೆಗುಂಪು ಮಾಡಲಾಯಿತು' ಎಂದು ವಿ.ಕೆ.ಸಿಂಗ್ ಅಭಿಪ್ರಾಯಪಟ್ಟರು.

ಪ್ರತಿಯೊಬ್ಬರ ಲೈಂಗಿಕ ಹಿತಾಸಕ್ತಿ ಗೌರವಿಸಬೇಕು: ಹೈಕೋರ್ಟ್

ನವದೆಹಲಿ: 'ಪ್ರತಿಯೊಬ್ಬರ ಲೈಂಗಿಕ ಹಿತಾಸಕ್ತಿಗಳನ್ನು ಗೌರವಿಸಬೇಕು. ಇದನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ದೆಹಲಿ ಹೈಕೋರ್ಟ್ ಶನಿವಾರ ಹೇಳಿದೆ.

ಮಹಿಳೆಯೊಬ್ಬರು ಸ್ನಾನ ಮಾಡುವಾಗ ಸ್ನಾನಗೃಹದೊಳಗೆ ಇಣುಕಿ ನೋಡಿದ ಆರೋಪದಡಿ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆಗೆ ಗುರಿಯಾಗಿದ್ದ ಸೋನು ಅಲಿಯಾಸ್ ಬಿಲ್ಲಾ ಎಂಬಾತ ಮೇಲ್ಮನವಿ ಸಲ್ಲಿಸಿದ್ದ. ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಅವರಿದ್ದ ಏಕಸದಸ್ಯ ನ್ಯಾಯಪೀಠವು ವಿಚಾರಣಾ ನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದಿದೆ.

'ಮಹಿಳೆಯರ ವಿರುದ್ಧದ ಲೈಂಗಿಕ ಅಪರಾಧಕ್ಕೆ ಕಡಿವಾಣ ಹಾಕುವ, ಅವರ ಖಾಸಗಿತನ ಮತ್ತು ಲೈಂಗಿಕ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಆರೋಪಿಗೆ ಶಿಕ್ಷೆ ನೀಡಲಾಗಿದೆ. ದೇಶದ ನಾಗರಿಕರೆಲ್ಲರೂ ಶಾಂತ ಚಿತ್ತದಿಂದ ನೆಮ್ಮದಿಯ ಬದುಕು ನಡೆಸುವುದನ್ನು ಖಾತರಿಪಡಿಸಬೇಕಿರುವುದು ಕಾನೂನಿನ ಕರ್ತವ್ಯ. ಎಂದು ನ್ಯಾಯಪೀಠ ಹೇಳಿದೆ.

ಸುಖೋಯ್‌ನಲ್ಲಿ ರಾಷ್ಟ್ರಪತಿ ಮುರ್ಮು ಹಾರಾಟ

ತೇಜ್‌ಪುರ (ಅಸ್ಸಾಂ) (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಲ್ಲಿನ ವಾಯುನೆಲೆಯಲ್ಲಿ ಸುಖೋಯ್–30 ಎಂಕೆಐ ಯುದ್ಧವಿಮಾನದಲ್ಲಿ ಚೊಚ್ಚಲ ಹಾರಾಟ ನಡೆಸಿದರು.

ಗ್ರೂಪ್ ಕ್ಯಾಪ್ಟನ್ ನವೀನ್ ಕುಮಾರ್ ತಿವಾರಿ ಯುದ್ಧ ವಿಮಾನದಲ್ಲಿ ಮುರ್ಮು ಅವರನ್ನು ಕೂರಿಸಿಕೊಂಡು ಶನಿವಾರ ಹಾರಾಟ ನಡೆಸಿದರು. 25 ನಿಮಿಷಗಳ ಹಾರಾಟದ ಬಳಿಕ ಪ್ರತಿಕ್ರಿಯಿಸಿದ ಅವರು,'ಹಾರಾಟ ತುಂಬಾ ಚೆನ್ನಾಗಿತ್ತು' ಎಂದರು.

ಮೂರು ದಿನಗಳ ಅಸ್ಸಾಂ ಪ್ರವಾಸದಲ್ಲಿರುವ ಮುರ್ಮು ಅವರು ಗುವಾಹಟಿಯಿಂದ ತೇಜ್‌ಪುರ ವಾಯುನೆಲೆಗೆ ತಲುಪಿದಾಗ ರಾಜ್ಯಪಾಲ ಗುಲಾಬ್ ಚಂದ್ ಕಟಾರಿಯಾ,ಸಿಎಂ ಹಿಮಂತ ಬಿಸ್ವಾ ಶರ್ಮಾ ಮತ್ತು ಏರ್ ಮಾರ್ಷಲ್ ಎಸ್.ಪಿ. ಧಾರ್ಕರ್ ಸ್ವಾಗತಿಸಿದರು.



ಹಾರಾಟದ ಪುಳಕ

ಸುಖೋಯ್ –30 ಯುದ್ಧ ವಿಮಾನದಲ್ಲಿ ಹಾರಾಟ ನಡೆಸುವುದಕ್ಕೂ ಮೊದಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಧಿಕಾರಿಗಳತ್ತ ಕೈಬೀಸಿದರು –ಪಿಟಿಐ ಚಿತ್ರ

ನಂದಿನಿ ಹಾಲಿನ ಕೊರತೆ: 76 ಲಕ್ಷ ಕೆ.ಜಿಗೆ ಇಳಿದ ಸಂಗ್ರಹಣೆ

ಒಂದನೇ ಪುಟದಿಂದ

'100 ಲೀಟರ್ ಹಾಲಿಗೆ ಬೇಡಿಕೆ ಸಲ್ಲಿಸಿದರೆ, 60ರಿಂದ 70 ಲೀಟರ್ ಹಾಲು ಪೂರೈಸಲಾಗುತ್ತಿದೆ. ಮದುವೆ ಇನ್ನಿತರ ಶುಭ ಸಮಾರಂಭಗಳಿಗೆ ಬೇಡಿಕೆ ಬಂದರೆ ಪೂರೈಸಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಹೇಳಿದರು.

ಇದೇ ಸಂದರ್ಭ ನೋಡಿಕೊಂಡು ಅಮುಲ್ ಹಾಲು ಮತ್ತು ಮೊಸರನ್ನು ಇ-ಕಾಮರ್ಸ್ ಮೂಲಕ ಕರ್ನಾಟಕದ ಮಾರುಕಟ್ಟೆಗೆ ಪ್ರವೇಶ ಮಾಡಿಸಲಾಗುತ್ತಿದೆ. ಕೆಎಂಎಫ್ ಮತ್ತು ಅಮುಲ್ ವಿಲೀನದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಹಿಂದೆ ಪ್ರಸ್ತಾಪಿಸಿದ್ದರು. ರಾಜಕೀಯ ಒತ್ತಡಕ್ಕೆ ಒಳಗಾಗಿ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆಯೇ ಎಂಬ ಅನುಮಾನ ಕೂಡ ರೈತರು ಮತ್ತು ಗ್ರಾಹಕರಲ್ಲಿ ಹುಟ್ಟಿಕೊಂಡಿದೆ.

'ಬೇಸಿಗೆಯಲ್ಲಿ ಹಾಲು ಉತ್ಪಾದನೆ ಕಡಿಮೆಯಾಗುವುದು ಸಾಮಾನ್ಯ. ಒಂದು ದಿನ ಮಾತ್ರ 96 ಲಕ್ಷ ಕೆ.ಜಿ ತನಕ ಹೋಗಿತ್ತು. ನಿತ್ಯ ಹಾಲು ಸಂಗ್ರಹ ಪ್ರಮಾಣ ಸರಾಸರಿ 81 ಲಕ್ಷ ಕೆ.ಜಿ. ಇತ್ತು. ಈಗ 5 ಲಕ್ಷ ಕೆ.ಜಿ ಕಡಿಮೆಯಾಗಿದ್ದು, ಹಾಲಿನ ಪುಡಿ ಸೇರಿ ಬೇರೆ ಉತ್ಪನ್ನಗಳ ತಯಾರಿಕೆ ಕಡಿಮೆ ಮಾಡಿ ಗ್ರಾಹಕರಿಗೆ ಹಾಲು ಪೂರೈಕೆಗೆ ಪ್ರಯತ್ನಿಸಲಾಗುತ್ತಿದೆ' ಎಂದು ಕೆಎಂಎಫ್ ಅಧಿಕಾರಿಗಳು ಹೇಳುತ್ತಾರೆ.

ರೈತರಿಂದ ಹಾಲು ಖರೀದಿ ದರ ಕಡಿಮೆ ಇರುವುದು ಹಾಲು ಸಂಗ್ರಹ ಪ್ರಮಾಣ ಕಡಿಮೆಯಾಗಲು ಪ್ರಮುಖ ಕಾರಣ ಎಂಬುದು ಹಾಲು ಒಕ್ಕೂಟಗಳ ಅನಿಸಿಕೆ. 'ಬೇರೆಲ್ಲಾ ರಾಜ್ಯಕ್ಕಿಂತ ಕಡಿಮೆ ದರದಲ್ಲಿ (ಲೀಟರ್‌ಗೆ ₹39) ನಂದಿನಿ ಹಾಲು ಮಾರಾಟವಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ಲೀಟರ್ ಹಾಲನ್ನು ₹50ರಿಂದ ₹60 ತನಕ ಮಾರಾಟ ಮಾಡಲಾಗುತ್ತಿದೆ. ದುಬಾರಿ ಪಶು ಆಹಾರ ಖರೀದಿಸಿ ಹೈನುಗಾರಿಕೆ ಮಾಡುವುದು ರೈತರಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಹಾಲು ಉತ್ಪಾದನೆ ಕಡಿಮೆಯಾಗಿದೆ' ಎಂಬುದು ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿ ಅವರ ಅಭಿಪ್ರಾಯ.

'ಕೆಟ್ಟದಾಗಿ ಬಟ್ಟೆ ಧರಿಸುವ ಹುಡುಗಿಯರು ಶೂರ್ಪನಖಿಯರು'

ಒಂದನೇ ಪುಟದಿಂದ

'ಬಿಜೆಪಿಯಲ್ಲಿ ಮಹಿಳೆಯರನ್ನು ಗೌರವಿಸುವ ಪರಿಪಾಠವಿಲ್ಲ. ನಾವೇನು ತಾಲಿಬಾನಿಗಳ ಆಡಳಿತದಲ್ಲಿದ್ದೇವೆಯೇ? ಏನನ್ನು ಧರಿಸಬೇಕು, ಯಾವುದನ್ನು ತಿನ್ನಬೇಕು, ಯಾರನ್ನು ಭೇಟಿಯಾಗಬೇಕು ಎಂಬುದನ್ನು ಸರ್ಕಾರವು ಮಹಿಳೆಯರಿಗೆ ಹೇಳಬೇಕೇ' ಎಂದು ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ನೆಟ್ಟಾ ಡಿಸೋಜ ಪ್ರಶ್ನಿಸಿದ್ದಾರೆ.

'ಬಿಜೆಪಿ ಆಡಳಿತದಲ್ಲಿ ಭಾರತ ಹಿಂದಕ್ಕೆ ಸಾಗುತ್ತಿದೆ': 'ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಭಾರತವು ನಿರಂತರವಾಗಿ ಹಿಂದಡಿ ಇಡುತ್ತಿದೆ. ತಮ್ಮಿಷ್ಟದ ಉಡುಗೆ ತೊಡುತ್ತಾರೆಂಬ ಕಾರಣಕ್ಕೆ ಆ ಪಕ್ಷದ ಮುಖಂಡರು ನಮ್ಮ ದೇಶದ ಮಹಿಳೆಯರನ್ನು ರಾಕ್ಷಸಿಗೆ ಹೋಲಿಕೆ ಮಾಡುತ್ತಿದ್ದಾರೆ' ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಆರೋಪಿಸಿದೆ.

'ಬಿಜೆಪಿ ನಾಯಕರೊಬ್ಬರು ಬಹಿರಂಗವಾಗಿ ನೀಡಿರುವ ಈ ಕೀಳುಮಟ್ಟದ ಹೇಳಿಕೆಯು ಆ ಪಕ್ಷದ ಕೆಟ್ಟ ಮನಃಸ್ಥಿತಿಯನ್ನು ತೋರ್ಪಡಿಸುತ್ತದೆ' ಎಂದು ಟಿಎಂಸಿ ರಾಜ್ಯಸಭಾ ಸದಸ್ಯ ಜವಾಹರ್ ಸರ್ಕಾರ್ ಟ್ವೀಟ್ ಮಾಡಿದ್ದಾರೆ.

'ಉಡುಪುಗಳಲ್ಲಿ ಒಳ್ಳೆಯವು, ಕೆಟ್ಟವು ಎಂಬುದು ಇವೆಯೇ. ಅದನ್ನು ವ್ಯಾಖ್ಯಾನಿಸುವವರು ಯಾರು? ವಿಜಯವರ್ಗೀಯರ ಹೇಳಿಕೆ ನಾಚಿಕೆಗೇಡಿನದ್ದು' ಎಂದು ಟಿಎಂಸಿ ರಾಜ್ಯಸಭಾ ಸದಸ್ಯೆ ಸುಶ್ಮಿತಾ ದೇವ್ ಟೀಕಿಸಿದ್ದಾರೆ.

10 ಪ್ರಾದೇಶಿಕ ಪಕ್ಷಗಳಿಂದ ₹ 852 ಕೋಟಿ ದೇಣಿಗೆ ಸಂಗ್ರಹ: ಎಡಿಆರ್ ವರದಿ

ನವದೆಹಲಿ (ಪಿಟಿಐ): 'ದೇಶದ 10 ಪ್ರಾದೇಶಿಕ ಪಕ್ಷಗಳು 2021-22ರಲ್ಲಿ ಚುನಾವಣಾ ಬಾಂಡ್‌ಗಳ ಮೂಲಕ ₹ 852.88 ಕೋಟಿ ದೇಣಿಗೆಯನ್ನು ಸ್ವೀಕರಿಸುವುದಾಗಿ ಘೋಷಿಸಿವೆ ಎಂದು ಚುನಾವಣಾ ಸುಧಾರಣೆಗಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಎನ್‌ಜಿಒ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ತಿಳಿಸಿದೆ.

₹ 852.88 ಕೋಟಿ ದೇಣಿಗೆ ಸಂಗ್ರಹಿಸಿರುವ ಪ್ರಾದೇಶಿಕ ಪಕ್ಷಗಳೆಂದರೆ, ಡಿಎಂಕೆ, ಬಿಜೆಡಿ, ವೈಎಸ್‌ಆರ್ ಕಾಂಗ್ರೆಸ್, ಜೆಡಿಯು, ಎಸ್‌ಪಿ, ಎಎಪಿ, ಎಸ್‌ಎಡಿ, ಎಂಜಿಪಿ ಹಾಗೂ ಟಿಡಿಪಿ.

ಇದೇ ಅವಧಿಯಲ್ಲಿ 36 ರಾಜಕೀಯ ಪಕ್ಷಗಳ ಆದಾಯವು ₹ 1,213 ಕೋಟಿ ಎಂದೂ ವರದಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ದೇಶದಲ್ಲಿ ಹೊಸದಾಗಿ 6,155 ಕೋವಿಡ್ ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): 'ದೇಶದಲ್ಲಿ ಶನಿವಾರ ಹೊಸದಾಗಿ 6,155 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಈ ಮೂಲಕ ಸಕ್ರಿಯ ಪ್ರಕರಣಗಳ ಸಂಖ್ಯೆ 31,194ಕ್ಕೆ ಏರಿಕೆಯಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ಪ್ರಸ್ತುತ ಭಾರತದಲ್ಲಿ 4,47,51,259 ಕೊರೊನಾ ಪ್ರಕರಣಗಳಿವೆ. ಸೋಂಕಿನಿಂದ ಹೊಸದಾಗಿ 11 ಮಂದಿ ಸಾವಿಗೀಡಾಗಿದ್ದು, ಒಟ್ಟು ಮೃತಪಟ್ಟವರ ಸಂಖ್ಯೆ 5,30,954ಕ್ಕೆ ಏರಿದೆ. ಒಟ್ಟು ಸಕ್ರಿಯ ಕೋವಿಡ್ ಪ್ರಕರಣಗಳ ಪ್ರಮಾಣ ಶೇ 0.07ರಷ್ಟಿದೆ ಹಾಗೂ ಚೇತರಿಕಾ ದರವು ಶೇ 98.74ರಷ್ಟಿದೆ' ಎಂದು ಹೇಳಿದೆ.

ಉಕ್ರೇನ್ ಸಚಿವೆ ಭಾರತ ಭೇಟಿ ಇಂದಿನಿಂದ

ನವದೆಹಲಿ (ಪಿಟಿಐ): ಉಕ್ರೇನ್‌ನ ವಿದೇಶಾಂಗ ವ್ಯವಹಾರಗಳ ಉಪ ಸಚಿವೆ ಎಮ್ಮೈನ್ ಝುಪರೋವಾ ಅವರು ನಾಲ್ಕು ದಿನಗಳ ಭೇಟಿಗಾಗಿ ಭಾರತಕ್ಕೆ ಭಾನುವಾರ ಬರಲಿದ್ದಾರೆ.

ರಷ್ಯಾ ಮತ್ತು ಉಕ್ರೇನ್ ನಡುವೆ ಕಳೆದ ಒಂದು ವರ್ಷದಿಂದ ಯುದ್ಧ ನಡೆಯುತ್ತಿದೆ. ಈ ಬೆಳವಣಿಗೆ ನಡುವೆ ಅವರು ಇದೇ ಮೊದಲ ಬಾರಿಗೆ ಭಾರತಕ್ಕೆ ಅಧಿಕೃತ ಪ್ರವಾಸ ಕೈಗೊಂಡಿದ್ದಾರೆ.







‘ಚಾವುಂಡರಾಯ’ನ ಮಾನವೀಯತೆಯ ಅನಾವರಣ 10



ನೃತ್ಯಪ್ರೀತಿಗೆ ಜೀವನ-ಮಾರ್ಗದ ಭಾಷ್ಯ 12



ಗಡಿಗಳ ಬೆಸುಗೆ.. ಕಲೆಯ ಒಸಗೆ

ಕಲೆಗೆ ಗಡಿಯಿಲ್ಲ. ಕನ್ನಡವೇ ಬಾರದ ಕಲಾವಿದೆ ಸಮೀಕ್ಷಾ ಬೆಂಗಳೂರಿನಲ್ಲಿ ಕಂಡಿದ್ದ ಕಾಡುವ ದೃಶ್ಯಗಳನ್ನು ತಮ್ಮ ವರ್ಣಚಿತ್ರ ಸರಣಿಯ ಭಾಗವಾಗಿಸಿದ್ದಾರೆ. ಅದರಲ್ಲಿ ‘ಪ್ರಜಾವಾಣಿ’ ಪತ್ರಿಕೆಯೂ ಸೇರಿರುವುದು ವಿಶೇಷ.



ಸಮೀಕ್ಷಾ ಕಲೆಯಲ್ಲಿ ‘ಪ್ರಜಾವಾಣಿ’

ವಿಶಾಖ ಎನ್.

ವಿಭೂತಿಧಾರಿ ವೃದ್ಧರೊಬ್ಬರು ‘ಪ್ರಜಾವಾಣಿ’ ಪತ್ರಿಕೆ ಹಿಡಿದು ನ್ಯೂಯಾರ್ಕ್ ನಗರದ ಸಬ್‌ವೇ ಒಂದರ ಬೆಂಚುಕಲ್ಲಿನ ಮೇಲೆ ಕುಳಿತಿದ್ದಾರೆ. ಹತ್ತಿಯ ಬಿಳಿ ಪಂಚೆ, ಅದಕ್ಕೆ ಕೆಂಪು ಅಂಚು. ಪತ್ರಿಕೆಯ ಓದಿನಲ್ಲಿ ಅವರೆಷ್ಟು ಮುಳುಗಿ ಹೋಗಿದ್ದಾರೆಂದರೆ, ಪಕ್ಕದಲ್ಲಿ ಕುಳಿತ ನ್ಯೂಯಾರ್ಕ್‌ನ ಮಾಸ್ಕ್‌ಧಾರಿಯ ಕಡೆಗೆ ನಿಗಾ ಇಲ್ಲ. ಆ ಮಾಸ್ಕ್‌ಧಾರಿ ತಮ್ಮಷ್ಟಕ್ಕೆ ತಾವು ಯಾವುದೋ ಯೋಚನೆಯಲ್ಲಿ ಮುಳುಗಿದ್ದಾರೆ. ಡಬಲ್ ಬ್ರೆಸ್ಟೆಡ್ ಕೋಟು, ಸುರುಳಿ ಕೂದಲಿನ ಸೈಡ್‌ಬರ್ನಿಂಗ್ಸ್, ತಲೆ ಮೇಲೊಂದು ಟೋಪಿ. ಎರಡು ಭಿನ್ನ ಧ್ರುವಗಳಂತೆ ಕಾಣುವ ಈ ಇಬ್ಬರನ್ನೂ ಹೀಗೆ ಒಂದೆಡೆ ಕುಳಿತುಕೊಳ್ಳುವಂತೆ ಮಾಡಿದ್ದು ಸಮೀಕ್ಷಾ ಅಡುಕಿಯಾ ಎಂಬ ಕಲಾವಿದೆ.

ಕರ್ಲಿ ಹೇರ್‌ಆರ್ಟಿಸ್ಟ್ ಎಂಬ ಹೆಸರಿನಲ್ಲಿ ಸರಣಿ ವರ್ಣಚಿತ್ರಗಳನ್ನು ಅವರು ‘ಗಡಿಗಳ ಬೆಸುಗೆ’ (ಬ್ಲೆಂಡಿಂಗ್ ಬಾರ್ಡರ್ಸ್) ಎಂಬ ಶೀರ್ಷಿಕೆಯಡಿ ರಚಿಸುತ್ತಿದ್ದಾರೆ. ಈ ಸರಣಿಯಲ್ಲಿ 25ಕ್ಕೂ ಹೆಚ್ಚು ವರ್ಣಚಿತ್ರಗಳು ಅದಾಗಲೇ ಸಿದ್ಧಗೊಂಡಿವೆ. ಅದರ ಅಡಿಯಲ್ಲಿಯೇ ‘ನಮ್ಮ ಬೆಂಗಳೂರು-ಯುಎಸ್‌ಎ ಎಡಿಟ್’ ಎನ್ನುವ ಉಪಶೀರ್ಷಿಕೆಯಡಿ ಬೆಂಗಳೂರು ಹಾಗೂ ಅಮೆರಿಕದ ನಗರಗಳನ್ನು ಬೆಸೆದು ವರ್ಣಚಿತ್ರಗಳನ್ನು ಅವರು ರಚಿಸಿದ್ದಾರೆ.



ಮುಂಬೈನ ಗಣೇಶ ವಿಸರ್ಜನೆಗೂ ನ್ಯೂಯಾರ್ಕ್‌ಗೂ ಕಲೆಯಲ್ಲಿ ಸಂದ ಸಂಬಂಧ

ಕಲೆಯ ಭಾಗವಾಗಿದ್ದಕ್ಕೆ ಖುಷಿ

ಸಮೀಕ್ಷಾ ಆರೇಳು ವರ್ಷಗಳಿಂದ ಪರಿಚಿತರು. ಅವರು ಮನೆಗೆ ಬಂದಿದ್ದಾಗ ‘ಪ್ರಜಾವಾಣಿ’ಯ ಓದಿನಲ್ಲಿ ನನ್ನ ತಂದೆ ಮುಳುಗಿಹೋಗಿದ್ದನ್ನು ಕಂಡು ಅನೇಕ ಸೂಕ್ಷ್ಮ ಸಂಗತಿಗಳನ್ನು ಕೇಳಿದ್ದರು. ಅದೇ ರೀತಿಯ ಫೋಟೊ ಬೇಕು ಎಂದಾಗ ಕಳುಹಿಸಿಕೊಟ್ಟೆ. ಹಲವು ಭಂಗಿಗಳಲ್ಲಿ ಫೋಟೊ ಬೇಕು ಎಂದಿದ್ದರಿಂದ ಎರಡು ಮೂರು ದಿನ ಫೋಟೊ ಸೆಷನ್ ಮಾಡಿ, ಕಳುಹಿಸಿದ್ದೆವು. ‘ಪ್ರಜಾವಾಣಿ’ಯನ್ನು ಬಾಲ್ಯದಿಂದಲೂ ನಾನು ಮನೆಯಲ್ಲಿ ನೋಡುತ್ತಿದ್ದೇನೆ. ಅದು ಹೀಗೆ ಗಡಿ ಮೀರಿ ಕಲೆಯ ಭಾಗವಾಗಿರುವುದಕ್ಕೆ ಖುಷಿ ಇದೆ.

ಸಿಂಧೂರ, ಸಮೀಕ್ಷಾ ಸ್ನೇಹಿತೆ

ಅಚ್ಚರಿ ಎಂದರೆ ಸಮೀಕ್ಷಾ ಅವರಿಗೆ ಕನ್ನಡ ಬರುವುದಿಲ್ಲ. ಅವರ ಪತಿ ಕಾರ್ತಿಕ್ ಬೆಂಗಳೂರಿನ ಪಿಇಎಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಕಲಿತವರು. ಕೆಲವು ವರ್ಷ ನಗರದಲ್ಲಿ ಕೆಲಸವನ್ನೂ ಮಾಡಿದ್ದರು. ಅವರ ಸಹಪಾಠಿ ಸಿಂಧೂರ ಆಮೇಲೆ ಕುಟುಂಬದ ಸ್ನೇಹಿತೆಯಾದರು. ಅವರ ಮನೆಗೆ ಒಮ್ಮೆ ಹೋದಾಗ ಸಮೀಕ್ಷಾ ಅವರನ್ನು ಎದುರುಗೊಂಡಿದ್ದು ಪತ್ರಿಕೆ ಓದುತ್ತಾ ಮನೆಯ ಮುಂದಿನ ಕುರ್ಚಿಯಲ್ಲಿ ಕುಳಿತಿದ್ದ ನೇಮಿರಾಜ ಕಂಠಿ. ಬಿಎಂಎಸ್ ಕಾಲೇಜಿನಲ್ಲಿ ಸಹಾಯಕ ಆಡಳಿತಾಧಿಕಾರಿಯಾಗಿ ಕೆಲಸ ಮಾಡಿ ನಿವೃತ್ತರಾಗಿರುವ ಅವರು ಪತ್ರಿಕೆಯಲ್ಲಿ ಮುಳುಗಿಹೋಗಿದ್ದರು. ಅದನ್ನು ಕಂಡ ಸಮೀಕ್ಷಾ ಸಹಜ ಕುತೂಹಲದಿಂದ ಪತ್ರಿಕೆ ಯಾವುದು ಎಂದು ಕೇಳಿ ತಿಳಿದರು.

ನೇಮರಾಜ ಕಂಠಿ ಹಾಗೂ ಅವರ ಪತ್ನಿ ಇಬ್ಬರೂ ಊಟಕ್ಕೆ ಮೊದಲು ಪದಬಂಧ ತುಂಬುತ್ತಾ, ಪರಸ್ಪರ ಪದಜ್ಞಾನದ ಜುಗಲ್‌ಬಂದಿಯಲ್ಲಿ ನಿರತರಾಗುವುದನ್ನು ಸಿಂಧೂರ ಹೇಳಿದಾಗ ಅಚ್ಚರಿ. ಬೆಳಿಗ್ಗೆ ಅಡುಗೆಮನೆಯಲ್ಲಿ ಚಟ್ನಿ ರುಬ್ಬುವ ಮಿಕ್ಸಿ ಸದ್ದು. ಹೊರಗೆ ಕಂಠಿ ಸಾಹೇಬರ ಪತ್ರಿಕಾ ಅಧ್ಯಯನ. ಹಬೆಯಾಡುವ ಕಾಫಿ ಅವರಿಗೆ ಅಷ್ಟು ಸರಿಹೋಗೊಲ್ಲ. ತುಸು ತಣ್ಣಗಾದ ಮೇಲೆಯೇ ಕಾಫಿ ಕುಡಿಯುವುದು ಅವರಿಗೆ ಅಭ್ಯಾಸ. ಕಾಫಿ ಆರುವ ಹೊತ್ತಿಗಾಗಲೇ ಪತ್ರಿಕೆಯ ಸಾಕಷ್ಟು ಸುದ್ದಿಯನ್ನು ಅವರು ತಲೆಗೆ ಇಳಿಸಿಕೊಂಡಿರುತ್ತಾರೆ.

ಇಂತಹ ಆಪ್ತ ಸಂಗತಿಗಳನ್ನು ವರ್ಷಗಳ ಹಿಂದೆ ನೋಡಿ, ಕೇಳಿದ್ದ ಸಮೀಕ್ಷಾ ಅಮೆರಿಕದ ನ್ಯೂಯಾರ್ಕ್‌ಗೆ ಹೋಗಿ ನೆಲೆಸಿ 12 ವರ್ಷಗಳಾಗಿವೆ. ಅದಕ್ಕೂ ಮೊದಲು ಮುಂಬೈನಲ್ಲೂ ಕೆಲವು ವರ್ಷ ಅವರು ಕಾಲ ಕಳೆದಿದ್ದರು. ಅವರ ಪತಿ ಕಾರ್ತಿಕ್ ಲುಂಕಡ್ ಹುಟ್ಟಿದ್ದು ರಾಜಸ್ಥಾನದಲ್ಲಿ. ಬೆಳೆದದ್ದು ಬಾಂಬೆ ಹಾಗೂ ಕುವೈಟ್‌ನಲ್ಲಿ. ಬೆಂಗಳೂರಿಗೆ ಬಂದದ್ದೇ ಎಂಜಿನಿಯರಿಂಗ್ ಓದಿನ ಸಲುವಾಗಿ. ಅವರಿಗೂ ಕನ್ನಡದ ಗಂಧಗಾಳಿ ಇಲ್ಲ.

ಸಮೀಕ್ಷಾ ಆಗೀಗ ಬೆಂಗಳೂರಿಗೆ ಬಂದು ಹೋಗುತ್ತಿದ್ದರು. ಮುಂಬೈನಲ್ಲಿ ನೆಲೆಸಿದ್ದಾಗ ಅಲ್ಲಿನ ಗಣೇಶಮೂರ್ತಿ ವಿಸರ್ಜನೆಯ ಸಂದರ್ಭವನ್ನು ಕಣ್ತುಂಬಿಕೊಂಡಿದ್ದರು. ಬೆಂಗಳೂರಿನ ಭೇಟಿಯಲ್ಲಿ ಬ್ಲಾಸಂ ಬುಕ್‌ಹೌಸ್, ಕೆ.ಆರ್. ಮಾರ್ಕೆಟ್, ಎಂಟಿಆರ್, ವಿದ್ಯಾರ್ಥಿ ಭವನ, ಕಾರ್ನರ್ ಐಸ್‌ಕ್ರೀಮ್ ಅಂಗಡಿ... ಇವೆಲ್ಲವೂ ಅವರ ಬದುಕಿನ ಭಾಗಗಳಾದವು.

ವೃತ್ತಿಯಲ್ಲಿ ಸಮೀಕ್ಷಾ ತೆರಿಗೆ ಸಲಹೆಗಾರ್ತಿ. ಹೈಸ್ಕೂಲಿನ ದಿನಗಳಲ್ಲೇ ವರ್ಣಚಿತ್ರ ಬಿಡಿಸುವುದು, ಗ್ಲಾಸ್‌ಪೇಂಟಿಂಗ್, ಕ್ಯಾಲಿಗ್ರಫಿ ಇವೆಲ್ಲದರಲ್ಲಿ ಆಸಕ್ತಿ ಇದ್ದ ಅವರು, ನ್ಯೂಯಾರ್ಕ್‌ನಲ್ಲಿ ನೆಲೆಸಿದ ಮೇಲೆ ಅದಕ್ಕೆ ಗಂಭೀರ ಚೌಕಟ್ಟು ದಕ್ಕಿಸಿಕೊಡಲು ನಿರ್ಧರಿಸಿದರು. ಅಲ್ಲಿ ಚಿತ್ರಕಲೆಗೆ ಸಂಬಂಧಿಸಿದ ಸೂಕ್ಷ್ಮಗಳನ್ನು ಔಪಚಾರಿಕವಾಗಿ ಸಂಸ್ಥೆಯೊಂದಕ್ಕೆ ಸೇರಿ ಕಲಿತರು.

12ನೇ ಪುಟಕ್ಕೆ

ಅಂಬೇಡ್ಕರ್ ನೆನಕೆ...

ಏಪ್ರಿಲ್ 14 ಅಂಬೇಡ್ಕರ್ ಜಯಂತಿ. ಅಂಬೇಡ್ಕರ್ ಅವರನ್ನು ಬೇರೆ ಬೇರೆ ಸಿದ್ಧಾಂತದವರು ಭಿನ್ನ ರೀತಿಯಲ್ಲಿ ಅರ್ಥೈಸುತ್ತಿರುವ ಹೊತ್ತಿದು. ಅವರ ಪ್ರಸ್ತುತತೆಯ ಪ್ರತಿಪಾದನೆ ಒಂದು ಕಡೆ. ಅವರ ಕುರಿತ ವಿರೋಧಾಭಾಸದ ಪ್ರತಿಕ್ರಿಯೆಗಳು ಇನ್ನೊಂದೆಡೆ. ಬಾಬಾಸಾಹೇಬರು ಯಾಕೆ ಮುಖ್ಯರು ಎಂದು ಮೂವರು ತಮ್ಮ ಅಭಿಪ್ರಾಯವನ್ನು ರಾಘವೇಂದ್ರ ಕೆ. ತೊಗರ್ಸಿ ಅವರೊಂದಿಗೆ ಹಂಚಿಕೊಂಡಿದ್ದಾರೆ.

ಧ್ವನಿಯ ಅನನ್ಯತೆ ಎತ್ತಿಹಿಡಿದ ಕಾರುಣ್ಯ

ದು. ಸರಸ್ವತಿ



ಚುನಾವಣೆಯ ಹೊತ್ತು ಇದು. ಮತದಾನಕ್ಕಾಗಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿರುವೆ. ಸಂವಿಧಾನ–ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ನಮಗೆ ಅಂಬೇಡ್ಕರ್ ಚಿಂತನೆ ಎಲ್ಲ ಸಂದರ್ಭದಲ್ಲೂ ಅನಿವಾರ್ಯ. ಇವತ್ತಿನ ಸಂದರ್ಭದಲ್ಲಿ ಬೇರೆ ಬೇರೆ ಬಗೆಯಲ್ಲಿ ಅಂಬೇಡ್ಕರ್ ಬಳಕೆಯಾಗುತ್ತಿದ್ದಾರೆ. ಬಲಪಂಥೀಯರು ಅವರನ್ನು ತಮ್ಮ ಅನುಕೂಲಕ್ಕೆ ಮಾತ್ರ ಬಳಸಿಕೊಳ್ಳುತ್ತಿದ್ದಾರೆ. ಮುಸ್ಲಿಮರಿಗಾಗಿಯೇ ಇದ್ದ ಮೀಸಲಾತಿ ಕಿತ್ತುಕೊಂಡು, ಆರ್ಥಿಕವಾಗಿ ಹಿಂದುಳಿದವರ ಪೈಕಿ ಮೀಸಲು ಕಲ್ಪಿಸಿರುವ ಸಮರ್ಥನೆ ಕೊಟ್ಟರೂ ಅದು ಸರಿ ಅಲ್ಲ. ’ಆರ್ಥಿಕವಾಗಿ ಹಿಂದುಳಿದ‘ ಎನ್ನುವ ಹೆಸರಿಗೆ ಅರ್ಥವೇ ಇಲ್ಲ. ಎಲ್ಲ ರೀತಿಯಲ್ಲೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿದೆ.

ಸ್ವಾರ್ಥಕ್ಕೆ ಬಾಬಾ ಸಾಹೇಬರನ್ನು ಬಳಸುವವರಿಗೆ ಯಾರನ್ನು ಪ್ಲೀಸ್ ಮಾಡಬೇಕು, ಯಾರನ್ನು ತುಳಿಯಬೇಕು ಎನ್ನುವುದು ಚೆನ್ನಾಗಿ ಗೊತ್ತಿದೆ. ಯಾರು ಏನೇ ಹೇಳಲಿ, ಎಲ್ಲಿಯವರೆಗೆ ಅಸಮಾನತೆ ಇರುತ್ತದೆಯೋ ಅಲ್ಲಿಯವರೆಗೂ ಅಂಬೇಡ್ಕರ್ ಬೇಕಾಗುತ್ತಾರೆ. ಇವತ್ತಿನ ಸರ್ಕಾರಗಳು ಕಾರ್ಮಿಕ ಕಾನೂನುಗಳನ್ನು ತಿರುಚುತ್ತಿವೆ. ಅಂಬೇಡ್ಕರ್ ಈ ದೇಶದ ಮೊದಲ ಕಾರ್ಮಿಕ ಸಚಿವರಾಗಿದ್ದರು. ಅವರು ಮಾನವ ಹಕ್ಕು ಮತ್ತು ಕಾರ್ಮಿಕ ಹಕ್ಕುಗಳನ್ನು ಬೇರೆ ದೇಶಗಳಿಗೂ ಮಾದರಿಯಾಗುವಂತೆ ರೂಪಿಸಲು ಕಾರಣರಾಗಿದ್ದರು. ನಾನು ಪ್ರಜಾಪ್ರಭುತ್ವವನ್ನು ದೃಢವಾಗಿ ನಂಬುತ್ತೇನೆ. ಹಾಗಾಗಿ ಅಂಬೇಡ್ಕರ್ ಯಾವತ್ತಿಗೂ ನನಗೆ ಪ್ರಸ್ತುತ ಆಗುತ್ತಲೇ ಇರುತ್ತಾರೆ. ಭಾರತೀಯ ದಂಡ ಸಂಹಿತೆ 377ರ ಪ್ರಕಾರ ಲಿಂಗತ್ವ ಅಲ್ಪಸಂಖ್ಯಾತರನ್ನು ಅಪರಾಧಿಗಳನ್ನಾಗಿ ರೂಪಿಸಲಾಗುತ್ತಿತ್ತು. ಅವರ ದೇಹ ಅವರ ಹಕ್ಕು ಎನ್ನುವುದನ್ನು ಸಾಬೀತು ಮಾಡಲು ಅವರಿಗೆ ಮೂಲಭೂತವಾಗಿ ನೆರವಾದದ್ದು ಅಂಬೇಡ್ಕರ್ ಪ್ರತಿಪಾದಿಸಿದ ಸಂವಿಧಾನದ ನೈತಿಕ ಶಕ್ತಿ.



ಬಾಬಾಸಾಹೇಬರ ವ್ಯಕ್ತಿತ್ವ ಸಿನಿಮಾ, ನಾಟಕ, ಸಿನಿಮಾಗಳಿಗೆ ವಸ್ತು ಆಗುತ್ತಿದೆ. ನಾನು ನೋಡಿದ ‘ಭಾಗ್ಯವಿಧಾತ’ ನಾಟಕ ತುಂಬ ಇಷ್ಟ ಆಯ್ತು. ಅಂಬೇಡ್ಕರ್ ಮಾತಾಡುವ ಪ್ರಜಾಪ್ರಭುತ್ವ ನನಗೆ ಇಷ್ಟ. ಏಕೆಂದರೆ, ಅವರು ನಂಬರ್ ಗೇಮ್ ಬಗ್ಗೆ ಮಾತನಾಡುವುದಿಲ್ಲ. ಬಹುಸಂಖ್ಯಾತರೇ ಆಡಳಿತ ಮಾಡಬೇಕು, ಅವರೇ ಎಲ್ಲವನ್ನೂ ರೂಪಿಸಬೇಕು ಎನ್ನುವುದು ಅವರ ವಾದ ಅಲ್ಲ. ಪ್ರತಿಯೊಂದು ಧ್ವನಿಯೂ ಅನನ್ಯ ಎನ್ನುವುದು ಅವರ ಕಾರುಣ್ಯ.

ಲೇಖಕಿ: ಸಾಮಾಜಿಕ ಕಾರ್ಯಕರ್ತೆ

(ಮತ್ತಷ್ಟು ಅಭಿಪ್ರಾಯಗಳು 10ನೇ ಪುಟ ನೋಡಿ)

‘ಚಾವುಂಡರಾಯ’ನ ಮಾನವೀಯತೆಯ ಅನಾವರಣ

ರಾಜನಾಗುವ ಎಲ್ಲಾ ಅರ್ಹತೆಗಳು ಇದ್ದರೂ ದಂಡನಾಯಕನಾಗಿಯೇ ಉಳಿದ ಚಾವುಂಡರಾಯ. ಜೈನನಾಗಿ ಆತ ಎದುರಿಸಿದ ಹಿಂಸೆ– ಅಹಿಂಸೆಗಳ ನಡುವಿನ ಒಳ ಸಂಘರ್ಷಗಳೇನು, ಅಹಿಂಸೆಯನ್ನು ಪ್ರತಿಪಾದಿಸುತ್ತಲೇ ಒಳಗಿನ ಮತ್ತು ಹೊರಗಿನ ಶತ್ರುಗಳಿಂದ ಪ್ರಭುತ್ವವನ್ನು ರಕ್ಷಿಸಲು ಮಾಡಿದ ಪ್ರಯತ್ನಗಳು ಹೇಗಿದ್ದವು? ಎಂಬುದನ್ನು ಈ ಪ್ರಯೋಗ ಚಿತ್ರಿಸಿತು.

ಡಾ. ಕಾ.ವೆಂ. ಶ್ರೀನಿವಾಸಮೂರ್ತಿ

ರಂಗಭೂಮಿ

ಇತ್ತೀಚೆಗೆ ಸಮಾಜಮುಖಿ ರಂಗಬಳಗ ಅಭಿನಯಿಸಿದ ‘ಚಾವುಂಡರಾಯ’ ನಾಟಕ ಜನಮನ ಗೆದ್ದಿತು.

ಜಯರಾಮ್ ರಾಯಪುರ ರಚಿಸಿರುವ ಈ ನಾಟಕದ ನಿರ್ದೇಶಕರು ಮೈಸೂರು ರಂಗಾಯಣದ ಹಿರಿಯ ಕಲಾವಿದ ಹುಲಗಪ್ಪ ಕಟ್ಟೀಮನಿ. ಬಂದಿಖಾನೆಗಳಲ್ಲಿ ವಿಚಾರಣಾಧೀನ ಕೈದಿಗಳಿಗೆ ರಂಗಪ್ರಯೋಗಗಳನ್ನು ಮಾಡಿ ಸೈ ಎನಿಸಿಕೊಂಡಿರುವ ಕಟ್ಟೀಮನಿ, ರಂಗಾಯಣದಿಂದ ನಿವೃತ್ತರಾದ ನಂತರ ಬೆಂಗಳೂರಿನಲ್ಲಿ ತಮ್ಮ ರಂಗ ಕಾಯಕವನ್ನು ಮುಂದುವರಿಸಿದ್ದಾರೆ. ಸಮಾಜಮುಖಿ ರಂಗಬಳಗಕ್ಕೆ ‘ರಸಾಭಿಜ್ಞಾನ’ ಎಂಬ ವಿಶಿಷ್ಟ ರಂಗಕಾರ್ಯಾಗಾರ ನಡೆಸಿಕೊಟ್ಟಿದ್ದರು. ಹುಲಗಪ್ಪ ಕಟ್ಟೀಮನಿ ಇದೀಗ ‘ಚಾವುಂಡರಾಯ’ ಪ್ರಯೋಗದ ಮೂಲಕ ಕನ್ನಡಕ್ಕೆ ಮತ್ತೊಬ್ಬ ಸಶಕ್ತ ನಾಟಕಕಾರರನ್ನು ಪರಿಣಾಮಕಾರಿಯಾಗಿ ಪರಿಚಯಿಸಿದ್ದಾರೆ.

ಸರ್ಕಾರದ ಉನ್ನತ ಹುದ್ದೆಯಲ್ಲಿದ್ದರೂ ಕಲೆ, ಸಂಸ್ಕೃತಿ ರಂಗಭೂಮಿಯ ಬಗ್ಗೆ ಅಪಾರ ಒಲವು ಬೆಳೆಸಿಕೊಂಡಿರುವ ಜಯರಾಮ್ ರಾಯಪುರ, ಈವರೆಗೆ ‘ಸಿರಿಗೆಸೆರೆ’, ‘ವಾರಸುದಾರಾ’, ‘ಚಾವುಂಡರಾಯ’-ಈ ಮೂರು ನಾಟಕಗಳನ್ನು ಬರೆದಿದ್ದಾರೆ. ಇವೆಲ್ಲವೂ ಚಾರಿತ್ರಿಕ ನಾಟಕಗಳು. ಗಂಗರಸರ ಕಡೆಗಾಲದ ಹೃದ್ಯ ಚಿತ್ರಣವಿರುವ ಐತಿಹಾಸಿಕ ನಾಟಕ ‘ಚಾವುಂಡರಾಯ’.

ಕರ್ನಾಟಕದಲ್ಲಿ ಒಂಬತ್ತು, ಹತ್ತನೆಯ ಶತಮಾನದಲ್ಲಿ ಜೈನಧರ್ಮವು ಉತ್ಕರ್ಷಾವಸ್ಥೆಯಲ್ಲಿತ್ತು. ಅಂದು ದಕ್ಷಿಣ ಕರ್ನಾಟಕವನ್ನು ಆಳುತ್ತಿದ್ದ ರಾಜವಂಶ ಗಂಗರದ್ದಾಗಿತ್ತು. ಅಂದಿನ ದೊರೆ ಮಾರಸಿಂಹ ಮತ್ತು ಅವನ ದಂಡನಾಯಕ ಚಾವುಂಡರಾಯ ಈ ನಾಟಕದಲ್ಲಿ ಪ್ರಮುಖವಾಗಿ ಕಾಣುತ್ತಾರೆ. ಅರಸನ ನೆರಳಂತೆ ಇದ್ದವನು ಈ ದಂಡನಾಯಕ. ಅಷ್ಟರ ಮಟ್ಟಿಗೆ ಈತನದು ರಾಜನಿಷ್ಠೆ.


ರಾಜನಾಗುವ ಎಲ್ಲಾ ಅರ್ಹತೆಗಳು ಇದ್ದರೂ ದಂಡನಾಯಕನಾಗಿಯೇ ಉಳಿದದ್ದು ಈತನ ವೈಶಿಷ್ಟ್ಯ. ಈತ ಸ್ವತಃ ಗದ್ಯಕವಿ; ‘ಚಾವುಂಡರಾಯ ಪುರಾಣ’ವನ್ನು ಬರೆದಿದ್ದಾನೆ. ಇವನ ಒಡನಾಟದಲ್ಲಿ ಒಂದಷ್ಟು ಕಾಲ ಇದ್ದು, ಪ್ರಭುತ್ವದ ಒಳಸುಳಿಗಳನ್ನು ಅರಿತವನು ಕವಿ ರನ್ನ. ಹಾಗಾಗಿ ರನ್ನನೂ ಇಲ್ಲಿ ಒಂದು ಪಾತ್ರ.

ಚಾವುಂಡರಾಯನೇ ಶೀರ್ಷಿಕೆಯನುಸಾರ ಕೇಂದ್ರ ಪಾತ್ರ. ಈತ ಒಳ ಸಂಘರ್ಷಗಳನ್ನು ಎದುರಿಸಿದ್ದಾನೆ. ಅವೆಂದರೆ, ತಾನು ಜೈನನಾಗಿ ಅಹಿಂಸೆಯನ್ನು ಪ್ರತಿಪಾದಿಸಬೇಕು. ಅದೇ ಸಂದರ್ಭದಲ್ಲಿ ಒಳಗಿನ ಮತ್ತು ಹೊರಗಿನ ಶತ್ರುಗಳಿಂದ ಪ್ರಭುತ್ವವನ್ನು ರಕ್ಷಿಸಲು ಹಿಂಸೆಯನ್ನೂ ಪ್ರಯೋಗಿಸಬೇಕು.

ಕವಿ ರನ್ನ ಜೀವನಾನುಭವ ಪಡೆಯುವ ನಿಟ್ಟಿನಲ್ಲಿ ಚಾವುಂಡರಾಯನ ಸೇನೆಯನ್ನು ಸೇರುವ ಆಶಯದಿಂದ ಆತನನ್ನು ಭೇಟಿ ಮಾಡಲು ಬರುವ ದೃಶ್ಯದಿಂದ ನಾಟಕ ಆರಂಭವಾಗುತ್ತದೆ. ಅದೇ ಸಂದರ್ಭಕ್ಕೆ ಗಂಗರ ಅರಸ ಮಾರಸಿಂಹ ಕೈವಲ್ಯ ಪ್ರಾಪ್ತಿಗಾಗಿ ಸಲ್ಲೇಖನ ವ್ರತ ಸ್ವೀಕರಿಸಿದ್ದಾನೆ. ಈ ಸನ್ನಿವೇಶದಲ್ಲಿ ಗಂಗ ಸಾಮ್ರಾಜ್ಯದ ಮುಂದಿನ ದೊರೆ ಯಾರಾಗಬೇಕು ಎಂಬ ಜಿಜ್ಞಾಸೆಯೊಂದಿಗೆ ನಾಟಕ ಮುಂದುವರೆಯುತ್ತದೆ.

ಅಂದಿನ ರಾಜರು, ಸಾಮಂತರು, ಪಾಳೇಗಾರರು ನಿರಂತರವಾಗಿ ಗಡಿ ಕಾಯುವ, ಅದನ್ನು ವಿಸ್ತರಿಸಿಕೊಳ್ಳುವ ಯುದ್ಧಗಳಲ್ಲಿ ತೊಡಗಿದ್ದರು. ಅಂತಹ ಸಂದರ್ಭದಲ್ಲಿ ವಿಸ್ತಾರವಾದ ಗಂಗವಾಡಿ ಸಾಮ್ರಾಜ್ಯವನ್ನು ಹತ್ತು ವರ್ಷಗಳ ಕಾಲ ಯುದ್ಧಮುಕ್ತ ಮಾಡಿದ್ದು ಈತನ ರಾಜತಾಂತ್ರಿಕ ಮತ್ತು ಪರಾಕ್ರಮದ ಹಿರಿಮೆಯಾಗಿದೆ. ಆದರೆ ರಾಜ ಮಾರಸಿಂಹನ ನಂತರದಲ್ಲಿ ಪಟ್ಟಕ್ಕೆ ಬಂದ ಮೊದಲ ಮಗ ಕಾಯಿಲೆಯಿಂದ ತೀರಿಕೊಂಡ ನಂತರದಲ್ಲಿ ಅದೇ ಪಟ್ಟಕ್ಕೆ ಬಂದ ಇನ್ನೊಬ್ಬ ಮಗ ಇತರೆ ರಾಜರಂತೆ ಕಾಲು ಕೆರೆದು ಯುದ್ಧಕ್ಕೆ ನಿಲ್ಲುವ ಉತ್ಸಾಹವನ್ನು ತೋರುತ್ತಾನೆ. ಅದು ರಾಜನ ಲಕ್ಷಣ ಎಂದು ಆತ ಬಗೆಯುತ್ತಾನೆ. ಆದರೆ ಯುದ್ಧದ ಅನಿವಾರ್ಯವನ್ನು ಕಾಣದ ಚಾವುಂಡರಾಯನಿಗೆ ಇದರ ಪರಿಣಾಮವಾಗಿ ಅಭಿಪ್ರಾಯಭೇದ ಉಂಟಾಗುತ್ತದೆ. ಹಾಗಾಗಿ ರಾಜನ ಇಚ್ಛೆಗೆ ವಿರುದ್ಧವಾಗಿ ಪ್ರಭುತ್ವವನ್ನು ತೊರೆಯುತ್ತಾನೆ. ಆ ಹಂತದಲ್ಲಿ ತಾನು ನಿರ್ಮಿಸಿದ ಬಾಹುಬಲಿ ಪ್ರತಿಮೆಯೊಂದಿಗೆ ಸಂಭಾಷಿಸುತ್ತಾನೆ.

‘ಕಾಳಗ ಹುಡುಕಿ ಹೊರಡಲೇಬೇಕು, ನಾವು ಕಾಳಗಕ್ಕೆ ಕಾಯುವಂತಿಲ್ಲ, ಯುದ್ಧ ಸೂರೆಯಿಂದ ಧನಕನಕ ಬೇಕು, ಯುದ್ಧ ಮರೆತ ಸೈನ್ಯಕ್ಕೆ ಭವಿಷ್ಯವಿಲ್ಲ, ಶಾಂತಿಗೆ ಯುದ್ಧವೇ ರಹದಾರಿ’ ಎಂದು ಗಂಗರ ದೊರೆ ರಕ್ಕಸಗಂಗ ಹೇಳುತ್ತಾನೆ. ಇದಕ್ಕೆ ಚಾವುಂಡರಾಯ ಉತ್ತರಿಸುವುದು ಹೀಗೆ: ‘ಕಾಣದ ಭವಿಷ್ಯಕ್ಕೆ ಇಂದು ಸಾವಿರಾರು ಸೈನಿಕರ ಬಲಿ ಕೇಳುವ ಪುರುಷಾರ್ಥ



ಬೆಳಕಿನ ವಿನ್ಯಾಸಕ್ಕೆ ಸಾಕ್ಷಿಯಾದ ದೃಶ್ಯ

ನಮಗೆ ತಿಳಿಯುತ್ತಿಲ್ಲ. ಹೆಣದ ರಾಶಿ ದಾಟಿ ಗಡಿ ಬೆಳೆಸುವ ಅಗತ್ಯ ಕಾಣುತ್ತಿಲ್ಲ’.

ಕವಿ ರನ್ನನೊಡನೆ ತನ್ನ ಮಾನಸಿಕ ತುಮುಲವನ್ನು ಹಾಡಿಕೊಳ್ಳುತ್ತಾ, ‘ರನ್ನ, ಅಹಿಂಸೆ ಬಯಸುವ ನನ್ನ ಧರ್ಮದ ಜೊತೆಯಲ್ಲಿ ಹಿಂಸೆ ಬೇಡುವ ರಾಜಧರ್ಮದ ಅಗತ್ಯಗಳನ್ನು ಎನ್ನೆಷ್ಟು ದಿನ ತೂಗಬೇಕು...’ ಎಂದು ಪರಿತಪಿಸುತ್ತಾನೆ. ತನ್ನ ಹೃದಯದಲ್ಲಿ ಕಾವ್ಯಕ್ಕೂ ಜಾಗಕೊಟ್ಟು ‘ಕಾವ್ಯ ಜೀವನವಾಗುವುದಿದ್ದರೆ ಜೀವನವೂ ಕಾವ್ಯದ ಮೊರೆ ಹೋದೀತು’ ಎನ್ನುತ್ತಲೇ ತನ್ನ ಧರ್ಮಕ್ಕೆ ವಿರುದ್ಧವಾದ, ಹಾಗೆಯೇ ರಾಜಧರ್ಮಕ್ಕೂ ಎದುರಾಗಿಯೇ ನಿರ್ಣಯ ಕೈಗೊಂಡ ಅಸಹಜ ಬದುಕು ತನ್ನದೆಂದು ಚಾವುಂಡರಾಯ ಪರಿತಪಿಸುತ್ತಾನೆ.

ಆಗ ಪ್ರತಿಮೆಯೇ ಜೀವ ತಳೆದು ಈತನೊಂದಿಗೆ ಹೃದಯ ಸಂವಾದ ಮಾಡುತ್ತದೆ. ಇದು ಚಾವುಂಡರಾಯನ ಸುಪ್ತ ಮನಸ್ಸಿನಲ್ಲಿ ನಡೆದ ದ್ವಿಮುಖವಾದ ಸಂವಾದಕ್ಕೆ ಒಡ್ಡಿದ ಮನೋವೈಜ್ಞಾನಿಕ ಪ್ರತಿಮೆ ಎಂದು ಭಾವಿಸಬಹುದು. ಹಿಂಸೆ ಮತ್ತು ಅಹಿಂಸೆ, ಯುದ್ಧ ಮತ್ತು ಶಾಂತಿ ಇವುಗಳ ಪರಿಣಾಮಗಳನ್ನು ಚಾವುಂಡರಾಯನ ಹೋರಾಟದ ಬದುಕಿನ ನಡುವೆ ನಿಕಷಕ್ಕೆ ಒಡ್ಡುತ್ತಾರೆ ನಾಟಕಕಾರರು. ಚಾವುಂಡರಾಯನ ಸಾಕ್ಷಿಪ್ರಜ್ಞೆಯಾಗಿ ಕವಿ ರನ್ನ ನಾಟಕದುದ್ದಕ್ಕೂ ಜೊತೆಯಾಗುತ್ತಾನೆ. ನಾಟಕದ ಅಂತ್ಯದಲ್ಲಿ ಚಾವುಂಡರಾಯನ ಆಂತರ್ಯದ ಧ್ವನಿಯಾಗಿ ಪ್ರತಿಮಾ ರೂಪಿ ಬಾಹುಬಲಿ ಮೂಡಿಬರುತ್ತಾನೆ.

ಬಾಹುಬಲಿಯ ‘ಛಾಯಾಪ್ರತಿಮೆ’ಯೊಂದಿಗೆ ಮುಖಾಮುಖಿಯಾದಾಗ, ‘ನೀನು ನನ್ನ ಆದರ್ಶ, ಇದ್ದ ರಾಜ್ಯ ಗೆದ್ದ ರಾಜ್ಯವನ್ನು ತಿರಸ್ಕರಿಸಿ ತ್ಯಾಗ ಮಾಡಿ ಎಲ್ಲವನ್ನೂ ಬಿಟ್ಟು, ನೀನು ನಂಬಿದ ಪುರುಷಾರ್ಥ ಸಾಧನೆಗೆ ಹೊರಟವನು ನೀನು, ಅದಕ್ಕೆಂದೇ ನಿನ್ನ ಪ್ರತಿಮೆ’ ಎನ್ನುತ್ತಾನೆ. ಸಂಭಾಷಣೆ ಸಶಕ್ತವಾಗಿದೆ. ಎಲ್ಲಾ ನಟರು ಪಾತ್ರಗಳಿಗೆ ಜೀವ ತುಂಬಿದ್ದಾರೆ. ಚಾವುಂಡರಾಯ ಮತ್ತು ಆತನ ಕಾಲದ ರಾಜಪ್ರಭುತ್ವ, ಜೈನಧರ್ಮದ ಒಳಗಿನ–ಹೊರಗಿನ ಸ್ವರೂಪ ಮತ್ತು ಸಂಘರ್ಷಗಳನ್ನು ಅರಿಯಲು ಈ ನಾಟಕ ನೆರವಾಗುತ್ತದೆ. ಕಾವ್ಯಾತ್ಮಕವಾಗಿಯೂ ಪ್ರಕಟವಾಗಿರುವುದರಿಂದ ಕಲೆಯ ನೆಲೆ ಪ್ರಾಪ್ತಿಯಾಗಿದ್ದು, ಸಹೃದಯರ ಅಂತರಂಗವನ್ನು ಮುಟ್ಟುತ್ತದೆ. ಇಂತಹ ನಾಟಕವನ್ನು ಕೊಟ್ಟ ಸಮಾಜಮುಖಿ ರಂಗ ಬಳಗ ತಂಡವು ಅಭಿನಂದನಾರ್ಹ.

ಒಟ್ಟಾರೆ ನಾಟಕದ ಆಶಯವನ್ನು ದೃಶ್ಯರೂಪಕ್ಕೆ ಅಳವಡಿಸುವಲ್ಲಿ ಹುಲಗಪ್ಪ ಕಟ್ಟೀಮನಿ ಯಶಸ್ವಿಯಾಗಿದ್ದಾರೆ. ದಿಗ್ವಿಜಯ ಹೆಗ್ಗೋಡು ಅವರ ಸಂಗೀತ ನಾಟಕದ ಸುಲಲಿತ ಓಟಕ್ಕೆ ಸಹಕಾರಿಯಾಗಿದೆ. ಬೆಳಕಿನ ವಿನ್ಯಾಸವೂ ಗಮನ ಸೆಳೆಯುತ್ತದೆ.

ಎಚ್.ಕೆ.ದ್ವಾರಕಾನಾಥ್ ಅವರ ರಂಗವಿನ್ಯಾಸವನ್ನು ತಮ್ಮ ಕುಶಲತೆಯಿಂದ ಕ್ರಿಯಾಶೀಲಗೊಳಿಸಿರುವ ಮಾಲತೇಶ್, ಸೂಕ್ತವಾದ ವರ್ಣಮಯ ವೇಷಭೂಷಣ ಸಿದ್ಧಪಡಿಸಿರುವ ಎನ್.ಮಂಗಳಾ, ಅರ್ಥಪೂರ್ಣ ಬೆಳಕಿನ ವಿನ್ಯಾಸ ಮಾಡಿರುವ ಅರುಣ್ ಮೂರ್ತಿ ಹಾಗೂ ಪ್ರಸಾಧನದ ಮೂಲಕ ಪಾತ್ರಗಳಿಗೆ ವ್ಯಕ್ತಿತ್ವ ತುಂಬಿರುವ ರಾಮಕೃಷ್ಣ ಬೆಳತೂರು ಇವರೆಲ್ಲರೂ ಒಟ್ಟಾರೆ ಪ್ರಯೋಗವನ್ನು ಗಮನಾರ್ಹಗೊಳಿಸಿದ್ದಾರೆ. ಉಮೇಶ್ ಸಾಲಿಯಾನ್ ನಾರಾಯಣ್ ಅವರು ಸಹ ನಿರ್ದೇಶನ ಮಾಡಿ ಕಟ್ಟೀಮನಿ ಅವರಿಗೆ ಕೈ ಜೋಡಿಸಿದ್ದಾರೆ.

❖

ಅಸೀಮ ಸುಂದರಿ ಮಹರ್ಷಿ ಜಲಧಾರೆ...

ಶ್ರೀಧರ್ ಎಸ್. ಸಿದ್ದಾಪುರ

ಪ್ರವಾಸ



ಅಲೆಮಾರಿಯ ಅಂತರಂಗ: ಚೆರಿ ಮರದ ಹೂ ಪಕಳೆಗಳು ನಮ್ಮ ಪ್ರವಾಸದ ಹಾದಿಗೆ ಬಣ್ಣ ತುಂಬಿದ್ದವು. ಶಿಲ್ಲಾಂಗ್‌ನ ತುಂಬೆಲ್ಲಾ ಅದರದೇ ಸುದ್ದಿ. ಚೆರಿ ಹಬ್ಬದ ಬಿಸಿ ಬಿಸಿ ಚರ್ಚೆ ನಡೆಯುವ ಸಮಯಕ್ಕೆ ನಾವೈವರು ಮೇಘಾಲಯದ ಶಿಲ್ಲಾಂಗ್‌ನಲ್ಲಿ ಮೊಕ್ಕಾಂ ಹೂಡಿದೆವು. ನಾಲ್ಕು ದಿನ ಪ್ರವಾಸ ಮಾಡಿದ ಅನುಭವದ ನಾಲ್ಕನೆಯ ಮತ್ತು ಕೊನೆಯ ಕಂತು. ಶಿಲ್ಲಾಂಗನ ಗಿಜಿ ಗುಟ್ಟುವ ಗುಂಪಿನಿಂದ ಏಕಾಂತದ ಸುಂದರ ಸ್ಥಳದ ಹುಡುಕಾಟದಲ್ಲಿದ್ದವರಿಗೆ ಸಿಕ್ಕಿದ್ದು ಈ ಜಲಧಾರೆ!

ಜಲಕನ್ನಿಕೆಯನು ಅರಸಿ ಹೊರಟಾಗ: ನೆನಪುಗಳ ಕೆದುಕುತ್ತಾ ಕುಳಿತವನ ಮುಂದೆ ಹೇಗೋ ನುಸುಳಿ ಜಾರಿದ ಈ ಜಲ ಕನ್ನಿಕೆಯ ವಿವರಗಳು ಡಿಸೆಂಬರ್ ತಿಂಗಳ ಚಳಿಯ ನೀರವ ಏಕಾಂತದಲಿ ನಿಧಾನಕ್ಕೆ ತೆರೆದುಕೊಳ್ಳತೊಡಗಿತ್ತು.

ಹೆಸರು ಮಹರ್ಷಿ ಜಲಧಾರೆ. ಜೊತೆಗೆ ವಹರ್ಷಿ ಎಂಬ ಇನ್ನೊಂದು ಹೆಸರೂ ಇದೆ. ಯಾಕೆ ಈ ಹೆಸರು ಬಂತು ಎಂದು ಇಲ್ಲಿ ಯಾರಿಗೂ ಗೊತ್ತಿಲ್ಲ. ಭಾಷೆ ಗೊತ್ತಿಲ್ಲದ ಈ ನಾಡಿನಲ್ಲಿ ಹೆಸರಿನ ಕ್ಲಿಷ್ಟತೆಯನ್ನು ಕೆದಕುವುದಾದರೂ ಹೇಗೆ? ಗೊತ್ತಿಲ್ಲ. ಯಾವುದೋ ಬೆಟ್ಟದ ಕೊರಕಲುಗಳಲ್ಲಿ ಅಜ್ಞಾತವಾಗಿ ಹರಿವ ಇವು ಯಾವುದೋ ಕಿಂಕರನ ಶಾಪಕ್ಕೆ ಸಿಕ್ಕು ಅಡವಿಯೊಳಗವಿದಿವೆಯೋ?

ನಾಗರಿಕತೆಯ ನಾಗಾಲೋಟಕ್ಕೆ ಸಿಕ್ಕಿ ಅತ್ತಿತ್ತಲಾಗಿರುವ ಜಲಧಾರೆಗಳ ನಡುವೆ ಈ ಜಲಧಾರೆ ಅನನ್ಯವಾಗಿ ನಿಲ್ಲುತ್ತದೆ. ಹೊರ ಜಗತ್ತಿಗೆ ಕನಸಿನಂತೆ ಭಾಸವಾಗುವ ಇಲ್ಲಿನ ಪರಿಸರ ಮಿಥ್ಯಾ ವಾಸ್ತವದಂತೆ. ತಿಂಗಳುಗಳ ಕಾಲ ಅನವರತ ಸುರಿವ ಮಳೆ ನೀರು ಇಲ್ಲಿನ ಬೋಳುಗುಡ್ಡದಿಂದ ಬಹು ಬೇಗ ಬಸಿದು ಹೋದಾಗ ಇಲ್ಲಿನವರ ಪರದಾಟ ಹೇಳತೀರದು. ಹನಿ ನೀರಿಗೂ ತತ್ವಾರ. ಡಿಸೆಂಬರ್‌ನಲ್ಲಿ ಸುಡುವ ತಣ್ಣನೆಯ ಚಳಿ. ಕೈತುಂಬಾ ಕೆಲಸಕ್ಕಾಗಿ ಅಲೆದಾಡುವ ಪರಿಸ್ಥಿತಿ. ಬೊಂಬು ಮತ್ತು ಸುಣ್ಣದ ಕಲ್ಲು ಇಲ್ಲಿ ನ ಆದಾಯದ ಮೂಲ ಮತ್ತು ಮಾಲಿನ್ಯದ ಮೂಲವೂ ಹೌದು.

ಉತ್ಥಾನ: ಹಿಂದಿನ ದಿನವಷ್ಟೇ ನಾನ್ ಬ್ಲಾಂಗ್ ಎಂಬ ಹಳ್ಳಿಯನ್ನು ಹತ್ತಿಳಿದ ನಮಗೆ ಕೈ ಕಾಲುಗಳ ನಟ್ಟು ಬೋಲ್ಟುಗಳೆಲ್ಲಾ ಸದ್ದು ಮಾಡುತ್ತಿರುವಾಗ ಮತ್ತೊಂದು ಜಲಧಾರೆಗೆ ಇಳಿಯಬೇಕೆಂಬುದು ನನಗೆ ಅರಗಿಸಿಕೊಳ್ಳಲಾರದ ಬಿಸಿ ತುಪ್ಪ. ಪೂರ್ವಾಪರಗಳ ಸುಳಿವು ಕೊಡದೆ ಸೂರ್ಯ ಬೆಟ್ಟಗಳ ಜೊತೆಗೆ ನಮ್ಮನ್ನೂ ಸುಡಲು ಹತ್ತಿದ. ಗೆಳೆಯರು ಹೇಳುವ, ‘ಇಲ್ಲೇ ಇದೆ, ಬಂತು, ಇನ್ನೊಂದು ಹತ್ತು ನಿಮಿಷ’ ಎಂಬ ಆಮಿಷದ ಪದಗಳಿಗೆ ಕಿವಿ ಬೇಸತ್ತಿತ್ತು.

ಅಂತೂ ಇಂತು ಬಂತು!: ಸುಮಾರು ನಾಲ್ಕು ಕಿಲೋಮೀಟರ್ ನಡೆದು ಜಲಧಾರೆಯ ನೀರು ಮುಖಕ್ಕೆ ಚಿಮುಕಿಸಿಕೊಂಡಾಗ ಅಮೃತಾನುಭವ. ಶಿಲ್ಲಾಂಗಿನ ಸಿನ್ಸುಂಗ್, (ಮೂಗು ಬಾಯಿ, ತುಟಿ, ಗಂಟಲು ಎಲ್ಲಾ ಸೇರಿಸಿ ಹೇಳಿದರೂ ದೇವರಾಣೆ ನೀವು ಸರಿ ಉಚ್ಚಾರ ಹೇಳಲಾರಿರಿ.) ಹಳ್ಳಿಯ ಪೂರ್ವ ಖಾಸಿ ಬೆಟ್ಟಗಳ ಮಡಿಲಲಿ ಅಡಗಿ ಬಹುದೂರವಿದ್ದರೂ ಪ್ರವಾಸೋದ್ಯಮ ಇಲಾಖೆಯ ಕೆಲಸ ನೀವು ಮೆಚ್ಚಲೇಬೇಕು. ಜಲಪಾತಕ್ಕೆ ಇಳಿಯುವಲ್ಲಿ ನೀರಿನ ವ್ಯವಸ್ಥೆ, ಸುಂದರ ಮೆಟ್ಟಿಲು, ವೀಕ್ಷಣಾ ಗೋಪುರ, ಜಲಪಾತದೆದುರಿಗೇ ನಿಲ್ಲಲು ಮತ್ತೊಂದು ಬಾಗು ಸೇತುವೆ. ಹೀಗೆ ಹತ್ತಾರು ಕಡೆ ವೀಕ್ಷಿಸಿ ಇಲ್ಲಿನ ಜಲಧಾರೆಯನ್ನು ಮನ ತುಂಬಿಸಿಕೊಳ್ಳಲು ಅಪೂರ್ವ ಅವಕಾಶ ಇಲ್ಲಿದೆ.

ಗುಡ್ಡದಿಂದ ಸುರಿವ ಎಳನೀರು! : ಮಳೆಯ ದಿನಗಳಲ್ಲಿ ಇಲ್ಲಿನ ಗುಡ್ಡಗಳು ಕುಡಿದ ಹನಿ ಹನಿ ನೀರನ್ನು ತನ್ನ ಹರಿವಿನುದ್ದಕ್ಕೂ ಹರಿವಂತೆ ಮಾಡುವ ಮೋಡಿ ಒಂದು ಸೋಜಿಗ! ಇಲ್ಲಿ ನನ್ನರಿವಿಗೆ ಬಂದ ಐದು ಪಾತಗಳೂ ಅತ್ಯದ್ಭುತ.

ಮೊದಲ ನಾಲ್ಕು ಹಂತ ನಿಧಾನವಾಗಿ ಬಳುಕುತ್ತಾ ಸಹಸ್ರಧಾರೆಯಾಗಿ ಸುರಿದರೆ, ಎರಡನೆಯದರದು ಅಕ್ಷರಶಃ ಭೋರ್ಗರೆತದ ಪಾತ. ವರ್ಣಿಸಲು ಪದಗಳ ತೊಳಲಾಟ. ಕೆರೆಯಂತಾದ ನೀರು ಅಚ್ಚ ಹಸಿರು ವರ್ಣ. ಮರೆಯಲಸಾಧ್ಯ. ಮೊದಲ ಹಂತದಲಿ ಧುಮುಕಿ ದೊಡ್ಡ ಅಪ್ಸರಕೊಂಡದಂತಹ ಕೆರೆಯ ನಿರ್ಮಿಸಿ ಎರಡನೆಯ ಭೋರ್ಗರೆತಕ್ಕೆ ಸಿದ್ಧವಾಗುತ್ತಾಳೆ. ಐದನೆಯ ಹಂತವನ್ನು ಮೇಲಿನಿಂದ ವೀಕ್ಷಿಸಲು ನಿರ್ಮಿಸಿದ ಸುತ್ತಲಿನ ಕಾಡು ಜಲಪಾತದ ಜೋಗುಳಕ್ಕೊಂದು ಮೆರುಗು.

ಹೊಸತೊಂದು ಅಲೌಕಿಕ ಜಗತ್ತು: ಇಲ್ಲಿ ಅಲೌಕಿಕ ಜಗತ್ತಿನ ಮಾಯಾ ಕನ್ನಡಿಯಂತೆ ತನ್ನ ಸುತ್ತಲಿನ ಮರಗಿಡ ಬಳ್ಳಿಗಳನ್ನು ಪ್ರತಿಫಲಿಸುತ್ತಲೇ ತನಗೆ ತಾನೆ ಅಪರಿಚಿತವಾಗಿ ಉಳಿದಿವೆಯೇನೊ ಎನಿಸುವಂತೆ. ಬಿಂಬಕ್ಕೂ ನೈಜಕ್ಕೂ ಪೈಪೋಟಿ ಏರ್ಪಟ್ಟು ಯಾವುದು ನಿಜ ಯಾವುದು ಸುಳ್ಳು ಎಂಬುದು ತಿಳಿಯದೇ ಮನಸ್ಸು ಮೂಕವಿಸ್ಮಿತವಾಗುತ್ತಿತ್ತು. ತನ್ನ ಸುತ್ತಲಿನದ್ದನ್ನು ಪ್ರತಿಫಲಿಸುತ್ತಾ ಸುಮ್ಮನೆ ಸಾಗಬೇಕು. ಎನ್ನುತ್ತಾ ದೊಡ್ಡ ನದಿಯೊಂದರ ನಿರೀಕ್ಷೆಯಲ್ಲಿ ಭೋರ್ಗರೆಯುತ್ತಾ ಸಾಗುತ್ತಾ ತನ್ನತನವನ್ನು ಕಳೆದುಕೊಳ್ಳುವ ಸಂಕಟದಲ್ಲೇ ಮಂದಗಮನೆಯಾಗಿ ತನ್ನ ಜಗತ್ತನ್ನು ತೊರೆದು ಬರುವ ಪ್ರೇಯಸಿಯಂತೆ ಎಂಬ ಭಾವ ಮೂಡುತ್ತಲೇ ನೋಡುವ ನೋಟ ಬದಲಾಗಿತ್ತು!

ಪಾಂಡೆ ದಾಟಿಸಿದ ವಿಷಾದ: ಇಪ್ಪತ್ತು ವರ್ಷದಿಂದ ಮೇಘಾಲಯದಲ್ಲೇ ನೆಲೆನಿಂತ ನಮ್ಮ ಗೆಳೆಯ ಪಾಂಡೆ ಮೊದಮೊದಲು ಮೇಘಾಲಯದ ಎಲ್ಲಾ ಜಲಧಾರೆಗಳ ನೀರು ಸ್ಫಟಿಕ ಶುಭ್ರವಾಗಿತ್ತು ಎಂದು ಹೇಳಿ ನಮ್ಮಗೊಂದು ಅಚ್ಚರಿಯ ಜೊತೆಗೆ ವಿಷಾದವನ್ನೂ ಉಣಬಡಿಸಿದ. ನಾಗರಿಕತೆಯ ಅನಾಗರಿಕ ವರ್ತನೆ ಬಗ್ಗೆ ಜುಗುಪ್ಸೆ ಹುಟ್ಟಿಸಿತು.

ಕಟ್ಟಿಸಿಕೊಂಡ ಪರೋಟ, ಹಣ್ಣುಗಳಿಗೆ ಹೊಟ್ಟೆಗೆ ಗೇಟ್ ಪಾಸ್ ನೀಡಲಾಯಿತು! ಜಲಧಾರೆಯಲ್ಲಿ ಮುಖ ತೋಯಿಸಿಕೊಂಡು ಹೊರಟಾಗ ಸೂರ್ಯ ಕತ್ತಲ ಪರದೆ ಎಳೆಯುತ್ತಿದ್ದ. ಮತ್ತೊಮ್ಮೆ ನಿನ್ನ ಸೌಂದರ್ಯ ಮೆಲ್ಲುವ ಅವಕಾಶಕ್ಕಾಗಿ ಕಾದಿರುತ್ತಾ ಜಲಧಾರೆಗೆ ಬೈ ಬೈ ಹೇಳಿದೆವು.


❖

ಅಂಬೇಡ್ಕರ್ ನೆನಕೆ...

9ನೇ ಪುಟದಿಂದ

ಎಲ್ಲೆಡೆ ಸಲ್ಲುವವರ ಸೃಷ್ಟಿ ದ್ವಂದ್ವ

ವೀರಣ್ಣ ಮಡಿವಾಳರ



ಅಂಬೇಡ್ಕರ್ ಜೀವನದಿ ಇದ್ದಹಾಗೆ. ಅವರು ಎಲ್ಲ ಕಾಲಕ್ಕೂ ಪ್ರಸ್ತುತ. ಇವತ್ತು ಕ್ರಿಯಾಶೀಲ ಮಾಧ್ಯಮದಲ್ಲಿಯೂ ಅವರನ್ನು ಜನರಿಗೆ ತಲುಪಿಸುವ ಪ್ರಯತ್ನ ನಡೆಯುತ್ತಿದೆ. ಇದು ಅವರ ಮೇಲೆ ಇರುವ ಪ್ರಾಮಾಣಿಕ ಪ್ರೀತಿಯನ್ನು ತೋರಿಸುತ್ತದೆ. ಅಂಬೇಡ್ಕರ್ ಅವರ ಆಶಯವನ್ನು ಕಾರ್ಯರೂಪಕ್ಕೆ ತರುವ ಮಾರ್ಗದಲ್ಲಿ ಇದೂ ಒಂದು. ಅವರು ಕಂಡ ಸಮಸಮಾಜದ ಕನಸುಗಳನ್ನು ನೆರವೇರಿಸಲು ತೀವ್ರ ರೀತಿಯ ಕೆಲಸ ಆಗುತ್ತಿದೆ. ಇದೆಲ್ಲವನ್ನೂ ಆಗುಮಾಡಬೇಕಾದಂತಹವರು ಅದನ್ನು ಹಿಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಒಂದು ಕಡೆ ಪ್ರಾಮಾಣಿಕ ಪ್ರಯತ್ನ ಮಾಡುವವರನ್ನು ಅಂಬೇಡ್ಕರ್‌ವಾದಿಗಳು ಅಂದುಕೊಳ್ಳಿ ಇಲ್ಲವೇ ಅಂಬೇಡ್ಕರ್ ಚಿಂತನೆಯಲ್ಲಿ ನಂಬಿಕೆ ಇಟ್ಟವರು ಎಂದುಕೊಳ್ಳಿ. ಒಬ್ಬ ಸಾಮಾನ್ಯ ಮನುಷ್ಯನಿಂದ ಬುದ್ಧಿಜೀವಿಗಳ ತನಕ ದೊಡ್ಡಮಟ್ಟದವರೆಗೆ ಆ ಕೆಲಸ ನಡೆಯುತ್ತಿದೆ. ಅದನ್ನು ಆಗುಮಾಡಬಾರದು ಎನ್ನುವ ಪಟ್ಟಭದ್ರರು ಅಷ್ಟೇ ಶ್ರಮವಹಿಸಿ ತುಂಬ ಕ್ರಿಯಾಶೀಲವಾಗಿಯೇ ಹಿಂದಕ್ಕೆ ಎಳೆಯುತ್ತಿದ್ದಾರೆ. ಇದು ನಿಲ್ಲದ ಸಂಘರ್ಷ. ಇಂತಹ ಸಂಕೀರ್ಣ ಸಂದರ್ಭದಲ್ಲಿ ನಾವು ಮಾತ್ರ ಅಂಬೇಡ್ಕರ್ ಅವರ ಮೇಲಿನ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿಕೊಳ್ಳುತ್ತಿದ್ದೇವೆ.

ಈ ಪಟ್ಟಭದ್ರರಿಗೆ ಅಂಬೇಡ್ಕರ್ ಚಿಂತನೆ ಬೇಕಿಲ್ಲ. ಆದರೂ ಅವರು ಬೇಕು. ಹಾಗಾಗಿಯೇ ಬಾಬಾಸಾಹೇಬರ ಚಿಂತನೆಯ ಮರುವ್ಯಾಖ್ಯಾನ, ಅಪವ್ಯಾಖ್ಯಾನವನ್ನು ಮಾಡುತ್ತಲೇ ಇರುತ್ತಾರೆ. ಅದಕ್ಕೆ ತುಂಬ ಉದಾಹರಣೆಗಳಿವೆ. ಕೋಟಗಾನಹಳ್ಳಿ ರಾಮಯ್ಯ ‘ದೃಶ್ಯ, ಮಾತು, ಶಬ್ದ ಎಲ್ಲ ಮಲಿನವಾಗಿವೆ’ ಎಂದು ಒಂದು ಕಡೆ ಹೇಳುತ್ತಾರೆ. ಏಕೆಂದರೆ ಕ್ರೌರ್ಯವನ್ನೇ ಮೈಗೂಡಿಸಿಕೊಂಡವರು ಕರುಣೆಯ ಮಾತುಗಳನ್ನು ಆಡಿದರೆ ಅದನ್ನು ಹೇಗೆ ಸ್ವೀಕರಿಸಬೇಕು? ಇವತ್ತಿನ ದ್ವಂದ್ವ ಇರುವುದೇ ಇಲ್ಲಿ. ಭಗತ್‌ಸಿಂಗ್ ಆಗಲಿ, ಅಂಬೇಡ್ಕರ್ ಆಗಲಿ ಅನೇಕರಿಗೆ ಅನಿವಾರ್ಯವಾಗಿದ್ದಾರೆ. ಅವರನ್ನು ಮಾತಿಗಾಗಿ ಇಟ್ಟುಕೊಂಡಿರುತ್ತಾರೆ. ಅಪ್ಪಿತಪ್ಪಿಯೂ ಅಂಬೇಡ್ಕರ್ ಅವರ ನೈಜ ಚಿಂತನೆಯನ್ನು ಅಂಥವರು ಮಾತನಾಡುವುದಿಲ್ಲ. ಒಂದು ಕಡೆ ಕುವೆಂಪು ಅವರ ಬಗ್ಗೆ ಭಾಷಣ ಮಾಡುವವರೇ ಮತ್ತೊಂದು ಕಡೆ ಜನಾಂಗ ದ್ವೇಷದ ಮಾತುಗಳನ್ನೂ ಆಡುತ್ತಾರೆ. ಹೀಗೆ ಎಲ್ಲ ಕಡೆ ಸಲ್ಲುವವರಿಂದಲೇ ಇವತ್ತಿನ ದ್ವಂದ್ವ ಸೃಷ್ಟಿಯಾಗಿದೆ.ಇದು ಕೂಡ ಬೌದ್ಧಿಕ ಸಂಘರ್ಷಕ್ಕೆ ಕಾರಣ ಆಗುತ್ತಿದೆ.

ಲೇಖಕ: ಕವಿ, ಶಿಕ್ಷಕ

ಅಂಬೇಡ್ಕರ್ ತತ್ತ್ವ ಸಿನಿಮಾಗೂ ವಸ್ತು

ಜೀವಾ ನವೀನ್



ಸಿನಿಮಾದಲ್ಲಿ ಅಂಬೇಡ್ಕರ್ ಫೋಟೊ ತೋರಿಸಲು ಹಿಂಜರಿಯುತ್ತಿದ್ದರು. ಅಂದರೆ ತಾವು ಕೆಲವರಿಗೆ ಸೀಮಿತ ಆಗುತ್ತೇವೆ ಎನ್ನುವ ಅಳುಕು ಇದಕ್ಕೆ ಕಾರಣ. ಆದರೆ ಈಗ ಕಾಲ ಬದಲಾಗಿದೆ. ಅಂಬೇಡ್ಕರ್ ಅವರ ತತ್ತ್ವ ಸಿದ್ಧಾಂತಗಳೆ ಸಿನಿಮಾಗಳಿಗೆ ವಸ್ತು ಆಗುತ್ತಿವೆ. ಆ ಮೂಲಕ ಜನರಿಗೆ ಚಿಂತನಾರ್ಹ ಸಂದೇಶ ಕೊಡಲು ಸಾಧ್ಯವಾಗುತ್ತಿದೆ. ನಮ್ಮ ‘ಪಾಲಾರ್’ ಸಿನಿಮಾದಲ್ಲಿ ಎಲ್ಲೆಲ್ಲಿ ಸೂಕ್ತ ಅನ್ನಿಸುತ್ತೋ ಅಲ್ಲೆಲ್ಲ ಅಂಬೇಡ್ಕರ್ ಅವರ ಚಿತ್ರ ಮತ್ತು ಅವರ ನುಡಿಗಳನ್ನು ದುಡಿಸಿಕೊಂಡಿದ್ದೇವೆ. ಸಿನಿಮಾ ವಾಲ್‌ಪೋಸ್ಟ್‌ನಲ್ಲಿ ದೊಡ್ಡದಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಚಿತ್ರ ಬಳಸಿದ್ದೇವೆ. ಈ ರೀತಿ ಅವರ ಆದರ್ಶದ ಕನಸನ್ನು ಸಿನಿಮಾದಲ್ಲಿ ಬಳಸುವಂತಹ ನಿರ್ಮಾಪಕರು, ನಿರ್ದೇಶಕರು ಕನ್ನಡ ಚಿತ್ರರಂಗಕ್ಕೆ ಬರಬೇಕು.

ತಮಿಳು ಸಿನಿಮಾದಲ್ಲಿ ಅಂಬೇಡ್ಕರ್ ಫಿಲಾಸಫಿಯನ್ನು ಚೆನ್ನಾಗಿ ಬಳಸುತ್ತಿದ್ದಾರೆ. ಆದರೆ ನಮ್ಮಲ್ಲಿ ಹಾಗೇನಾದರೂ ಬಳಸಿದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮೀಸಲಾಗುತ್ತೇವೆ ಎಂಬ ಸಂಕುಚಿತ ಆಲೋಚನೆ ಇದೆ ಎಂದು ಅನ್ನಿಸುತ್ತದೆ. ಈಗ ಆ ಮಿತಿಯನ್ನು ದಾಟಬೇಕಿದೆ. ಅಂಬೇಡ್ಕರ್ ಎಲ್ಲ ಧರ್ಮ, ಜಾತಿಗೆ ಬೇಕಾದವರು. ಆ ಅಂಶವನ್ನೇ ಕೇಂದ್ರವಾಗಿಟ್ಟುಕೊಂಡು ‘ಪಾಲಾರ್’ ಸಿನಿಮಾ ಮಾಡಿದ್ದೇವೆ.

ನಮ್ಮ ಸಮಾಜಕ್ಕೆ ನಿಧಾನವಾಗಿ ಅಂಬೇಡ್ಕರ್ ಅರ್ಥ ಆಗುತ್ತಿದ್ದಾರೆ. ಅವರನ್ನು ಬಿಟ್ಟು ಮುಂದಕ್ಕೆ ಹೋಗಲು ಸಾಧ್ಯ ಇಲ್ಲ ಎನ್ನುವ ಸತ್ಯ ಗೊತ್ತಾಗಿದೆ. ಸಂವಿಧಾನವನ್ನು ಗೌರವಿಸುವ ಎಲ್ಲರೂ ಬಾಬಾ ಸಾಹೇಬ್ ಅವರನ್ನು ಪ್ರೀತಿಸಬೇಕು.

ಈಗ ಚುನಾವಣೆ ಬಂದಿದೆ. ಪ್ರಜಾಪ್ರಭುತ್ವದ ಈ ದೇಶದಲ್ಲಿ ನಮ್ಮ ಸಂವಿಧಾನ ನೀಡಿದ ದೊಡ್ಡ ಶಕ್ತಿಯನ್ನು ನಮ್ಮ ಪ್ರತಿನಿಧಿಗಳಿಗೆ ನೀಡುತ್ತಿದ್ದೇವೆ. ವೋಟು ಎನ್ನುವುದು ಪ್ರಜಾಪ್ರಭುತ್ವದ ಮೌಲ್ಯ. ಅದನ್ನು ಎಲ್ಲ ಜಾತಿ, ವರ್ಗದವರಿಗೆ ಕಲ್ಪಿಸಿದವರು ಅಂಬೇಡ್ಕರ್. ಅಂತಹ ಮೌಲ್ಯದ ಹಕ್ಕನ್ನು ಹಣ–ಬಟ್ಟೆ, ಬಿರಿಯಾನಿಗೆ ಮಾರಿಕೊಳ್ಳಬಾರದು. ಒಳ್ಳೆಯ ವ್ಯಕ್ತಿಯನ್ನು ಆಯ್ಕೆ ಮಾಡುವ ನಿಲುವಿನ ಹಿಂದೆಯೂ ಅಂಬೇಡ್ಕರ್ ತತ್ವ ಇದೆ. ಅದನ್ನು ಅನುಷ್ಠಾನ ಮಾಡಬೇಕಿದೆ. ನಾನು ಮುಂದೆ ಯಾವ ಸಿನಿಮಾ ಮಾಡಿದರೂ ಅಂಬೇಡ್ಕರ್ ವಿಚಾರವನ್ನು ತೆಗೆದುಕೊಳ್ಳುತ್ತೇನೆ.

ಲೇಖಕ: ಸಿನಿಮಾ ನಿರ್ದೇಶಕ

ಮುನ್ನೋಟ 9-04-2023 ರಿಂದ 15-04-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ನೀವು ಹಾಕಿಕೊಂಡ ನಿಯಮಗಳನ್ನು ಬದಿಗಿಟ್ಟು ಹೊಂದಿಕೊಳ್ಳುವ ಅನಿವಾರ್ಯತೆ ಎದುರಾಗಬಹುದು. ಹೋಟೆಲ್ ಉದ್ಯಮದವರಿಗೆ ನಿತ್ಯದ ಆದಾಯದಲ್ಲಿ ಸಾಕಷ್ಟು ವ್ಯತ್ಯಾಸಗಳಿರಲಿವೆ. ವೃತ್ತಿಯಲ್ಲಿ ಉನ್ನತ ಅಧಿಕಾರಿಗಳ ಭೇಟಿಯಾಗಬಹುದು. ಧಾನ್ಯಗಳ ವ್ಯಾಪಾರಿಗಳಿಗೆ ದವಸ ಶೇಖರಿಸಲು ಅನುಕೂಲವಿರಲಿದೆ. ಸರ್ಕಾರಿ ಕೆಲಸಗಳಲ್ಲಿ ನಿಧಾನಗತಿ ಕಾಣಬಹುದು. ಹಣದ ಒಳಹರಿವು ಸುಧಾರಿಸುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಅಭಿವೃದ್ಧಿ ಕಾರ್ಯಗಳಿಗೆ ಸೂಕ್ತ ಸಮಯವಿದು. ಹೊಸ ಕೆಲಸಕ್ಕೆ ಹೋಗಲು ರಾಜೀನಾಮೆ ನೀಡುವಿರಿ. ಕೃಷಿ ಆಧಾರಿತ ವಸ್ತುಗಳಿಗೆ ಉತ್ತಮ ಬೇಡಿಕೆ ಬರುತ್ತದೆ. ವಿದೇಶದಲ್ಲಿ ಕೆಲಸ ಹುಡುಕುವವರಿಗೆ ಉದ್ಯೋಗದ ಅವಕಾಶಗಳು ದೊರೆಯುತ್ತವೆ. ನಿಮ್ಮ ಆರೋಗ್ಯದಲ್ಲಾಗುವ ಬದಲಾವಣೆಗಳಿಗೆ ಆಹಾರವೇ ಮುಖ್ಯ ಕಾರಣವಾಗಬಹುದು. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ನಿಮ್ಮ ಸಹವರ್ತಿಗಳು ಹಾಗೂ ಬಂಧುಗಳನ್ನು ವಿಶ್ವಾಸದಿಂದ ಕಾಣಿರಿ. ತಾಂತ್ರಿಕ ಕ್ಷೇತ್ರದಲ್ಲಿರುವವರು ಹೆಚ್ಚಿನ ಶ್ರಮ ಹಾಕಬೇಕು. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಧಾರಣ ಪ್ರಗತಿ. ಟ್ರಾವೆಲ್ ಏಜೆಂಟರುಗಳಿಗೆ ಹೆಚ್ಚಿನ ವ್ಯವಹಾರ ನಡೆಯಬಹುದು. ಕೃಷಿಕರು ಹೆಚ್ಚಿನ ಆದಾಯ ನಿರೀಕ್ಷಿಸಬಹುದು. ಹೆಣ್ಣು ಮಕ್ಕಳ ಪ್ರಗತಿ ತೃಪ್ತಿಕರ. ವೃತ್ತಿಯಲ್ಲಿ ಬಡ್ತಿ ಸಿಗಬಹುದು. ಹಣದ ಒಳಹರಿವು ಸಾಮಾನ್ಯ ಇರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ವಾಸಸ್ಥಳ ಬದಲಾವಣೆಯಾಗಬಹುದು. ಲೆಕ್ಕಪತ್ರಗಳ ಸಮಸ್ಯೆ ಬಗೆಹರಿಯುತ್ತದೆ. ರಿಯಲ್ ಎಸ್ಟೇಟ್ ಉದ್ಯಮದವರಿಗೆ ವ್ಯವಹಾರ ನಿಧಾನವಾಗಬಹುದು. ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಧನೆಯ ಯೋಗವಿದೆ. ವಕೀಲರಿಗೆ ಗೊಂದಲದ ಸಂದರ್ಭ ಎದುರಾಗಬಹುದು. ಹಣದ ಒಳಹರಿವು ನಿರೀಕ್ಷೆಯಷ್ಟಿರಲಿದೆ. ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನಿರೀಕ್ಷಿಸಿದ್ದ ಸ್ಥಳಕ್ಕೆ ವರ್ಗಾವಣೆಯ ದೊರೆಯಬಹುದು.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಕೃಷಿ ಕಾರ್ಯಗಳು ನಿಮ್ಮ ನಿರೀಕ್ಷೆಗೆ ತಕ್ಕಂತೆ ನಡೆಯುತ್ತವೆ. ಕೃಷಿಯಿಂದ ಆದಾಯವನ್ನು ನಿರೀಕ್ಷಣೆ ಮಾಡಬಹುದು. ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಹೆಚ್ಚಿನ ಕೆಲಸಗಳು ದೊರೆಯುತ್ತವೆ. ಶುಷ್ಕ ಹಣ್ಣುಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಹಣದ ಒಳಹರಿವು ಏರಿಕೆಲ್ಲಿರುತ್ತದೆ. ಆಸ್ತಿ , ವಿದೇಶ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ವೃತ್ತಿಜೀವನದ ನಿರ್ಧಾರ ತೆಗೆದುಕೊಳ್ಳುವಾಗ ಪರಿಣತರ ಸಲಹೆ ಪಡೆಯಿರಿ. ಶೇರು ಮಾರುಕಟ್ಟೆ ವ್ಯವಹಾರ ಮಾಡುವವರಿಗೆ ನಷ್ಟದ ಬಿಸಿ ತಟ್ಟಬಹುದು. ವಾಹನ ಖರೀದಿಯ ಬಗ್ಗೆ ಚಿಂತನೆ ಬರುತ್ತದೆ. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ವ್ಯವಹಾರ ಚೆನ್ನಾಗಿರುತ್ತದೆ. ಕಟ್ಟಡ ಕಾರ್ಮಿಕರಿಗೆ ಹೆಚ್ಚು ಕೆಲಸ ದೊರೆತು ಹೆಚ್ಚಿನ ಸಂಪಾದನೆಯಾಗುತ್ತದೆ. ಬೇಕರಿ, ಕೃಷಿ ಸಲಕರಣೆ ಕ್ಷೇತ್ರದವರಿಗೆ ಉತ್ತಮ ವ್ಯಾಪಾರವಿರಲಿದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಯಾವುದೇ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇಬೇಕಾಗುತ್ತದೆ. ಕೃಷಿ ಕಾರ್ಮಿಕರಿಗೆ ಉತ್ತಮ ಸಂಪಾದನೆ ಆಗುತ್ತದೆ. ಮರಗೆಲಸ ಮಾಡುವವರಿಗೆ ಹೆಚ್ಚಿನ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ರಾಸಾಯನಿಕ ವಸ್ತುಗಳನ್ನು ತಯಾರಕರಿಗೆ ವ್ಯವಹಾರ ವಿಸ್ತರಿಸುತ್ತದೆ. ಸರ್ಕಾರಿ ಗುತ್ತಿಗೆ ಮಾಡುತ್ತಿರುವವರಿಗೆ ಆಪಾದನೆ ಬರುವ ಸಾಧ್ಯತೆಯಿದೆ. ಎಚ್ಚರ ವಹಿಸಿರಿ. ಧನದಾಯವು ಮಂದಗತಿಯಲ್ಲಿರುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ವಿಲಾಸಿ ಜೀವನಕ್ಕೆ ಮೊರೆಹೋಗದಿರಿ. ಧನಾದಾಯವು ಸಾಮಾನ್ಯ ಸ್ಥಿತಿಯಲ್ಲಿ ಇರುತ್ತದೆ. ಸರ್ಕಾರಿ ಸಾಲ ಸೌಲಭ್ಯಗಳು ಈಗ ದೊರೆಯುತ್ತವೆ. ಸಿವಿಲ್ ಎಂಜಿನಿಯರ್‌ಗಳಿಗೆ ನಿರ್ಮಾಣ ಕಾರ್ಯಗಳ ಗುತ್ತಿಗೆ ದೊರೆಯುತ್ತವೆ. ಸಂಸ್ಥೆಗಳಲ್ಲಿ ಲೆಕ್ಕಾಚಾರದ ಜವಾಬ್ದಾರಿಯನ್ನು ಹೊಂದಿರುವವರು ಎಚ್ಚರದಲ್ಲಿ ಕೆಲಸ ಮಾಡಬೇಕು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಕೈ ಹಾಕಿದ ಕೆಲವು ಕೆಲಸಗಳು ಯಾವುದೇ ಅಡೆತಡೆ ಇಲ್ಲದೆ ನೆರವೇರುತ್ತವೆ. ಮಿತ್ರ ವೃಂದದಲ್ಲಿ ಹಣಕಾಸಿನ ಸಮಸ್ಯೆಗಳು ಬರಬಹುದು. ಆಸ್ತಿವಿಷಯಕ್ಕೆ ಸಂಬಂಧಿಸಿ ತಾಳ್ಮೆಯಿಂದ ಇರಿ. ಉಳಿತಾಯದ ಹಣದ ಹೊಂದಾಣಿಕೆಯಿಂದ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸುವಿರಿ. ವಕೀಲರುಗಳಿಗೆ ಹೆಚ್ಚಿನ ಆದಾಯ ಬರುವ ಸಾಧ್ಯತೆಗಳು ಇವೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಕಡಿಮೆ ಮಾತನಾಡಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ನಿಮ್ಮ ಕಲ್ಪನಾ ಶಕ್ತಿ ಚುರುಕಾಗಿ ಕೆಲಸ ಮಾಡಿ. ಎಲೆಕ್ಟ್ರಾನಿಕ್ ಉಪಕರಣಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ವೃದ್ಧಿಯಾಗುತ್ತದೆ. ವಿದೇಶಕ್ಕೆ ಅದಿರನ್ನು ರಫ್ತು ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಮಕ್ಕಳ ವಿಷಯದಲ್ಲಿ ಶುಭ ವಾರ್ತೆಗಳನ್ನು ಕೇಳುವಿರಿ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗದ ಸಾಧ್ಯತೆಗಳಿವೆ. ಹೊಸ ವಾಹನ ಕೊಳ್ಳಲು ಆಲೋಚಿಸುವಿರಿ.


ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಹಿರಿಯರು ಸಕಾರಾತ್ಮಕ ಮನೋಭಾವದಿಂದ ಎಲ್ಲರ ಮನವನ್ನು ಗೆಲ್ಲುವರು. ವ್ಯಾಪಾರಗಳಲ್ಲಿ ಪೈಪೋಟಿ ಹೆಚ್ಚಾಗುತ್ತದೆ. ನಿಧಾನಗತಿಯಲ್ಲಿ ಸಾಗುತ್ತಿದ್ದ ನಿರ್ಮಾಣ ಕಾರ್ಯಗಳು ಮುಕ್ತಾಯ ಹಂತಕ್ಕೆ ಬರುತ್ತವೆ. ಕೋರ್ಟು ಕಚೇರಿ ವಿಷಯದಲ್ಲಿ ಶುಭ ಸಮಾಚಾರಗಳು ಕೇಳಿ ಬರುತ್ತವೆ. ಧನಾದಾಯವು ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಕೆಲಸಗಳನ್ನು ಮುಂದೂಡುವ ಅಭ್ಯಾಸ ಕಡಿಮೆ ಮಾಡಿರಿ. ನಿಮ್ಮ ವ್ಯವಹಾರದಲ್ಲಿನ ಯೋಜನೆ ಹಾಗೂ ಅವುಗಳ ಬೆಳವಣಿಗೆಗೆ ಬಗ್ಗೆ ಗಮನಹರಿಸುವುದು ಬಹಳ ಮುಖ್ಯ. ವಿದ್ಯಾರ್ಥಿಗಳು ಹೆಚ್ಚಿನ ಶ್ರಮ ಹಾಕಬೇಕು. ನೃತ್ಯ ಮತ್ತು ಅಭಿನಯ ಕಲೆಗಳನ್ನು ಪ್ರದರ್ಶಿಸುವವರಿಗೆ ಬೇಡಿಕೆ ಬರುತ್ತದೆ. ಪ್ರಭಾವಿ ರಾಜಕಾರಣಿಗಳ ಜೊತೆ ಮಾತನಾಡಿ ನಿಮ್ಮ ಆಸ್ತಿ ವ್ಯವಹಾರಗಳನ್ನು ಸರಿಪಡಿಸಿಕೊಳ್ಳುವಿರಿ.

ಪದಬಂಧ 2784



ಮೇಲಿಂದ ಕೆಳಕ್ಕೆ

1. ಭವನದಲ್ಲಿರುವ ಇಹದ ಪಾಶ 2
2. ಪ್ರತಿದಿನದ ಸತ್ಯ 2
3. ದೇವಕಿ ಪತಿಯ ಅಡ್ಡನಾಮ 2
4. ಖನಿಜದಲ್ಲಿ ಸತ್ಯ ಹುಡುಕಿ 2
5. ತಿಂಗಳಿಗೊಮ್ಮೆ ಬರುವಂತದ್ದು 3
7. ಬಿಡದೆ ಹನಿಹನಿಯಾಗಿ ಬೀಳುವ ಮಳೆ 3
9. ವಿರಳವಾದ ಯಜ್ಞ 3
10. ಇಲ್ಲಿ ಮನೆ ಮಾಡಿ ಶಬ್ದಕ್ಕೆ ನಾಚಿದರೆ ಹೇಗೆ 2
11. ಜನಪ್ರಿಯವಾಗಿರುವ ತಿಳಿಸಾರು 2
12. ಮಗ ಸುಪುತ್ರ 2
13. ಸುತ್ತಿ ಎಣ್ಣೆ ತೆಗೆಯುವ ಯಂತ್ರ ತಲೆಕೆಳಗು 2
14. ನಮ್ಮ ರಾಷ್ಟ್ರಗೀತೆಯಲ್ಲಿ ಬರುವ ಮಂದಿ 2
15. ಆವರಿಸುತ್ತಾ ಬರುವ ಕಲ್ಪನಾ ಬರಹಗಾರ 2
17. ಜಗವನ್ನೇ ತನ್ನೊಳಗೆ ಸೇರಿಸಿಕೊಂಡ ಹಕ್ಕಿಯ ಗೂಡು 3
19. ಅವಳಿ ಮಕ್ಕಳಲ್ಲಿ ಒಬ್ಬ 3
20. ತೊಟ್ಟಿಕ್ಕುವ ಜೇನು 2
21. ಮದದಲ್ಲಿ ಶೂನ್ಯವಾವರಿಸಿ ಜಡ ಪ್ರವೃತ್ತಿಯಾಗಿದೆ 2
22. ಇರುವ ಜಾಗ ತಲೆಕೆಳಕಾಗಿದೆ 2
23. ಸತಿಯ ಗಂಡ 2
24. ಕೆಲಸದಲ್ಲಿ ವಹಿಸಬೇಕಾದ ಗಮನ 2
25. ಕೈಗೆ ನಿಲುಕದ ಸಮಯ 2
27. ಮೂಗಿನಷ್ಟೇ ಪ್ರಮುಖ ಮಹಾರಾಷ್ಟ್ರದ ಊರು 3
29. ಮುಖಕ್ಕೆ ಹಾಕಿಕೊಳ್ಳುವ ತೆರೆ 3
31. ಬಹುಮಾನವನ್ನು ಗೆದ್ದವ 3
33. ಶಿವನ ಮಹಾಸ್ವರೂಪ 2
34. ದೊಡ್ಡದಾಗಿ ಬೆಳೆಯಬಹುದಾದವ ಏನೂ ಇಲ್ಲದಂತಾಗಿದ್ದಾನೆ 2
35. ನೆಲೆಯೂರಲು ಬೇಕಾದ ಭೂಮಿ 2
36. ತಂಗುವ ಸ್ಥಳ 2

ಎಡದಿಂದ ಬಲಕ್ಕೆ

1. ಇಹಲೋಕದೊಡತಿ ಶಿವ ಸತಿ 3
3. ನೆಲೆಸಿರುವವಳು 3
5. ಹೆಣ್ಣು ಕೊಟ್ಟ ತಂದೆ 2
6. ಬೇಡವೆಂದು ಬಿಟ್ಟುಬಿಡು 3
8. ವಿಷ್ಣುವಿನ ದ್ವಾರಪಾಲಕರಲ್ಲಿ ಗೆದ್ದ ಮೊದಲಿಗ 2
10. ವರ್ಣಗಳಲ್ಲಿ ಉಂಟಾಗುವ ಬೆರಕೆ 3
12. ಒಳ್ಳೆಯ ನಡತೆ ಸ್ವಭಾವದವ 3
14. ಸೀತೆಗೆ ಮಾತ್ರವಲ್ಲ ಈತ ಮಂದಿಯ ತಂದೆ 3
16. ಸಂತನಲ್ಲಿ ಗೀರ್ವಾಣಿ ಸೇರಿ ಹೊರ ಹೊಮ್ಮಿದ ನಾದ ಮಾಧುರ್ಯ 3
18. ಹಾಡುಗಾರಿಕೆ 3
21. ಶುಭಕರವಾದ ಗ್ರಹ 3
23. ತಮಿಳುನಾಡಿನ ಸುಬ್ರಹ್ಮಣ್ಯ ಕ್ಷೇತ್ರ 3
26. ಮಧುರವಾದ ಹಾಡಿನ ದನಿ 3
28. ವಿಗ್ರಹಗಳ ಕೆತ್ತನೆ ಮಾಡುವ ಕುಶಲಿ 3
30. ಹೆಣ್ಣು ಹೆಣ್ಣೆಂದು ಹೀಗೆಳೆವ ಕಣ್ಣು ಕಾಣದ ಕುರುಡ 3
32. ಹಸುವಿನ ಕೂಸು 2
34. ಎಣ್ಣೆಗಾಯಿಗೆ ಬರುವ ತರಕಾರಿಗಳ ರಾಜ 3
36. ಕೊಡು ಎನ್ನುವ ತಂದೆಯ ತಂದೆ 2
37. ದಕ್ಷಿಣ ಭಾರತದ ಮೂಲ ನಿವಾಸಿ 3
38. ಸೀತೆ ಗೆರೆಯನ್ನು ಎಳೆದ ರಾಮಾನುಜ 3

ಪದಬಂಧ ಉತ್ತರ -2783

ಮೇಲಿಂದ ಕೆಳಕ್ಕೆ

1.ಧಿಮಾಕು 3. ನಿರಂತರ 4.ಕಾಗುಣಿತ 6.ಕರಾಮತ್ತು 8.ಸಾರಮತಿ 11.ಜವೇರಿ 13.ಮುಕುಂದಾ 15.ಮಲಯ 17.ಹರಿಹರ 19.ಹಲಕೆ 20.ಸಾಲುಮರ 21.ವರನಟ 23.ನಮಿಸು

ಎಡದಿಂದ ಬಲಕ್ಕೆ

2.ಸನ್ನಿಧಿ 4.ಕಾಯ 5.ಮಾರಕ 7.ರಂಗುರಂಗು 8.ಸಾಕು 9.ರಾಯಿತ 10. ರಾಜಪೂತ 12. ತ್ತುಮು 14.ಅತಿಕ್ರಮ 16.ರಿಕ್ತಹಸ್ತ 18.ದಾಹ 20.ಸಾವಯವ 22.ರವಿಕೆ 24. ಮದ್ಯಪಾನ 25.ಲಕುಮಿ 26.ಜ್ವರ 27.ಸುಪಥ


ರೈತ ಸತ್ಯಾಗ್ರಹ: ಸಾಕ್ಷ್ಯಚಿತ್ರದ ಹರವು

ವಿನಾಯಕ ಕೆ.ಎಸ್.

ಜೂನ್ 5, 2020–ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಮಾರುಕಟ್ಟೆಯ ಹೊರಗೂ ಮಾರಾಟ ಮಾಡಲು ಅವಕಾಶ ನೀಡುವ, ಕೃಷಿಯಲ್ಲಿ ಕಾರ್ಪೊರೇಟ್ ಕಂಪನಿಗಳ ಹೂಡಿಕೆಗೂ ಅವಕಾಶ ನೀಡುವ ನೂತನ ಕೃಷಿ ನೀತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸಿದ ದಿನ. ಅಲ್ಲಿಂದಲೇ ದೇಶದಲ್ಲಿ ದೊಡ್ಡ ರೈತ ಹೋರಾಟದ ಕಿಡಿಯೊಂದು ಹೊತ್ತಿಕೊಂಡಿದ್ದು.

2020ರ ಸೆಪ್ಟೆಂಬರ್‌ನಲ್ಲಿ ಈ ಸುಗ್ರೀವಾಜ್ಞೆಗಳಿಗೆ ಸಂಸತ್ತಿನ ಅನುಮೋದನೆ ದೊರೆತು, ರಾಷ್ಟ್ರಪತಿಗಳ ಅಂಕಿತವೂ ಸಿಕ್ಕಿತು. ಈ ಕಾಯ್ದೆಗಳು ಕೃಷಿಗೆ, ರೈತರಿಗೆ ಮಾರಕ ಮತ್ತು ಕಾರ್ಪೊರೇಟ್ ಕಂಪನಿಗಳ ಪರವಾಗಿವೆ ಎಂದು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಆದರೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈ ಯಾವ ಆಕ್ಷೇಪಕ್ಕೂ ತಲೆಕೆಡಿಸಿಕೊಳ್ಳದೇ ನೂತನ ಕೃಷಿ ನೀತಿ ಜಾರಿಗೆ ತರಲು ಹೆಜ್ಜೆ ಇಟ್ಟಿತು. ಇದರ ಪರಿಣಾಮವೇ ಬಳಿಕ ಪಂಜಾಬ್‌ನಿಂದ ಪ್ರಾರಂಭಿಸಿ ರಾಷ್ಟ್ರ ರಾಜಧಾನಿವರೆಗೆ ಹಬ್ಬಿದ ರೈತ ಹೋರಾಟ. ಇದರ ಹೆಜ್ಜೆಗುರುತನ್ನು ದಾಖಲಿಸುವ ಯತ್ನವೇ ಕೇಸರಿ ಹರವೂ ಅವರ ‘ಕಿಸಾನ್ ಸತ್ಯಾಗ್ರಹ’ ಸಾಕ್ಷ್ಯಚಿತ್ರ.

‘ಹಲವು ದಶಕಗಳಿಂದ ಪರಿಸರ ಮತ್ತು ಸುಸ್ಥಿರ ಕೃಷಿಯಲ್ಲಿ ಆಸಕ್ತಿ ಬೆಳೆಸಿಕೊಂಡು, ಅಧ್ಯಯನ ಮಾಡುತ್ತ ಬಂದಿರುವೆ. ನನ್ನ ಸುಸ್ಥಿರ ಕೃಷಿ ಮತ್ತು ಪರಿಸರದ ಅಧ್ಯಯನ ಭಾಗವಾಗಿ ಕೃಷಿ ಕಾಯ್ದೆಯ ವಿಷಯ ಗಮನ ಸೆಳೆಯಿತು. ಕಾಯ್ದೆ ಏನು ಹೇಳಲು ಹೊರಟಿದೆ? ಇದರ ಸಾಧಕ–ಬಾಧಕಗಳೇನು? ಎಂದು ಹುಡುಕುತ್ತ ಹೊರಟೆ. ಪಂಜಾಬ್‌ನಲ್ಲಿ ಒಂದಷ್ಟು ಸಂಘಟನೆಗಳು ಇದರ ಕುರಿತು ಜಾಗೃತವಾಗಿದ್ದು ಕಣ್ಣಿಗೆ ಬಿತ್ತು. ಅಲ್ಲಿನ 30–40 ಸಂಘಟನೆಗಳು ಒಟ್ಟಾಗಿ ಹೋರಾಡಲು ನಿರ್ಧರಿಸಿದವು. ಕಾಯ್ದೆ ಏನು ಹೇಳುತ್ತದೆ ಎಂಬುದನ್ನು ಪಂಜಾಬಿ ಭಾಷೆಗೆ ತರ್ಜುಮೆ ಮಾಡಿಕೊಂಡು, ಅಲ್ಲಿನ ರೈತ ಸಂಘಟನೆಗಳು ವಿಚಾರವನ್ನು ಪ್ರತಿ ಹಳ್ಳಿಗೂ ತೆಗೆದುಕೊಂಡು ಹೋದರು. ಬಳಿಕ ಹೋರಾಟ ರೂಪುಗೊಂಡಿತು’ ಎಂದು ತಮ್ಮ ಸಾಕ್ಷ್ಯಚಿತ್ರದ ಪಯಣ ಪ್ರಾರಂಭವಾದ ಬಗೆ ವಿವರಿಸಿದರು ಹರವೂ.


ಕೇಸರಿ ಹರವು

ಏನಿದು ಸಾಕ್ಷ್ಯಚಿತ್ರ?

‘ಕಿಸಾನ್ ಸತ್ಯಾಗ್ರಹ’ ದೇಶದಲ್ಲಿ ಇತ್ತೀಚೆಗೆ ನಡೆದ ಬೃಹತ್ ರೈತ ಹೋರಾಟವನ್ನು ದಾಖಲಿಸುವ ಕನ್ನಡ ಮತ್ತು ಆಂಗ್ಲಭಾಷೆಯ ಸಾಕ್ಷ್ಯಚಿತ್ರ. 90 ನಿಮಿಷ ಅವಧಿಯ ಈ ಚಿತ್ರದಲ್ಲಿ 2020ರ ನವೆಂಬರ್ 26ರಿಂದ ದೆಹಲಿಯಲ್ಲಿ ಪ್ರಾರಂಭವಾದ ರೈತ ಹೋರಾಟದ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ. ಜತೆಗೆ ಕೃಷಿ ಕಾಯ್ದೆಯ ಸಾಧಕ–ಬಾಧಕಗಳನ್ನು ಅವಲೋಕಿಸುವ, ಈ ಬಗ್ಗೆ ರೈತರ ಪ್ರತಿಕ್ರಿಯೆ ಪಡೆಯುವ ಯತ್ನವಿದೆ. ದೃಶ್ಯಗಳಿಗೆ ಅಲ್ಲಲ್ಲಿ ವಾಯ್ಸ್ ಓವರ್ ಬಳಸಲಾಗಿದೆ. ನಿರೂಪಣೆ ಶೈಲಿಯ ಸಾಕ್ಷ್ಯಚಿತ್ರವಿದು.

‘ಬಿಜೆಪಿ ವಿರುದ್ಧದ ಅಥವಾ ಕಾಂಗ್ರೆಸ್ ಪರವಾದ ಸಾಕ್ಷ್ಯಚಿತ್ರ ಇದಲ್ಲ. ಕೃಷಿಯನ್ನು ಕಾರ್ಪೊರೇಟ್ ಜಗತ್ತಿನ ಕೈಗೆ ಕೊಡುವುದು ಅಪಾಯಕಾರಿ. ಯುಪಿಎ ಆಡಳಿತವಿದ್ದಾಗ ಈ ನಿಟ್ಟಿನಲ್ಲಿ ಮಾಡಿರುವ ತಪ್ಪನ್ನೂ ಇದರಲ್ಲಿ ಉಲ್ಲೇಖಿಸಲಾಗಿದೆ. ಮಾಜಿ ಪ್ರಧಾನಿ ದಿವಂಗತ ಪಿ.ವಿ.ನರಸಿಂಹರಾವ್ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದಾಗಲೇ ಕೃಷಿ ಕ್ಷೇತ್ರಕ್ಕೆ ದೊಡ್ಡ ಏಟು ಬಿದ್ದಿರುವುದನ್ನು ಹೇಳಲಾಗಿದೆ. ಸುಸ್ಥಿರ ಕೃಷಿ ಎಂದಿಗೂ ಪರಿಸರಕ್ಕೆ ಪೂರಕ. ಕೃಷಿ ಚಟುವಟಿಕೆ ಉದ್ಯಮವಾದರೆ ಭೂಮಿಯನ್ನು ಶೋಷಿಸಿ ವಹಿವಾಟು ನಡೆಸಿದಂತಾಗುತ್ತದೆ.

ಗುತ್ತಿಗೆ ಆಧಾರಿತ ಕೃಷಿಯಲ್ಲಿ ರೈತ ಮಾಲೀಕನಾದರೂ, ಗುತ್ತಿಗೆ ನೀಡುವ ಕಂಪನಿ ಹೇಳಿದ ರೀತಿಯಲ್ಲೇ ಉತ್ತಬೇಕು. ಕಂಪನಿ ಹೇಳಿದ ಬೀಜವನ್ನೇ ಬಿತ್ತಬೇಕು. ನಾವು ಬೆಳೆಯುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೆ. ರೈತರು ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸರಬಹುದು. ಆದರೆ ಕಾಯ್ದೆ ಹಿಂದಿನ ವಿಷಯ ಎಂದಿಗೂ ಪ್ರಸ್ತುತ ಮತ್ತು ಅಧ್ಯಯನಯೋಗ್ಯ. ಹೀಗಾಗಿ ಇಡೀ ಹೋರಾಟವನ್ನು ದಾಖಲಿಸಬೇಕೆಂದು ನಿರ್ಧರಿಸಿದೆವು’ ಎನ್ನುತ್ತಾರೆ ನಿರ್ದೇಶಕರು.

ಯಾವಾಗ ಪ್ರಾರಂಭವಾಯಿತು?

ಇಂದು ಕೃಷಿ ಮಾಡುವವರ ಸಂಖ್ಯೆ ಕುಸಿದಿದೆ. ಗುತ್ತಿಗೆ ಆಧಾರದಲ್ಲಿಯೋ, ಕಾರ್ಪೊರೇಟ್ ಕಂಪನಿಗಳಿಂದಲೂ ಕೃಷಿ ಉಳಿಯುತ್ತದೆ ಎಂಬುದು ದೊಡ್ಡ ಮೂರ್ಖತನ. ಈ ಮೂರು ಕಾಯ್ದೆಗಳನ್ನು ತರುವುದಕ್ಕೆ ಮುಂಚೆಯೇ ಕೃಷಿ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುವ ಯತ್ನ ನಡೆದಿತ್ತು. 1980–90ರ ದಶಕದಲ್ಲಿ ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರಾಜ್ಯ ರೈತ ಸಂಘವು ದೊಡ್ಡ ಕಂಪನಿಗಳು ಕೃಷಿ ವಹಿವಾಟಿನಲ್ಲಿ ತೊಡಗಿಸಿಕೊಳ್ಳುವುದರ ವಿರುದ್ಧ, ಬೀಜ ಮಾರಾಟ ಕಂಪನಿಗಳ ವಿರುದ್ಧ ಹೋರಾಟ ಮಾಡಿತ್ತು. ಮಹೇಂದ್ರ ಸಿಂಗ್ ಟಿಕಾಯತ್, ಮೇಧಾ ಪಾಟ್ಕರ್ ಮುಂತಾದವರು ಬೆಂಗಳೂರಿನ ಸಮಾವೇಶದಲ್ಲಿ ಭಾಗವಹಿಸಿದ್ದರು. ಇವೆಲ್ಲ ಕೃಷಿಯನ್ನು ಉಳಿಸಿಕೊಳ್ಳುವ ಯತ್ನವೇ ಆಗಿದೆ ಎಂಬುದು ಹರವು ಅವರ ಅಭಿಮತ.

‘ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ಮಾರಾಟ (ಉತ್ತೇಜನ–ಸೌಲಭ್ಯ) ಕಾಯ್ದೆ ಅಥವಾ ಕೃಷಿ ಮಾರುಕಟ್ಟೆ ಕಾಯ್ದೆ, ಬೆಲೆ ಖಾತರಿ ಒಪ್ಪಂದ ಮತ್ತು ಕೃಷಿ ಸೇವೆಗಳ (ಸಬಲೀಕರಣ ಮತ್ತು ರಕ್ಷಣೆ) ಕಾಯ್ದೆ, ಅಗತ್ಯ ವಸ್ತುಗಳ (ತಿದ್ದುಪಡಿ) ಕಾಯ್ದೆ ಕೇಂದ್ರ ಸರ್ಕಾರ ರೂಪಿಸಿದ್ದ ನೂತನ ಕೃಷಿ ನೀತಿಯ ಮುಖ್ಯಾಂಶಗಳು. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಇದಕ್ಕೆ ಪೂರಕ ಚಟುವಟಿಕೆ ಹಿಂದಿಯೇ ನಡೆದಿತ್ತು. ಕರ್ನಾಟಕದಲ್ಲಿ ಬಿ.ಎಸ್.ಯಡಿಯೂರಪ್ಪ ಆಡಳಿತದಲ್ಲಿ ಭೂ ಸುಧಾರಣಾ ಕಾಯ್ದೆಗೆ ಹಾಗೂ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರಲಾಗಿತ್ತು. ಬಿಜೆಪಿ ಆಡಳಿತದ ಇತರ ರಾಜ್ಯಗಳಲ್ಲಿಯೂ ಈ ರೀತಿ ತಿದ್ದುಪಡಿ ನಡೆದಿದೆ. ಈ ಎರಡು ಕಾಯ್ದೆಗಳು ಬಹಳ ಅಪಾಯಕಾರಿ. ಇದನ್ನು ವಿರೋಧಿಸಿ ಎಂದು ಕರ್ನಾಟಕದಲ್ಲಿ ನಾವು ಹಲವರು ರೈತ ಸಂಘಗಳಿಗೆ ಕೇಳಿಕೊಂಡಿದ್ದೆವು. ಈ ರೈತ ಸಂಘಟನೆಗಳು ಸಾಂಕೇತಿಕ ಹೋರಾಟ ನಡೆಸಿದವೇ ಹೊರತು ಗಟ್ಟಿಯಾದ ಹೋರಾಟ ರೂಪಿಸಲಿಲ್ಲ. ಇವೆಲ್ಲ ದೆಹಲಿಯಲ್ಲಿ ಕುಳಿತವರು ಹೇಳಿ ಮಾಡಿಸಿದ ತಿದ್ದುಪಡಿ’ ಎನ್ನುತ್ತಾರೆ ಅವರು.

ಪಂಜಾಬ್‌ನಲ್ಲಿ ನೂತನ ಕೃಷಿ ನೀತಿ ವಿರೋಧಿಸಿ ಪ್ರಾರಂಭವಾದ ಹೋರಾಟ ಹರಿಯಾಣ ಮತ್ತು ಇತರ ಉತ್ತರದ ರಾಜ್ಯಗಳಿಗೂ ವ್ಯಾಪಿಸಿತು. 2020ರ ನವೆಂಬರ್ 26 ರಂದು ಈ ರಾಜ್ಯಗಳ ರೈತರು ದೆಹಲಿಗೆ ಮುತ್ತಿಗೆ ಹಾಕಿದರು. ಆಗ ಕೇಸರಿ ಹರವೂ ಅವರು ತಾವು ದೆಹಲಿಗೆ ಹೊರಡಲು ನಿರ್ಧರಿಸಿದರು. ನ.29ರಂದು ಅವರು ತಮ್ಮ ಚಿತ್ರತಂಡದೊಂದಿಗೆ ಹೋರಾಟದ ಸ್ಥಳ ತಲುಪಿದರು.

‘ನಮ್ಮ ಕ್ಯಾಮೆರಾಮನ್ ಗೊತ್ತು ಮಾಡಿಕೊಂಡು ಈ ಹೋರಾಟ ದಾಖಲಿಸಬೇಕೆಂದು ಹೊರಟೆ. ಕೈಯಲ್ಲಿ ದುಡ್ಡಿರಲಿಲ್ಲ. ₹50 ಸಾವಿರ ಸಾಲ ಮಾಡಿಕೊಂಡು ದೆಹಲಿಗೆ ಹೋದೆ. ಸುಮಾರು 12 ದಿನಗಳ ಕಾಲ ಅಲ್ಲಿಯೇ ತಂಗಿದ್ದು ಹೋರಾಟದ ದೃಶ್ಯಗಳನ್ನು ಚಿತ್ರೀಕರಣ ಮಾಡಿದೆವು. ನಂತರ ನಡೆದಿದ್ದು ಗೊತ್ತಿದೆ. 2021ರ ಜನವರಿ 26 ರಂದು ರೈತರು ಟ್ರ್ಯಾಕ್ಟರ್ ಪರೇಡ್ ಆಯೋಜಿಸಿದರು. ಅದನ್ನೂ ದಾಖಲಿಸಲು ಮತ್ತೆ ದೆಹಲಿಗೆ ತೆರಳಿದೆವು. ಬಳಿಕ ಪಂಜಾಬ್, ಹರಿಯಾಣ, ಉತ್ತರಾಖಂಡ ರಾಜ್ಯಗಳಿಗೂ ಭೇಟಿ ನೀಡಿ ಚಿತ್ರೀಕರಣ ನಡೆಸಿದೆವು’ ಎಂದು ಹರವೂ ಅನುಭವ ಹಂಚಿಕೊಂಡರು.

ಮೊದಲ ಸಲದ ಚಿತ್ರೀಕರಣದ ನಂತರ ಫಂಡಿಂಗ್ ಮೂಲಕ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಹರವೂ ಕೇಸರಿ ಮುಂದಾದರು. ಒಂದಷ್ಟು ಸ್ನೇಹಿತರು ಅವರ ಬೆಂಬಲಕ್ಕೆ ನಿಂತರು. ಹೋರಾಟದ ಹೊರತಾಗಿ ಇದಕ್ಕೆ ಬೇಕಾದ ಪೂರಕ ಅಂಶಗಳನ್ನು ಚಿತ್ರೀಕರಿಸಿ ಸಾಕ್ಷ್ಯಚಿತ್ರ ಸಿದ್ಧಪಡಿಸಿದರು.



ಚಿತ್ರವನ್ನು ಎಲ್ಲಿ ನೋಡಬಹುದು?

2022ರ ಅ.9ರಂದು ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದಲ್ಲಿ ಸಾಕ್ಷ್ಯಚಿತ್ರದ ಮೊದಲ ಪ್ರದರ್ಶನ ಕಂಡಿತ್ತು. 2023ರ ಮಾ.23, 25ರಂದು ಧಾರವಾಡ ಮತ್ತು ಗಜೇಂದ್ರಗಡದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನಗೊಂಡಿದೆ. ಇಲ್ಲಿವರೆಗೆ ಒಟ್ಟು 40 ಪ್ರದರ್ಶನಗಳಾಗಿವೆ. ಐದು ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಯಾಗಿದ್ದು, ಎರಡು ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಬಂದಿದೆ. ಇಸ್ರೇಲ್‌ನ ಚಿತ್ರೋತ್ಸವವೊಂದರಲ್ಲಿ ಪ್ರಶಸ್ತಿ ಬಂದಿದೆ. ‘14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೂ ಈ ಸಾಕ್ಷ್ಯಚಿತ್ರ ಕಳುಹಿಸಲು ಪ್ರಯತ್ನಿಸಿದ್ದೆ. ಆದರೆ ಈ ಸಲ ಸಾಕ್ಷ್ಯಚಿತ್ರವಿಲ್ಲ ಎಂದು ಇದನ್ನು ಪರಿಗಣಿಸಲಿಲ್ಲ. ನಂತರ ನೋಡಿದರೆ 2–3 ಬೇರೆ ಸಾಕ್ಷ್ಯಚಿತ್ರಗಳು ಪ್ರದರ್ಶನಗೊಂಡಿವೆ. ಈ ತಾರತಮ್ಯ ನೋಡಿ ಬಹಳ ಬೇಸರವಾಯಿತು. ಚಿತ್ರವನ್ನು ಒಟಿಟಿಗೆ ತರುವ ಯತ್ನ ನಡೆದಿದೆ. ₹99 ನೀಡಿದರೆ https://filmshow.co.in ತಾಣದಲ್ಲಿ ಚಿತ್ರ ವೀಕ್ಷಿಸಬಹುದು’ ಎಂದು ಕೇಸರಿ ಹರವೂ ಮಾಹಿತಿ ನೀಡಿದರು.

ಮೊದಲ ಓದು

ಜೀವ ಪ್ರಪಂಚದ ನೋಟ

ಕಳೆದ ಮೂರು ದಶಕಗಳಿಂದ ಪತ್ರಿಕೋದ್ಯಮದಲ್ಲಿ ಸಕ್ರಿಯರಾಗಿರುವ ಲೇಖಕ ಮಾಲತೇಶ ಅಂಗೂರರು ‘ಕಾಡು–ಮೇಡು’ ಕೃತಿ ಪ್ರಕಟಿಸಿದ್ದಾರೆ. ವನ್ಯಜೀವಿಗಳು ಮತ್ತು ಕಾಡಿನ ಕುರಿತು ಒಂದಷ್ಟು ಮಾಹಿತಿ ಹೊಂದಿರುವ ಲೇಖನಗಳ ಪುಸ್ತಕ ಇದಾಗಿದೆ.

ಒಟ್ಟು 32 ಲೇಖನಗಳಿದ್ದು, ಹಾವೇರಿ ಸುತ್ತಮುತ್ತಲಿನ ಕಾಡು, ವನ್ಯಜೀವಿಗಳ ಸಮಸ್ಯೆಯತ್ತ ದೃಷ್ಟಿ ಹಾಯಿಸುತ್ತದೆ. ‘ಪ್ರಾಣಿಗಳಿಗೂ ಬಾಯಾರಿಕೆ ಉಂಟು’ ಎಂಬ ಲೇಖನ ವನ್ಯಜೀವಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಅವಶ್ಯಕತೆ ಎಷ್ಟಿದೆ ಎಂಬುದನ್ನು ವಿವರಿಸುತ್ತದೆ. ಬಹುತೇಕ ಲೇಖನಗಳಲ್ಲಿ ಚಿತ್ರಗಳಿಗೂ ಆದ್ಯತೆ ನೀಡಲಾಗಿದ್ದು, ಪ್ರಾಣಿ ಪ್ರಪಂಚದ ಚಿತ್ರಗಳು ಕೂಡ ಸುಂದರವಾಗಿವೆ. ಹೀಗಾಗಿ ಇದನ್ನು ಚಿತ್ರ–ಬರಹ ಕೃತಿ ಎನ್ನಬಹುದು.

‘ಕೆಂದಳಿಲು ಹಾರಿತು’ ಎಂಬ ಲೇಖನದಲ್ಲಿ ಲೇಖಕರು ಕೆಂದಳಿನ ವಿಸ್ಮಯ ಜಗತ್ತಿನ ಪರಿಚಯ ಮಾಡಿಕೊಡುತ್ತಾರೆ. ಬೇಟೆಗಾರರ ದುರಾಸೆಗೆ ಈ ಅಳಿಲುಗಳು ಆಹಾರವಾಗಿ, ಅವುಗಳ ಚರ್ಮ ಸಂಪಾದನೆ ಮಾರ್ಗವಾಗಿ ಹೇಗೆ ಇಡೀ ಸಂತತಿಯೇ ನಾಶವಾಗುತ್ತಿದೆ ಎಂಬ ವಾಸ್ತವದ ಅರಿವು ಮೂಡಿಸುವ ಕಾಳಜಿ ಇಲ್ಲಿ ಕಾಣಿಸುತ್ತದೆ. ಬಹುತೇಕ ಲೇಖನಗಳು ಹಾವೇರಿ ಜಿಲ್ಲೆಯ ಸ್ಥಳೀಯ ಸಮಸ್ಯೆಗಳ ಕುರಿತಾಗಿವೆ.

ರಾಣೇಬೆನ್ನೂರಿನಲ್ಲಿರುವ ಕೃಷ್ಣಮೃಗ ಅಭಯಾರಣ್ಯದ ಅವ್ಯವಸ್ಥೆಯ ಕುರಿತು ಲೇಖಕರು ಒಂದು ಲೇಖನದಲ್ಲಿ ಮಾತನಾಡುತ್ತಾರೆ. ಚಂದ್ರಗುತ್ತಿ ಬೆಟ್ಟ ಏರುವ ಮೂಲಕ ಓದುನಿಗೆ ಆ ಪರಿಸರದ ಸುತ್ತಲಿನ ಪರಿಚಯ ಮಾಡಿಕೊಡುತ್ತಾರೆ. ಮುಟ್ಟಿದರೆ ಮುನಿ ಸಸ್ಯವನ್ನು ಪರಿಚಯಿಸಿಕೊಡುತ್ತ ಸಸ್ಯಲೋಕದ ವಿಸ್ಮಯಗಳನ್ನು ತೆರೆದಿಡುತ್ತಾರೆ. ಏಡಿ ತಿನ್ನುವ ಬೂದು ಬಣ್ಣದ ಮುಂಗುಸಿ ಪ್ರಪಂಚ ಒಂದು ಬಗೆಯ ಅಚ್ಚರಿಯ ಮಾಹಿತಿ ಕಣಜವಾಗಿದೆ. ರಾಣೇಬೆನ್ನೂರಿನ ಓರ್ವ ವ್ಯಕ್ತಿ ಮನೆಯೆದುರು ಬಿದ್ದಿದ್ದ ಕಾಗೆಗೆ ಪಶುವೈದ್ಯರ ಬಳಿ ಚಿಕಿತ್ಸೆ ಕೊಡಿಸದ ಘಟನೆ ಬಹಳ ಸ್ವಾರಸ್ಯಕರವಾಗಿದೆ. ಜತೆಗೆ ಪಶು–ಪಕ್ಷಿಗಳ ಕುರಿತಾಗಿ ಮನುಷ್ಯನಿಗೆ ಇರಬೇಕಾದ ಕಾಳಜಿ ಮತ್ತು ಪ್ರಜ್ಞೆಯನ್ನೂ ತಿಳಿಸಿಕೊಡುತ್ತದೆ. ಸಿಹಿ ನೀರಿನ ಏಡಿಗಳ ವಿಶಿಷ್ಟ ಪ್ರಪಂಚದ ಪರಿಚಯ ಮಾಡಿಸುತ್ತಾರೆ. ಒಟ್ಟಾರೆಯಾಗಿ ಪಶು–ಪಕ್ಷಿ–ಕಾಡು–ಪ್ರಾಣಿಗಳ ಜಗತ್ತಿನ ಕುರಿತಾಗಿ ಸ್ಥೂಲ ಪರಿಚಯ ನೀಡುವ ಕೃತಿಯಲ್ಲಿ ನಾವು ಹೇಗೆ ಇವುಗಳತ್ತ ಆಸಕ್ತಿ ಬೆಳೆಸಿಕೊಳ್ಳಬೇಕೆಂಬುದು ತಿಳಿಯುತ್ತದೆ.



ಪು: 135 ₹250

ಕೃತಿ: ಕಾಡು–ಮೇಡು
ಲೇ: ಮಾಲತೇಶ ಅಂಗೂರ
ಪ್ರ: ಶ್ರಮಿಕ ಪ್ರಕಾಶನ, ಹಾವೇರಿ
ಸಂ.: 9448029417

ಅಂತರಂಗದ ಬೆಳಕಿನ ಅಕ್ಷರ

ಖುಷಿಯಾಗಿರುವುದೇ ಬದುಕಿನ ಉದ್ದೇಶ ಅನ್ನುವುದು ಎಲ್ಲರ ಮನದೊಳಗಿದೆ. ಆದರೆ ಆ ಖುಷಿಗಾಗಿ ಇಂದಿನ ಇರುವಿಕೆಯನ್ನು ಎಷ್ಟೋ ಬಾರಿ ಕಳೆದುಕೊಂಡಿರುತ್ತೇವೆ. ಮತ್ತೆ ಪರಿತಪಿಸುತ್ತೇವೆ. ಇಂತಹ ಅದೆಷ್ಟೋ ಸಂಗತಿಗಳನ್ನು ಲೇಖಕರು ಹೆಕ್ಕಿ ಒಂದೆಡೆ ಬರಹ ಗುಚ್ಛ ಕಟ್ಟಿಕೊಟ್ಟಿದ್ದಾರೆ. ಅಂತರಂಗದ ಮಾತುಗಳಿಗೆ ಕಿವಿಯಾಗಬಲ್ಲವರೊಬ್ಬರು ಸಾಕು. ಧ್ವನಿವರ್ಧಕ ಏಕೆ ಬೇಕು? ಎಂದು ಪ್ರಶ್ನಿಸುತ್ತಲೇ ಮನುಷ್ಯ ಸಂಬಂಧಗಳು ಪರಸ್ಪರ ಕಿವಿಯಾಗಲೇಬೇಕಾದ ಅಗತ್ಯವನ್ನು ಅಲ್ಲಲ್ಲಿ ಒತ್ತಿ ಹೇಳಿದ್ದಾರೆ.

ಎಲ್ಲ ಲೇಖನಗಳು ಒಂದಲ್ಲ ಒಂದು ಬಗೆಯಲ್ಲಿ ನಮ್ಮ ಬದುಕಿಗೆ ಹತ್ತಿರವಾಗುತ್ತವೆ. ಉದಾಹರಣೆಗೆ ನಾವು ನಾವಾಗೋದು ಯಾವಾಗ? ಲೇಖನವು ಮನುಷ್ಯ ಸಂಬಂಧಗಳು ಜಾಳಾಗುತ್ತಿರುವುದು, ಅಸ್ತಿತ್ವ ಕಳೆದುಕೊಂಡ ಪತ್ರಗಳು, ಅಕ್ಷರ ಸಾಲುಗಳು, ಕಾಡುವ ನೆನಪುಗಳು ಇತ್ಯಾದಿ ವಿಷಯಗಳನ್ನು ಒಳಗೊಂಡಿದೆ. ಪುಟ್ಟ ಮಗುವಿಗೆ ಸಂಸ್ಕೃತಿ, ಸಂಸ್ಕಾರ, ಸಹಜವಾಗಿಯೇ ಸಾಂಸ್ಕೃತಿಕ ಲೋಕ ಪರಿಚಯಿಸುವ ಪರಿಯನ್ನೂ ಸ್ವಾನುಭವದಿಂದ ದಾಖಲಿಸಿದ್ದಾರೆ. ಅಪ್ಪನೆಂಬ ಅಂತರಂಗ, ಅಪ್ಪ ಎಂಬ ಮಹಾ ಒಗಟು... ಇಂಥ ಲೇಖನಗಳು ಅಮ್ಮನಷ್ಟೇ ಮೌಲ್ಯ ಅಪ್ಪನಿಗೂ ಸಿಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿವೆ.

ಬದುಕಿನ ಉದ್ದೇಶಕ್ಕೆ ಸರಿಯಾದ ಪೂರ್ವತಯಾರಿ, ಸ್ನೇಹ, ಅಹಂ ನಿಯಂತ್ರಣದ ಅಗತ್ಯತೆ (ನಾನು ಹೋದರೆ ಹೋದೇನು..), ಸಾಮಾಜಿಕ ಮಾಧ್ಯಮಗಳ ಮಾಯಾ ಬಜಾರು, ತಂತ್ರಜ್ಞಾನದ ಬಲೆಯಲ್ಲಿ ಬಂಧಿಯಾಗಿ ಯಂತ್ರವಾಗಿಬಿಡುವ ಮನುಷ್ಯ ಇಂತಹ ಹಲವು ವಿಷಯಗಳನ್ನು ಚರ್ಚಿಸಿದ್ದಾರೆ. ಲೇಖಕರ ಅಧ್ಯಾಪನದ ಅನುಭವವೂ ಇಲ್ಲಿ ಮಿಳಿತವಾಗಿದೆ. ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನದ ಕೈಪಿಡಿ. ಯುವಜನರಿಗೊಂದಿಷ್ಟು ಜೀವನ ಮಾರ್ಗದರ್ಶಿ. ಪುಟ್ಟ ಪುಟ್ಟ ಲೇಖನಗಳು ಒಂದು ಗುಕ್ಕಿನಲ್ಲಿ ಓದಿಸಿಕೊಂಡು ಹೋಗುತ್ತವೆ.



ಪು: 176 ₹190

ನಮ್ಮೊಳಗಿದೆ ಗೆಲುವಿನ ಬೆಳಕು
ಲೇ: ಸಿಬಂತಿ ಪದ್ಮನಾಭ
ಪ್ರ: ಅಂಕುರ್ ಮೀಡಿಯಾ ಪಬ್ಲಿಕೇಶನ್ಸ್ ತುಮಕೂರು
ಸಂ: 9449525854

ಸಾವಿನ ಬಾಗಿಲಲ್ಲಿ ಪ್ರೀತಿಯ ಅನುರಣನ

ಚಿದಾನಂದ ಸಾಲಿ

ಒಳನೋಟ


ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಇತ್ತೀಚಿನ ಕವನ ಸಂಕಲನ ‘ಯಾರು ಬಾಗಿಲದಲ್ಲಿ’. ಸುಮಾರು ಅರ್ಧ ಶತಮಾನಕ್ಕೂ ಮಿಕ್ಕಿದ ಕಾವ್ಯಜೀವನ ಮತ್ತು ಮುಕ್ಕಾಲು ಶತಮಾನ ದಾಟಿದ ಅವರ ವೈಯಕ್ತಿಕ ಜೀವನಗಳ ಅನುಭವಗಳು ಹರಳುಗಟ್ಟಿದಂತೆ ಈ ಸಂಕಲನದ ಕವಿತೆಗಳಿವೆ. ‘ನೀನಾ’, ‘ಔರಂಗಜೇಬ’ ಕವನಸಂಕಲನಗಳಲ್ಲಿದ್ದ ವಸ್ತುಗಳು ಮತ್ತು ಅವುಗಳನ್ನು ಅವರು ನಿರ್ವಹಿಸಿದ್ದ ರೀತಿಗಳು ಈ ಸಂಕಲನದ ಹೊತ್ತಿಗೆ ತುಂಬಾ ಬದಲಾಗಿರುವುದನ್ನು ಗುರುತಿಸಬಹುದಾಗಿದೆ. ಈ ಬದಲಾವಣೆಗೆ ಕಾರಣಗಳನ್ನು ಈ ಸುದೀರ್ಘ ಕಾಲಾಂತರದಲ್ಲಿ ಅವರು ಹಾದು ಬಂದ ಸಾಹಿತ್ಯಿಕ ಪಥಗಳ ಪ್ರಭಾವ ಹಾಗೂ ಬದುಕಿನ ಹಲವು ಅಗ್ನಿದಿವ್ಯಗಳನ್ನು ಹಾದುದರ ಪರಿಣಾಮವಾಗಿ ಅವರು ಪಡೆದುಕೊಂಡ ಜೀವನಾನುಭವ- ಇವೆರಡೂ ವಿವರಿಸುತ್ತಿರುವಂತೆ ಈ ಕವಿತೆಗಳ ಸ್ವರೂಪವಿದೆ.

ಈ ಸಂಕಲನದ ಕವಿತೆಗಳನ್ನು ಅವುಗಳ ಭಾಷೆ, ವಸ್ತು, ಶೈಲಿ ಮತ್ತು ಜೀವನ ಧೋರಣೆಗಳ ನೆಲೆಯಿಂದ ಪ್ರತ್ಯೇಕವಾಗಿ ಪರಿಶೀಲಿಸುವ ಅಗತ್ಯವಿದೆಯೆನಿಸುತ್ತದೆ. ಭಾಷೆಯ ವಿಷಯಕ್ಕೆ ಬಂದಾಗ ತಕ್ಷಣಕ್ಕೆ ಎದ್ದು ಕಾಣುವ ಗುಣವೆಂದರೆ ಅವರ ಪ್ರಾಸಪ್ರಿಯತೆ ಮತ್ತು ಪದಚಮತ್ಕಾರ ಗುಣಗಳು. ಗೀತಾತ್ಮಕತೆ, ಪದಗಳ ನರ್ತನ, ಪ್ರಾಸಾನುಪ್ರಾಸಗಳು ಈ ಸಂಕಲನದ ಕವಿತೆಗಳಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ನವ್ಯವನ್ನು ಹಾದು ಬಂದರೂ ಅದರ ಕಾವ್ಯಭಾಷೆಯನ್ನು ಅವರು ಸುದೂರದಿಂದಲೇ ಗಮನಿಸಿ ಅಂತರ ಕಾಯ್ದುಕೊಂಡರು. ಬಂಡಾಯ, ದಲಿತಗಳ ನಂತರದ ಈ ಚಳವಳಿರಾಹಿತ್ಯದ ಕಾಲವನ್ನೂ ಕಂಡಿರುವ ಅವರ ಕಾವ್ಯದ ಭಾಷೆಯು ನವೋದಯದ ಭಾಷೆಯನ್ನು ಮಾತ್ರ ಬಿಡಲೊಲ್ಲದು. ದೇವರನ್ನು, ನಿಸರ್ಗವನ್ನು ಮತ್ತು ಬದುಕನ್ನು ಅಮಿತವಾದ ಪ್ರೀತಿ ಗೌರವಗಳಿಂದ ಕಾಣುತ್ತ; ಹೆಜ್ಜೆ ಹೆಜ್ಜೆಗೂ ಬದುಕಿನ ಕುರಿತಾಗಿ ಇತ್ಯಾತ್ಮಕ ನಿಲುವನ್ನೇ ಪಡೆದುಕೊಳ್ಳುತ್ತ, ಪ್ರಕಟಿಸುತ್ತ; ಜೀವನ ಸಾಗಿಸಿರುವ ಈ ಹೆಂಗರುಳಿನ ಕವಿಗೆ ನವೋದಯದ ಭಾಷಾಶರೀರವು ಸ್ವಸ್ಥವೂ, ಸುಂದರವೂ ಎನಿಸಿರುವುದು ಸಹಜವೇ ಆಗಿದೆ. ಹಾಗೆಯೇ ಈ ಸಂಕಲನದ ಭಾಷಿಕ ವಿನ್ಯಾಸದಲ್ಲಿ ಪುನರಾವರ್ತಿತವಾಗಿ ಕಂಡು ಬರುವ ಇನ್ನೆರಡು ಗುಣಗಳೆಂದರೆ ಪದಚಮತ್ಕಾರ ಮತ್ತು ಅಷ್ಟೇನೂ ಬಳಕೆಯಲ್ಲಿಲ್ಲದ ವಿಶಿಷ್ಟ ಪದಪುಂಜಗಳ ಮರುಬಳಕೆಗಳದ್ದು. ಶೀರ್ಷಿಕೆಯನ್ನೇ ಗಮನಿಸೋಣ. ಯಾರು ಬಾಗಿಲಲ್ಲಿ ಎಂದಿದ್ದರೂ ನಡೆಯುತ್ತಿದ್ದುದು ಇಲ್ಲಿ ಯಾರು ಬಾಗಿಲ‘ದ’ಲ್ಲಿ ಎಂದಾಗಿದೆ.

ವಸ್ತುವಿನ ದೃಷ್ಟಿಯಿಂದಲೂ ಭಿನ್ನವಾದ ಸೂಚನೆಯೊಂದು ಈ ಸಂಕಲನದಲ್ಲಿ ಹೆಚ್ಚು ಸ್ಫುಟವಾಗಿ ಕಾಣಿಸಿಕೊಂಡಿದೆ. ಇಲ್ಲಿನ ಒಟ್ಟು 66 ಪದ್ಯಗಳಲ್ಲಿ 15ಕ್ಕಿಂತ ಹೆಚ್ಚು ಪದ್ಯಗಳು ಸಾವನ್ನು ಕುರಿತಾಗಿವೆ. ಕವಿಯು ದೇವರೊಂದಿಗೆ ಸಂಭಾಷಿಸುವ ಕವಿತೆಗಳೂ ಇಲ್ಲಿವೆ. ಸಾವಿನ ಮನೆಯ ಬಾಗಿಲ ಬಳಿ ನಿಂತು ಆಡಿದ ಆತ್ಮಾವಲೋಕನದ ಮಾತುಗಳಂತಿರುವ ಈ ಕವಿತೆಗಳು ಅಧ್ಯಾತ್ಮವನ್ನು ಸಾವಿನ ನೆಲೆಯಿಂದ ಪ್ರವೇಶಿಸಲು ಬಯಸುತ್ತಿವೆ. ಹಿಮಗಿರಿ, ಹರಿ, ಹರ, ಶೂನ್ಯ, ದಿವ್ಯಚೇತನ ಮುಂತಾದ ಸಂಗತಿಗಳ ಪುನರುಕ್ತಿಯನ್ನು ಈ ಹಿನ್ನೆಲೆಯಲ್ಲಿ ಗಮನಾರ್ಹವಾಗಿವೆ.

ವೈಯಕ್ತಿಕ ನೆಲೆಯ ನೋವು, ಹಳಹಳಿಕೆ, ಹಳವಂಡಗಳಿಗೆ ಪ್ರತಿಮೆ, ಸಂಕೇತ ಮತ್ತು ರೂಪಕಗಳ ಮುಸುಕು ಹೊದೆಸಿ, ಮೆಲುದನಿಯಲ್ಲಿ ಆದರೆ ಅಷ್ಟೇ ಖಚಿತವಾದ ಅರ್ಥದಲ್ಲಿ ನುಡಿಯುವುದು ಈ ಕವಿತೆಗಳ ಶೈಲಿಯಾಗಿದೆ. ಮುಖ್ಯವೆಂದರೆ ಇದು ಬದುಕಿನ ಭಾರವನ್ನು ಕವಿತೆಯಾಗಿಸಿ ಕೆಳಗಿಳಿಸಿ, ಹಗುರವಾಗಲು ಹಂಬಲಿಸುವ ಹಳ್ಳಿಯ ಮುಗ್ಧ ಮನಸ್ಸಿನ ಶೈಲಿ. ನಿಲುವಿನಲ್ಲಿ ಸ್ಪಷ್ಟತೆ, ಅಭಿಪ್ರಾಯದಲ್ಲಿ ಖಚಿತತೆ ಮತ್ತು ನಿರ್ವಹಣೆಯಲ್ಲಿ ಸ್ವೋಪಜ್ಞತೆಗಳು ಇವರ ಕಾವ್ಯದ ಶೈಲಿಯ ಬಹುಮುಖ್ಯ ಗುಣಗಳಾಗಿವೆ. ಜನಪದರಂತೆ ನೇರ-ಸರಳ ಆಗಿರುವ ಸಹಜೀಕ ಸ್ವಭಾವದ ಪಟ್ಟಣಶೆಟ್ಟರು ಅಂತೆಯೇ ಮತ್ತು ಹಾಗಾಗಿಯೇ ವಾಚಾಳಿಗಳೂ ಕೂಡ. ಈ ವಾಚಾಳಿತನಕ್ಕೆ ಅವರ ಗ್ರಾಮೀಣ ಮೂಲ ಒಂದು ಕಾರಣವಾದರೆ; ಅವರು ಹೆಚ್ಚು ಹೆಂಗರುಳಿನವರಾಗಿರುವುದು ಮತ್ತೊಂದು ಮುಖ್ಯ ಕಾರಣ. ‘ಹುಡುಕಾಟ’, ‘ಮನೆ’ ಪದ್ಯಗಳನ್ನು ಅವರೊಳಗೆ ಇರುವ ಬಹ್ವಂಶ ಹೆಣ್ತನಕ್ಕೆ ಸಾಕ್ಷಿಯಾಗಿ ನೋಡಬಹುದು. ‘ಮನೆ’ ಕವಿತೆಯಲ್ಲಿ ‘ಮನೆ ತುಂಬ ಇರಬೇಕು ಯಾರಾದರೂ, ಯಾವಾಗಲೂ’ ಎಂಬ ಸಾಲಂತೂ ಜೈವಿಕವಾಗಿ ಗಂಡಾಗಿರುವ ಅವರೊಳಗೆ ಸದಾ ಕದಲುತ್ತಿರುವ ಸ್ತ್ರೀತ್ವ/ಮಾತೃತ್ವದ ಆತ್ಯಂತಿಕ ಸಂಕೇತದಂತೆ ಮೂಡಿಬಂದಿದೆ.

ಪ್ರೀತಿ ಮತ್ತು ಅಂತಃಕರಣಗಳೇ ಈ ಸಂಕಲನದ ಎಲ್ಲ ಪದ್ಯಗಳ ಸ್ಥಾಯಿ ಭಾವವಾಗಿವೆ. ಅವಳ ಮದುವೆಯ ಮೆರವಣಿಗೆಯಲಿ ಉರಿವ ಕಣ್ಣುಗಳ ಹಿಲಾಲು ಹಿಡಿವೆನೆಂದ ಭಗ್ನ ಪ್ರೇಮಿಯ ನೋವು ಒಂದು ಸಂಚಾರಿಭಾವವಾಗಿತ್ತಷ್ಟೇ; ಕವಿಯ ಮನದ ಆಳದಲ್ಲಿ ಅಂದೂ ಕೂಡ ಸ್ಥಾಯಿಯಾಗಿ ಇದ್ದುವು ಇವೇ ಪ್ರೀತಿ ಮತ್ತು ಅಂತಃಕರಣಗಳೇ ಎನ್ನುವುದನ್ನು ಈ ಸಂಕಲನದ ಧೋರಣೆಯು ಸ್ಪಷ್ಟಪಡಿಸುತ್ತಿದೆ.



ಪು: 120 ₹110

ಯಾರು ಬಾಗಿಲದಲ್ಲಿ
ಲೇ: ಸಿದ್ಧಲಿಂಗ ಪಟ್ಟಣಶೆಟ್ಟಿ
ಪ್ರ: ಅನನ್ಯ ಪ್ರಕಾಶನ
ಸಂ: 9448861604

ಸಾರ್ವಕಾಲಿಕ ‘ಧೃತರಾಷ್ಟ್ರ’ರಿಗೆ ವಿದುರ ಬೋಧೆ

ಪ್ರಭುತ್ವದೊಳಗೆ ವ್ಯವಸ್ಥೆಗೆ ನಿಷ್ಠನಾಗಿದ್ದು, ಆ ವ್ಯವಸ್ಥೆಯನ್ನೇ ಪ್ರಶ್ನಿಸುವ ಧೈರ್ಯ ತೋರಿದ ಮಹಾಭಾರತದ ವಿವೇಕಯುತ ಪಾತ್ರ ವಿದುರ ಇಲ್ಲಿ ಅನಾವರಣಗೊಂಡಿದ್ದಾನೆ.

ಎಲ್ಲ ವೈರುಧ್ಯಗಳು ಗೊತ್ತಿದ್ದೂ ರಾಜನಾದವನಿಗೆ ಮಂತ್ರಿ ಸ್ಥಾನದಲ್ಲಿರುವವನು ಮಾಡಲೇಬೇಕಾದ ಬೋಧನೆಯನ್ನು ಮಾಡಿದ್ದಾನೆ ವಿದುರ. ಧೃತರಾಷ್ಟ್ರ ಬದಲಾಗಲಾರ, ಯುದ್ಧ ಅನಿವಾರ್ಯ ಎನ್ನುವುದು ವಿದುರನಿಗೂ ಗೊತ್ತಿದೆ. ಆದರೆ, ಒಂದು ವಂಶ ಹಾಗೂ ಸಾಮ್ರಾಜ್ಯವನ್ನು ರಕ್ಷಿಸಲು ಏನೆಲ್ಲಾ ಜವಾಬ್ದಾರಿ ನಿರ್ವಹಿಸಬೇಕೋ ಅದೆಲ್ಲವನ್ನೂ ಮಾಡುತ್ತಾನೆ. ಆಗಾಗ ಅವಮಾನ, ಬೇಸರಕ್ಕೂ ಒಳಗಾಗುತ್ತಾನೆ.

ಕೃತಿಯನ್ನು ಓದುವಾಗ ಇಂದಿನ ವ್ಯವಸ್ಥೆಯ ‘ಧೃತರಾಷ್ಟ್ರರೂ’ ಅರಸನನ್ನು ಮೀರಿ ನಿಲ್ಲುವ ‘ದುರ್ಯೋಧನರೂ’, ರಾಜನಿಷ್ಠ ಅತಿ ಪ್ರಾಮಾಣಿಕರೂ ಕಣ್ಣಮುಂದೆ ಬರುತ್ತಾರೆ. ಹಾಗಾಗಿ ಈ ಕೃತಿಯಲ್ಲಿ ಬರುವ ಸನ್ನಿವೇಶಗಳೂ ಸಾರ್ವಕಾಲಿಕವಾದವು ಅನಿಸುತ್ತದೆ. ಪುಟ ಸಂಖ್ಯೆ 119ರಿಂದ 131ರವರೆಗಿನ ವಿದುರನ ನೀತಿ ಬೋಧೆಗಳಂತೂ ಅದ್ಭುತ. ಇದೇ ನೀತಿ ಬೋಧೆಗಳು 163ನೇ ಪುಟದಿಂದಲೂ ಮುಂದುವರಿದಿವೆ. ಇದರಲ್ಲಿ ರಾಜನೀತಿ, ಕೌಟುಂಬಿಕ ಸಂಬಂಧಗಳ ಬಲವರ್ಧನೆ ಮತ್ತು ಮೌಲ್ಯಗಳನ್ನು ಉಳಿಸಿಕೊಂಡು ಬಾಳುವ ಬದುಕಿನ ಬಗ್ಗೆ ಸರಳವಾಗಿ ಹೇಳಲಾಗಿದೆ. ಉದಾಹರಣೆಗಳು, ಉಪಮೆಗಳು, ತಂತ್ರಬೋಧೆಗಳು ಓದಿಸಿಕೊಳ್ಳುತ್ತವೆ. ಅಲ್ಪಮಟ್ಟಿಗೆ ಕಾಡುವುದೂ ನಿಜ. ಪೂರಕವಾಗಿ ವಿದುರ ಹೇಳಿದ ದೃಷ್ಟಾಂತ ಕತೆಗಳೂ ಸುಂದರವಾಗಿವೆ.

ಇಲ್ಲಿನ ಒಂದು ಮಾತು ಹೀಗಿದೆ: ‘ಬಿಲ್ಲುಗಾರ ಬಿಟ್ಟ ಬಾಣ ಒಬ್ಬನನ್ನು ಕೊಲ್ಲಬಹುದು, ಕೊಲ್ಲದಿರಬಹುದು. ಆದರೆ, ಬುದ್ಧಿವಂತನ ಬುದ್ಧಿಯ ಬಾಣವು ರಾಜನನ್ನೂ ಸೇರಿಸಿ ರಾಷ್ಟ್ರವನ್ನೇ ನಾಶ ಮಾಡುತ್ತದೆ’. ಬಹುಶಃ ರಾಜರಿಗೂ, ರಾಜ ತಂತ್ರಜ್ಞರಿಬ್ಬರಿಗೂ, ಮಂತ್ರಾಲೋಚಕರಿಗೂ ಅನ್ವಯಿಸುವ ಮಾತಿದು. ಒಟ್ಟಿನಲ್ಲಿ ಎಲ್ಲ ವಯೋಮಾನದವರಿಗೂ ಬೇಕಾಗುವ, ಪ್ರಸ್ತುತ ರಾಜನೀತಿಗೆ ಕನ್ನಡಿ ಹಿಡಿದ ಕೃತಿಯಿದು.



ಪು: 192 ₹ 250

ವಿದುರ
ಲೇ: ಜಗದೀಶ ಶರ್ಮಾ ಸಂಪ
ಪ್ರ: ಸಾವಣ್ಣ ಎಂಟರ್‌ಪ್ರೈಸಸ್ ಬೆಂಗಳೂರು
ಸಂ: 9036312786

ಸಂಸ್ಕೃತಿಕೋಶಕ್ಕೊಂದು ಗಟ್ಟಿ ಸೇರ್ಪಡೆ

ಎಸ್. ಸೂರ್ಯಪ್ರಕಾಶ ಪಂಡಿತ್

ವಿಮರ್ಶೆ


ನಮ್ಮ ದೇಶದ ಶಿಕ್ಷಣ ಪರಂಪರೆಯಲ್ಲಿ ಬಹಳ ಮುಖ್ಯವಾದ ಕಲಿಕೆಯ ವಿಧಾನ ಎಂದರೆ ‘ಬಾಯಿಪಾಠ’. ಬರಹಕ್ಕಿಂತಲೂ ಮೊದಲ ಒತ್ತನ್ನು ಮಾತಿಗೂ ನೆನಪಿಗೂ ಕೊಡುವುದು ಈ ವಿಧಾನದ ವಿಶೇಷತೆ. ನಮ್ಮ ಆಧುನಿಕ ವಿದ್ಯಾಭ್ಯಾಸ ಪದ್ಧತಿಯಲ್ಲಿ ಬಾಯಿಪಾಠಕ್ಕೆ ಪೂರ್ಣ ಮನ್ನಣೆ ಇಲ್ಲ, ದಿಟ; ಆದರೆ ಈ ಪದ್ಧತಿ ಸಂಪೂರ್ಣವಾಗಿ ಮರೆಯಾಗಿದೆ ಎನ್ನುವಂತಿಲ್ಲ. ಬಾಯಿಪಾಠಕ್ಕೂ ನಮ್ಮ ನೆನಪಿನ ಶಕ್ತಿಗೂ ನೇರ ನಂಟಿರುವುದರಿಂದ ಶಿಕ್ಷಣತಜ್ಞರೂ ಮನೋವಿಜ್ಞಾನಿಗಳೂ ಈ ಪದ್ಧತಿಯ ಮಹತ್ವವನ್ನು ಸಾರುತ್ತಲೇ ಬಂದಿದ್ದಾರೆ. ಗಣಿತದ ಸೂತ್ರಗಳು, ರಾಸಾಯನಿಕಧಾತುಗಳ ಸಂಕೇತಾಕ್ಷರಗಳು ಇಂಥವೆಲ್ಲವನ್ನು ನಮ್ಮ ಇಂದಿನ ಪರೀಕ್ಷಾಪದ್ಧತಿಯಲ್ಲೂ ನಮಗೆ ಒದಗಿಸುವಂಥದ್ದು ಈ ಬಾಯಿಪಾಠದ ಕ್ರಮವೇ.

ನಮ್ಮ ನಿತ್ಯದ ವ್ಯವಹಾರದಲ್ಲಿ ತತ್‌ಕ್ಷಣಕ್ಕೆ ಬೇಕಾದ ಮಾಹಿತಿಗಳೆಲ್ಲವನ್ನೂ ಕಂಠಸ್ಥವಾಗಿರಿಸಿಕೊಳ್ಳುವುದು ನಮ್ಮ ಪೂರ್ವಜರ ಬಾಯಿಪಾಠದ ಕಲ್ಪನೆಯಲ್ಲಿದ್ದಿತೆಂದು ತೋರುತ್ತದೆ. ಆದರೆ ಈ ಪದ್ಧತಿಯ ಸಮಗ್ರಸ್ವರೂಪವನ್ನು ಕುರಿತಂತೆ ಇನ್ನೂ ಆಳವಾದ ಅಧ್ಯಯನಗಳು ನಡೆಯಬೇಕಾಗಿದೆ. ವೇದಾಧ್ಯಯನಕ್ರಮದ ‘ಬಾಯಿಪಾಠ’ದ ಬಗ್ಗೆ ತಕ್ಕಮಟ್ಟಿಗೆ ನಮಗೆ ಮಾಹಿತಿ ಲಭ್ಯವಿದೆ. ಆದರೆ ಲೌಕಿಕ ಶಿಕ್ಷಣಪದ್ಧತಿಯ ಬಾಯಿಪಾಠದ ಸಂಪೂರ್ಣ ಪರಿಚಯ ನಮಗೆ ಇಲ್ಲ. ಅಮರಕೋಶ, ಭಗವದ್ಗೀತೆ, ಸರ್ವಜ್ಞನ ವಚನಗಳು– ಇಂಥ ಕೃತಿಗಳನ್ನು ಬಾಯಿಪಾಠ ಮಾಡುವ ಪದ್ಧತಿ ಇದ್ದಿತೆಂದು ಊಹಿಸಬಹುದಾಗಿದೆ. ನಮ್ಮ ಕಾಲದಲ್ಲಿ ಉಪಯೋಗಿಸುತ್ತಿರುವ ‘ಮಗ್ಗಿಪುಸ್ತಕ‘ದ ಕಲ್ಪನೆಗೆ ಸಂವಾದಿಯಾದ ಕ್ರಮವೊಂದು ರೂಢಿಯಲ್ಲಿತ್ತೆಂದು ತೋರುತ್ತದೆ. ಜಿ. ಕೆ. ದೇವರಾಜಸ್ವಾಮಿ ಅವರು ಸಂಪಾದಿಸಿ, ಪ್ರಕಟಿಸಿರುವ ‘ಅಧಿಷ್ಠಾನ: ಬಾಯಿಪಾಠ ಪುಸ್ತಕ’ (ಪ್ರಾಚೀನ ಬಾಲಬೋಧೆ) ನಮ್ಮ ಪ್ರಾಚೀನ ವಿದ್ಯಾಭ್ಯಾಸಪದ್ಧತಿಯ ಬಗ್ಗೆ ಬೆಳಕನ್ನು ಚೆಲ್ಲುವ ಮಹತ್ವದ ಕೃತಿಯಾಗಿದೆ. ‘ನಮ್ಮ ಕವಿ–ವಿದ್ವಾಂಸರ ಗ್ರಂಥಗಳಲ್ಲಿ ಬಾಲಪಾಠದ ಕ್ರಮ ಎಂಥದ್ದೆಂಬ ಚಿತ್ರಣ ನೇರವಾಗಿ ಸಿಗುವುದಿಲ್ಲ. ಅಷ್ಟೇಕೆ, ಸಾಮಾನ್ಯ ವಿದ್ಯಾಭ್ಯಾಸದ ತರಪೇತಿ ಎಂಥದ್ದೆಂಬ ವಿವರಗಳಿಗೂ ಗ್ರಂಥಗತವಾಗಿ ದಕ್ಕುವುದಿಲ್ಲ. ಇವನ್ನೆಲ್ಲ ಅನೇಕ ಮೂಲಗಳಿಂದ ಕಣಕಣವಾಗಿ ಸಂಗ್ರಹಿಸುವ ಕ್ಲೇಶ ಸಂಶೋಧಕರದು. ಸದ್ಯದ ಕೃತಿ ಇಂಥ ಒಂದು ಶ್ಲಾಘ್ಯ ಕಾರ್ಯವನ್ನು ಮಾಡಿದೆ’. ಈ ಕೃತಿಗೆ ‘ನಲ್ನುಡಿ‘ಯನ್ನು ನೀಡಿರುವ ಶತಾವಧಾನಿ ರಾ. ಗಣೇಶ್ ಅವರ ಈ ಮಾತುಗಳು ದೇವರಾಯಸ್ವಾಮಿ ಅವರ ಶ್ರಮವನ್ನೂ ಯಶಸ್ಸನ್ನೂ ತಿಳಿಸುತ್ತಿವೆ.

ನಮ್ಮ ನಡುವೆ ಇರುವ ಪ್ರಮುಖ ಹಾಗೂ ಪ್ರಾಮಾಣಿಕ ಸಂಶೋಧಕರಲ್ಲಿ ಒಬ್ಬರು ಜಿ.ಕೆ. ದೇವರಾಜಸ್ವಾಮಿ. ಅವರ ‘ಕನ್ನಡ ಲಿಪಿವಿಕಾಸ’ ಮತ್ತು ‘ಕಳಚೂರಿ ಶಾಸನಗಳು‘ ಅವರ ಅಧ್ಯಯನಕ್ಕೆ ಸಾಕ್ಷ್ಯಗಳಾಗಿವೆ. ಈಗ ಅವರು ‘ಅಧಿಷ್ಠಾನ‘ದ ಮೂಲಕ ನಮ್ಮ ಸಂಶೋಧನೆಯ ಕ್ಷೇತ್ರಕ್ಕೂ, ಸಾಂಸ್ಕೃತಿಕ ಅಧ್ಯಯನಕ್ಕೂ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ತೀರ್ಥಹಳ್ಳಿ ತಾಲೂಕಿನ ಮುತ್ತೂರು ಹೋಬಳಿಯ ಮೇಳಿಗೆ ಸಮೀಪದ ಕೆರೆಮನೆ ಎಂಬ ಊರಿನಲ್ಲಿ ದೊರೆತ ಹಸ್ತಪ್ರತಿಯನ್ನು ಆಧರಿಸಿ ಈ ಕೃತಿಯನ್ನು ಸಂಪಾದಿಸಿದ್ದಾರೆ. ‘ಬಾಯಿಪಾಠ’ದ ಲಭ್ಯ ಹಸ್ತಪ್ರತಿ ಇದೊಂದೇ ಆಗಿರುವುದರಿಂದ ಗ್ರಂಥಸಂಪಾದನೆಯ ಎಲ್ಲ ಶಿಸ್ತುಗಳನ್ನೂ ಇಲ್ಲಿ ಅಳವಡಿಸಿಕೊಂಡಿಲ್ಲ, ಹೌದು; ಆದರೆ ಸದ್ಯದ ಕೃತಿ ಈ ಮಾರ್ಗದಲ್ಲಿರುವ ಸಂಶೋಧಕರಿಗೆ ಖಂಡಿತವಾಗಿಯೂ ದಿಕ್ಸೂಚಿಯಾಗಲಿದೆ. ದೇವರಾಜಸ್ವಾಮಿ ಅವರಿಗೆ ನೆರವಾಗಿರುವ ಎ. ಆರ್. ಗುರು ಅವರಂಥವರ ಪರಿಶ್ರಮ–ಪಾಂಡಿತ್ಯಗಳೂ ಪ್ರಶಂಸಾರ್ಹ.

‘ಅಧಿಷ್ಠಾನ‘ವು ಎರಡು ಭಾಗಗಳಲ್ಲಿದ್ದು, ಅಲ್ಲಿಯ ಕೆಲವೊಂದು ಅಧ್ಯಾಯಗಳು, ವಿಷಯಗಳು ಹೀಗಿವೆ: ಮಗ್ಗಿ, ಕಾಣಿ ಮಗ್ಗಿ, ವೀಸ ಮಗ್ಗಿ, ಬೇಳೆ ಮಗ್ಗಿ, ಹಾಗ ಮಗ್ಗಿ, ಅಡ್ಡ ಮಗ್ಗಿ, ಮುಪ್ಪಾಗ ಮಗ್ಗಿ– ಕೋಷ್ಟಕಗಳು; ಸಂವತ್ಸರಗಳು, ಮಾಸಗಳು; ನಕ್ಷತ್ರಯೋನಿಗಳು; ಅಕ್ಷರಸಂಖ್ಯೆ; ಸಂವತ್ಸರಗಳ ಶ್ಲೋಕ, ಅಳತೆಗಳು, ತಿಥಿ–ಹಬ್ಬಗಳು, ದೇವರುಗಳ ಸ್ತೋತ್ರಗಳು, ಕನ್ನಡ ಮೂಲಾಕ್ಷರಗಳು, ಕಾಗುಣಿತ ಸ್ವರೂಪ; ಅಂಕೆ ಕೋಷ್ಟಕ; ಕಾಲು, ಅರ್ಧ, ಮುಕ್ಕಾಲು, ಒಂದೂಕಾಲು, ಮೂರು ಅರ್ಧ, ವರ್ಗ ಕೋಷ್ಟಕಗಳು; ಗಿರಪಾವು, ಸೇರು ಕೋಷ್ಟಕ; ಆಣೆ ಕೋಷ್ಟಕ, ಮಣ ಕೋಷ್ಟಕ, ಪೈ ಕೋಷ್ಟಕ, ಸೊಲಿಗೆ, ಪಾವು, ಮಾನ, ಕೊಳಗ, ಬಳ್ಳ; ಖಂಡುಗದ ಅಳತೆ.

ನಮ್ಮ ತಾತ–ಮುತ್ತಾತಂದಿರು ಉಪಯೋಗಿಸುತ್ತಿದ್ದ ರೂಪಾಯಿಯ ಭಾಗಗಳು, ಅಳತೆಯ ಗಾತ್ರ–ತೂಕ–ಉದ್ದ–ಅಗಲದ ಪ್ರಮಾಣಗಳು, ಕಾಲದ ಪರಿಮಾಣಗಳಂಥವನ್ನು ಅರಿಯಲು ಈ ಕೃತಿ ಸಹಾಯಕ. ಪುಸ್ತಕವೂ ಅಚ್ಚುಕಟ್ಟಾಗಿ ಮುದ್ರಣವಾಗಿದೆ. ಮೂಲಹಸ್ತಪ್ರತಿಯ ಚಿತ್ರಗಳನ್ನು ನೀಡಿರುವುದು ಮೌಲ್ಯವನ್ನು ಹೆಚ್ಚಿಸಿದೆ. ಒಟ್ಟಿನಲ್ಲಿ ನಮ್ಮ ನಾಡಿನ ಸಂಸ್ಕೃತಿಕೋಶಕ್ಕೆ ಈ ‘ಅಧಿಷ್ಠಾನ’ ನಿಜಕ್ಕೂ ಒಳ್ಳೆಯ ಸೇರ್ಪಡೆಯಾಗಿದೆ.



ಪು: 266 ₹650

ಅಧಿಷ್ಠಾನ
ಲೇ: ಜಿ. ಕೆ. ದೇವರಾಜಸ್ವಾಮಿ
ಪ್ರಕಾಶಕರು: ಯುವಸಾಧನೆ, ಬೆಂಗಳೂರು
ಸಂಪರ್ಕ: 7975330868

ನೃತ್ಯಪ್ರೀತಿಗೆ ಜೀವನಮಾರ್ಗದ ಭಾಷ್ಯ



ಗೌತಮ್ ಮರಾಠೆ

ಪದವಿ ಶಿಕ್ಷಣ ಮುಗಿಸಿ ಉದ್ಯೋಗ ಗಿಟ್ಟಿಸಿಕೊಂಡು ಲಕ್ಷಗಟ್ಟಲೆ ಸಂಬಳ ಪಡೆಯುತ್ತಿರುವಾಗ ಭರತನಾಟ್ಯದತ್ತ ಆಕರ್ಷಿತರಾದವರು ಗೌತಮ್ ಮರಾಠೆ. ನೃತ್ಯವನ್ನು ಕಲಿತದ್ದಷ್ಟೇ ಅಲ್ಲ, ಭರತನಾಟ್ಯ ಅಭ್ಯಾಸಿಗಳಿಗೆ ಬೇಕಾಗುವ ಆಂಗಿಕ ವ್ಯಾಯಾಮದ ಪರಿಕಲ್ಪನೆಯೊಂದನ್ನು ಸಿದ್ಧಪಡಿಸಿ ಈ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದಾರೆ. ಮಂಗಳೂರಿನ ಸನಾತನ ನಾಟ್ಯಾಲಯ ಮತ್ತು ನೃತ್ಯಾಂಗಣ್ ಸಂಸ್ಥೆ ಆಯೋಜಿಸಿದ ಆಂಗಿಕ ಕಾರ್ಯಾಗಾರದಲ್ಲಿ ಅವರು ಮಾತಿಗೆ ಸಿಕ್ಕರು.

ಕೋಡಿಬೆಟ್ಟು ರಾಜಲಕ್ಷ್ಮಿ

ಲಕ್ಷಗಟ್ಟಲೆ ರೂಪಾಯಿ ವೇತನ ಪಡೆಯುತ್ತಿದ್ದ ನೀವು ಇದ್ದಕ್ಕಿದ್ದಂತೆ ಭರತನಾಟ್ಯದತ್ತ ಆಕರ್ಷಿತರಾದುದು ಯಾಕೆ?

ಹೀಗೇ ಎಂದು ಕಾರಣ ಕೊಡಲಾರೆ. ಆದರೆ ನೃತ್ಯದ ಬಗ್ಗೆ ಬಹಳ ಒಲವಿದ್ದ ನಾನು ಜಾಝ್ ಕಲಿತಿದ್ದೆ. ಭರತನಾಟ್ಯವನ್ನೂ ಕಲಿಯಬೇಕು ಎಂದು ತೀವ್ರವಾಗಿ ಅನಿಸಿದಾಗ ನಾನು ಗುರು ವೈಭವ್ ಅರೇಕರ್ ಅವರನ್ನು ಭೇಟಿಯಾಗಿ ನನ್ನಾಸೆಯನ್ನು ಹೇಳಿಕೊಂಡೆ. ನೆನಪಿದೆ ಆದಿನ. ಎಚ್.ಆರ್. ಮ್ಯಾನೇಜರ್ ಆಗಿದ್ದ ನಾನು ಆಫೀಸಿನಿಂದ ನೇರವಾಗಿ ಡಾನ್ಸ್ ಕ್ಲಾಸ್‌ಗೆ ಹೋಗಿದ್ದು. ಫಾರ್ಮಲ್ಸ್‌ನಲ್ಲಿಯೇ ಅಂದು ಮೊದಲ ಹೆಜ್ಜೆಗಳನ್ನು ಬಹಳ ಕಷ್ಟಪಟ್ಟು ಹಾಕಿದ್ದೆ. ಅವೆಲ್ಲವೂ ನೆನಪಿದೆ. ಭರತನಾಟ್ಯ ನನ್ನ ಜೀವನದ ದಿಕ್ಕನ್ನೇ ಬದಲಾಯಿಸಿತು. ಲಕ್ಷಾಂತರ ರೂಪಾಯಿ ಸಂಬಳ ಬಂದಾಗ ಆಗದೇ ಇದ್ದ ಖುಷಿ ಈ ಭರತನಾಟ್ಯ ಪ್ರಸ್ತುತಿಯಲ್ಲಿ ಸಿಕ್ಕಿತು. ನಾನು ದೈಹಿಕವಾಗಿ, ಭಾವನಾತ್ಮಕವಾಗಿ ಬಹಳಷ್ಟು ವಿಚಾರಗಳನ್ನು ಕಲಿತೆ. ಬದಲಾದೆ. ನೃತ್ಯದ ಸಲುವಾಗಿ ನನ್ನ ಹುಟ್ಟೂರು ಪುಣೆಯಿಂದ ಮುಂಬೈಗೆ ತೆರಳಿ ನೆಲೆನಿಂತೆ.

ಭಾವನಾತ್ಮಕ ಬದಲಾವಣೆ ಅಂದರೆ ಹೇಗೆ ?

ಮನುಷ್ಯ ಶಿಕ್ಷಣ, ಉದ್ಯೋಗ ವೇತನಕ್ಕೆ ಸೀಮಿತವಾಗಿದ್ದರೆ ಅದು ಆಲೋಚನೆಯನ್ನು ಸೀಮಿತಗೊಳಿಸುತ್ತದೆ. ಜೊತೆಗೆ ವಯಸ್ಸಿನ ಹಮ್ಮು ಸೇರಿಕೊಂಡು ಎನಗಿಂತ ಮಿಗಿಲಾರಿಲ್ಲ ಎಂದು ಭಾವಿಸುವಂತೆ ಮಾಡುತ್ತದೇನೋ. ಆದರೆ ಭರತನಾಟ್ಯ ಕಲಿಯುತ್ತ ನಾನು, ಈ ಜಗತ್ತಿನ ಅನಂತತೆ, ನಮ್ಮ ಕಲಾಪರಂಪರೆಯ ವಿಸ್ತಾರವನ್ನು ಗ್ರಹಿಸಿದೆ. ಆಗ ಸಹಜವಾಗಿಯೇ ವಿನಯವಂತಿಕೆಯು ಬರುತ್ತದೆ. ಬದುಕಿನಲ್ಲಿ ಆವರೆಗೆ ಕಾಣದ ಎಷ್ಟೋ ಸುಂದರ ವಿಷಯಗಳು ಕಾಣಿಸಲು ಶುರುವಾದವು. ಇದು ನನ್ನ ಭಾವನಾತ್ಮಕ ಗ್ರಹಿಕೆಯ ಸ್ವರೂಪವನ್ನು ಬದಲಾಯಿಸಿತು.

ಅಷ್ಟು ತಡವಾಗಿ ನೃತ್ಯ ಕಲಿತ ಬಳಿಕ ನೀವು, ದೇಹ ಭಾವವನ್ನು ತಿದ್ದುವ 'ಆಂಗಿಕ' ಎಂಬ ವ್ಯಾಯಾಮ ಪರಿಕಲ್ಪನೆಯನ್ನು ರೂಪಿಸಿದಿರಿ. ಅದರ ಬಗ್ಗೆ ಹೇಳಿ?

ಭರತನಾಟ್ಯ ಕಲಿಯುವ ಸಂದರ್ಭದಲ್ಲಿ ನನ್ನೊಳಗೆ ಹುಟ್ಟಿಕೊಂಡ ಯೋಚನೆಯಿದು. ನೃತ್ಯಪಟುವು ತನ್ನ ದೇಹವನ್ನು ಪಾತ್ರೆಯೆಂದು ಭಾವಿಸಿ ಅದರಲ್ಲಿ ಯಾವುದೇ ರಸ, ಭಾವವನ್ನು ಆವಾಹಿಸಿಕೊಂಡು ಪ್ರಸ್ತುತಪಡಿಸಲು ಸಮರ್ಥರಿರಬೇಕು. ಪ್ರತಿಯೊಬ್ಬ ನೃತ್ಯಪಟುವಿಗೂ 'ನಾಟ್ಯದ ಆಯುಸ್ಸು' ಎಂಬುದೊಂದು ಇರುತ್ತದೆ. ನಮ್ಮ ಜೀವನವಾಧಿಯಲ್ಲಿ ನಾವು ಎಷ್ಟು ಅವಧಿ ನೃತ್ಯ ಮಾಡುತ್ತೇವೆಯೋ ಆ ಅವಧಿ. ದೇಹವೆಂಬ ಪಾತ್ರೆಯು ಸದೃಢವಾಗಿಯೂ, ಸ್ವೀಕಾರ ಭಾವದಲ್ಲಿಯೂ ಇದ್ದಾಗ ನಾಟ್ಯದಾಯುಸ್ಸು ದೀರ್ಘವಾಗುತ್ತದೆ. ಹಾಗಿದ್ದರೆ ದೇಹವನ್ನು ಸಬಲಗೊಳಿಸಲು ನೃತ್ಯಪಟುವು ಏನೇನು ಮಾಡಬೇಕು ಎಂದು ಯೋಚಿಸಿ, ಆಂಗಿಕ ವ್ಯಾಯಾಮದ ರೂಪುರೇಷೆ ತಯಾರಿಸಿದೆ. ಯೋಗ, ಕಳರಿಪಯಟ್ಟುವಿನ ಅಂಶಗಳು ಇದರಲ್ಲಿವೆ. ನೃತ್ಯಪಟುವು ಪ್ರತಿಯೊಂದು ಅಡವನ್ನು ಪ್ರಸ್ತುತಪಡಿಸಲು ಪೂರಕವಾಗಿ ದೇಹವನ್ನು ದಂಡಿಸಿ ಹೇಗೆ ಸಜ್ಜುಗೊಳಿಸಬೇಕು ಎಂಬುದನ್ನು ಇದು ಹೇಳುತ್ತದೆ. ಗುರು ವೈಭವ್ ಅರೇಕರ್ ಅವರ ಸಾಂಖ್ಯ ಡಾನ್ಸ್ ಕ್ರಿಯೇಶನ್, ನನ್ನಮ್ಮ ಮಾಧವಿ ಮರಾಠೆ, ಅಪ್ಪ ರಾಮಚಂದ್ರ ಮರಾಠೆ, ಅಣ್ಣ ಗೌರವ್ ನನ್ನ ಈ ಹೊಸ ಪ್ರಯತ್ನವನ್ನು ಬೆಂಬಲಿಸಿದ್ದರಿಂದ ನಾನಿಷ್ಟು ಮುಂದುವರೆದೆ. ಇದು ಭರತನಾಟ್ಯ ಅಭ್ಯಾಸಿಗಳಿಗೆ ಮಾತ್ರ ಮೀಸಲಾಗಿರುವ ವ್ಯಾಯಾಮ ವಿಧಾನ.

ಹೊಸ ನೃತ್ಯಪರಿಕಲ್ಪನೆಗಳನ್ನು ಹೇಗೆ ರೂಪಿಸುತ್ತೀರಿ ?

ಸಾಂಖ್ಯ ನೃತ್ಯ ಸಂಸ್ಥೆಯ ಎಲ್ಲ ಸದಸ್ಯರೂ ಒಟ್ಟಾಗಿ ಹೊಸ ಪರಿಕಲ್ಪನೆಗೆ ಕೆಲಸ ಮಾಡುತ್ತೇವೆ. ಸುಮ್ಮನೇ ಒಂದು ಹಾಡಿಗೆ ವಿವಿಧ ಸ್ಟೆಪ್‌ಗಳನ್ನು ಹಾಕಿದರೆ ಅಲ್ಲಿ ಜೀವಂತಿಕೆ ಇರಲು ಸಾಧ್ಯವಿಲ್ಲ. ಅದಕ್ಕೆ ಪೂರ್ವಭಾವಿಯಾಗಿ ತೀವ್ರವಾದ ಅಧ್ಯಯನ ಮುಖ್ಯ. ಅಷ್ಟೇ ಮುಖ್ಯವಾದುದು ಸಾಮಾಜಿಕ ಚಟುವಟಿಕೆಗಳ ಗಮನಿಸುವಿಕೆ. ಗದ್ದೆಯೊಂದರಲ್ಲಿ ಕೃಷಿಕರು ಹೇಗೆ ಕೆಲಸ ಮಾಡುತ್ತಾರೆ, ಮಾವಿನ ತೋಪಿನ ವಾತಾವರಣ ಹೇಗಿರುತ್ತದೆ, ಗ್ರಾಮವೊಂದರ ಜೀವನ ಶೈಲಿ ಹೇಗಿರುತ್ತದೆ ಎಂಬುದನ್ನು ಗಮನಿಸುವುದಕ್ಕೆ ಬಹಳ ಸಮಯ ಮೀಸಲಿಡುತ್ತೇವೆ. ಇತರ ಕಲಾಪ್ರಕಾರಗಳ ಗಮನಿಸುವಿಕೆ, ಪುರಾಣ ಪಠ್ಯಗಳ ಓದು, ವಿದೇಶೀ ಪೌರಾಣಿಕ ಕಥೆಗಳ ಕಲಿಕೆ, ಅದರೊಂದಿಗೆ ಸಮಕಾಲೀನ ಸಾಹಿತ್ಯ-ಸಾಂಸ್ಕೃತಿಕ ಚಟುವಟಿಕೆಗಳ ಗಮನಿಸುವಿಕೆ- ಇವೆಲ್ಲವೂ ಇದ್ದಾಗ ಮಾತ್ರ ಹೊಸ ಪರಿಕಲ್ಪನೆಯನ್ನು ಸಿದ್ಧಪಡಿಸಬಹುದು. ❖



ವಾಹ್... ಭಾವ - ಭಂಗಿ - ಗಾಂಭೀರ್ಯ





ಕಲೆಯಲ್ಲಿ ಬ್ಲಾಸಂ ಬುಕ್ ಹೌಸ್ ಸಮೀಕ್ಷಾ ಕಲ್ಪನೆ... ಬ್ಲಾಸಂ ಬುಕ್ ಹೌಸ್ ಬೇ ಏರಿಯಾದಲ್ಲಿ

ಗಡಿಗಳ ಬೆಸುಗೆ.. ಕಲೆಯ ಒಸಗೆ

9ನೇ ಪುಟದಿಂದ...

ಮ್ಯಾನ್‌ಹಟನ್‌ನಲ್ಲಿ ವರ್ಷಗಳ ಹಿಂದೆ ಅವರ ವರ್ಣಚಿತ್ರಗಳ ಪ್ರದರ್ಶನವನ್ನೂ ನಡೆಸಿದರು. ಬೆಂಗಳೂರು, ಮುಂಬೈನಲ್ಲಿ ತಾವು ಕಂಡ ಕಾಡುವ ದೃಶ್ಯಗಳನ್ನು ಅಮೆರಿಕದ ವಾತಾವರಣಕ್ಕೆ ಬೆಸೆದು ವರ್ಣಚಿತ್ರಕಲೆಗಳನ್ನು ಮೂಡಿಸುವ ಮಹತ್ವಾಕಾಂಕ್ಷೆ 2018ರಲ್ಲಿ ಅವರಿಗೆ ಹುಟ್ಟಿತು. ಮುಂಬೈ ಹಾಗೂ ಬೆಂಗಳೂರಿನ ತಮ್ಮ ಸ್ನೇಹಿತ-ಸ್ನೇಹಿತೆಯರ ಬಳಗದಿಂದ ಫೋಟೊಗಳನ್ನು ತರಿಸಿಕೊಂಡರು. ಅಮೆರಿಕದಲ್ಲಿ ಅದಕ್ಕೆ ಪೂರಕವಾದ ವಾತಾವರಣವನ್ನು ಹುಡುಕಿದರು. ಎರಡನ್ನೂ ವರ್ಣಚಿತ್ರಗಳಲ್ಲಿ ಬೆಸೆದರು. ಎಂಟಿಆರ್ ಹಾಗೂ ಮ್ಯಾಕ್‌ಡೌಗಲ್ ಒಂದೇ ಚೌಕಟ್ಟಿಗೆ ಬಂದವು. ಬೆಂಗಳೂರಿನ ಚರ್ಚ್‌ಸ್ಟ್ರೀಟ್‌ನ ಬ್ಲಾಸಮ್ ಬುಕ್‌ಹೌಸ್ ಅಮೆರಿಕದ ಬೇ ಏರಿಯಾದ ಬೀದಿಗೂ ಬೆಸೆದುಕೊಂಡಿತು. ಹಾಗೆಯೇ 'ಪ್ರಜಾವಾಣಿಪ್ರಿಯ ಕಂಠಿ' ಅವರು ಸಬ್‌ವೇ ರೈಲು ನಿಲ್ದಾಣದಲ್ಲಿ ಪಾಶ್ಚಾತ್ಯ ದಿರುಸು ತೊಟ್ಟವರ ಪಕ್ಕ ಹೋಗಿ ಕುಳಿತರು. ಮುಂಬೈನ ಸಮುದ್ರದಲ್ಲಿನ ಗಣೇಶ ವಿಸರ್ಜನೆಯ ಮುನ್ನೆಲೆಯಲ್ಲಿ ನ್ಯೂಯಾರ್ಕ್ ನಗರವನ್ನು ಮೂಡಿಸಿದರು. ಹಿಮಾಚ್ಛಾದಿತ ಅಮೆರಿಕದ ರಸ್ತೆಯ ಮೇಲೆ ಬೇರೆ ವಾಹನಗಳ ನಡುವೆ ಒಂದು ಆಟೊ ಸಾಗಿದರೆ ಹೇಗಿದ್ದೀತು ಎನ್ನುವ ಪ್ರಯೋಗವೂ ಈ ವರ್ಣಚಿತ್ರ ಸರಣಿಯಲ್ಲಿ ಇದೆ.

2018ರಲ್ಲಿ ಮೊಳೆತ ಯೋಚನೆಯನ್ನು ಕಾರ್ಯರೂಪಕ್ಕೆ ಇಳಿಸಲು ಸಮೀಕ್ಷಾ 2023ರ ಜನವರಿವರೆಗೆ ಸಮಯ ತೆಗೆದುಕೊಂಡರು. ಕನ್ನಡ ಬಾರದೇ ಇದ್ದರೂ ಕನ್ನಡದ ಅಕ್ಷರಗಳು ಚಿತ್ರಗಳಲ್ಲಿ ಮೂಡುವಂತೆ ನೋಡಿಕೊಂಡರು.

'ಸಿಂಧೂರ ಮನೆಗೆ ಹೋದಾಗ ಪ್ರಜಾವಾಣಿ ಪತ್ರಿಕೆಯು ಅವರ ಮನೆಯ ಭಾವನಾತ್ಮಕ ಭಾಗವೇ ಆಗಿತ್ತು. ಅದು ಎಷ್ಟು ಸತ್ವಯುತ ಎಂದು ನನಗೆ ತಿಳಿಸಿದ್ದೇ ಅವರು. ಹೀಗಾಗಿ ನಾನು ವರ್ಣಚಿತ್ರ ಸರಣಿಗೆ ಪತ್ರಿಕೆಯನ್ನೂ ಮುಖ್ಯವಾಗಿಸಿಕೊಂಡೆ. ಪ್ರಜಾವಾಣಿ ಈಗ ಎಪ್ಪತ್ತೈದನೇ ವರ್ಷದಲ್ಲಿದೆ ಎನ್ನುವುದನ್ನು ತಿಳಿದು ಮತ್ತಷ್ಟು ಖುಷಿಯಾಯಿತು' ಎನ್ನುತ್ತಾರೆ ಸಮೀಕ್ಷಾ.

www.curlyhairartist.com ವೆಬ್‌ಸೈಟ್‌ನಲ್ಲಿ ಈ ಗುಂಗುರು ಕೂದಲಿನ ಆಸಕ್ತ ಕಲಾವಿದೆಯ ಕುರಿತ ಮಾಹಿತಿ ಇದೆ. ❖

ಏನಿದು ಬ್ಲೆಂಡಿಂಗ್ ಬಾರ್ಡರ್ಸ್?

ಗಡಿಗಳ ಬೆಸುಗೆ ಅರ್ಥಾತ್ ಬ್ಲೆಂಡಿಂಗ್ ಬಾರ್ಡರ್ಸ್ ಎನ್ನುವ ವರ್ಣಛಾಯಾಚಿತ್ರ ಸರಣಿಯಲ್ಲಿ ಸಮೀಕ್ಷಾ ಅವರು ಭಾರತದ ರಿಕ್ಷಾ, ಕೋಲ್ಕತ್ತದ ಟ್ರಾಮ್, ಮುಂಬೈನ ಬಿಎಸ್‌ಟಿ ಬಸ್, ನ್ಯೂಯಾರ್ಕ್ ಸಬ್‌ವೇ ಇವನ್ನೆಲ್ಲ ಬೆಸೆದಿದ್ದಾರೆ. ಮುಂಬೈನ ಡಬ್ಬಾವಾಲಾಗಳು, ಪ್ರಜಾವಾಣಿ ಪತ್ರಿಕೆ ಓದುವ ಕನ್ನಡಿಗ, ದಸರಾ, ಗಣೇಶ ವಿಸರ್ಜನೆ ಇವು ಸಾಂಸ್ಕೃತಿಕ ಬಿಂಬಗಳಾಗಿ ಹಾಗೂ ಹಬ್ಬದ ಮೂಡ್ ಕಟ್ಟಿಕೊಡಲು ಬಳಕೆಯಾಗಿವೆ. ಕನ್ನಡ ಲಿಪಿ ಅಷ್ಟೇ ಅಲ್ಲದೆ ಚೀನಾ ಭಾಷೆಯನ್ನೂ ಇವರು ಈ ಸರಣಿಯ ಪೇಂಟಿಂಗ್‌ಗಳಲ್ಲಿ ಮೂಡಿಸಿರುವುದು ವಿಶೇಷ.

ಕ್ಯಾರಿಕೇಚರ್‌ಗಳನ್ನು ಮಾಡುವುದರಲ್ಲೂ ಸಮೀಕ್ಷಾ ಪಳಗಿದ್ದಾರೆ. ಅವರ ಪತಿ, ಸಹೋದರಿಯ ಕಾರು, ಸ್ನೇಹಿತೆಯ ತಂದೆ ಇವರೆಲ್ಲರೂ ಪೇಂಟಿಂಗ್‌ಗಳಿಗೆ ವಸ್ತುವಾಗಿದ್ದಾರೆ. ನ್ಯೂಯಾರ್ಕ್‌ನಲ್ಲಿ ಸುರಿಯುವ ಹಿಮ ಪರಿಸರವನ್ನು ಮೂಡಿಸಲು ಸಾಕಷ್ಟು ಸಮಯ ವ್ಯಯಿಸಿದ್ದಾರೆ. ಅಂತಹ ಪರಿಸರದ ಫೋಟೊಗಳನ್ನು ತೆಗೆದು, ಅವುಗಳ ಆಧಾರದ ಮೇಲೆ ವರ್ಣಚಿತ್ರಗಳನ್ನು ಸೃಷ್ಟಿಸಲು ಹೆಚ್ಚು ತಾಳ್ಮೆ, ಸಮಯ ಸಹಜವಾಗಿಯೇ ಬೇಕು ಎನ್ನುತ್ತಾರೆ. ಹಲವು ದೇಶಗಳನ್ನು ಕಲಾವಂತಿಕೆಯ ಒಂದು ಬಿಂದುವಿಗೆ ತರುವ ಅವರ ಯೋಜನೆ ಪೂರ್ಣಗೊಂಡಮೇಲೆ ಪ್ರದರ್ಶನ ಏರ್ಪಡಿಸುವುದು ಅವರ ಉದ್ದೇಶ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಶ್ಶ ಚಕ್ಕು ಕೇಶ್ರುಷ್ಟು ಕಥೆಯ — ಗುಂಡ ಮತ್ತು ಪ್ರಾಣಿಗಳು

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಒಮ್ಮೆ ಗುಂಡ ಹಬ್ಬಕ್ಕೆಂದು ಎಲೆಗಳ ಚಿತ್ರವಿರುವ ಹೊಸ ವಿನ್ಯಾಸದ ಅಂಗಿಯನ್ನು ಹೊಲಿಸಿಕೊಂಡಿದ್ದ. ಹೊಸ ಅಂಗಿ ತೊಟ್ಟ ಖುಷಿಯಲ್ಲಿ ಗುಂಡ ಪ್ರಾಣಿ ಮುಖಗಳನ್ನು ನೋಡಲೆಂದು ಮ್ಯೂಸಿಯಂಗೆ ಹೋದ.

ಮ್ಯೂಸಿಯಂನೊಳಗೆ ಕಾಲಿಟ್ಟ ಗುಂಡನಿಗೆ ಖುಷಿಯೋ ಖುಷಿ. ಅಲ್ಲಿ ಜಿಂಕೆ, ಕುದುರೆ, ನಾಯಿಯ ಮುಖವಾಡಗಳಿದ್ದವು. ಅವುಗಳಿಗೆ ಜೀವವಿದೆಯೋ ಅಥವಾ ಇಲ್ಲವೋ ಎಂಬ ಅನುಮಾನ ಗುಂಡನಿಗೆ ಶುರುವಾಯಿತು.

ಮ್ಯೂಸಿಯಂನಲ್ಲಿ ಜೀವವಿರುವ ಪ್ರಾಣಿ ಇರಲಾರದು ಎಂಬುದು ಗುಂಡನ ಊಹೆ. ಹಾಗಾಗಿ ಆ ಆಕೃತಿಗಳ ಹತ್ತಿರಕ್ಕೆ ಹೋದ. ಅಲ್ಲಿದ್ದ ಜಿಂಕೆಯ ಮುಖಕ್ಕೆ ಗುಂಡನ ಅಂಗಿಯ ಚಿತ್ತಾರ ಎಲೆಯಂತೆ ಕಂಡಿತು. ಜಿಂಕೆಗೆ ಜೀವ ಬಂದು ಆತನ ಅಂಗಿಗೆ ಬಾಯಿ ಹಾಕಿತು.

ಗುಂಡ ಅದರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ. ಮುಂದೆ ಹೋದರೆ ಕುದುರೆಯೂ ಗುಂಡನನ್ನು ಬಿಡಲಿಲ್ಲ. ಕುದುರೆಯು ಗುಂಡನ ತಲೆಗೂದಲನ್ನು ಹುಲ್ಲು ಎಂದು ಭಾವಿಸಿ ಎಳೆದಾಡಿತು. ಗುಂಡ ಪೆಚ್ಚಾಗಿ ನಿಂತ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಪಕ್ಕದಲ್ಲಿ ನೀಡಲಾದ ಸುಳಿವು ಆಧರಿಸಿ ನಾಲ್ಕು ಅಕ್ಷರಗಳ ಅರ್ಥವತ್ತಾದ ಪದ ರಚಿಸಿ

					ಸುಳಿವು
1	–	ರ	ಸ	–	ರಸಗಳಿಗಾಗಿ ಮಾಡಿಕೊಂಡ ಬಿಡುವು
2	–	ಮೇ	ರಿ	–	ಮೇರಿ ಈ ದೇಶದವಳು
3	–	ವಾ	ಸ	–	ವಾಸದ ಮನೆ ಸುತ್ತ ಹರಡಿದ ಪರಿಮಳ
4	–	ಗ	ಣಿ	–	ಗಣಿಯಲ್ಲಿ ಸಿಕ್ಕ ಲೆಕ್ಕವಿಲ್ಲದಷ್ಟು
5	–	ದಾ	ರ	–	ದಾರ ಕೊಟ್ಟಾಗ ತೋರಿಸಿದ ಧಾರಾಳತನ



ಸ್ವಲ್ಪ ಯೋಚ್ನೆ ಮಾಡಿ

ಇಲ್ಲಿ ಕೊಟ್ಟಿರುವ 6 ಪದಗಳಿಂದ ಏಳನೇ ಪದ ಸೃಷ್ಟಿ ಮಾಡಬಹುದೇ ಯೋಚನೆ ಮಾಡಿ

SEE EYE OR SEA YOU YES

ಅದಲು ಬದಲು ಕಂಚಿ ಕದಲು

1 ಪವನ ದಂತಿ = ____
2 ಕೋಳಿದಾರ = ____
3 ನವರೂಪಕ = ____
4 ಮರದಾತ = ____

ಪದಶೋಧ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಒಬ್ಬ ರಾಷ್ಟ್ರೀಯ ಮಹಾನ್ ವ್ಯಕ್ತಿಯ ಹೆಸರು ಅಡಗಿದೆ. ಪತ್ತೆಹಚ್ಚಿ

1 ಬಾಳೆಹಣ್ಣು
2 ಬುಡಕಟ್ಟು
3 ಜನಮನ
4 ಗಜರಾಜ
5 ಜೀವಜಲ
6 ವರನಟ
7 ನವಶಕ್ತಿ
8 ರಾಜನೀತಿ
9 ಮತದಾರ

ಪದಸಂಕಲನ


ಇಲ್ಲಿ ಕೊಟ್ಟಿರುವ ಎರಡು ಪದಗಳನ್ನು ಹಾಗೂ ಒಂದಕ್ಷರವನ್ನು ಸೇರಿಸಿ ಒಂದೇ ಪದ ಮಾಡಿ

1 ಚಡಿ + ದರ + ಅ = ____
2 ಕಾಯ + ಅರಿ + ಪಾ = ____
3 ಜೋಶಿ + ದಳ + ರಾ = ____
4 ಅಂಕ + ಗವಿ + ಲ = ____
5 ಚಿತೆ + ಮರ + ರಿ = ____

ಗಣಿತದಲ್ಲಿ ಗರ್ದಿ ಗಮ್ಮತ್ತು

ರಜಾ–ಮಜಾ ಆಟ

ಇಲ್ಲಿ ಕೊಟ್ಟಿರುವ ಚೌಕಾಕೃತಿಯ ಭುಜದ ಮೇಲಿನ ವೃತ್ತಗಳಲ್ಲಿ 1ರಿಂದ 8ರವರೆಗಿನ ಅಂಕಿಗಳನ್ನು ತುಂಬಿ. ಭುಜದ ನಾಲ್ಕೂ ರೇಖೆಯ ಮೇಲಿನ ಮೂರು ವೃತ್ತಗಳ ಮೊತ್ತ 13 ಆಗುವಂತೆ ಮಾಡಿ.



ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬಂಧ: 1-ಸರಿಪಡಿಸು 2 ರಾಜಗಿರಿ 3 ರಬಕವಿ 4 ವಿತರಣೆ 5 ಹೊಸಮನೆ

ಅದಲು ಬದಲು: 1 ಉಪಕಡಲೆ 2 ಯಮರಾಜ 3 ದೇವಾನಂದ 4 ರಮಾಕುಮಾರಿ

ಪದಶೋಧ: ನವರಸ ನಾಯಕ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಅಕ್ಷರ ಎಂ.ಎಸ್ ಮೈಸೂರು



ಮಾನಸ ಆರ್.ಎನ್, ದಾವಣಗೆರೆ



ಮಲ್ಲಿಕಾರ್ಜುನ ಸುನಿಲ ಕೊಣ್ಣೂರ, ಬನಹಟ್ಟಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ತೆಲಂಗಾಣ ಮುಖ್ಯಮಂತ್ರಿ ವಿರುದ್ಧ ಟೀಕೆ, ಸ್ಟಾಲಿನ್ ಜೊತೆ ಸ್ನೇಹ

ಮೋದಿ: ಅಲ್ಲಿ ವಾಗ್ದಾಳಿ, ಇಲ್ಲಿ ಸೌಹಾರ್ದ!

ಚೆನ್ನೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ರಣತಂತ್ರ ರೂಪಿಸುವ ಕುರಿತು ಕಳೆದ ಕೆಲ ದಿನಗಳಿಂದ ದಕ್ಷಿಣದ ಕೆಲ ರಾಜ್ಯಗಳ ರಾಜಕೀಯ ನೇತಾರರು ಸಭೆಗಳನ್ನು ನಡೆಸಿದ್ದರು. ಈ ಕಾವೇರಿದ ರಾಜಕೀಯ ಚಟುವಟಿಕೆಗಳು ಒಂದೆಡೆಯಾದರೆ, ಪ್ರಧಾನಿ ಮೋದಿ ಹಾಗೂ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಶನಿವಾರ ಅನ್ಯೋನ್ಯ ಪ್ರದರ್ಶಿಸಿದ್ದು ಎಲ್ಲರ ಹುಬ್ಬೇರುವಂತೆ ಮಾಡಿತು.

ಸಿಕಂದರಾಬಾದ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮೋದಿ, ತೆಲಂಗಾಣ ಮುಖ್ಯಮಂತ್ರಿ ಕೆ.ಸಿ.ಚಂದ್ರಶೇಖರ್ ರಾವ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದರು.

ತೆಲಂಗಾಣದಲ್ಲಿ ಅನುಷ್ಠಾನಗೊಳಿಸುವ ಅಭಿವೃದ್ಧಿ ಯೋಜನೆಗಳಿಗೆ ರಾಜ್ಯ ಸರ್ಕಾರ ಅಡ್ಡಗಾಲು ಹಾಕುತ್ತಿದೆ ಎಂದು ಟೀಕಾಪ್ರಹಾರ ಮಾಡಿದ್ದರು. ಮುಖ್ಯಮಂತ್ರಿ ರಾವ್, ಈ ಕಾರ್ಯಕ್ರಮದಿಂದ ದೂರವೇ ಉಳಿದಿದ್ದರು. ವಿಮಾನ ನಿಲ್ದಾಣದಲ್ಲಿ ಪ್ರಧಾನಿಯನ್ನು ಸ್ವಾಗತಿಸಲೂ ಅವರು ಹೋಗಿರಲಿಲ್ಲ.



ಚೆನ್ನೈ ವಿಮಾನ ನಿಲ್ದಾಣದಲ್ಲಿ ಶನಿವಾರ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಬರಮಾಡಿಕೊಂಡರು –ಪಿಟಿಐ ಚಿತ್ರ

ನಂತರ ಚೆನ್ನೈನಲ್ಲಿ ಬಂದಿಳಿದ ಮೋದಿ ಅವರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನೂತನ ಟರ್ಮಿನಲ್ ಉದ್ಘಾಟಿಸಿದರು. ಇದಕ್ಕೂ ಮುನ್ನ ಮುಖ್ಯಮಂತ್ರಿ ಸ್ಟಾಲಿನ್, ಮೋದಿ ಅವರನ್ನು ಸ್ವಾಗತಿಸಿದರು.

ಮುಖ್ಯಮಂತ್ರಿ ಸ್ಟಾಲಿನ್ ಅವರ ಕೈಹಿಡಿದು ಟರ್ಮಿನಲ್ ವೀಕ್ಷಣೆ ಮಾಡಿದ ಮೋದಿ, ಹಾಸ್ಯ ಚಟಾಕಿ ಹಾರಿಸಿದರಲ್ಲದೇ, ಆಗಾಗ ಸ್ಟಾಲಿನ್ ಅಂಗೈ ತಟ್ಟುತ್ತಿದ್ದುದು ಕಂಡು ಬಂತು. ರಾಜ್ಯಪಾಲ ಆರ್.ಎನ್.ರವಿ ಹಾಗೂ ರಾಜ್ಯ ಸರ್ಕಾರದ ನಡುವೆ ಕಳೆದ ಕೆಲ ದಿನಗಳಿಂದ ಸಂಘರ್ಷ ನಡೆಯುತ್ತಿದೆ. 2018ರಲ್ಲಿ ಸ್ಟರ್ಲೈಟ್ ಘಟಕ ವಿರೋಧಿಸಿ ನಡೆದ ಪ್ರತಿಭಟನೆಗಳಿಗೆ ವಿದೇಶಿ ನೆರವು ಇತ್ತು ಎಂಬುದಾಗಿ ರಾಜ್ಯಪಾಲ ರವಿ ಇತ್ತೀಚೆಗೆ ಹೇಳಿದ್ದರು. ಇದು ರಾಜಭವನ ಹಾಗೂ ರಾಜ್ಯ ಸರ್ಕಾರದ ನಡುವೆ ವಾಕ್ಸಮರಕ್ಕೆ ಕಾರಣವಾಗಿತ್ತು.

ರಾಜ್ಯಪಾಲರ ಹೇಳಿಕೆ ತಮಿಳುನಾಡು ಜನರಿಗೆ ಮಾಡಿದ ಅವಮಾನದಂತೆ ಎಂದು ಆಕ್ರೋಶ ವ್ಯಕ್ತಪಡಿಸಿದ ಡಿಎಂಕೆ ಕಾರ್ಯಕರ್ತರು, ರಾಜ್ಯಪಾಲರ ವಿರುದ್ಧ ಪ್ರತಿಭಟನೆ ನಡೆಸಿದ್ದರು.

ಕಾವೇರಿ ನದಿಮುಖಜ ಪ್ರದೇಶದಲ್ಲಿ ಪತ್ತೆಯಾದ ಮೂರು ಕಲ್ಲಿದ್ದಲು ನಿಕ್ಷೇಪಗಳನ್ನು ರಾಷ್ಟ್ರ ಮಟ್ಟದ ಹರಾಜು ಪ್ರಕ್ರಿಯೆಯಿಂದ ಹೊರಗಿಡಬೇಕು ಎಂದು ಆಗ್ರಹಿಸಿ ಕೆಲ ದಿನಗಳ ಹಿಂದೆ ಸ್ಟಾಲಿನ್ ಅವರು ಮೋದಿಗೆ ಪತ್ರ ಬರೆದಿದ್ದರು. ಇದಕ್ಕೆ ತ್ವರಿತವಾಗಿ ಸ್ಪಂದಿಸಿದ್ದ ಕೇಂದ್ರ ಸರ್ಕಾರ, ಆ 3 ಕಲ್ಲಿದ್ದಲು ನಿಕ್ಷೇಪಗಳನ್ನು ಹರಾಜು ಪ್ರಕ್ರಿಯೆಯಿಂದ ಕೈಬಿಟ್ಟಿತ್ತು.

ಕೇಂದ್ರ ಸರ್ಕಾರ ಮತ್ತು ರಾಜ್ಯಪಾಲರ ವಿರುದ್ಧ ರಾಜ್ಯ ಸರ್ಕಾರ ಹಾಗೂ ಡಿಎಂಕೆ ಪಕ್ಷವು ಸಂಘರ್ಷಕ್ಕೆ ಇಳಿದಿದ್ದ ಸಂದರ್ಭದಲ್ಲಿಯೇ ಚೆನ್ನೈಗೆ ಬಂದಿಳಿದ ಪ್ರಧಾನಿ ಅವರನ್ನು ಸ್ಟಾಲಿನ್ ಆತ್ಮೀಯವಾಗಿ ಬರಮಾಡಿಕೊಂಡು, ಅವರೊಂದಿಗೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ಅಚ್ಚರಿ ಜೊತೆಗೆ ಕುತೂಹಲಕ್ಕೂ ಕಾರಣವಾಗಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ತೈವಾನ್ ಮೇಲೆ ಗುಡುಗಿದ ಚೀನಾ

ತೈವಾನ್ ಅಧ್ಯಕ್ಷೆ– ಅಮೆರಿಕ ಸ್ಪೀಕರ್ ಭೇಟಿಗೆ ಪ್ರತೀಕಾರ

ಬೀಜಿಂಗ್ (ಎಪಿ): ತೈವಾನ್ ಅಧ್ಯಕ್ಷೆ ಸಾಯ್ ಇಂಗ್ ವೆನ್ ಅವರು ಅಮೆರಿಕ ಸಂಸತ್ತಿನ ಕೆಳ ಮನೆಯ ಸ್ಪೀಕರ್ ಕೆವಿನ್ ಮೆಕಾರ್ಥಿ ಅವರೊಂದಿಗೆ ಸಭೆ ನಡೆಸಿದ್ದಕ್ಕೆ ಪ್ರತೀಕಾರವಾಗಿ ಚೀನಾ ಯುದ್ಧನೌಕೆಗಳು ಮತ್ತು ಯುದ್ಧವಿಮಾನಗಳನ್ನು ದೇಶದತ್ತ ಶನಿವಾರ ಕಳುಹಿಸಿದೆ ಎಂದು ತೈವಾನ್ ಸರ್ಕಾರ ಆರೋಪಿಸಿದೆ.

ತೈವಾನ್‌ಗೆ ಎಚ್ಚರಿಕೆ ನೀಡುವ ಸಲುವಾಗಿ ಮೂರು ದಿನಗಳ ಸೇನಾ ತಾಲೀಮು ಆರಂಭಿಸಿರುವುದಾಗಿ ಚೀನಾ ಸೇನೆ ಘೋಷಿಸಿದೆ. ಆದರೆ, ಹಿಂದಿನಂತೆಯೇ ಸಮುದ್ರಕ್ಕೆ ಕ್ಷಿಪಣಿ ಹಾರಿಸಲಾಗುತ್ತದೆಯೇ ಎಂಬುದನ್ನು ಚೀನಾದ ಸೇನೆಯು (ಪೀಪಲ್ಸ್ ಲಿಬರೇಷನ್ ಆರ್ಮಿ–ಪಿಎಲ್‌ಎ) ಸ್ಪಷ್ಟಪಡಿಸಿಲ್ಲ.

ರಾಷ್ಟ್ರೀಯ ಸಾರ್ವಭೌಮತ್ವ ಮತ್ತು ಭೌಗೋಳಿಕ ಸಮಗ್ರತೆ ರಕ್ಷಿಸಲು ಸೇನಾ ತಾಲೀಮು ಅಗತ್ಯವಾದ ಕ್ರಮವಾಗಿದೆ ಎಂದು ಪಿಎಲ್‌ಎ ಹೇಳಿದೆ.

ಚೀನಾದ 8 ಯುದ್ಧನೌಕೆಗಳು ಮತ್ತು 48 ಯುದ್ಧ ವಿಮಾನಗಳು ತೈವಾನ್ ಸಮೀಪ ಕಂಡು ಬಂದಿವೆ. ಈ ಪೈಕಿ ಚೆಂಗ್ಡು ಜೆ–10, ಶೆನ್‌ಯಾಂಗ್ ಜೆ–11 ಮತ್ತು ಶೆನ್‌ಯಾಂಗ್ ಜೆ–16 ವಿಮಾನಗಳೂ ಸೇರಿವೆ ಎಂದು ತೈವಾನ್ ರಕ್ಷಣಾ ಸಚಿವಾಲಯ ಹೇಳಿದೆ.

‘ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳು ಸಕ್ರಿಯವಾಗಿವೆ. ಚೀನಾ ಯುದ್ಧವಿಮಾನಗಳು ಮತ್ತು ಯುದ್ಧ ನೌಕೆಗಳ ಚಲನವಲನಗಳ ಮೇಲೆ ನಿಗಾ ಇರಿಸಲು ಗಸ್ತು ನೌಕೆಗಳನ್ನು ಕಳುಹಿಸಲಾಗಿದೆ. ದೇಶದ ಭದ್ರತೆ ಮತ್ತು ಸ್ಥಿರತೆಗೆ ಧಕ್ಕೆ ತರುವ ಚೀನಾದ ಯತ್ನವನ್ನು ಖಂಡಿಸುತ್ತೇವೆ’ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಅಮೆರಿಕ ಮತ್ತು ತೈವಾನ್ ನಾಯಕರ ನಡುವೆ ಸಭೆ ನಡೆದರೆ ‘ದಿಟ್ಟ ಪ್ರತ್ಯುತ್ತರ’ ನೀಡುವುದಾಗಿ ಚೀನಾ ಹಲವು ಬಾರಿ ಎಚ್ಚರಿಕೆ ನೀಡಿತ್ತು. ಹಾಗಿದ್ದರೂ ಉಭಯ ದೇಶಗಳ ನಾಯಕರ ನಡುವೆ ಗುರುವಾರ ಸಭೆ ನಡೆದಿತ್ತು. ಸಾಯ್ ಅವರ ಅಮೆರಿಕ ಭೇಟಿಯ ಜೊತೆಗೆ ನಂಟು ಹೊಂದಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಮೇಲೆ ಚೀನಾವು ಪ್ರಯಾಣ ನಿಷೇಧ ಮತ್ತು ಆರ್ಥಿಕ ನಿರ್ಬಂಧಗಳನ್ನು ಶುಕ್ರವಾರ ಹೇರಿದೆ.

1949ರ ನಾಗರಿಕ ಯುದ್ಧದ ನಂತರ ಚೀನಾ ಮತ್ತು ತೈವಾನ್ ಪ್ರತ್ಯೇಕವಾಗಿವೆ. ದ್ವೀಪ ರಾಷ್ಟ್ರ ತೈವಾನ್‌ನಲ್ಲಿ ಸ್ವಾಯತ್ತ ಆಡಳಿತ ಇದ್ದರೂ ಅದು ಈವರೆಗೆ ಸ್ವತಂತ್ರ ರಾಷ್ಟ್ರ ಎಂದು ಘೋಷಿಸಿಕೊಂಡಿಲ್ಲ. ತೈವಾನ್ ದ್ವೀಪವು ತನಗೆ ಸೇರಿದ್ದು ಎಂದು ಚೀನಾ ಹೇಳಿಕೊಳ್ಳುತ್ತಿದೆ. ತೈವಾನ್ ಸ್ವಾತಂತ್ರ್ಯವನ್ನು ಬಯಸುವ ಪ್ರಜೆಗಳು ವಿದೇಶಿ ಅಧಿಕಾರಿಗಳನ್ನು ಭೇಟಿಯಾಗುವುದು ಯುದ್ಧಕ್ಕೆ ದಾರಿ ಮಾಡಿಕೊಡಲಿದೆ ಎಂದು ಎಚ್ಚರಿಕೆ ನೀಡಿದೆ.

ವಿರೋಧ ಪಕ್ಷಗಳಿಗೆ ಆಘಾತ ನೀಡಿದ ‘ಸುಪ್ರೀಂ’: ಮೋದಿ

ಹೈದರಾಬಾದ್ (ಪಿಟಿಐ): ವಿಪಕ್ಷಗಳ ನಾಯಕರ ವಿರುದ್ಧ ಸರ್ಕಾರವು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಮನಸ್ಸಿಗೆ ಬಂದಂತೆ ಬಳಸುತ್ತಿದೆ ಎಂದು ಆರೋಪಿಸಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸುವ ಮೂಲಕ ಸುಪ್ರೀಂ ಕೋರ್ಟ್, ಕೆಲವು ರಾಜಕೀಯ ಪಕ್ಷಗಳಿಗೆ ದೊಡ್ಡ ಆಘಾತ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

₹11,300 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಿಲಾನ್ಯಾಸ ಹಾಗೂ ಸಿಕಂದರಾಬಾದ್–ತಿರುಪತಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡಿದ ನಂತರ ಇಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

‘ತಾವು ನಡೆಸಿದ ಭ್ರಷ್ಟಾಚಾರದ ವಿರುದ್ಧ ಯಾರೊಬ್ಬರೂ ತನಿಖೆ ನಡೆಸಬಾರದು. ಈ ವಿಷಯದಲ್ಲಿ ತಮಗೆ ರಕ್ಷಣೆ ನೀಡಬೇಕು ಎಂದು ಕೋರಿ ಕೆಲ ರಾಜಕೀಯ ಪಕ್ಷಗಳು ಇತ್ತೀಚೆಗೆ ಕೋರ್ಟ್ ಮೆಟ್ಟಿಲೇರಿದ್ದವು. ಆದರೆ, ಅರ್ಜಿಯನ್ನು ವಜಾಗೊಳಿಸುವ ಮೂಲಕ ಸುಪ್ರೀಂ ಕೋರ್ಟ್ ಈ ರಾಜಕೀಯ ಪಕ್ಷಗಳಿಗೆ ಆಘಾತ ನೀಡಿತು’ ಎಂದರು.

> **ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರಕ್ಕೆ ಅಂಥ ವ್ಯತ್ಯಾಸವೇನೂ ಇಲ್ಲ. ಕುಟುಂಬ ರಾಜಕಾರಣ ಇದ್ದಲ್ಲಿ ಭ್ರಷ್ಟಾಚಾರ ಹುಟ್ಟಿಕೊಳ್ಳುತ್ತದೆ**
> **ನರೇಂದ್ರ ಮೋದಿ,** ಪ್ರಧಾನಿ

ಕಾಂಗ್ರೆಸ್ ನೇತೃತ್ವದಲ್ಲಿ 14 ಪಕ್ಷಗಳು ಈ ವಿಷಯವಾಗಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದ ಸುಪ್ರೀಂ ಕೋರ್ಟ್, ‘ರಾಜಕಾರಣಿಗಳು ಸಾಮಾನ್ಯ ಪ್ರಜೆಗಳಿಗಿಂತ ಹೆಚ್ಚಿನ ರಕ್ಷಣೆ ಹೊಂದಿಲ್ಲ’ ಎಂದು ಹೇಳಿತ್ತು.

ವಾಗ್ದಾಳಿ: ಕೆಲ ರಾಜಕೀಯ ನಾಯಕರು ಕುಟುಂಬ ರಾಜಕಾರಣ ಹಾಗೂ ಭಾರಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ವಾಗ್ದಾಳಿ ನಡೆಸಿದ ಅವರು ಯಾರ ಹೆಸರನ್ನೂ ಪ್ರಸ್ತಾಪಿಸಲಿಲ್ಲ.

‘ತೆಲಂಗಾಣ ಜನರ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗುತ್ತಿರುವ ಯೋಜನೆಗಳಲ್ಲಿಯೂ ಲಾಭ ಮಾಡಿಕೊಳ್ಳುವುದಕ್ಕಾಗಿ ಕುಟುಂಬ ರಾಜಕಾರಣದಲ್ಲಿ ನಿರತ ಕೆಲ ಜನರು ಪ್ರಯತ್ನಿಸುತ್ತಿದ್ದಾರೆ’ ಎಂದು ಮೋದಿ ಟೀಕಿಸಿದರು.

ತೆಲಂಗಾಣದ ಬಡ ಜನರಿಗೆ ವಿತರಿಸುವ ಸಲುವಾಗಿ ನೀಡಿದ್ದ ಪಡಿತರ ಧಾನ್ಯಗಳನ್ನು ಕುಟುಂಬ ರಾಜಕಾರಣ ಮಾಡುತ್ತಿರುವ ಕೆಲವರು ಲೂಟಿ ಮಾಡಿದರು ಎಂದರು.

ರಾಜ್ಯದ ಜನರಿಗಾಗಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ಕೆ ಅಡ್ಡಿಪಡಿಸಬೇಡಿ ಎಂದು ಅವರು ತೆಲಂಗಾಣ ಮುಖ್ಯಮಂತ್ರಿ ಕೆ.ಸಿ.ಚಂದ್ರಶೇಖರರಾವ್ ನೇತೃತ್ವದ ಸರ್ಕಾರಕ್ಕೆ ಮನವಿ ಮಾಡಿದರು.

ಕೇಂದ್ರ ಸರ್ಕಾರವು ದಕ್ಷಿಣದ ರಾಜ್ಯಗಳ ಅಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೆ, ಕೆಲ ರಾಜ್ಯಗಳಲ್ಲಿನ ಆಡಳಿತಾರೂಢ ಪಕ್ಷಗಳು ಸಹಕಾರ ನೀಡುತ್ತಿಲ್ಲ. ಇದು ನೋವಿನ ಸಂಗತಿ ಎಂದರು.

ಮುಖ್ಯಾಂಶಗಳು

- ಕೇಂದ್ರೀಯ ತನಿಖಾ ಸಂಸ್ಥೆ ದುರ್ಬಳಕೆ ಆರೋಪ
- ವಿಪಕ್ಷಗಳ ಅರ್ಜಿ ತಿರಸ್ಕರಿಸಿದ್ದ ಸುಪ್ರೀಂಕೋರ್ಟ್
- ₹11,300 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಿಲಾನ್ಯಾಸ

ವಂದೇ ಭಾರತ್ ರೈಲುಗಳಿಗೆ ಚಾಲನೆ

ಪ್ರಧಾನಿ ನರೇಂದ್ರ ಮೋದಿ ಅವರು ಚೆನ್ನೈ–ಕೊಯಮತ್ತೂರು ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಶನಿವಾರ ಇಲ್ಲಿನ ಡಾ.ಎಂ.ಜಿ.ಆರ್ ಚೆನ್ನೈ ಸೆಂಟ್ರಲ್ ರೈಲು ನಿಲ್ದಾಣದಲ್ಲಿ ಹಸಿರು ನಿಶಾನೆ ತೋರಿದರು.

ರೈಲಿನಲ್ಲಿ ಪ್ರಯಾಣಿಸುವ ವೇಳೆ ಮೋದಿ ಅವರು ಮಕ್ಕಳೊಂದಿಗೆ ಸಂವಾದ ನಡೆಸಿದರು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಕೇಂದ್ರ ಸಚಿವ ಎಲ್.ಮುರುಗನ್ ಇದ್ದರು.

ರಾಜಧಾನಿ ಚೆನ್ನೈ ಮತ್ತು ಕೈಗಾರಿಕೆಗಳ ನಗರ ಕೊಯಮತ್ತೂರು ನಡುವಣ ಪ್ರಯಾಣದ ಅವಧಿಯನ್ನು ಈ ರೈಲು ಒಂದು ಗಂಟೆಗೂ ಹೆಚ್ಚು ಕಡಿತಗೊಳಿಸಲಿದೆ ಎಂದು ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

ಈ ರೈಲಿನಲ್ಲಿ ಅತ್ಯಾಧುನಿಕ ಸೌಲಭ್ಯಗಳು ಹಾಗೂ ಡಿಕ್ಕಿಯಿಂದ ಸ್ವಯಂಚಾಲಿತವಾಗಿ ರಕ್ಷಣೆ ನೀಡಬಲ್ಲ ‘ಕವಚ್’ ಎಂಬ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.

ಇದಕ್ಕೆ ಮೊದಲು ಪ್ರಧಾನಿ ಅವರು ಹೈದರಾಬಾದ್‌ನಲ್ಲಿ ಸಿಕಂದರಾಬಾದ್– ತಿರುಪತಿ ವಂದೇ ಭಾರತ್ ರೈಲಿಗೆ ಚಾಲನೆ ನೀಡಿದ್ದರು.

ತಮಿಳು ಸಂಸ್ಕೃತಿ, ಪರಂಪರೆ ಪ್ರತಿಬಿಂಬಿಸುವ ವಿನ್ಯಾಸ

ಚೆನ್ನೈ ವಿಮಾನನಿಲ್ದಾಣ ನೂತನ ಟರ್ಮಿನಲ್ ಉದ್ಘಾಟನೆ

ಚೆನ್ನೈ (ಪಿಟಿಐ): ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ₹1,260 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ನೂತನ ಸಮಗ್ರ ಟರ್ಮಿನಲ್ ಕಟ್ಟಡವನ್ನು (ಎನ್‌ಐಟಿಬಿ) ಪ್ರಧಾನಿ ನರೇಂದ್ರ ಮೋದಿ ಶನಿವಾರ ಉದ್ಘಾಟಿಸಿದರು.

ತಮಿಳುನಾಡಿನ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವಂತೆ ಈ ನೂತನ ಟರ್ಮಿನಲ್ ಕಟ್ಟಡವನ್ನು ವಿನ್ಯಾಸಗೊಳಿಸಲಾಗಿದೆ.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ರಾಜ್ಯಪಾಲ ಆರ್.ಎನ್.ರವಿ, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಉಪಸ್ಥಿತರಿದ್ದರು.

ಉದ್ಘಾಟನೆ ನಂತರ, ನೂತನ ಟರ್ಮಿನಲ್ ಕಟ್ಟಡವನ್ನು ವೀಕ್ಷಿಸಿದ ಮೋದಿ ಅವರಿಗೆ ಸ್ಟಾಲಿನ್ ಸಾಥ್ ನೀಡಿದರು. ಕಟ್ಟಡ ವೀಕ್ಷಣೆ ವೇಳೆ ಸ್ಟಾಲಿನ್ ಅವರ ಕೈಹಿಡಿದು ಹೆಜ್ಜೆ ಹಾಕಿದ ಮೋದಿ, ಅವರ ಬೆನ್ನು ತಟ್ಟಿದ್ದು ಕಂಡುಬಂತು.

‘ಸಾಮರ್ಥ್ಯ ಹೆಚ್ಚಳ’: ನೂತನ ಟರ್ಮಿನಲ್‌ನಿಂದಾಗಿ, ಹೆಚ್ಚಿನ ಸಂಖ್ಯೆಯ ಪ್ರಯಾಣಿಕರಿಗೆ ಸೇವೆ ಒದಗಿಸಲು ಸಾಧ್ಯವಾಗಲಿದೆ. ಸದ್ಯ, ಈ ವಿಮಾನ ನಿಲ್ದಾಣವು ವರ್ಷಕ್ಕೆ 2.3 ಕೋಟಿ ಪ್ರಯಾಣಿಕರಿಗೆ ಸೇವೆ ಒದಗಿಸುವ ಸಾಮರ್ಥ್ಯ ಹೊಂದಿದ್ದು, ಇನ್ನು, ಮುಂದೆ ವಾರ್ಷಿಕ 3 ಕೋಟಿ ಪ್ರಯಾಣಿಕರಿಗೆ ಸೇವೆ ಒದಗಿಸಲು ಸಾಧ್ಯವಾಗಲಿದೆ’ ಎಂದು ಸರ್ಕಾರ ಹೇಳಿದೆ.

‘ನೂತನ ಟರ್ಮಿನಲ್ ತಮಿಳು ಸಂಸ್ಕೃತಿಯನ್ನು ಪ್ರತಿಫಲಿಸುತ್ತದೆ. ಕೋಲಂ, ಸೀರೆ, ದೇವಸ್ಥಾನಗಳು ಹಾಗೂ ನೈಸರ್ಗಿಕ ತಾಣಗಳು ಸೇರಿದಂತೆ ರಾಜ್ಯದ ಶ್ರೀಮಂತ ಪರಂಪರೆಯನ್ನು ಬಿಂಬಿಸುವಂತೆ ಈ ಕಟ್ಟಡ ನಿರ್ಮಾಣವಾಗಿದೆ ಎಂದಿದೆ.

‘ತಾಳೆ ಮರಗಳನ್ನೇ ಹೋಲುವ ರೀತಿಯಲ್ಲಿ ಕಂಬಗಳನ್ನು ವಿನ್ಯಾಸಗೊಳಿಸಲಾಗಿದೆ. ಚಾವಣಿಗಳನ್ನು ರಂಗೋಲಿಗಳಿಂದ ಅಲಂಕರಿಸಲಾಗಿದೆ. ಅವುಗಳಿಗೆ ಅಳವಡಿಸಲಾಗಿರುವ ವಿಶಿಷ್ಟ ವಿದ್ಯುತ್‌ದೀಪಗಳು ಮತ್ತಷ್ಟು ಗಮನ ಸೆಳೆಯುವಂತೆ ಮಾಡುತ್ತವೆ’ ಎಂದು ಭಾರತೀಯ ವಿಮಾನನಿಲ್ದಾಣಗಳ ಪ್ರಾಧಿಕಾರ (ಎಎಐ) ತಿಳಿಸಿದೆ.

ಭರತನಾಟ್ಯದ ವಿವಿಧ ಭಂಗಿಗಳು ಹಾಗೂ ಕಲಾವಿದರ ವಸ್ತ್ರಗಳನ್ನು ಪ್ರತಿಬಿಂಬಿಸುವಂತೆ ಅಲೆಗಳನ್ನು ಹೋಲುವ ರೀತಿಯಲ್ಲಿ ಚಾವಣಿಯನ್ನು ನಿರ್ಮಿಸಲಾಗಿದೆ ಎಂದೂ ಎಎಐ ಹೇಳಿದೆ.



ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನೂತನ ಸಮಗ್ರ ಟರ್ಮಿನಲ್ ಕಟ್ಟಡದ ನೋಟ –ಪಿಟಿಐ ಚಿತ್ರ

ಇರಾನ್: ವಸ್ತ್ರ ಸಂಹಿತೆ ಪಾಲನೆಗೆ ಕ್ಯಾಮೆರಾ ಕಣ್ಗಾವಲು

ಟೆಹರಾನ್ (ರಾಯಿಟರ್ಸ್): ಕಡ್ಡಾಯ ವಸ್ತ್ರ ಸಂಹಿತೆಯನ್ನು ಧಿಕ್ಕರಿಸುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಅಂಥವರನ್ನು ಗುರುತಿಸಿ ಅವರಿಗೆ ದಂಡ ವಿಧಿಸುವುದಕ್ಕಾಗಿ ಸಾರ್ವಜನಿಕ ಸ್ಥಳ ಮತ್ತು ರಸ್ತೆಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ ಎಂದು ಪೊಲೀಸರು ಶನಿವಾರ ಘೋಷಿಸಿದ್ದಾರೆ.

ವಸ್ತ್ರ ಸಂಹಿತೆಯನ್ನು ಪಾಲಿಸದ ಮಹಿಳೆಯರನ್ನು ಗುರುತಿಸಿ ಅವರಿಗೆ ‘ಪರಿಣಾಮಗಳ ಬಗ್ಗೆ ಎಚ್ಚರಿಕೆಯ ಸಂದೇಶ’ವನ್ನು ಕಳುಹಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಉದ್ಯಮ ಸಂಸ್ಥೆಗಳಲ್ಲಿ ಸಾಮಾಜಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಹಿಜಾಬ್ ನಿಯಮವನ್ನು ಉಲ್ಲಂಘಿಸಿದ ಆರೋಪದ ಮೇಲೆ 22 ವರ್ಷದ ಕುರ್ದ್ ಸಮುದಾಯಕ್ಕೆ ಸೇರಿದ ಮಹಿಳೆ ಮಹ್ಸಾ ಅಮೀನಿ ಎಂಬವರನ್ನು ಬಂಧಿಸಲಾಗಿತ್ತು. ಪೊಲೀಸರ ವಶದಲ್ಲಿದ್ದಾಗಲೇ ಅವರು ಮೃತಪಟ್ಟಿದ್ದರು. ಇದಾದ ಬಳಿಕ ಇರಾನ್ ಮಹಿಳೆಯರ ಆಕ್ರೋಶ ಭುಗಿಲೆದ್ದಿದೆ.

ಹಿಜಾಬ್ ತೊರೆಯುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹62,360
ಒಡವೆ ಚಿನ್ನ 1ಗ್ರಾಂ	₹5,738
ಬೆಳ್ಳಿ ಕೆ.ಜಿಗೆ	₹75,900

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹415

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720 (1715)
ಸೋಯಾ (ರಿಫೈನ್ಡ್)	₹1045 (1050)
ಸೂರ್ಯಕಾಂತಿ (ರಿಫೈನ್ಡ್)	₹1075 (1075)
ಪಾಮೋಲಿನ್	₹960 (960)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹132

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14750
ಎಸಿ	₹7700
ಆರ್‌ಪಿ	₹10400
ಆರ್‌ಸಿ	₹5340

ಮುಂಬೈ ಧಾರಣೆ

ಶೇಂಗಾ

8–4–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730 (1725)
ಒಂದು ವಾರದ ಡೆಲಿವರಿ	1725 (1720)
ಸೋಯಾ ಕಚ್ಚಾ	940 (945)
ಪಾಮ್ ವಾರದ ಡೆಲಿವರಿ	960 (958)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,100 (60,150)
ಬೆಳ್ಳಿ ಕೆ.ಜಿ
73,800 (74,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಅಮೆರಿಕ ಆರ್ಥಿಕತೆ ಬೆಳೆಯಲಿದೆ’

ವಾಷಿಂಗ್ಟನ್ (ಎಎಫ್‌ಪಿ): ವಿಶ್ವದ ಅತಿದೊಡ್ಡ ಆರ್ಥಿಕತೆಯು ಬೆಳವಣಿಗೆ ಕಾಣುವುದನ್ನು ಮುಂದುವರಿಸುವ ನಿರೀಕ್ಷೆ ಇದೆ ಎಂದು ಅಮೆರಿಕದ ಹಣಕಾಸು ಸಚಿವೆ ಜಾನೆಟ್ ಯೆಲನ್ ಹೇಳಿದ್ದಾರೆ. ಅಮೆರಿಕದ ಬ್ಯಾಂಕಿಂಗ್ ವಲಯದ ಬಿಕ್ಕಟ್ಟಿನಿಂದಾಗಿ ಆರ್ಥಿಕ ಹಿಂಜರಿತದ ಆತಂಕವು ಇನ್ನಷ್ಟು ಹೆಚ್ಚಾಗಿರುವ ಬೆನ್ನಲ್ಲೇ ಈ ರೀತಿ ಹೇಳಿದ್ದಾರೆ.

ಅಮೆರಿಕದ ಆರ್ಥಿಕತೆಯು ಬೆಳೆಯುತ್ತದೆ ಎಂದು ನಾನು ನಿರೀಕ್ಷಿಸುತ್ತೇನೆ. ಕಾರ್ಮಿಕ ಮಾರುಕಟ್ಟೆ ಬಲಿಷ್ಠವಾಗಿಯೇ ಇರಲಿದೆ. ಹಣದುಬ್ಬರವು ಕಡಿಮೆ ಆಗಲಿದೆ ಎಂದು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಸದ್ಯದ ಬಿಕ್ಕಟ್ಟು ಮುಗಿದಿಲ್ಲ. ಮುಂಬರುವ ವರ್ಷಗಳಲ್ಲಿಯೂ ಪ್ರತಿಕೂಲ ಪರಿಣಾಮ ಎದುರಿಸಬೇಕಾಗಿ ಬರಬಹುದು ಎಂದು ಜೆಪಿ ಮೋರ್ಗನ್ ಚೇಸ್‌ನ ಮುಖ್ಯ ಕಾರ್ಯನಿರ್ವಾಹಕ ಜೆಮಿ ಡಿಮನ್ ಅವರು ಈಚೆಗಷ್ಟೇ ಎಚ್ಚರಿಕೆ ನೀಡಿದ್ದರು. ಆ ಬಳಿಕ ಯೆಲನ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಸದ್ಯದ ಪರಿಸ್ಥಿತಿಯು 2008ರ ಆರ್ಥಿಕ ಬಿಕ್ಕಟ್ಟಿನಂತೆ ಇಲ್ಲ. ಆದರೆ, ಸಮಸ್ಯೆಗಳು ಯಾವಾಗ ಕೊನೆಗೊಳ್ಳಲಿವೆ ಎನ್ನುವುದು ಸ್ಪಷ್ಟವಾಗಿಲ್ಲ ಎಂದೂ ಡಿಮನ್ ಹೇಳಿದ್ದಾರೆ.



ಯೆಲನ್

ಸಿಲಿಕಾನ್ ವ್ಯಾಲಿ ಬ್ಯಾಂಕ್ (ಎಸ್‌ವಿಬಿ) ಮತ್ತು ಸಿಗ್ನೆಚರ್ ಬ್ಯಾಂಕ್‌ಗಳು ಕಳೆದ ತಿಂಗಳು ದಿವಾಳಿ ಆಗುವ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕುಸಿಯುವಂತೆ ಮಾಡಿದೆ. ಅಮೆರಿಕದ ಹಣಕಾಸು ವ್ಯವಸ್ಥೆಯ ಮೇಲೆ ಅದರ ಪ್ರತಿಕೂಲ ಪರಿಣಾಮಗಳನ್ನು ತಡೆಯಲು ಅಮೆರಿಕದ ಆಡಳಿತ, ಹಣಕಾಸು ಸಚಿವಾಲಯ ಮತ್ತು ಫೆಡರಲ್ ರಿಸರ್ವ್ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತಾಗಿದೆ.

ಸದ್ಯ ಪರಿಸ್ಥಿತಿ ತುಸು ಸುಧಾರಿಸಿದೆ. ಆದರೆ, ಬ್ಯಾಂಕ್‌ಗಳು ಸಾಲ ನೀಡುವ ನಿಯಮಗಳನ್ನು ಬಿಗಿಗೊಳಿಸಲಿದ್ದು, ಗೃಹ ಮತ್ತು ಉದ್ದಿಮೆಗಳಿಗೆ ಸಾಲದ ಲಭ್ಯತೆಯನ್ನು ಕಡಿಮೆ ಮಾಡುತ್ತಿವೆ. ಇದು ಅಮೆರಿಕದ ಹಣಕಾಸು ವ್ಯವಸ್ಥೆಯಲ್ಲಿನ ಅಸ್ಥಿರತೆಯನ್ನು ಮುಂದುವರಿಯುವಂತೆ ಮಾಡುವ ಸಾಧ್ಯತೆ ಇದೆ ಎಂದು ವಿಶ್ಲೇಷಕರು ಎಚ್ಚರಿಕೆ ನೀಡಿದ್ದಾರೆ.

ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯು ಭದ್ರವಾಗಿದ್ದು, ಚೇತರಿಸಿಕೊಳ್ಳುವ ಗುಣ ಹೊಂದಿದೆ. ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಯೆಲನ್ ಹೇಳಿದ್ದಾರೆ.

ಸಿಎನ್‌ಜಿ, ಪಿಎನ್‌ಜಿ ದರ ಇಳಿಕೆ

ನವದೆಹಲಿ (ಪಿಟಿಐ): ಸಿಎನ್‌ಜಿ ಹಾಗೂ ಕೊಳವೆ ಮೂಲಕ ಮನೆಗಳಿಗೆ ತಲುಪಿಸುವ ಅಡುಗೆ ಅನಿಲದ (ಪಿಎನ್‌ಜಿ) ದರ ದೆಹಲಿಯಲ್ಲಿ ಕೆ.ಜಿಗೆ ₹6ರ ವರೆಗೆ ಇಳಿಕೆ ಆಗಿದೆ. ಎರಡು ವರ್ಷಗಳಲ್ಲಿ ಮೊದಲ ಇಳಿಕೆ ಇದಾಗಿದೆ.

ದರ ಪರಿಷ್ಕರಣೆಯಿಂದ ದೆಹಲಿಯಲ್ಲಿ ಕೆ.ಜಿ ಸಿಎನ್‌ಜಿ ದರ ₹79.56ರಿಂದ ₹73.59ಕ್ಕೆ ಇಳಿಕೆ ಆಗಿದೆ. ಪಿಎನ್‌ಜಿ ದರ ₹53.59 ರಿಂದ ₹48.59ಕ್ಕೆ (₹5) ಇಳಿಕೆ ಕಂಡಿದೆ ಎಂದು ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್ (ಐಜಿಎಲ್) ಟ್ವೀಟ್ ಮಾಡಿದೆ.

ಅದಾನಿ ಟೋಟಲ್ ಗ್ಯಾಸ್ ಕಂಪನಿಯು ಶನಿವಾರದಿಂದ ಜಾರಿಗೆ ಬರುವಂತೆ ಸಿಎನ್‌ಜಿ ದರ ಕೆ.ಜಿಗೆ ₹8.13ರಷ್ಟು ಇಳಿಕೆ ಮಾಡಿದೆ. ಇದರಿಂದ ವಡೋದರದಾದಲ್ಲಿ ನೀಡಿಕೆ ದರ ಕೆ.ಜಿಗೆ ₹72.03 ಮತ್ತು ಅಹಮದಾಬಾದ್‌ನಲ್ಲಿ ₹ 73.29ಕ್ಕೆ ಇಳಿಕೆ ಆಗಿದೆ. ಪಿಎನ್‌ಜಿ ದರ (ತೆರಿಗೆಗಳನ್ನು ಹೊರತುಪಡಿಸಿ) ಪ್ರತಿ ಕ್ಯುಬಿಕ್ ಮೀಟರ್‌ಗೆ ₹ 46.84ಕ್ಕೆ ಇಳಿಕೆ ಕಂಡಿದೆ.

ಕೇಂದ್ರ ಸರ್ಕಾರವು ನೈಸರ್ಗಿಕ ಅನಿಲದ ಬೆಲೆಯನ್ನು ನಿರ್ಧರಿಸುವ ಸೂತ್ರವನ್ನು ಪರಿಷ್ಕರಿಸಿರುವುದರಿಂದ ಈ ಬದಲಾವಣೆ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಯೋಜನೆ ಆರಂಭ ಆಗಿ ಎಂಟು ವರ್ಷ; ಸಚಿವೆ ನಿರ್ಮಲಾ ಮಾಹಿತಿ

ಮುದ್ರಾ: ₹ 23 ಲಕ್ಷ ಕೋಟಿ ಸಾಲ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ (ಪಿಎಂಎಂವೈ) ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಎಂಟು ವರ್ಷಗಳಲ್ಲಿ 40.82 ಕೋಟಿ ಫಲಾನುಭವಿಗಳಿಗೆ ₹23.2 ಲಕ್ಷ ಕೋಟಿ ಸಾಲ ಮಂಜೂರು ಮಾಡಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಯೋಜನೆಯ ಎಂಟನೇ ವರ್ಷಾಚರಣೆಯ ಅಂಗವಾಗಿ ಮಾತನಾಡಿದ ಅವರು ಯೋಜನೆ ಜಾರಿಯಾದಾಗಿನಿಂದ 2023ರ ಮಾರ್ಚ್ 24ರವರೆಗೆ ₹23.2 ಲಕ್ಷ ಕೋಟಿ ಮಂಜೂರು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.



ಕಾರ್ಪೊರೇಟ್ ಅಲ್ಲದ ಮತ್ತು ಕೃಷಿಯೇತರ ಸಣ್ಣ/ಕಿರು ಉದ್ದಿಮೆಗಳಿಗೆ ಜಾಮೀನು ರಹಿತವಾಗಿ ₹10 ಲಕ್ಷದವರೆಗೆ ಸುಲಭವಾಗಿ ಸಾಲ ಸಿಗುವಂತೆ ಮಾಡುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರು 2015ರ ಏಪ್ರಿಲ್ 8ರಂದು ಮುದ್ರಾ ಯೋಜನೆಗೆ ಚಾಲನೆ ನೀಡಿದರು.

ಯೋಜನೆಯಡಿ ಮೂರು ಹಂತಗಳಲ್ಲಿ 1. ಶಿಶು (₹50 ಸಾವಿರದವರೆಗೆ) 2. ಕಿಶೋರ (₹50 ಸಾವಿರದಿಂದ ₹5 ಲಕ್ಷ) ಮತ್ತು 3. ತರುಣ (₹10 ಲಕ್ಷದವರೆಗೆ) ಸಾಲ ಸೌಲಭ್ಯ ನೀಡಲಾಗುತ್ತದೆ.

ಯೋಜನೆಯಡಿ ಇರುವ ಒಟ್ಟು ಖಾತೆಗಳ ಪೈಕಿ ಶೇ 68ರಷ್ಟು ಖಾತೆಗಳು ಮಹಿಳಾ ಉದ್ಯಮಿಗಳೇ ಹೊಂದಿದ್ದಾರೆ ಎಂದು ನಿರ್ಮಲಾ ತಿಳಿಸಿದ್ದಾರೆ.

ಎಂಎಸ್‌ಎಂಇಗಳ ಬೆಳವಣಿಗೆಯು ‘ಭಾರತದಲ್ಲಿ ತಯಾರಿಸಿ’ ಅಭಿಯಾನಕ್ಕೆ ಹೆಚ್ಚಿನ ಕೊಡುಗೆ ನೀಡುತ್ತಿದೆ. ಎಂಎಸ್‌ಎಂಇಗಳು ಬಲಿಷ್ಠವಾಗಿದ್ದರೆ ದೇಶಿ ಮತ್ತು ವಿದೇಶಿ ಮಾರುಕಟ್ಟೆಗೆ ಅಗತ್ಯವಾದ ಉತ್ಪನ್ನಗಳ ತಯಾರಿಕೆ ಹೆಚ್ಚಾಗಲು ಕಾರಣವಾಗಲಿದೆ. ಮುದ್ರಾ ಯೋಜನೆಯಿಂದಾಗಿ ತಳಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ ಎಂದು ಅವರು ಹೇಳಿದ್ದಾರೆ.

ಯೋಜನೆಯ ಲಾಭ ಪಡೆದು ಸಂಪತ್ತು ಸೃಷ್ಟಿಗೆ ಕಾರಣ ಆಗಿರುವ ಎಲ್ಲ ಉದ್ಯಮಿಗಳ ಉತ್ಸಾಹಕ್ಕೆ ನಾನು ವಂದಿಸುತ್ತೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದಾರೆ.


ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ), ಕಿರು ಹಣಕಾಸು ಸಂಸ್ಥೆಗಳು (ಎಂಎಫ್‌ಐ) ಮತ್ತು ಇತರೆ ಹಣಕಾಸು ಮಧ್ಯವರ್ತಿಗಳು ಸಾಲ ಸೌಲಭ್ಯ ನೀಡುತ್ತಿವೆ ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಎಫ್‌ಪಿಐ: 2 ಹಣಕಾಸು ವರ್ಷಗಳಲ್ಲಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ಷೇರುಪೇಟೆಗಳಲ್ಲಿ ಬಂಡವಾಳ ಹೂಡಿಕೆ ಮಾಡಲು ಆರಂಭಿಸಿದಾಗಿನಿಂದ ಇದೇ ಮೊದಲ ಬಾರಿಗೆ ಸತತ ಎರಡು ಹಣಕಾಸು ವರ್ಷಗಳಲ್ಲಿ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದರು.

1993 ರಿಂದ ಎಫ್‌ಪಿಐ ಭಾರತದ ಮಾರುಕಟ್ಟೆಗಳಲ್ಲಿ ವಹಿವಾಟು ನಡೆಸುತ್ತಿದ್ದಾರೆ. 2021–22ನೇ ಹಣಕಾಸು ವರ್ಷದಲ್ಲಿ ₹1,40,010 ಕೋಟಿ ಮತ್ತು 2022–23ನೇ ಹಣಕಾಸು ವರ್ಷದಲ್ಲಿ ₹37,632 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.



ಭಾರತದ ಷೇರುಪೇಟೆಗಳ ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿಯೇ ಇದ್ದರೂ ಸದ್ಯದ ಮಟ್ಟಿಗೆ ತುಸು ಇಳಿಕೆ ಕಂಡಿದೆ. 2023–24ನೇ ಹಣಕಾಸು ವರ್ಷದಲ್ಲಿ ಭಾರತವು ಉತ್ತಮ ಬೆಳವಣಿಗೆ ಕಾಣುವ ಸಾಮರ್ಥ್ಯ ಹೊಂದಿರುವುದರಿಂದ ವಿದೇಶಿ ಬಂಡವಾಳ ಒಳಹರಿವು ಮತ್ತೆ ಹೆಚ್ಚಾಗುವ ಸಾಧ್ಯತೆ ಇದೆ ಎಂದೂ ಅವರು ಹೇಳಿದರು.

ಮಾರ್ಚ್‌ನಲ್ಲಿ ಕಳೆದ ಆರು ದಿನಗಳ ವಹಿವಾಟಿನಲ್ಲಿ ಎಫ್‌ಪಿಐ ₹4,738 ಕೋಟಿ ಹೂಡಿಕೆ ಮಾಡಿದ್ದಾರೆ. ಅಮೆರಿಕದ ಡಾಲರ್ ಮೌಲ್ಯ ಇಳಿಕೆ ಕಾಣುತ್ತಿರುವುದು ಹಾಗೂ ಬಾಂಡ್ ಗಳಿಕೆ ಕಡಿಮೆ ಆಗುತ್ತಿರುವ ಕಾರಣಗಳಿಂದಾಗಿ ಹೂಡಿಕೆದಾರರು ಹೂಡಿಕೆ ಮಾಡುತ್ತಿದ್ದಾರೆ. ಆಟೊಮೊಬೈಲ್, ಹಣಕಾಸು ಸೇವೆಗಳು, ಬಂಡವಾಳ ಸರಕುಗಳು, ವಿದ್ಯುತ್, ಲೋಹ ಮತ್ತು ಗಣಿ ವಲಯದ ಷೇರುಗಳನ್ನು ಖರೀದಿಸುತ್ತಿದ್ದಾರೆ. ಐ.ಟಿ. ಷೇರುಗಳನ್ನು ಮಾರಾಟ ಮಾಡುವುದು ಮುಂದುವರಿಸಿದ್ದಾರೆ ಎಂದು ಅವರು ತಿಳಿಸಿದರು.

ಡೆಕಾಥ್ಲಾನ್: ತೇಜಸ್ವಿನ್ ಶಂಕರ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ತೇಜಸ್ವಿನ್ ಶಂಕರ್ ಅವರು ಅಮೆರಿಕದ ಅರಿಜೋನಾದಲ್ಲಿ ನಡೆದ ‘ಜಿಮ್ ಕ್ಲಿಕ್ ಶೂಟೌಟ್ ಅಥ್ಲೆಟಿಕ್ಸ್’ನ ಡೆಕಾಥ್ಲಾನ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸುವ ಅವಕಾಶವನ್ನು ಅವರು ಕೂದಲೆಳೆ ಅಂತರದಿಂದ ತಪ್ಪಿಸಿಕೊಂಡರು.

2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕೂಟದ ಕಂಚು ವಿಜೇತ ತೇಜಸ್ವಿನ್, 10 ಸ್ಪರ್ಧೆಗಳ ಡೆಕಾಥ್ಲಾನ್‌ನಲ್ಲಿ ಒಟ್ಟು 7,648 ಪಾಯಿಂಟ್ಸ್ ಕಲೆಹಾಕಿದರು.



ತೇಜಸ್ವಿನ್ ಶಂಕರ್

ರಾಷ್ಟ್ರೀಯ ದಾಖಲೆ ಭರತೀಂದರ್ ಸಿಂಗ್ ಹೆಸರಿನಲ್ಲಿದೆ. 2011ರಲ್ಲಿ ಅವರು ಸ್ಪರ್ಧೆಯೊಂದರಲ್ಲಿ 7,658 ಪಾಯಿಂಟ್ಸ್ ಗಳಿಸಿದ್ದರು.

ಅಮೆರಿಕದ ಟ್ರ್ಯಾಕ್ ಆ್ಯಂಡ್ ಫೀಲ್ಡ್ ಸಂಸ್ಥೆಯ ಮಾನ್ಯತೆ ಹೊಂದಿರುವ, ಅರಿಜೋನಾ ವಿಶ್ವವಿದ್ಯಾಲಯದ ಟಕ್ಸನ್ ಕ್ಯಾಂಪಸ್‌ನಲ್ಲಿ ಈ ಸ್ಪರ್ಧೆ ನಡೆಯಿತು. ಅಮೆರಿಕದ ನೆಬ್ರಾಸ್ಕಾ ಪ್ರಾಂತ್ಯದ ಟಿಲ್ ಸ್ಟೆನ್‌ಪೋರ್ಥ್ (7,845 ಪಾಯಿಂಟ್ಸ್) ಚಿನ್ನದ ಪದಕ ಗೆದ್ದರು.

24 ವರ್ಷದ ತೇಜಸ್ವಿನ್, ಕನ್ಸಾಸ್ ಸ್ಟೇಟ್ ವಿವಿಯಲ್ಲಿ ಕಾಲೇಜು ವ್ಯಾಸಂಗ ಮುಗಿಸಿದ್ದು, ಅಮೆರಿಕದಲ್ಲಿ ಉದ್ಯೋಗದಲ್ಲಿದ್ದಾರೆ. ಈ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ ತಪ್ಪಿಸಿಕೊಂಡರೂ ಏಷ್ಯನ್ ಗೇಮ್ಸ್‌ಗೆ ಭಾರತ ಅಥ್ಲೆಟಿಕ್ಸ್ ಫೆಡರೇಷನ್ ನಿಗದಿಪಡಿಸಿರುವ ಮಾನದಂಡವನ್ನು (7,500 ಪಾಯಿಂಟ್ಸ್) ಅವರು ದಾಟಿದರು.

ಫುಟ್‌ಬಾಲ್: ಬಿಎಫ್‌ಸಿ–ಶ್ರೀನಿಧಿ ಡೆಕ್ಕನ್ ಪಂದ್ಯ ಡ್ರಾ

ಕೋಯಿಕ್ಕೋಡ್: ಬೆಂಗಳೂರು ಎಫ್‌ಸಿ ತಂಡವು ಇಲ್ಲಿ ನಡೆದ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಡ್ರಾ ಸಾಧಿಸಿತು.

ಇ.ಎಂ.ಎಸ್. ಕಾರ್ಪೊರೇಷನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ 1–1ರಿಂದ ಶ್ರೀನಿಧಿ ಡೆಕ್ಕನ್ ಎಫ್‌ಸಿ ತಂಡದೊಂದಿಗೆ ಸಮಬಲ ಸಾಧಿಸಿತು.

ಫ್ರಾನ್ಸಿಸ್ಕೊ ಜೇವಿಯರ್ ಹೆರ್ನಾಂಡೆಜ್ 10ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ ಬಿಎಫ್‌ಸಿಗೆ ಮುನ್ನಡೆ ತಂದುಕೊಟ್ಟರು.

ಆದರೆ ಫೈಸಲ್ ಶಾಯಸ್ತೆಹಾ 21ನೇ ನಿಮಿಷದಲ್ಲಿ ಗಳಿಸಿದ ಗೋಲು ಶ್ರೀನಿಧಿ ಡೆಕ್ಕನ್ ಪಂದ್ಯ ಸಮ ಮಾಡಿಕೊಳ್ಳಲು ಕಾರಣವಾಯಿತು.

ವಿಶ್ವ ಬಾಕ್ಸಿಂಗ್: ಶಿವ ಥಾಪಾ, ದೀಪಕ್ ಭೋರಿಯಾ ಕಣದಲ್ಲಿ

ನವದೆಹಲಿ (ಪಿಟಿಐ): ಆರು ಬಾರಿಯ ಏಷ್ಯಾ ಚಾಂಪಿಯನ್‌ಷಿಪ್‌ನ ಪದಕ ವಿಜೇತ ಶಿವ ಥಾಪಾ ಹಾಗೂ ದೀಪಕ್ ಭೋರಿಯಾ ಅವರು ಈ ತಿಂಗಳ ಕೊನೆಯಲ್ಲಿ ಆರಂಭವಾಗುವ ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದು, ಪ್ರಮುಖ ಆಕರ್ಷಣೆ ಎನಿಸಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಈ ತಿಂಗಳ 30ರಿಂದ ಮೇ 14ರವರೆಗೆ ಉಜ್ಬೇಕಿಸ್ತಾನದ ತಾಷ್ಕೆಂಟ್‌ನಲ್ಲಿ ನಿಗದಿಯಾಗಿದ್ದು, 13 ಬಾಕ್ಸರ್‌ಗಳ ತಂಡವನ್ನು ಶನಿವಾರ ಪ್ರಕಟಿಸಲಾಗಿದೆ. ಶಿವ 2015ರ ದೋಹಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು. 63.5 ಕೆಜಿ ವಿಭಾಗದಲ್ಲಿ ಅವರು ಸ್ಪರ್ಧಿಸಲಿದ್ದಾರೆ.

ಇತ್ತೀಚೆಗೆ ಉತ್ತಮ ಪ್ರದರ್ಶನದಿಂದ ಗಮನಸೆಳೆದಿರುವ ದೀಪಕ್, 51 ಕೆಜಿ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ.

ಅಮಿತ್ ಕೈತಪ್ಪಿದ ಅವಕಾಶ: ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಅಮಿತ್ ಪಂಘಲ್ ಅವರಿಗೆ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಅವಕಾಶ ಕೈತಪ್ಪಿದೆ. 51 ಕೆಜಿ ವಿಭಾಗದ ಸ್ಪರ್ಧಿಯಾಗಿದ್ದ ಅವರು, ಭಾರತ ಬಾಕ್ಸಿಂಗ್ ಫೆಡರೇಷನ್‌ನ (ಬಿಎಫ್‌ಐ) ಆಯ್ಕೆ ನಿಯಮದ ಪ್ರಕಾರ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ದೀಪಕ್ ಅವರಿಗಿಂತ ಕಡಿಮೆ ಅಂಕ ಗಳಿಸಿದ್ದಾರೆ. ದೀಪಕ್ 731 ಅಂಕ ಗಳಿಸಿದರೆ, ಅಮಿತ್ ಬಳಿ 682 ಅಂಕಗಳಿದ್ದವು.

ತಂಡ ಇಂತಿದೆ: ಗೋವಿಂದ್ ಸಾಹ್ನಿ (48 ಕೆಜಿ ವಿಭಾಗ), ದೀಪಕ್ ಭೋರಿಯಾ (51 ಕೆಜಿ), ಸಚಿನ್ ಸಿವಾಚ್ (54 ಕೆಜಿ), ಮೊಹಮ್ಮದ್ ಹುಸಾಮುದ್ದೀನ್ (57 ಕೆಜಿ), ವರಿಂದರ್ ಸಿಂಗ್ (60 ಕೆಜಿ), ಶಿವ ಥಾಪಾ (63.5 ಕೆಜಿ), ಆಕಾಶ್ ಸಂಗ್ವಾನ್ (67 ಕೆಜಿ), ನಿಶಾಂತ್ ದೇವ್ (71 ಕೆಜಿ), ಸುಮಿತ್ ಕುಂದು (75 ಕೆಜಿ), ಆಶಿಶ್ ಚೌಧರಿ (80 ಕೆಜಿ), ಹರ್ಷ್ ಚೌಧರಿ (86 ಕೆಜಿ), ನವೀನ್ ಕುಮಾರ್ (92 ಕೆಜಿ) ಮತ್ತು ನರೇಂದರ್ ಬರ್ವಾಲ್ (92 + ಕೆಜಿ).

ಫುಟ್‌ಬಾಲ್ ಆಟಗಾರ ಶಿವಪ್ರಸಾದ್ ನಿಧನ



ಬೆಂಗಳೂರು: 1965ರಲ್ಲಿ ಮೈಸೂರು ರಾಜ್ಯ ತಂಡವನ್ನು ಪ್ರತಿನಿಧಿಸಿದ್ದ ಫುಟ್‌ಬಾಲ್ ಆಟಗಾರ ಡಿ.ಶಿವಪ್ರಸಾದ್ (82) ಶುಕ್ರವಾರ ನಿಧನರಾದರು.

1968ರಲ್ಲಿ ಸರ್ವಿಸಸ್ ತಂಡದ ಪರ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಆಡಿದ್ದ ಶಿವಪ್ರಸಾದ್ ಅವರು ಎಂಇಜಿ ತಂಡವನ್ನೂ ಪ್ರತಿನಿಧಿಸಿದ್ದರು. ಡುರಾಂಡ್, ರೋವರ್ಸ್, ಐಎಫ್‌ಎ ಶೀಲ್ಡ್, ಫೆಡರೇಷನ್ ಕಪ್, ಸ್ಟಾಫರ್ಡ್ ಚಾಲೆಂಜ್ ಕಪ್ ಅವರು ಆಡಿದ ಪ್ರಮುಖ ಟೂರ್ನಿಗಳು.

ನಿವೃತ್ತಿ ಬಳಿಕ ರೆಫರಿ ಹಾಗೂ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಶನಿವಾರ ವಿಲ್ಸನ್ ಗಾರ್ಡನ್‌ನ ಚಿತಾಗಾರದಲ್ಲಿ ಅವರ ಅಂತ್ಯಸಂಸ್ಕಾರ ನಡೆಯಿತು.

ಮಹಿಳಾ ಕ್ರಿಕೆಟ್: ಸಾವಿತ್ರಿಬಾಯಿ ಫುಲೆ ವಿ.ವಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಮೈಸೂರು: ಪುಣೆಯ ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ ತಂಡ, ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ 66 ರನ್‌ಗಳಿಂದ ಆಂಧ್ರದ ಆದಿಕವಿ ನನ್ನಯ ವಿಶ್ವವಿದ್ಯಾಲಯ ತಂಡದ ವಿರುದ್ಧ ಭರ್ಜರಿ ಜಯ ಸಾಧಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪುಣೆಯ ತಂಡ 25 ಓವರ್‌ಗಳಲ್ಲಿ 8 ವಿಕೆಟ್‌ಗೆ 142 ರನ್‌ಗಳ ಹೋರಾಟದ ಮೊತ್ತ ಕಲೆ ಹಾಕಿತು. ಸಾಕ್ಷಿ ಕಾನಡಿ ಅಮೋಘ ಅರ್ಧ ಶತಕ (67) ಸಿಡಿಸಿ ತಂಡಕ್ಕೆ ನೆರವಾದರು.

ಸವಾಲು ಬೆನ್ನತ್ತಿದ ಆಂಧ್ರದ ಆಟಗಾರ್ತಿಯರು ರನ್ ಗಳಿಸಲು ತಿಣುಕಾಡಿದರು. ಸಾವಿತ್ರಿಬಾಯಿ ಫುಲೆ ವಿ.ವಿ ತಂಡದ ಪ್ರಿಯಾಂಕಾ ಘೋಡ್ಕೆ ಹಾಗೂ ಧ್ಯಾನೇಶ್ವರಿ ತಾಂಬೆ ತಲಾ ಮೂರು ವಿಕೆಟ್ ಪಡೆದು ಎದುರಾಳಿ ತಂಡವನ್ನು 25 ಓವರ್‌ಗಳಲ್ಲಿ 9 ವಿಕೆಟ್‌ಗೆ 76 ರನ್‌ಗಳಿಗೆ ಕಟ್ಟಿ ಹಾಕಿದರು.

ಜೌನಪುರದ ವಿಬಿಎಸ್‌ಪಿ ವಿಶ್ವವಿದ್ಯಾಲಯ ತಂಡವು ಕೊನೆಯ ಎಸೆತದಲ್ಲಿ ಚಂಡೀಗಡದ ಪಂಜಾಬ್ ವಿಶ್ವವಿದ್ಯಾಲಯ ತಂಡದ ಎದುರು 5 ವಿಕೆಟ್‌ಗಳ ರೋಚಕ ಜಯ ಸಾಧಿಸಿತು. 117 ರನ್‌ಗಳ ಗುರಿ ಬೆಂಬತ್ತಿದ್ದ ವಿಬಿಎಸ್‌ಪಿ ತಂಡಕ್ಕೆ ಆರಾಧನಾ ಬಿಷ್ಟ್ ಅವರ ಸೊಗಸಾದ ಅರ್ಧಶತಕ (54) ನೆರವಾಯಿತು.

ಕೋಟಯಂನ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ ತಂಡ 7 ವಿಕೆಟ್‌ಗಳಿಂದ ಜೈಪುರದ ರಾಜಸ್ಥಾನ ವಿಶ್ವವಿದ್ಯಾಲಯದ ವಿರುದ್ಧ, ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯ ತಂಡ 74 ರನ್‌ಗಳಿಂದ ಛತ್ತೀಸಗಢದ ಹೇಮಚಂದ್ ವಿಶ್ವವಿದ್ಯಾಲಯದ ವಿರುದ್ಧ ಜಯ ಗಳಿಸಿದವು.

ಯಶಸ್ವಿ ಜೈಸ್ವಾಲ್ ಆಟಕ್ಕೆ ಒಲಿದ ಜಯ

ಬಟ್ಲರ್ ಬ್ಯಾಟಿಂಗ್ ಸೊಬಗು; ಟ್ರೆಂಟ್, ಚಾಹಲ್‌ಗೆ ತಲಾ 3 ವಿಕೆಟ್; ಡೆಲ್ಲಿ ಕ್ಯಾಪಿಟಲ್ಸ್‌ಗೆ ನಿರಾಶೆ

ಗುವಾಹಟಿ (ಪಿಟಿಐ): ರಾಜಸ್ಥಾನ ರಾಯಲ್ಸ್ ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ ಮತ್ತು ಜಾಸ್ ಬಟ್ಲರ್ ಅವರ ಅರ್ಧಶತಕಗಳು ವ್ಯರ್ಥವಾಗದಂತೆ ಬೌಲರ್‌ಗಳು ನೋಡಿಕೊಂಡರು. ವೇಗಿ ಟ್ರೆಂಟ್ ಬೌಲ್ಟ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ತಲಾ ಮೂರು ವಿಕೆಟ್ ಗಳಿಸಿ, ರಾಜಸ್ಥಾನ ತಂಡವು 57 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಗಳಿಸಲು ಕಾರಣರಾದರು.

ಬರ್ಸಾಪರ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ರಾಯಲ್ಸ್ ತಂಡದ ಯಶಸ್ವಿ (60; 31ಎ) ಮತ್ತು ಬಟ್ಲರ್ (79; 51ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 199 ರನ್ ಗಳಿಸಿತು. ಇದಕ್ಕುತ್ತರವಾಗಿ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 142 ರನ್ ಗಳಿಸಿತು. ಡೆಲ್ಲಿ ತಂಡಕ್ಕೆ ಇದು ಸತತ ಮೂರನೇ ಸೋಲು. ತಂಡವು ಈ ಬಾರಿ ಇನ್ನೂ ಗೆಲುವಿನ ಖಾತೆ ತೆರೆದಿಲ್ಲ.

ಎಡಗೈ ವೇಗಿ ಖಲೀಲ್ ಅಹಮದ್ ನಾಲ್ಕನೇ ಓವರ್‌ನಲ್ಲಿ ಹಾಕಿದ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ಬಟ್ಲರ್ ಅವರ ಕ್ಯಾಚ್ ಅನ್ನು ಮಿಡ್ ಆನ್ ಫೀಲ್ಡರ್ ಎನ್ರಿಚ್ ನಾಕಿಯಾ ಹಿಡಿತಕ್ಕೆ ಪಡೆಯುವಲ್ಲಿ ವಿಫಲರಾದರು. ಯಶಸ್ವಿ ಹಾಗೂ ಬಟ್ಲರ್ ತಲಾ 11 ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ಮುಖೇಶ್ ಕುಮಾರ್ ಹಾಕಿದ ಓವರ್‌ನಲ್ಲಿ ಯಶಸ್ವಿ ಔಟಾದರು.

ಸಂಜು ಸ್ಯಾಮ್ಸನ್ ಕ್ರೀಸ್‌ಗೆ ಬಂದು ನಾಲ್ಕು ಎಸೆತ ಆಡಿದರೂ ಖಾತೆ ತೆರೆಯಲಿಲ್ಲ. ಸ್ಪಿನ್ನರ್ ಕುಲದೀಪ್ ಯಾದವ್ ಎಸೆತದಲ್ಲಿ ಔಟಾದರು. ರಿಯಾನ್ ಪರಾಗ್ ಕೂಡ ಕೇವಲ ಏಳು ರನ್ ಗಳಿಸಿ ನಿರ್ಗಮಿಸಿದರು. ಈ ಹಂತದಲ್ಲಿ ಬಟ್ಲರ್ ರನ್‌ಗಳಿಕೆಯ ಹೊಣೆ ಹೊತ್ತರು. ಅವರಿಗೆ ಹೆಟ್ಮೆಯರ್ (ಔಟಾಗದೆ 39; 21ಎ, 4X1, 6X4) ಜೊತೆ ನೀಡಿದರು. ಇದರಿಂದಾಗಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 49 ರನ್‌ಗಳು ಸೇರಿದವು. ಇದರಿಂದಾಗಿ ದೊಡ್ಡ ಮೊತ್ತ ದಾಖಲಾಯಿತು.

ಸೊನ್ನೆಗೆ ಎರಡು ವಿಕೆಟ್!: ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಮೊದಲ ಓವರ್‌ನಲ್ಲಿ ದೊಡ್ಡ ಆಘಾತ ಎದುರಾಯಿತು. ತಂಡವು ಖಾತೆ ತೆರೆಯುವ ಮುನ್ನವೇ ಎರಡು ವಿಕೆಟ್‌ಗಳು ಪತನಗೊಂಡವು.

ಎಡಗೈ ವೇಗಿ ಟ್ರೆಂಟ್ ಬೌಲ್ಟ್ ಮೊದಲ ಓವರ್‌ನ ಮೂರು ಹಾಗೂ ನಾಲ್ಕನೇ ಎಸೆತಗಳಲ್ಲಿ ಕ್ರಮವಾಗಿ ಪೃಥ್ವಿ ಶಾ ಹಾಗೂ ಮನೀಷ್ ಪಾಂಡೆ ವಿಕೆಟ್ ಕಬಳಿಸಿದರು. ಪೃಥ್ವಿ ಅವರು ಸಂಜುಗೆ ಕ್ಯಾಚಿತ್ತರೆ, ಪಾಂಡೆ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಈ ನಡುವೆ ಏಕಾಂಗಿ ಹೋರಾಟ ನಡೆಸಿದ ನಾಯಕ ಡೇವಿಡ್ ವಾರ್ನರ್ (65; 55ಎ) ಅವರ ಆಟಕ್ಕೆ ಜಯ ಒಲಿಯಲಿಲ್ಲ. ವಾರ್ನರ್ ಬಿಟ್ಟರೆ, ರಿಲೀ ರೊಸೊ (14ರನ್) ಹಾಗೂ ಲಲಿತ್ ಯಾದವ್ (38; 24ಎ) ಅವರಿಬ್ಬರೇ ಎರಡಂಕಿ ಮೊತ್ತ ತಲುಪಿದರು. ಉಳಿದ ಎಲ್ಲ ಬ್ಯಾಟರ್‌ಗಳು ಎದುರಾಳಿ ತಂಡದ ಶಿಸ್ತಿನ ದಾಳಿಯ ಮುಂದೆ ಮುಗ್ಗರಿಸಿದರು.


ರಾಜಸ್ಥಾನ ರಾಯಲ್ಸ್ ತಂಡದ ಗೆಲುವಿನ ರೂವಾರಿಗಳಾದ (ಎಡದಿಂದ) ಯಶಸ್ವಿ ಜೈಸ್ವಾಲ್, ಟ್ರೆಂಟ್ ಬೌಲ್ಟ್ ಹಾಗೂ ಯಜುವೇಂದ್ರ ಚಾಹಲ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 4ಕ್ಕೆ199 (20 ಓವರ್)
ಯಶಸ್ವಿ ಸಿ ಮತ್ತು ಬಿ ಮುಖೇಶ್ ಕುಮಾರ್ 60 (31ಎ, 4X11, 6X1)
ಬಟ್ಲರ್ ಸಿ ಮತ್ತು ಬಿ ಮುಖೇಶ್ ಕುಮಾರ್ 79 (51ಎ, 4X11, 6X1)
ಸ್ಯಾಮ್ಸನ್ ಸಿ ನಾಕಿಯಾ ಬಿ ಕುಲದೀಪ್ 0 (4ಎ)
ರಿಯಾನ್ ಬಿ ಪೊವೆಲ್ 7 (11ಎ)
ಹೆಟ್ಮೆಯರ್ ಔಟಾಗದೆ 39 (21ಎ, 4X1, 6X4)
ಧ್ರುವ್ ಔಟಾಗದೆ 8 (3ಎ, 6X1)
ಇತರೆ: 6 (ಲೆಗ್‌ಬೈ 1, ವೈಡ್ 4, ನೋಬಾಲ್ 1)
ವಿಕೆಟ್ ಪತನ: 1–98 (ಯಶಸ್ವಿ ಜೈಸ್ವಾಲ್;8.3), 2–103 (ಸಂಜು ಸ್ಯಾಮ್ಸನ್;9.5), 3–126 (ರಿಯಾನ್ ಪರಾಗ್; 13.5), 4–175 (ಜಾಸ್ ಬಟ್ಲರ್; 18.3)
ಬೌಲಿಂಗ್: ಖಲೀಲ್ ಅಹಮದ್ 2–0–31–0, ಎನ್ರಿಚ್ ನಾಕಿಯಾ 4–0–44–0, ಮುಖೇಶ್ ಕುಮಾರ್ 4–0–36–2, ಅಕ್ಷರ್ ಪಟೇಲ್ 4–0–38–0, ಕುಲದೀಪ್ ಯಾದವ್ 4–0–31–1, ರೋವ್ಮನ್ ಪೊವೆಲ್ 2–0–18–1.

ಡೆಲ್ಲಿ ಕ್ಯಾಪಿಟಲ್ಸ್ 9ಕ್ಕೆ142 (20 ಓವರ್‌ಗಳಲ್ಲಿ)
ಪೃಥ್ವಿ ಸಿ ಸ್ಯಾಮ್ಸನ್ ಬಿ ಬೌಲ್ಟ್ 0 (3ಎ)
ವಾರ್ನರ್ ಎಲ್‌ಬಿಡಬ್ಲ್ಯು ಬಿ ಚಾಹಲ್ 65 (55ಎ, 4X7)
ಮನೀಷ್ ಎಲ್‌ಬಿಡಬ್ಲ್ಯು ಬಿ ಬೌಲ್ಟ್ 0 (1ಎ)
ರೊಸೊ ಸಿ ಯಶಸ್ವಿ ಬಿ ಅಶ್ವಿನ್ 14 (12ಎ, 4X2)
ಲಲಿತ್ ಬಿ ಬೌಲ್ಟ್ 38 (24ಎ, 4X5)
ಅಕ್ಷರ್ ಸ್ಟಂಪ್ಡ್ ಸ್ಯಾಮ್ಸನ್ ಬಿ ಚಾಹಲ್ 2 (6ಎ)
ಪೊವೆಲ್ ಸಿ ಹೆಟ್ಮೆಯರ್ ಬಿ ಅಶ್ವಿನ್ 2 (2ಎ)
ಅಭಿಷೇಕ್ ಸಿ ಹೆಟ್ಮೆಯರ್ ಬಿ ಚಾಹಲ್ 7 (9ಎ, 4X1)
ಕುಲದೀಪ್ ಔಟಾಗದೆ 3 (7ಎ)
ಎನ್ರಿಚ್ ನಾಕಿಯಾ ಬಿ ಸಂದೀಪ್ 0 (1ಎ)
ಮುಖೇಶ್ ಔಟಾಗದೆ 1 (1ಎ)
ಇತರೆ: 10 (ಲೆಗ್‌ಬೈ 2, ವೈಡ್ 7, ನೋಬಾಲ್ 1)
ವಿಕೆಟ್ ಪತನ: 1–0 (ಪೃಥ್ವಿ ಶಾ; 0.3), 2–0 (ಮನೀಷ್ ಪಾಂಡೆ; 0.4), 3–36 (ರಿಲೀ ರೊಸೊ; 5.4), 4–100 (ಲಲಿತ್ ಯಾದವ್; 12.6), 5–111 (ಅಕ್ಷರ್ ಪಟೇಲ್; 14.5), 6–118 (ರೋವ್ಮನ್ ಪೊವೆಲ್; 15.3), 7–138 (ಅಭಿಷೇಕ್ ಪೊರೆಲ್; 18.2), 8–139 (ಡೇವಿಡ್ ವಾರ್ನರ್; 18.6), 9–140 (ಎನ್ರಿಚ್ ನಾಕಿಯಾ; 19.2)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–1–29–3, ಸಂದೀಪ್ ಶರ್ಮಾ 4–0–20–1, ಆರ್ ಅಶ್ವಿನ್ 4–0–25–2, ಜೇಸನ್ ಹೋಲ್ಡರ್ 3–0–28–0, ಯಜುವೇಂದ್ರ ಚಾಹಲ್ 4–0–27–3, ಮುರುಗನ್ ಅಶ್ವಿನ್ 1–0–11–0

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 57 ರನ್‌ಗಳ ಜಯ

ಜಡೇಜ ಸ್ಪಿನ್ ಮೋಡಿ; ಮುಂಬೈಗೆ ಸೋಲುಣಿಸಿದ ಚೆನ್ನೈ

ರಹಾನೆ ಅಬ್ಬರದ ಬ್ಯಾಟಿಂಗ್

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಮತ್ತು ಹಾಲಿ ನಾಯಕರ ನಡುವಣ ಹಣಾಹಣಿಯಲ್ಲಿ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರ ಕೈಮೇಲಾಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಏಳು ವಿಕೆಟ್‌ಗಳಿಂದ ರೋಹಿತ್ ಶರ್ಮಾ ನೇತೃತ್ವದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು.

ರವೀಂದ್ರ ಜಡೇಜ ಹಾಗೂ ಮಿಚೆಲ್ ಸ್ಯಾಂಟನರ್ ಅವರ ಸ್ಪಿನ್ ಮೋಡಿ ಮತ್ತು ಅಜಿಂಕ್ಯ ರಹಾನೆ (61 ರನ್, 27ಎ., 4X7, 6X3) ಅಬ್ಬರದ ಆಟ ಚೆನ್ನೈ ತಂಡದ ಗೆಲುವಿಗೆ ಕಾರಣವಾಯಿತು.

ಮೊದಲು ಬ್ಯಾಟ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 157 ರನ್ ಗಳಿಸಿದರೆ, ಧೋನಿ ಬಳಗ 18.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು.

ಚೆನ್ನೈ ತಂಡ ಡೆವೊನ್ ಕಾನ್ವೆ (0) ಅವರನ್ನು ಮೊದಲ ಓವರ್‌ನಲ್ಲೇ ಕಳೆದುಕೊಂಡಿತು. ಆದರೆ ಅತ್ಯುತ್ತಮ ಫಾರ್ಮ್‌ನಲ್ಲಿರುವ ಋತುರಾಜ್ ಗಾಯಕವಾಡ್ (ಔಟಾಗದೆ 40, 36 ಎ.) ಮತ್ತು ರಹಾನೆ 2ನೇ ವಿಕೆಟ್‌ಗೆ 7.2 ಓವರ್‌ಗಳಲ್ಲಿ 82 ರನ್ ಸೇರಿಸಿದರು. ರಹಾನೆ ಅಬ್ಬರದ ಆಟವಾಡಿ ಎದುರಾಳಿ ಬೌಲರ್‌ಗಳ ಯೋಜನೆಗಳನ್ನು ತಲೆಕೆಳಗಾಗಿಸಿದರು. 19 ಎಸೆತಗಳಲ್ಲಿ 50ರ ಗಡಿ ದಾಟಿದ ಅವರು ಈ ಬಾರಿಯ ಟೂರ್ನಿಯಲ್ಲಿ ಅತಿವೇಗದ ಅರ್ಧಶತಕದ ಸಾಧನೆ ಮಾಡಿದರು.


ಅಜಿಂಕ್ಯ ರಹಾನೆ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಕಳೆದ ಎರಡು ಪಂದ್ಯಗಳಲ್ಲಿ ಅಬ್ಬರಿಸಿದ್ದ ಋತುರಾಜ್ ತಾಳ್ಮೆಯ ಆಟವಾಡಿದರು.

ಸ್ಪಿನ್ ಮೋಡಿ: ಇದಕ್ಕೂ ಮುನ್ನ ಮುಂಬೈ ತಂಡವನ್ನು ಜಡೇಜ (20ಕ್ಕೆ 3) ಮತ್ತು ಸ್ಯಾಂಟನರ್ ಅವರು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದರು.

ರೋಹಿತ್ (21 ರನ್) ಹಾಗೂ ಇಶಾನ್ ಕಿಶನ್ (32 ರನ್) ಅವರು ಮುಂಬೈಗೆ ಉತ್ತಮ ಆರಂಭ ನೀಡಿದರೂ, ಮಧ್ಯಮಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು.

ನಾಲ್ಕನೇ ಓವರ್‌ನಲ್ಲಿ ತುಷಾರ್ ದೇಶಪಾಂಡೆ ಹಾಕಿದ ಎಸೆತದಲ್ಲಿ ರೋಹಿತ್ ಶರ್ಮಾ ಕ್ಲೀನ್‌ಬೌಲ್ಡ್ ಆದರು. ಐದು ಬೌಂಡರಿ ಹೊಡೆದಿದ್ದ ಇಶಾನ್ ಕಿಶನ್ ಅವರಿಗೆ ಏಳನೇ ಓವರ್‌ನಲ್ಲಿ ರವೀಂದ್ರ ಜಡೇಜ ಡಗ್‌ಔಟ್ ದಾರಿ ತೋರಿಸಿದರು.

ಕ್ಯಾಮರಾನ್ ಗ್ರೀನ್ ಹಾಗೂ ಹೋದ ಪಂದ್ಯದಲ್ಲಿ ಮಿಂಚಿದ್ದ ತಿಲಕ್ ವರ್ಮಾ (22 ರನ್) ಅವರ ವಿಕೆಟ್ ಕೂಡ ಜಡೇಜ ಪಾಲಾಯಿತು. ಸೂರ್ಯಕುಮಾರ್ ವೈಫಲ್ಯ ಮುಂದುವರಿಯಿತು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 157 (ರೋಹಿತ್ ಶರ್ಮಾ 21, ಇಶಾನ್ ಕಿಶನ್ 32, ತಿಲಕ್ ವರ್ಮಾ 22, ಟಿಮ್ ಡೇವಿಡ್ 31, ತುಷಾರ್ ದೇಶಪಾಂಡೆ 31ಕ್ಕೆ2, ಮಿಚೆಲ್ ಸ್ಯಾಂಟನರ್ 28ಕ್ಕೆ2, ರವೀಂದ್ರ ಜಡೇಜ 20ಕ್ಕೆ3) ಚೆನ್ನೈ ಸೂಪರ್ ಕಿಂಗ್ಸ್ 18.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 159 (ಅಜಿಂಕ್ಯ ರಹಾನೆ 61, ಶಿವಂ ದುಬೆ 28, ಋತುರಾಜ್ ಗಾಯಕವಾಡ್ ಔಟಾಗದೆ 40, ಅಂಬಟಿ ರಾಯುಡು ಔಟಾಗದೆ 20, ಕುಮಾರ್ ಕಾರ್ತಿಕೇಯ 24ಕ್ಕೆ 1) ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 7 ವಿಕೆಟ್ ಗೆಲುವು

ಗೆಲುವಿನ ನಿರೀಕ್ಷೆಯಲ್ಲಿ ಸನ್‌ರೈಸರ್ಸ್

ಹೈದರಾಬಾದ್ (ಪಿಟಿಐ): ಆಡಿದ ಎರಡೂ ಪಂದ್ಯಗಳಲ್ಲಿ ಸೋತಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವು ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಆತ್ಮವಿಶ್ವಾಸದಲ್ಲಿರುವ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಶಿಖರ್ ಧವನ್ ನಾಯಕತ್ವದ ಪಂಜಾಬ್ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯಗಳಲ್ಲಿ ಜಯಿಸಿತ್ತು. ಏಡನ್ ಮರ್ಕರಂ ನೇತೃತ್ವದ ಹೈದರಾಬಾದ್ ತಂಡವು ರಾಜಸ್ಥಾನ ರಾಯಲ್ಸ್ ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡಗಳ ವಿರುದ್ಧ ಸೋತಿತ್ತು.

ಸನ್‌ರೈಸರ್ಸ್ ತಂಡದ ಪ್ರಮುಖ ಬ್ಯಾಟರ್‌ಗಳಾದ ಮಯಂಕ್ ಅಗರವಾಲ್, ಅಭಿಷೇಕ್ ಶರ್ಮಾ, ಹ್ಯಾರಿ ಬ್ರೂಕ್ ಹಾಗೂ ರಾಹುಲ್ ತ್ರಿಪಾಠಿ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ದೊಡ್ಡ ಮೊತ್ತ ಪೇರಿಸುವುದು ಸಾಧ್ಯವಾಗಲಿದೆ.

ಪಂಜಾಬ್ ತಂಡದ ಆರಂಭಿಕ ಜೋಡಿ ಶಿಖರ್ ಹಾಗೂ ಪ್ರಭಸಿಮ್ರನ್ ಸಿಂಗ್ ಉತ್ತಮ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಇಬ್ಬರೂ ಅರ್ಧಶತಕ ಗಳಿಸಿದ್ದರು. ಆದರೆ, ರಾಜಪಕ್ಸ ಮತ್ತು ದೇಶಿ ಕ್ರಿಕೆಟ್‌ನ ಸ್ಫೋಟಕ ಶೈಲಿಯ ಬ್ಯಾಟರ್ ಶಾರೂಕ್ ಖಾನ್ ಅವರ ಅಸ್ಥಿರ ಲಯವು ತಂಡದ ಚಿಂತೆಗೆ ಕಾರಣವಾಗಿದೆ.

ಎಡಗೈ ವೇಗಿಗಳಾದ ಸ್ಯಾಮ್ ಕರನ್, ಅರ್ಷದೀಪ್ ಸಿಂಗ್ ಹಾಗೂ ಸ್ಪಿನ್ನರ್ ರಾಹುಲ್ ಚಾಹರ್ ಅವರ ಸವಾಲನ್ನು ಸನ್‌ರೈಸರ್ ಬ್ಯಾಟಿಂಗ್ ಪಡೆ ಮೀರಿ ನಿಲ್ಲಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್. ಜಿಯೊ ಸಿನೆಮಾ ಆ್ಯಪ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	3	2	1	0	4	2.067
ಲಖನೌ	3	2	1	0	4	1.358
ಗುಜರಾತ್	2	2	0	0	4	0.700
ಚೆನ್ನೈ	3	2	1	0	4	0.356
ಪಂಜಾಬ್	2	2	0	0	4	0.333
ಕೋಲ್ಕತ್ತ	2	1	1	0	2	2.056
ಬೆಂಗಳೂರು	2	1	1	0	2	-1.256
ಮುಂಬೈ	2	0	2	0	0	-1.394
ಡೆಲ್ಲಿ	3	0	3	0	0	-2.092
ಹೈದರಾಬಾದ್	2	0	2	0	0	-2.867

*ಶನಿವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	8

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಋತುರಾಜ್	ಚೆನ್ನೈ	189

ಹ್ಯಾಟ್ರಿಕ್ ಜಯದತ್ತ ಗುಜರಾತ್ ಚಿತ್ತ

ಅಹಮದಾಬಾದ್ (ಪಿಟಿಐ): ಸತತ ಎರಡು ಪಂದ್ಯಗಳನ್ನು ಗೆದ್ದಿರುವ ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡವು 'ಹ್ಯಾಟ್ರಿಕ್ ವಿಜಯ'ದ ಮೇಲೆ ಕಣ್ಣಿಟ್ಟಿದೆ.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಗುಜರಾತ್ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಸೆಣಸಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಸೋಲಿಸಿದ ಹುರುಪಿನಲ್ಲಿರುವ ಕೋಲ್ಕತ್ತ ತಂಡವು ಮತ್ತೊಂದು ಜಯದ ಕನಸಿನೊಂದಿಗೆ ಇಲ್ಲಿಗೆ ಬಂದಿದೆ. ಆದರೆ ಗುಜರಾತ್ ತಂಡವು ಜಯದ ಹಿಡಿತವನ್ನು ಸುಲಭವಾಗಿ ಬಿಟ್ಟುಕೊಡದು.

ಆಲ್‌ರೌಂಡರ್ ಹಾಗೂ ನಾಯಕ ಹಾರ್ದಿಕ್ ಪಾಂಡ್ಯ ಅವರೊಂದಿಗೆ ಯುವ ಆಟಗಾರ ಸಾಯಿ ಸುದರ್ಶನ್, ಶುಭಮನ್ ಗಿಲ್ ಮತ್ತು ಡೇವಿಡ್ ಮಿಲ್ಲರ್ ತಂಡದ ಬ್ಯಾಟಿಂಗ್ ವಿಭಾಗದ ಪ್ರಮುಖರಾಗಿದ್ದಾರೆ. ಗುಜರಾತ್ ತಂಡ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ದೆಹಲಿಯಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಗಳಿಸಿತ್ತು. ಇದರಿಂದಾಗಿ ತಂಡವು ಅಪಾರ ಆತ್ಮವಿಶ್ವಾಸದಲ್ಲಿದೆ.

ಕೋಲ್ಕತ್ತ ತಂಡವು ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಸೋತಿತ್ತು. ಎರಡನೇಯದ್ದರಲ್ಲಿ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಆರ್‌ಸಿಬಿ ಎದುರಿನ ಪಂದ್ಯ ಗೆದ್ದಿತ್ತು.


ಶುಭಮನ್ ಗಿಲ್

ನವಪ್ರತಿಭೆ ಸುಯಶ್ ಶರ್ಮಾ ಹಾಗೂ ವರುಣ್ ಚಕ್ರವರ್ತಿಯವರ ಅಮೋಘ ಬೌಲಿಂಗ್ ಕೂಡ ಗಮನ ಸೆಳೆದಿತ್ತು.

ಆದರೆ ಗುಜರಾತ್ ತಂಡದ ಯೋಜನಾಬದ್ಧ ಆಟಕ್ಕೆ ಕಡಿವಾಣ ಹಾಕಲು ಕೋಲ್ಕತ್ತ ಬಳಗವು ವಿಭಿನ್ನ ಯೋಜನೆಯೊಂದಿಗೆ ಕಣಕ್ಕಿಳಿಯುವ ಅನಿವಾರ್ಯತೆ ಇದೆ. ಅದರಲ್ಲೂ ಉತ್ತಮ ಫಾರ್ಮ್‌ನಲ್ಲಿರುವ ಶುಭಮನ್ ಗಿಲ್ ಅವರನ್ನು ಕಟ್ಟಿಹಾಕುವುದು ಅನುಭವಿ ವೇಗಿ ಮೊಹಮ್ಮದ್ ಶಮಿ ಹಾಗೂ ಅಲ್ಜರಿ ಜೋಸೆಫ್ ಅವರ ಮುಂದಿರುವ ಪ್ರಮುಖ ಸವಾಲು.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೊ ಸಿನೆಮಾ.

ಬ್ಯಾಡ್ಮಿಂಟನ್: ಫೈನಲ್‌ಗೆ ಪ್ರಿಯಾಂಶು

ಆರ್ಲಿಯನ್ಸ್, ಫ್ರಾನ್ಸ್ (ಪಿಟಿಐ): ಅಮೋಘ ಆಟವಾಡಿದ ಭಾರತದ ಪ್ರಿಯಾಂಶು ರಾಜಾವತ್ ಅವರು ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಪ್ರಿಯಾಂಶು 21-12, 21-9ರಿಂದ ಐರ್ಲೆಂಡ್‌ನ ನಹತ್ ಎನ್‌ಗುಯೆನ್ ಅವರನ್ನು ಪರಾಭವಗೊಳಿಸಿದರು.

2022ರ ಥಾಮಸ್ ಕಪ್ ಗೆದ್ದ ಭಾರತ ತಂಡದಲ್ಲಿದ್ದ 21 ವರ್ಷದ ರಾಜಾವತ್, ಶನಿವಾರದ ಈ ಪಂದ್ಯದಲ್ಲಿ ಸಂಪೂರ್ಣ ಪಾರಮ್ಯ ಮೆರೆದರು. ಅವರಿಗೆ ಇದು ಸೂಪರ್ 300 ವಿಶ್ವ ಟೂರ್ ಮಟ್ಟದಲ್ಲಿ ಮೊದಲ ಫೈನಲ್ ಆಗಿದೆ.

ಫೈನಲ್‌ನಲ್ಲಿ ಭಾರತದ ಆಟಗಾರ, ಡೆನ್ಮಾರ್ಕ್‌ನ ಮ್ಯಾಗ್ನಸ್ ಜೋಹಾನ್‌ಸನ್ ಅವರ ಸವಾಲು ಎದುರಿಸುವರು.

ಪ್ರಿಯಾಂಶು ಈ ಹಣಾಹಣಿಯಲ್ಲಿ ನೆಟ್ ಶಾಟ್‌ಗಳಲ್ಲಿ ಹೆಚ್ಚು ಚುರುಕುತನ ತೋರಿದರು. ಎದುರಾಳಿಯ ಫೋರ್‌ಹ್ಯಾಂಡ್ ಹೊಡೆತಗಳಿಗೆ ತಕ್ಕ ಪ್ರತ್ಯುತ್ತರ ನೀಡಿದರು. ಎನ್‌ಗುಯೆನ್ ಮಾಡಿದ ತಪ್ಪುಗಳೂ ಪ್ರಿಯಾಂಶು ಅವರಿಗೆ ವರದಾನವಾದವು.

ಆರಂಭದ ಒಂದಷ್ಟು ಹೊತ್ತಿನ ಪೈಪೋಟಿಯ ಬಳಿಕ ಮೊದಲ ಗೇಮ್‌ನ ವಿರಾಮದ ವೇಳೆಗೆ ಪ್ರಿಯಾಂಶು 11-9ರ ಮುನ್ನಡೆ ಸಾಧಿಸಿದರು. ನಂತರ ರ‍್ಯಾಲಿಗಳಲ್ಲಿ ಪ್ರಾಬಲ್ಯ ಮೆರೆದ ಅವರಿಗೆ 17–11ರ ಮೇಲುಗೈ ಸಿಕ್ಕಿತು. ಅದೇ ಲಯದೊಂದಿಗೆ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಪ್ರಿಯಾಂಶು ಮತ್ತಷ್ಟು ಚುರುಕಿನ ಆಟವಾಡಿದರು.


ಪ್ರಿಯಾಂಶು ರಾಜಾವತ್– ಬಿಎಐ ಟ್ವಿಟರ್ ಚಿತ್ರ

ಮಹಿಳಾ ಹಾಕಿ: ಇಂದಿನಿಂದ ಶಿಬಿರ

ಬೆಂಗಳೂರು (ಪಿಟಿಐ): ಮೇನಲ್ಲಿ ನಡೆಯುವ ಆಸ್ಟ್ರೇಲಿಯಾ ಪ್ರವಾಸಕ್ಕೆ ಪೂರ್ವಭಾವಿಯಾಗಿ ಭಾರತ ಮಹಿಳೆಯರ ಹಾಕಿ ತಂಡದ ಶಿಬಿರ ಭಾನುವಾರದಿಂದ ಇಲ್ಲಿ ನಡೆಯಲಿದೆ.

ಏಪ್ರಿಲ್ 9ರಿಂದ ಮೇ 13ರವರೆಗೆ ಶಿಬಿರ ನಿಗದಿಯಾಗಿದೆ. ಒಟ್ಟು 33 ಆಟಗಾರ್ತಿಯರು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಶಿಬಿರದಲ್ಲಿ ಪಾಲ್ಗೊಳ್ಳಲಿರುವ ಆಟಗಾರ್ತಿಯರು: ಗೋಲ್‌ಕೀಪರ್ಸ್: ಸವಿತಾ, ರಜನಿ ಎತಿಮರ್ಪು, ಬಿಚು ದೇವಿ ಖರಿಬಮ್, ಬಾನ್ಸರಿ ಸೋಲಂಕಿ.

ಡಿಫೆಂಡರ್ಸ್: ದೀಪ್ ಗ್ರೇಸ್ ಎಕ್ಕಾ, ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ಅಕ್ಷತಾ ಅಬಾಸೊ ಧೆಕಾಲೆ, ಜ್ಯೋತಿ ಚಾತ್ರಿ, ಮಹಿಮಾ ಚೌಧರಿ.

ಮಿಡ್‌ಫೀಲ್ಡರ್ಸ್: ನಿಶಾ, ಸಲೀಮಾ ಟೆಟೆ, ಸುಶೀಲಾ ಚಾನು ಪುಖ್ರಂಬಮ್, ಜ್ಯೋತಿ, ನವಜೋತ್ ಕೌರ್, ಮೋನಿಕಾ, ಮರಿಯಾನಾ ಕುಜೂರ್, ಸೋನಿಕಾ, ನೇಹಾ, ಬಲ್ಜೀತ್ ಕೌರ್, ರೀನಾ ಖೋಖರ್, ವೈಷ್ಣವಿ ಫಾಲ್ಕೆ, ಅಜ್ಮಿನಾ ಕುಜೂರ್.

ಫಾರ್ವರ್ಡ್ಸ್: ಲಾಲ್‌ರೆಮ್ಸಿಯಾಮಿ, ನವನೀತ್ ಕೌರ್, ವಂದನಾ ಕಟಾರಿಯಾ, ಶರ್ಮಿಳಾ ದೇವಿ, ದೀಪಿಕಾ, ಸಂಗೀತಾ ಕುಮಾರಿ, ಮುಮ್ತಾಜ್ ಖಾನ್, ಸುನೆಲಿಟಾ ಟೊಪ್ಪೊ

ಕ್ರಿಕೆಟ್: ಕಿವೀಸ್‌ಗೆ ರೋಚಕ ಜಯ

ಕ್ವೀನ್ಸ್‌ಟೌನ್ (ಎಪಿ): ಕೊನೆಯ ಎಸೆತ ಉಳಿದಿರುವಂತೆ ನ್ಯೂಜಿಲೆಂಡ್ ತಂಡ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯವನ್ನು ಶ್ರೀಲಂಕಾ ವಿರುದ್ಧ ನಾಲ್ಕು ವಿಕೆಟ್‌ಗಳಿಂದ ಗೆದ್ದುಕೊಂಡಿತು. ಸತತ ಎರಡನೇ ಬಾರಿ ಆರಂಭ ಆಟಗಾರ ಟಿಮ್ ಸೀಫರ್ಟ್ ಮಿಂಚಿದ್ದು, ಮೂರು ಪಂದ್ಯಗಳ ಸರಣಿ 2–1 ರಿಂದ ಕಿವೀಸ್ ಕೈವಶವಾಯಿತು.

ಸೀಫರ್ಟ್ 48 ಎಸೆತಗಳಲ್ಲಿ 10 ಬೌಂಡರಿ, ಮೂರು ಸಿಕ್ಸರ್‌ಗಳಿದ್ದ 88 ರನ್ ಸಿಡಿಸಿದರು. ಶ್ರೀಲಂಕಾ ನಿಗದಿಪಡಿಸಿದ 183 ರನ್‌ಗಳ ಗುರಿಯನ್ನು ಕಿವೀಸ್ 19.5 ಓವರುಗಳಲ್ಲಿ ದಾಟಿತು.

ಸ್ಕೋರುಗಳು: ಶ್ರೀಲಂಕಾ: 20 ಓವರುಗಳಲ್ಲಿ 6 ವಿಕೆಟ್‌ಗೆ 182 (ಕುಶಾಲ್ ಮೆಂಡಿಸ್ 73, ಪಥುಮ್ ನಿಸ್ಸಂಕ 24, ಕುಶಾಲ್ ಪೆರೇರ 33, ಧನಂಜಯ ಡಿಸಿಲ್ವ 20; ಬೆಂಜಮಿನ್ ಲಿಸ್ಟರ್ 37ಕ್ಕೆ2); ನ್ಯೂಜಿಲೆಂಡ್: 19.5 ಓವರುಗಳಲ್ಲಿ 6 ವಿಕೆಟ್‌ಗೆ 183 (ಟಿಮ್ ಸೀಫರ್ಟ್ 88, ಟಾಮ್ ಲಥಾಮ್ 31; ಲಹಿರು ಕುಮಾರ 38ಕ್ಕೆ3).

ಕೊಡವ ಕೌಟುಂಬಿಕ ಹಾಕಿ ಟೂರ್ನಿ ಫೈನಲ್ ಇಂದು

ನಾಪೋಕ್ಲು (ಕೊಡಗು ಜಿಲ್ಲೆ): ಅಪ್ಪಚೆಟ್ಟೋಳಂಡ ಕಪ್‌ಗಾಗಿ ಕುಲ್ಲೇಟಿರ ಮತ್ತು ಕುಪ್ಪಂಡ ತಂಡಗಳ ನಡುವೆ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಫೈನಲ್ ಪಂದ್ಯ ಇಲ್ಲಿನ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿದೆ.

ಕುಲ್ಲೇಟಿರ ತಂಡವು 16 ವರ್ಷಗಳ ಬಳಿಕ ಫೈನಲ್ ತಲುಪಿದೆ. ಕುಪ್ಪಂಡ ತಂಡಕ್ಕೆ ಇದು ಮೊದಲ ಫೈನಲ್. ಈ ಹಿಂದೆ ಎರಡು ಬಾರಿ ಕುಲ್ಲೇಟಿರ ತಂಡ ಪ್ರಶಸ್ತಿ ಜಯಿಸಿದ್ದು, ಒಮ್ಮೆ ಕೂತಂಡ ತಂಡದೊಂದಿಗೆ ಪ್ರಶಸ್ತಿ ಹಂಚಿಕೊಂಡಿದೆ. ಮಧ್ಯಾಹ್ನ 12.30ಕ್ಕೆ ಫೈನಲ್ ಆರಂಭವಾಗಲಿದೆ.

ವಿಶ್ವ ಚೆಸ್ ಹೊಸ ಚಾಂಪಿಯನ್ ಉದಯಕ್ಕೆ ವೇದಿಕೆ ಸಜ್ಜು

ನೆಪೊಮ್‌ನಿಷಿ– ಲಿರೆನ್ ಪೈಪೋಟಿ ಇಂದಿನಿಂದ

ಅಸ್ತಾನ (ಕಜಕಸ್ತಾನ): ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡುವುದಿಲ್ಲ ಎಂದು ಘೋಷಿಸಿರುವ ಕಾರಣ ಚೆಸ್ ಲೋಕ ಈಗ ಹೊಸ ವಿಶ್ವ ಚಾಂಪಿಯನ್ ಆಟಗಾರನನ್ನು ಬರಮಾಡಿಕೊಳ್ಳಲು ಸಜ್ಜಾಗಿದೆ. ಆ ಪಟ್ಟಕ್ಕಾಗಿ ಇಯಾನ್ ನೆಪೊಮ್‌ನಿಷಿ ಮತ್ತು ಡಿಂಗ್ ಲಿರೆನ್ ನಡುವೆ 14 ಪಂದ್ಯಗಳಿರುವ ಫೈನಲ್ ಭಾನುವಾರ ಆರಂಭವಾಗಲಿದೆ.

32 ವರ್ಷದ ಕಾರ್ಲ್‌ಸನ್ ದಶಕಕ್ಕೂ ಹೆಚ್ಚು ಕಾಲ ಚೆಸ್ ಲೋಕವನ್ನು ಆಳಿದ್ದಾರೆ. ನಾಲ್ಕು ಬಾರಿ ವಿಶ್ವ ಚಾಂಪಿಯನ್ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. 2021ರಲ್ಲಿ ಕೊನೆಯ ಬಾರಿ ಚಾಂಪಿಯನ್ ಆಗುವ ಹಾದಿಯಲ್ಲಿ ನಾರ್ವೆಯ ಈ ಆಟಗಾರ ಸೋಲಿಸಿದ್ದು ರಷ್ಯಾದ ನೆಪೊಮ್‌ನಿಷಿ ಅವರನ್ನು. ಪ್ರೇರಣೆ ಕಳೆದುಕೊಂಡಿರುವ ಕಾರಣ ಮತ್ತೊಮ್ಮೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡುವುದಿಲ್ಲ ಎಂದು ಕಾರ್ಲ್‌ಸನ್ ಕಳೆದ ವರ್ಷವೇ ಸಾರಿದ್ದರು.

32 ವರ್ಷದ ನೆಪೊಮ್‌ನಿಷಿ ರಷ್ಯಾದವರಾಗಿದ್ದು, ಈಗ ತಟಸ್ಥ ಧ್ವಜದಡಿ ಆಡಲಿದ್ದಾರೆ. ಮೊದಲ ಪಂದ್ಯದಲ್ಲಿ ಅವರಿಗೆ ಬಿಳಿಕಾಯಿಗಳನ್ನು ಮುನ್ನಡೆಸುವ ಅವಕಾಶ ದಕ್ಕಿದೆ. ವಿಜೇತ ಆಟಗಾರನ ಜೇಬಿಗಿಳಿಯುವ ಬಹುಮಾನದ ಮೊತ್ತ ಸುಮಾರು ₹10.79 ಕೋಟಿ.

ವಿಶ್ವ ಚಾಂಪಿಯನ್‌ಗೆ ಸವಾಲಿಗನನ್ನು ನಿರ್ಧರಿಸುವ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಕಳೆದ ವರ್ಷ ಮ್ಯಾಡ್ರಿಡ್‌ನಲ್ಲಿ ನಡೆದಿದ್ದು, ವಿಶ್ವದ ಎರಡನೇ ಕ್ರಮಾಂಕದ ಆಟಗಾರ ನೆಪೊಮ್‌ನಿಷಿ ಒಂದು ಸುತ್ತು ಉಳಿದಿರುವಂತೆಯೇ ವಿಜೇತರಾಗಿದ್ದರು. ಈ ಸಲ ಹಾಲಿ ಚಾಂಪಿಯನ್ ಆಡದ ಕಾರಣ, ಕ್ಯಾಂಡಿಡೇಟ್ಸ್ ಟೂರ್ನಿಯ ರನ್ನರ್ ಅಪ್ ಆಗಿದ್ದ ಮೂರನೇ ಕ್ರಮಾಂಕದ ಆಟಗಾರ ಲಿರೆನ್ ಅವರೂ ಫೈನಲ್‌ನಲ್ಲಿ ಆಡುವ ಅವಕಾಶ ಪಡೆದಿದ್ದಾರೆ. ಈ ಇಬ್ಬರೂ ಇದುವರೆಗೆ ವಿಶ್ವ ಚಾಂಪಿಯನ್ ಆಗಿಲ್ಲ. ಈ ರೀತಿಯ ವಿದ್ಯಮಾನ ನಡೆದಿರುವುದು ಇದೇ ಮೊದಲು.

ಚಾಂಪಿಯನ್ ಆಟಗಾರನೊಬ್ಬ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡದೇ ಇದ್ದ ನಿದರ್ಶನ ಕೊನೆಯ ಬಾರಿ ನಡೆದಿದ್ದು 1975ರಲ್ಲಿ. ಆಗ ಅಮೆರಿಕದ ಬಾಬಿ ಫಿಷರ್, ಫಿಡೆ ಜೊತೆ ಭಿನ್ನಾಭಿಪ್ರಾಯದ ಕಾರಣ ಅನಾತೊಲಿ ಕಾರ್ಪೋವ್ ವಿರುದ್ಧ ಫೈನಲ್ ಆಡಲು ನಿರಾಕರಿಸಿದ್ದರು. ಹೀಗಾಗಿ ಫಿಡೆ, ಅಂದಿನ ಸೋವಿಯತ್ ಯೂನಿಯನ್‌ನ ಕಾರ್ಪೋವ್ ಅವರಿಗೆ ಚಾಂಪಿಯನ್ ಪಟ್ಟ ನೀಡಿತ್ತು.

15 ವರ್ಷಗಳ ಕಾಲ, 1985ರಿಂದ 2000ವರೆಗೆ ವಿಶ್ವ ಚಾಂಪಿಯನ್ ಆಗಿದ್ದ ಗ್ಯಾರಿ ಕ್ಯಾಸ್ಪರೋವ್ ಅವರು ನೆಪೊಮ್‌ನಿಷಿ– ಲಿರೆನ್ ನಡುವಣ ಸೆಣಸಾಟವನ್ನು 'ಊನಗೊಂಡ ಸ್ಪರ್ಧೆ' ಎಂದು ಕರೆದಿದ್ದಾರೆ. ಆದರೆ ದೊಡ್ಡ ಮಟ್ಟದ ಪೈಪೋಟಿ ಏರ್ಪಡಬಹುದು ಎಂಬ ಮಾತನ್ನೂ ಒಪ್ಪಿಕೊಳ್ಳುತ್ತಾರೆ.

'ವಿಶ್ವ ಚಾಂಪಿಯನ್, ವಿಶ್ವದ ಅತ್ಯಂತ ಪ್ರಬಲ ಆಟಗಾರನನ್ನು ಒಳಗೊಂಡಿರಬೇಕು. ಇಲ್ಲಿ ಅಂಥದ್ದು ನಡೆದಿಲ್ಲವಲ್ಲ' ಎನ್ನುತ್ತಾರೆ ಕ್ಯಾಸ್ಪರೋವ್.

2007ರಲ್ಲಿ ವ್ಲಾದಿಮಿರ್ ಕ್ರಾಮ್ನಿಕ್ ವಿಶ್ವ ಚಾಂಪಿಯನ್ ಕಿರೀಟ ಕಳೆದುಕೊಂಡ ನಂತರ, ರಷ್ಯಾದ ಯಾವ ಆಟಗಾರನೂ ಚಾಂಪಿಯನ್ ಆಗಿಲ್ಲ. ಡಿಂಗ್ ಲಿರೆನ್ ಗೆದ್ದರೆ, ಪುರುಷರ ಮತ್ತು ಮಹಿಳೆಯರ ವಿಶ್ವ ಕಿರೀಟಗಳು ರಷ್ಯಾ ಪಾಲಾಗಲಿವೆ. ಹಾಲಿ ಚಾಂಪಿಯನ್ ರಷ್ಯಾದ ಜು ವೆನ್‌ಜುವಾನ್ ಮಹಿಳೆಯರ ವಿಶ್ವ ಕಿರೀಟಕ್ಕಾಗಿ ಜುಲೈನಲ್ಲಿ ಸ್ವದೇಶದ ಲೀ ಟಿಂಗ್ಜಿ ಅವರನ್ನು ಎದುರಿಸಬೇಕಿದೆ.

ಎಎಫ್‌ಸಿ ಮಹಿಳಾ ಫುಟ್‌ಬಾಲ್: ಭಾರತಕ್ಕೆ 2ನೇ ಜಯ

ಬಿಷ್ಕೆಕ್, ಕಿರ್ಗಿಸ್ತಾನ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡದವರು ಎಎಫ್‌ಸಿ ಒಲಿಂಪಿಕ್ ಅರ್ಹತಾ ಟೂರ್ನಿಯಲ್ಲಿ ಕಿರ್ಗಿಸ್ತಾನ ವಿರುದ್ಧ ಎರಡನೇ ಗೆಲುವು ಸಾಧಿಸಿದರು.

ಈ ವಾರದ ಆರಂಭದಲ್ಲಿ ನಡೆದಿದ್ದ ಪಂದ್ಯದಲ್ಲಿ ಆತಿಥೇಯ ತಂಡವನ್ನು 5–0 ಗೋಲುಗಳಿಂದ ಮಣಿಸಿದ್ದ ಭಾರತ, ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲೂ ಪ್ರಾಬಲ್ಯ ಸಾಧಿಸಿ 4–0 ಗೋಲುಗಳಿಂದ ಗೆದ್ದಿತು. ಈ ಎರಡು ಗೆಲುವುಗಳ ಮೂಲಕ ಅರ್ಹತಾ ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿತು.

ಸಂಧ್ಯಾ ರಂಗನಾಥನ್ ಎರಡು ಗೋಲುಗಳನ್ನು ತಂದಿತ್ತರೆ, ಅಂಜು ತಮಾಂಗ್ ಹಾಗೂ ರೇಣು ತಲಾ ಒಂದು ಗೋಲು ಗಳಿಸಿದರು.

ಪ್ರಜಾವಾಣಿ ಭಾನುವಾರ • ಏಪ್ರಿಲ್ 9, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

BMRDA APPROVED **Sites**
Near Bidadi
Mysore Road
Ready for Registration & Construction
100% work completed, Bank Loan Avbl
PRM/KA/RERA/1251/310/AG/201102/002105
MH PROMOTERS
95138 50029
www.mhpromoters.in

REAL ESTATE SELLING

Sites

Anjanapura

ANJANAPURA 10TH Block 20×60 East Facing BDA Site For Sale Near Dayanada Sagar School Contact: 9845298419

Banashankari

"**BDA SITE** sale Banashankari 6th stage 7th Block 50x80 price 6,500/- per Sqft. Contact: 9092028055"

BTM Layout

BTM 4TH STAGE 30X40 2.80Cr, 5 FLOORS 30X45 3.5Cr, 5 FLOORS 20X30 1.6Cr. OWNER :9900966336

Bannerghatta Road

DOLLARS LAYOUT, N.S.Palya 50x80 BDA site South facing Residential class location (Agents sorry) Gupta- 9845232711

Hebbal

ROYAL ENCLAVE 1KM FROM MANYATA TECHPARK 50x80 NORTH FACING SITE SALE Rs.7500/-psft: 9845355666

Intl Airport Road

"PREMIUM PLOTS" for-Sale Gated Community with World-Class Amenities RERA Approved All Leading Banks funding, Ready-to Registration, near.Nandi Hills,Bang on State Highway. Contact: 9060185719/ 9060609166

Jayanagar

FOR SALE 30x40 in Jaynagar 9th block East end main road. East facing good, location ready to move. Contact Surya properties:- 9916759939/ 9880659939

SALE SITE 60x90 Jayanagar 1st Block Semi-Commercial North Facing on 40feet`&`Close to 100feet`Road Excellent Location Call:9844134068 9066399102

Yelahanka

PRE LAUNCHING, SAI MERIDIAN Premium SITES FOR SALE BBMP limits A Khata, Yelahanka, Kogilu to Kannur Main Road (New Airport Road) close to Reva University & Delhi Public School, Ready for Registration and Bank loan available. Call: 9900008338, 8549855644

Nelamangala



INFOCITY NELAMANGALA
READY TO BUILD PLOTS FOR EVERY DREAM HOME
BMRDA Approved Sites available @ Nelamangala. Easy access to PRR (Peripheral Ring Road)
Call: 8660981179, 9986896859

BMRDA/ NPA 30X50 East Facing Site Sale Jakkasandra, Near NH-4 Highway and Mangalore Highway: 8310681025

Kolar

RESIDENTIAL SITES FOR SALE AT KOLAR CITY
CONTACT
9019333666
9845833556

Kengeri

1200 SQFT. Site Sale, Jnanbharathi BDA Layout, Shirke Layout, kengeri Satellite Town, Bangalore. 11,000/- Sqft. Contact: 9980507126, 7019677126.

Kanakapura Road

35X74 WEST A khatha Site for Sale near Konenkunte Sub-Registrar office, Phone: 8296559590

Kempegowda Layout

30X40 BDA NPKL 5TH Block Behind Challaghatta Metro. 500mtr to Mysore road. Arkavathi alternative site. Owner:9620721143

Hesaraghatta

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

Nagarabhavi

"NAGARABHAVI 14TH-BLOCK 30x40 East facing Site near Swathi Hotel, Good Location, Genuine buyers Contact: 9845408408"

Out-Station

LAND FOR Sale, well-maintained, scenic 30 acres land with excellent water source near Hebri, Udupi Dist. Karnataka, India. Plantation includes Arecanut, Coconut, Rubber, Jathi, Mangoes Pepper Teak-wood etc. A big shed and a house is in the property. Contact: Phone/ WhatsApp: +919846370905.

Rajarajeshwari Nagar

"AVAILABLE SITE Rajarajeshwarinagar BEML Layout 5th stage 40x65 South-facing 40 feet-Road near Ujwal Meredian Apartment. Contact: 9632788913"

Vishweshwariah Layout

"50X80 SITE for sale Vishveshwaraiah 6th Block situated at hight location, Genuine buyers Contact: 9880031654"

"1500 SQ.FT Site sale near RTO office BBMP A-katha, Good location, Genuine buyers Contact: 9611538786"

SMV 4TH BLOCK BDA 30X40 West Facing Near 100Ft Road and 40x60 East Facing: 9964971895

Ramanagar

RESIDENTIAL CONVERTED Site Sale near Ramanagar 0.5Km from highway, attached to Rajeevgandhi Health University, 10890Sft, 1650/-P.Sft, Clear Title. Owner 9900115519

Mathikere

NORTH WEST Corner Site 30 x 53 I A Cross HMT Layout Mathikere, Near Chowdeshwari Temple, 9845047441

Multiple Locations

BERLIE STREET Langford 80*75, Sadashivnagar 120*80, 40*60, Sanjaynagar 40*60, Malleshwaram 60*110, Jaladarshini Layout 30*50. 9538111239.

Flat

Chandra Layout

CHANDRA LAYOUT SKYLINE TOWERS 1303 sqft 3 Bedroom North-facing 7800000/- negotiable. ABHILASHA CONSULTANT: 9480565758

Kengeri

20X30 W/F Society site in Srigandakaval 3 bhk semi furnished flat-in BDA Indraprasta kengeri 9916693999

Malleshwaram

ONE BEDROOM APARTMENT FOR SALE 18TH CROSS MALLESWARAM NO CAR-PARK CALL: 9900648717 or 8017010808

1443 SQFT, 3 BHK, East-facing Apartment in pristine condition with modern fittings and covered car park for sale. Rs 1.6 crores. Contact 7619479736.

SALE 3BHK apartment 1755 sqft Renaissance Park-3, Malleshwaram West. Final price 1.85 crores 2 carparking. Contact: 9342139450

Mysore

2- BHK flat for sale in Mysore. Good location. Contact 8088692981

Rajajinagar

LUXURY 3 Bed Room Flat for Sale in RajajiNagar, Price 1.5 Cr onwards, Contact: 9845497672, 9986840153

Mathikere

2 BHK 1020 sqft super Built Flat- Sale/ Rent near MSR Hospital- Car Parking. Owner 9448558947

House

Banashankari

"VIDYAPEETA 30X40 demolition House 2,15,000,00/- Padmanabhanagar, 30x40 Four floors 2,60,00,000/- Banashankari 2nd Stage House. 9845286505"

WANTED
20,000 square Feet Land
for **RENT** or any Preschool Setup in and around Kanakapura Road, Bannerghatta Road (Bangalore South)
Pls Contact: 7676227482

BUILDING 3 BHK 20x30, 1.15cr. Banashankari 6th Stage 10th Block, Kodipalya. Mascot Constructions. 9945760765/ 9880909989.

Basaveshwaranagar

BASAVESHWARA NAGAR BANGALORE Residential Building Sale`30X50 Ground, 1st,2nd`Floor, Buil-up 4000sqft.`1 BHK-2, 2 BHK-2,3 BHK-1 3.5Cr.`Brokers Excuse. 9513308100.

J P Nagar

SALE 52X82 J.P.Nagar 3rd Phase on 80feet and 40feet Road With old House Excellent Location Call:9844134068 9066399102

Magadi Road

KAMAKSHIPALYA NEWLY built 1.5 year old, 8 houses + 1 Shop (15'x50') East Face, 'A' Khata, Getting 48000/- Rent, Rs. 1.10 Cr. Negotiable. 9845288310

Whitefield

THIPPASANDRA NEAR Varthur Police Station Asrahalli Main Road 3Bedroom New Duplex House NE Corner 2300 Sqft 1.55Cr Negotiable: 9980501366

Malleshwaram

FOR SALE: Nagappa Block 40x60 North Facing Demolition Old House 50 mts from Srirampuram Metro,19000/Sqft. Bharadwaj Estates 9845019934.

Agricultural Land Converted

Nelamangala

12 ACRE Commercial Converted LAND For SALE in NELAMANGALA, Near 'T' Begur, Price: 2 Crore 50 Lakh Per Acre. 73488-43535

Agricultural Land

Mysore Road

"MALAVALLI 1ACRES 19 guntas Rs.23 Lakhs/ Acre, 2 Acres channel water 27 Lakhs/ P.acre. 9845178335"

Ramanagar

AGRICULTURAL FARM Land Sale Near Ramanagar 1Acre 15Guntas, Beautiful Location 1,60,000 Per Gunta. Contact 9900115519

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Contact: 9663001940.

Tumkur Road



COMMERCIAL BUILDING for Sale, 10,000 Sqft 40x60 SITE 'B' Khatha. Beside Nagasandra Metro IKEA. Rs. 4.5cr Negotiable. CALL : **9448311478, 9845219605.**

North

NURSING HOME Well running 30 bedded 60 X 55 ft, 4 floors Bangalore North, 7 cr for sale, Call 9742619734

Commerical

BTM Layout

BTM LAYOUT Commercial Property 40X60 G+4 floor Rental Income monthly 3,15,000/-Price 6.5cr. Contact: 9945079777

HRBR Layout

KAMMANAHALLI Commercial 2000 Corner Site Built-up Basement, Ground, First, Second. 10 Crores Negotiable: 73493-22223

Farm House/ Land/ Resorts

Multiple Locations

NANDI HILLS rd 1/2 acre gated converted ekhata furnished 15 AC rooms resto cafe garden EV station conference AV studio ready occupy 9Cr Ph 7019346409

Industrial & Factory

Nelamangala

SALE, NELAMANGALA, 30000 sqft Land (28 Guntas), 300 meters from Bengaluru-Mangaluru Highway, before Toll-plaza. 9035767333, 9242251819

Peenya

INDUSTRIAL BUILDING SALE, Peenya 2nd Stage, 3600sqft Site, 10,800sqft Building, Suitable:Small Industry/Garment. 3Cr. 9611135365.

Residential/ Commercial

Sadashiva Nagar

PRIME LOCATION OPPOSITE PARK VACANT PLOT 60X45 ACROSS SADASHIVANAGAR SWIMMING POOL SOUTH FACING CONTACT OWNER 9844018823

Commercial Land

General

FROM HOSUR 25Kms 1.77 cents dryland suitable for Institutions, Industries, and Warehouses. Frontage 491, North Facing, 40ft road, Price 5crores Cornerstone Realtors, Chennai. 8939751197.

Joint Development

Frazer Town

AVAILABLE 12000SQFT For JOINT DEVELOPMENT/ WAREHOUSE Opp. Venkteshpur Metrostation After Frazer Town Bangalore:9845251337

REAL ESTATE BUYING

Real Estate Agents

Multiple Locations

"WANTED PURCHASE Sites/Houses/ Industrial/ Commercial Banashankari, Kanakapura Road, Jayanagar, J.P.Nagar, Bannergatta Road, BTM, HSR. 9845286505"

Sites

Anjanapura

WANTED BDA-SITES @ Banashankari VI Stage Anjanapura Vishveshwaraiah Layout`20X30 30X40 40X60`50X80 Clear`Titles Immediat Settlement`Call Owners only 9945610779

Banashankari

BDA SITES Wanted Arkavathy, Anjanapura Banshankari 6th stage Vishweswaraiah Kempegowda Any BDA Layout Call:9845062822 8660751654

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA`Sites Wanted. Contact: SAPTHAGIRI. 9900268073, 9448068073.

WANTED 2400/1200 BDA OWNER SITE @ 5500/ SQ FT. FULL RTGS PAYMENT. NO BROKERS. 9980592277

Rajarajeshwari Nagar

WANTED 40X60 Site or Old House at R.R.Nagar, Genuine Owners Please Call: 8884378079. Brokers Excuse.

ಸೈಟುಗಳು ಮಾರಾಟಕ್ಕಿವೆ
ಚಿಕ್ಕಬಾಣಾವರದಿಂದ 10 ನಿಮಿಷ ಅಂತರದಲ್ಲಿದೆ
20x30 Rs.6 Lakhs
ಈಗ ಕೇವಲ **50%** ಪಾವತಿಸಿ ಸೈಟ್ ನೊಂದಣಿ ಮಾಡಿಸಿಕೊಳ್ಳಿ ಮತ್ತು ಉಳಿಕೆ ಹಣವನ್ನು EMI ಮೂಲಕ ಪಾವತಿಸಿ
ಸಂಪರ್ಕಿಸಿ: 8880660099

Vishweshwariah Layout

-:BUYING/ SELLING:- 20x30,30x40, 40x60, 50x80 BDA sites at Vishveshwaraiah Layout, BSK 6th stage. Contact: 9844533371/ 9341733480

BUILDERS ESSENTIAL

Water Proofing

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

BTM LAYOUT 1st Stage, Office Space For RENT 1900sqft, Ideal for IT Companies/ Bank & Others Contact:9448756558

OFFICE SPACE for rent 1000 sft, furnished, Northeast facing, 1st floor, 2nd cross, Corner Building, prime location on Sampige Road, Malleshwaram, Bengaluru-03 Near Manthri Mall. 9880914123

AVAILABLE 1200 Sqft Furnished AC Office, 2000 Sqft Shop and 50 Bed PG in Kumaraswamy Layout Main Road. Call: 9880022644.

EDUCATIONAL

Special Courses

EMOTIONAL FIRST Aid Courses for 3 months Internationally Certified Help people manage their Emotions better by using new Tools and Techniques Excellent Opportunity for Retired Teachers Bank Officials and Housewives. Attractive ReturnsAssured. Courses starts Immediately Contact- 9448067296

PERSONAL

Change of Name

I, SREENIVASA REDDY A.N R/a, #.115, 'Shree', 3rd main road, Opp to Swargarani School, BEML 5th Stage, Rajarajeshwari Nagar, Bangalore 560098 Have Changed my Name to A.N SRINIVASA REDDY Vide Affidavit Dated 08/04/2023 before Notary Mohammed Hussain. K Bangalore.

MATRIMONIAL

Grooms Wanted

Hindu

GROOM WANTED
Handsome Hindu Boy required for fair **Vishwakarma Girl,** B.E. 32.5yrs, 5.2", working as **Software Engineer** in Bangalore from Equally qualified well placed, family background **Caste No bar.**
Contact: 9482045320

JOB OPPORTUNITIES

General

WANTED 1:APARTMENT Maintenance Supervisors Qualification Diploma In-Civil Exp:`5-10years Salary:30,000 2:Maintenance Supervisors Qualification any Graduates`Exp: 5-10years Salary 20,000 +`Incentive Call:7338084555 9845053636`Mail glprojects7889 @gmail.com

WANTED COMPUTER Typist Male/Female Supervisor/Helpers/ Delivery Boys Email: mundhralighting @gmail.com contact: 9986033339 /9611206161

ARZU OVERSEAS, R.T NAGAR, BANGALORE, REQUIRE FEMALE TELECALLER- FLUENT IN MALAYALAM, CALL FOR APPOINTMENT 9496563224

WANTED EXPERIENCED Salesman /Counter Sales person with Basic Computer Knowledge Employee (12th Pass) Experienced tally Accountant for garments shop at Chickpet Main Road Bangalore Mob: 7795818527/ 9448121073/ 6362606730.

WANTED TELEMARKETING People (Females) in and around Marathahalli Area, Good Communication skills in English, Graduates only, Salary best in Industry Call: 9916298104..

SHARANYA TELTRONICS Kumaraswamy Layout requires Sales, Service, Accounts and Office Executives. Call: 9845010634.

ADVERTISING AGENCY requires BACKEND EXECUTIVE (Good Computer Knowledge, MS-office). Phone: 9845597155. enquiry@spoorthiads.com

COUNTER SALESMAN (Male) 2/ 3 years relevant experience for Textile Showroom at Jayanagar. Call 22454458/ 26656934

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

JOB OPPORTUNITIES

Teachers/ Professors

REQUIRED ENGLISH Medium Lady TEACHERS MSC BED Chemistry, Biology for Carmel Garden High School, Nandini Layout, Bangalore-96. Phone: 9739437454/ 9945050690.

St.Anne's Degree College for Women
No:23, Cambridge Road, Halasuru, Bangalore-08
Ph:080-25544454,
E-mail: annescollege@gmail.com
Applications are invited for the post of
Lecturer in Commerce & Computer Applications
Qualification:
Masters in subject
With Ph.D / M.Phil / NET/ KSET preferred

INDIAN PUBLIC SCHOOL
www.indianpublic.school
CAREER OPPORTUNITIES
Want to join a team looking to bring in new ideas and perspectives into Schooling? Opportunities at **Indian Public School** below:
WE ARE HIRING
Immediate requirement for academic year 2023-24
Computer Teacher- BCA / BCS / MCA
Subject Teacher - Physics, Hindi, Maths, EVS
Special Educator - DSE / DCBR
Counselor - BA / B.Sc. (Psychology)
Pre primary - NTT / Montessori
Walk in interview 10:00 am to 1:00 pm
No. 7, 11th Cross, Kanakanagar, R T Nagar Post, Bangalore - 32. +91 73377 39943. Mail: principal@indianpublic.school

SIDDAGANGA SREE SHIVAKUMARA SWAMIJI VIDYA PEETHA TRUST #1,1st Stage, 2nd Phase, Chandra`Layout, Bengaluru- 560072. Ph: 080-23397600, invites application for (I)Siddaganga Public School, Chandra Layout & Vijayangara: 1.Kannada Teacher: BA/M.A, B.Ed. 2.English Teacher: BA/MA, B.Ed. 3.Sanskrit Teacher: BA/MA.B.Ed 4.Hindi Teacher: BA/MA.B.Ed. 5.EVS Teacher: B.Sc. B.Ed. 6.General Science Teacher: B.Sc/M.Sc. B.Ed. 7.Mathematics Teacher: B.Sc./M.Sc. B.Ed. 8.Social Science Teacher: BA/MA. B.Ed. 9.Computer Teacher: BCA/MCA/B.E 10.Nursery Teacher: Any Degree with NTT/MTT.Trained. 11.Physical Instructor: B.P.Ed./M.P.Ed. 12.Librarian: B.Lib/M.Lib Science 13.Music & Dance Teacher: Vidwath 14.Yoga Teacher: Diploma in Yoga 15.Office Assistant: Any degree with Tally ERP-9 & computer knowledge 16.Resident Engineer: Diploma or BE Civil Engineering with minimum 5years' experience or just retired from Govt. Service 17.School Van Driver: Heavy Motor Vehicle License, PSV bus & driving experience in school bus 18.Maintenance Asst.- Diploma in Automobile or Mechanical Engineering preferred. (II)SSK PU College: 1.Lecturer in Mathematics & Statistics: M.Sc. B.Ed. 2.Lecturer in English: MA., B.Ed. 3.Lecturer in Computer Science: MCA 4.Lab. Assistant: PUC Science (III)SSK Degree College: Lecturer in Commerce: M.Com with SLET Interview date will be intimated. Interested candidates may send their resume, service & salary certificates & Testimonials to the Mail: sskvptrust.2001 @gmail.com/ personally submit the above details to Trust office on or before 22/04/2023 between 9am to 4pm.

WANTED LECTURERS in Physics, Chemistry Economics, Commerce English, Kannada, Computer Science, Hindi, Physical Education and Librarian for Vidyavana PU College Tirumalashettyhalli, Whitefield, Bengaluru. Email: vidyavanahr@gmail.com WhatsApp: 9663389388

VISHWABHARATHI PUBLIC HIGH SCHOOL No. 142, 1st A Main Road, Shakthi Garden Moodalpalya, Nagarbhavi 1st Stage, Bangalore-560072. REQUIRED TEACHERS for Kannada, Social Science, Mathematics Physical Education, BA, BSc, B.Ed for Primary and high school. Contact immediately: 7406535818/ 9739395399.

Smt. Bylamma Educational & Charitable Trust®
HARWARD INTERNATIONAL SCHOOL
CBSE Affiliation No.830335
REQUIRED
FOR THE ACADEMIC YEAR 2023 - 24
TGTS
English / Social Science / Kannada / Hindi / Computer Science / Physical Education-(Female)
Eligibility - Post Graduation + B.Ed + 2 years of experience in CBSE school
HARWARD PU & DEGREE COLLEGE
Integrated Science Faculties For JEE & NEET Coaching
Commerce Faculties
Eligibility - Post Graduation + 5 years experience
Accountant - Female candidate with institution experience (Qual - B.Com/ M.Com with tally)
Eligible candidates mail your application with updated Bio-data to :
email : infoharwardints@gmail.com
Contact : 9880112833 / 9945230286
Dasanapura, Tumkur Road, Bengaluru North - 562162

WANTED: DYNAMIC Vice Principal & Lecturers in Kannada, English, Hindi, Mathematics, Physics, Chemistry, Computer Science, Accountancy, Business Studies, Economics, PG in relevant subject with minimum 55% and preferably B.Ed., Yoga instructor, Accounts Assistant, Lab attenders. Renumeration will not be a constraint for deserving candidates. Apply at: Diamond College, No.123 Maragondanahalli Main Road, T.C. Palya Post, K.R. Puram, Bengaluru-36. WALK-INs on 12th & 15th April 2023. Mobile: +919035637099 +918904195037 Website: www.diamondcollege.org

CAMLIN ENGLISH SCHOOL 6th 'C' Main 4th Cross Hampinagara Vijayanagar 2nd Stage Bangalore-104 REQUIRES TEACHERS for the Year 2023-24 B.Sc.,B.Ed. (Maths Science) B.A.,B.Ed. (English Kannada Hindi, Social) TCH/D.Ed., NTT, Computers, Drawing SECURITYGUARD, ATTENDER/OFFICE BOY AYA, DRIVER. Contact immediately/ Apply: 080-23301363

GREEN COUNTRY PUBLIC SCHOOL (ICSE), requires Teachers for ALL SUBJECTS. Walk in for Interview 10.00 am to 3.00 pm /Apply through email: gcps2000@yahoo.co.in. Ph: 9535487053, 9482480397. Add: KIA Road, Kodigehalli gate, Hebbal, Bangalore-560092

WANTED TEACHERS with BA/MA (Eng/SS) Salary upto 28000/- Contact Sidhartha International School, Peenya,Dasarahalli. Contact 9620100046 / 9964670328.

VIDYA SOUDHA GROUP OF INSTITUTIONS
No.9/1, 1st Main Peenya, 1st Stage, Near Basaveshwara Bus Station, Bangalore – 560 058. www.vidyasoudha.edu.in
Recruiting Teachers & Lecturers for Bangalore Campus

VIDYA SOUDHA PUBLIC SCHOOL, BANGALORE (ICSE School)
High School / Primary Teachers
Subjects: History, Geography, Art & Craft & Physical Education (Female)
Qualification: Master/ Bachelor's Degree in relevant subject with B.Ed
Experience: Minimum 2 years

VIDYA SOUDHA PU COLLEGE, BANGALORE
Requires LECTURERS in
Subjects: Physics, Mathematics, Chemistry, Biology, Librarian & Physical Education Director (Female)
Qualification: Master Degree in relevant Subject with B.Ed
Experience: Minimum 5 years. Experience in teaching PU-CET, NEET & JEE is preferred.

VIDYA SOUDHA ACADEMY OF MANAGEMENT SCIENCES (Degree College)
Position: Assistant Professor
Subject: Management
Qualification: Master degree with SLET/NET or Ph.D degree are preferred
Experience: Minimum 3 Years
Apply on or before 16th April 2023
Email: hr@vidyasoudha.edu.in
Call: 89715 66659

GURUKULA VIDYA KENDRA SCHOOL
(ICSE)
NEAR DRAVID PADUKONE CENTRE FOR SPORTS EXCELLENCE, Bangalore North-562157
REQUIRES
Trained, qualified and experienced Teachers for Nursery, Primary and High School for 2023-24 NTT/Montessori, B.A., B.Ed (English/ Social / Geography/ Kannada/Hindi), BSc., B.Ed (PCM),C.P.Ed/B.P., Ed,
Computer Instructor
Office Assistant for accounts section
Receptionist with good fluency in English
Mail resume to Secretary: prashy.r7779@gmail.com
Ph: 9945107779

WANTED TRAINED LADY TEACHERS to teach Kannada and All Subjects in Lower Primary, Sanskrit, Chemistry, Biology, Maths, Physical Education and Computer in English Medium Primary and Highschools. Also required HEAD MISTRESS for Primary and Middle School and FRONT OFFICE ASSISTANT. Walk-in Interview on 11.04.2023 between 11.30AM and 1.30PM at PRATHIBHA SHIKSHANA SAMITHI, #9, 18th Main, BSK II Stage, Bangalore-70. Ph: 080- 26710170/ 74833-77387

ST.CHARLES HIGH SCHOOL #1086,1st Block,3rd Stage, Adarsha-Layout, Basaveshwaranagar, Bangalore-79.Invites application from NTT, TCH,BA B.Ed, BSC B.Ed,QUALIFIED and EXPERIENCED English medium TEACHERS to handle Nursery,Primary and High-School also wanted PE,HM and Co-ordinator. Phone:9886519766

HERITAGE PUBLIC SCHOOL,Srinidhi Layout, J.P.Nagar 8th Phase, Konanakunte Bengaluru-62, Requires:-HIGH SCHOOL CO-ORDINATOR, MSc,BEd with`minimum 5years`of Experience at`High School Level will be Preferred`Hindi Teachers For`High School,Maths, Science, Social,Kannada & English`Teachers For`Middle &Primary School,PE Teachers. Attractive Salary`Call: 080-26322111, 9901733776.

WANTED FULL-TIME Lecturers in English, Computer Science, Political Science & Economics. Candidates with P.G. & B.Ed. Preferably youngsters can apply to the Secretary, Vidyavahini College Anandanagar Bangalore-24 Email: vvpucollege@gmail.com, Ph:9606516854 080-23433507

GOODWILL ENGLISH HIGH SCHOOL, Yelahanka Oldtown Urgently requires English-BA B.Ed, Computer, Physical Education TEACHERS for High School. Walkin: 10th to 12th April 2023 between: 10am to 1pm. Contact: 9448620241.

REPUTED ICSE School at Tumkur road requires experienced PRINCIPAL. Interested candidates Contact: 9108372746/ Email: purnima.pujarmay05@gmail.com

JYOTI NIVAS PRE- UNIVERSITY COLLEGE
Hosur Road, Bangalore-560095
Ph: 25506100 E-Mail ID: louisa.regi@gmail.com info@jnpuc.org
Requires:
Lecturers in Statistic, Mathematics, English and History.
Qualification: PG First Class with B.Ed Preferred
Electrician: Minimum Qualification: PUC with Certification in Electricals
Apply to the Principal on or before 24.04.2023

NCIPS
SHAPING MINDS FOR THE REAL WORLD
NEW CAMBRIDGE INTERNATIONAL PUBLIC SCHOOL
CA Site No:6 (P), WOC Road, II Stage, Mahalakshmipuram, Bangalore- 560086.
Email ID: info@ncips.in
Contact : 9845087439
Required co-ordinator for pre primary with minimum 5 years experience and **NTT Trained Teachers for Nursery Classes.**
Required following Teachers to Teach Secondary, Primary Classes. BSc/ MSc/ MA/ BA/ BED with 5 years experience Information Technology, **Kannada, Hindi, Maths.**

SURYODAYA NATIONAL PUBLIC SCHOOL, Rajanukunte, Yelahanka Taluk, Bengaluru- 560064, Requires Qualified primary and high school teachers to teach Science, Social, English, Computer and NTT Teacher, Administrator. Mail your resume to rsr30127@gmail.com Contact: 9845540663.

GURUKULA INTERNATIONAL SCHOOL Requires, NURSERY, English, Maths, Kannada COMPUTER TEACHERS for Primary and High School and LADY ACCOUNTANT with Kannada typing. 9th Cross, Near Magadi Road, Metro Station Bangalore-23. 7829338292 7676676629

MAHADEVA GROUP of Institutions, Hosakote Requires Experienced Lecturers and Teachers with UG & PG, B.Ed preferred and fluency in English is mandatory. School: P-Kg to Grade 10 All Subjects, PUC: Physics, Chemistry, Math's Biology, Economics, Computer Science, English Degree: Commerce & Management. EMail: srisaieducationtrust2015@gmail.com. 9980618815 /9945475096

THE GOLDEN VALLEY PUBLIC SCHOOL, Requires experienced TEACHERS for all subjects (Pre KG to 10th standard) Qualification: Graduate and Post-Graduation with D.Ed/ B.Ed/ M.Ed. Offering attractive salary. Shree Chakranagar, Andrahalli, Bangalore-91 Call: 9620456205, 9742707779

ST.PHILOMENA'S PUBLIC SCHOOL BYALAKERE, YELAHANKA, BANGALORE REQUIRED TRAINED MASTER DEGREE SCIENCE, ENGLISH & PE TEACHERS FOR CBSE HIGH SCHOOL 9480091189/ 9845036582 stphilomenas118@gmail.com

REQUIRED TRAINED & Experience lady Teachers for High School Primary & Nursery for all Subjects, Kempapura Contact:22330003/ 9008981637 svsres21@gmail.com

Accounts & Finance

WANTED ACCOUNTS OFFICER: 5-10 years experience, ACCOUNTS ASSISTANT: 3-5 years of experience for a Leading Construction Company. Experience in Tally, GST, MS office &admin activities. Call: 9880179435

GRADUATES WITH Commerce/ Science background with Computer skill below 32 years. Freshers can apply. 9900263508.

Engg/ Production Technical

WANTED ENGINEERS. A reputed company in Pune, need Apprentice Engineers and Junior Engineers 1- 2 years experience in Autocad, for Design and production in Pune. Contact 9822301629 or send resume at ajaykaul01@gmail.com

Part-Time Jobs

EXCELLENT GREAT Opportunity Work From Home Earn Unlimited From 35k-40k Part/ Full Time: 8147236252/ 9886641282

Wanted

WANTED
The following candidates are urgently Required for the **Reputed Private Engineering Company located in MG Road, Bengaluru.**
1. **Sr. Accountant** having CA/ICWA/Articled Asst with min. 2yrs Experience.
2. **Engineer (Civil)** with BE/BTech having 2 yrs Experience.
3. **Female Receptionist** having Graduation (Accountancy background is necessary).

The interested candidates may send their resumes along with 2 Passport size Photograph to the **Email:biscshine@gmail.com**

WANTED ADVOCATE Fresher/ experienced for Senior Advocate Law Firm at Hennur Cross, Bangalore-43 (non litigation matters) 9845846428, 9880458935

WANTED AGENTS Recruitment Executive For Anekal Bommanahalli Area, Salary Monthly-15000/- Interested Candidate Call Me: 9900265653

Graphic Designers

ADVERTISING AGENCY Requires Graphic Designer/ DTP Operator (Corel Draw, Kannada & English Typing). Phone: 9845597155.

Multiple Vacancy

Authorised Dealer of hp
UNIQUE Computers Peenya, B'lore -58
REQUIRED
Back office / Call Co-ordinator
Account Assistant
Hardware /Network Engr
Delivery Boy
Candidates Should have 1-2 years Exp With analyzing skills & able to Multi-task
For more details contact
Ph: +91 9036003800
E:corporatesales@uniquec.com

WANTED BILLING STAFF (Female) with Computer knowledge. SALES PERSON (Male) for REPUTED PLANT NURSERY, YELAHANKA, BANGALORE. 9845202274/ 9620498866

Overseas

REPUTED CBSE school in kuwait requires qualified and experienced teachers for all subjects from KG to class12.Apply with full details to amal_ind@hotmail.com

STAR INFRATECH
A Leading Construction company in Karnataka looking for talent acquisition for the following positions
Project Manager: BE(Civil)- Above 15 Years Experience(Buildings)
Deputy Project Manager: BE(Civil)– Above 10 Yrs Exp. (Buildings)
Assistant Project Manager: BE(Civil)– Above 8 Yrs Exp.(Buildings)
Quantity Surveyor: BE (Civil)– Above 5 Yrs Exp.
Quality Control: BE (Civil)– Above 5 Yrs Exp.
Sr.Engineers: BE (Civil)– Above 6 Yrs Exp.
Engineer: BE (Civil)– Above 3 Yrs Exp.
Sr.Executive (Accounts): Above 5 Yrs Exp.
Surveyors: Above 5 Yrs Exp. (Buildings)
Accounts Executives: Above 2 Yrs Exp.
HR/Admin Executives: Above 3 Yrs Exp.
Data Entry Operator, Draftsman with excellent skill in preparing govt. letters in Kannada & English
Accounts & Civil Engineers (Freshers) can also apply. Experience in handling major projects are highly preferable. Location all over Karnataka.
Walk In Interview:
Date: 10.04.2023 (Timings 11 Am To 4 PM)
#177, 6th Main, KEB Layout, Sanjay Nagar, Bangalore-560094.
Ph:+91 8023412304/ 05, Email: hr.starinfratech09@gmail.com



ಸುಕ್ಷೇತ್ರ ಕನ್ನಲ್ಲಿ ಶ್ರೀ ವೀರಭದ್ರಸ್ವಾಮಿ ಜಾತ್ರಾ ಮಹೋತ್ಸವ ಹಾಗೂ ಮಹಾರಥೋತ್ಸವ
ಕನ್ನಲ್ಲಿ ಗ್ರಾಮ, ಕೊಡಿಗೇಹಳ್ಳಿ ಅಂಚೆ, ಯಶವಂತಪುರ ಹೋಬಳಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-560112
ಅನಾದಿ ಕಾಲದಿಂದಲೂ ಸುಕ್ಷೇತ್ರ ಕನ್ನಲ್ಲಿಯಲ್ಲಿ ನೆಲೆಸಿರುವ ಶ್ರೀ ವೀರಭದ್ರಸ್ವಾಮಿಯವರ ಜಾತ್ರಾ ಮಹೋತ್ಸವ ಪ್ರತಿ ವರ್ಷದಂತೆ ಈ ವರ್ಷವೂ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣೆ, ವಸಂತ ಋತು, ಚೈತ್ರಮಾಸ, ಕೃಷ್ಣಪಕ್ಷ ದಿನಾಂಕ: 10–04–2023ನೇ ಸೋಮವಾರದಿಂದ ದಿನಾಂಕ 12–04–2023ನೇ ಬುಧವಾರದವರೆಗೆ
ದಿನಾಂಕ: 11–4–2023ರ ಮಂಗಳವಾರ ಸಂಜೆ 6.30ಕ್ಕೆ ಹಳ್ಳಿ ಬ್ಯಾಂಡ್ ಖ್ಯಾತಿಯ ಸವಿತಕ್ಕ, ಮಿಮಿಕ್ರಿ ಗೋಪಿ ಹಾಗೂ ರಂಗಕರ್ಮಿ ಕೆ.ವಿ ನಾಗರಾಜ್‌ಮೂರ್ತಿರವರಿಂದ ರಸಮಂಜರಿ ಕಾರ್ಯಕ್ರಮ
ದಿನಾಂಕ: 12–04–2023 ರಂದು ಬೆಳಿಗ್ಗೆ 8–30ಕ್ಕೆ ಶ್ರೀ ವೀರಭದ್ರಸ್ವಾಮಿಯವರ ಅಗ್ನಿಕೊಂಡ ಪ್ರವೇಶ ಹಾಗೂ ಬೆಳಗ್ಗೆ 11–30ಕ್ಕೆ ಮಹಾ ರಥೋತ್ಸವ
ದಿನಾಂಕ: 14–04–2023 ರಂದು ರಾತ್ರಿ 7–30ಕ್ಕೆ ಕನ್ನಲ್ಲಿ ಗ್ರಾಮದಲ್ಲಿ ಕುರುಕ್ಷೇತ್ರ ಅಥವಾ ಶ್ರೀಕೃಷ್ಣ ಸಂಧಾನ ಎಂಬ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿದೆ
ಸರ್ವರಿಗೂ ಆದರದ ಸುಸ್ವಾಗತ

